ಬುಧವಾರ, ಜುಲೈ 28, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 209 | ಪುಟ 16
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ನಮ್ಮ ಫೋನ್‌ನಲ್ಲಿರುವ ವಿವರಗಳು ಹಾಗೂ ವೈಯಕ್ತಿಕ ಮಾಹಿತಿಗಳನ್ನು ಕದಿಯುವ ಸ್ಪೈ ವೇರ್‌ಗಳ ಬಗ್ಗೆ ತಿಳಿಯುವುದು ಹೇಗೆ?

ಅನುಭವ ಮಂಟಪ
ಯಾರ 'ಸಹಕಾರ'ದಿಂದ ಯಾರ 'ಸಮೃದ್ಧಿ'?

ಬೆಳಗಾವಿಯಿಂದ ದೆಹಲಿಗೆ ನೇರ ವಿಮಾನ 10
ಮುಂದೂಡಿಕೆಯಲ್ಲೇ ಮುಗಿದ ಕಲಾಪ 5

ಸೆನ್ಸೆಕ್ಸ್	ನಿಫ್ಟಿ	₹/$
52,579	15,746	74.47

ಇಂದು ಬೆಳಿಗ್ಗೆ 11ಕ್ಕೆ ಏಕಾಂಗಿಯಾಗಿ ಮುಖ್ಯಮಂತ್ರಿ ಪ್ರಮಾಣ ವಚನ • ಸಚಿವ ಸಂಪುಟ ವಿಸ್ತರಣೆ ಒಂದು ವಾರ ವಿಳಂಬ?

ಬೊಮ್ಮಾಯಿ ರಾಜ್ಯದ ಹೊಸ ಸಾರಥಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾವೇರಿ ಜಿಲ್ಲೆ ಶಿಗ್ಗಾವಿ ಕ್ಷೇತ್ರದ ಶಾಸಕ, ನಿಕಟಪೂರ್ವ ಗೃಹ ಸಚಿವ ಬಸವರಾಜ ಬೊಮ್ಮಾಯಿ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಮಂಗಳವಾರ ಆಯ್ಕೆಯಾಗಿದ್ದು, ಬುಧವಾರ (ಜು.28) ಬೆಳಿಗ್ಗೆ ಅವರು ಒಬ್ಬರೇ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಬಿ.ಎಸ್. ಯಡಿಯೂರಪ್ಪ ಅವರ ರಾಜೀನಾಮೆಯಿಂದ ತೆರವಾಗಿದ್ದ ಮುಖ್ಯಮಂತ್ರಿ ಸ್ಥಾನವನ್ನು ಭರ್ತಿ ಮಾಡಲು ಮಂಗಳವಾರ ರಾತ್ರಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ನೂತನ ನಾಯಕನನ್ನು ಆಯ್ಕೆ ಮಾಡಲಾಯಿತು. ಬಸವರಾಜ ಬೊಮ್ಮಾಯಿ ರಾಜ್ಯದ ಮುಖ್ಯಮಂತ್ರಿಯಾಗುತ್ತಿರುವ 23ನೇ ವ್ಯಕ್ತಿ. ಜನತಾ ಪರಿವಾರದಲ್ಲಿ ರಾಜಕೀಯ ಜೀವನ ಆರಂಭಿಸಿದ ಬೊಮ್ಮಾಯಿ, ಜೆ.ಎಚ್. ಪಟೇಲ್ ಮುಖ್ಯಮಂತ್ರಿಯಾಗಿದ್ದಾಗ ಅವರ ರಾಜಕೀಯ ಕಾರ್ಯದರ್ಶಿಯೂ ಆಗಿದ್ದರು. 2008ರಲ್ಲಿ ಬಿಜೆಪಿ ಸೇರಿದ್ದರು.

ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆಯ ಪ್ರಕ್ರಿಯೆ ಬಿರುಸು ಪಡೆದ ದಿನಗಳಿಂದಲೂ ಮುಖ್ಯಮಂತ್ರಿ ಹುದ್ದೆಗೆ ಹಲವರ ಹೆಸರುಗಳು ಪರಿಶೀಲನೆಯಲ್ಲಿದ್ದವು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಯಡಿಯೂರಪ್ಪ ಸಂಪುಟದಲ್ಲಿ ಸಚಿವರಾಗಿದ್ದ ಮುರುಗೇಶ ನಿರಾಣಿ, ಜಗದೀಶ ಶೆಟ್ಟರ್, ಬೊಮ್ಮಾಯಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಶಾಸಕ ಅರವಿಂದ ಬೆಲ್ಲದ, ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೆಸರುಗಳು ಚರ್ಚೆಯಲ್ಲಿದ್ದವು.

ರಾಜ್ಯದ ನೂತನ ಮುಖ್ಯಮಂತ್ರಿ ಆಯ್ಕೆ ಕುರಿತು ಸೋಮವಾರ ಸಂಜೆಯೇ ಬಿಜೆಪಿ ಸಂಸದೀಯ ಮಂಡಳಿ ಸಭೆಯಲ್ಲಿ ಚರ್ಚೆ ನಡೆದು ಹಾಲಿ ಶಾಸಕರಲ್ಲೇ ಒಬ್ಬರನ್ನು ನೂತನ ನಾಯಕನನ್ನಾಗಿ ಆಯ್ಕೆಮಾಡುವ ತೀರ್ಮಾನಕ್ಕೂ ಬರಲಾಗಿತ್ತು. ಮಂಗಳವಾರ ಬೆಳಿಗ್ಗೆಯ ವೇಳೆಗೆ ಬೊಮ್ಮಾಯಿ, ಅರವಿಂದ ಬೆಲ್ಲದ ಮತ್ತು ಮುರುಗೇಶ ನಿರಾಣಿ ಹೆಸರುಗಳು ಮಾತ್ರ ಪರಿಶೀಲನೆಯಲ್ಲಿ ಉಳಿದಿದ್ದವು. ಮಧ್ಯಾಹ್ನದ ವೇಳೆಗಾಗಲೇ ಬೊಮ್ಮಾಯಿ ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾಗುವ ಸುಳಿವು ದೊರಕಲಾರಂಭಿಸಿತ್ತು.

ನೂತನ ಮುಖ್ಯಮಂತ್ರಿಯಾಗಿ ತಮ್ಮನ್ನು ಆಯ್ಕೆ ಮಾಡಲಾಗುತ್ತದೆ ಎಂಬ ಸಂದೇಶವನ್ನು ಬೊಮ್ಮಾಯಿ ಅವರಿಗೆ ಬಿಜೆಪಿ ಹೈಕಮಾಂಡ್ ಮಂಗಳವಾರ ಬೆಳಿಗ್ಗೆಯೇ ರವಾನಿಸಿತ್ತು.

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 3B, 6

ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಬಸವರಾಜ ಬೊಮ್ಮಾಯಿ ಅವರಿಗೆ ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಹೂಗುಚ್ಛ ನೀಡಿ ಅಭಿನಂದಿಸಿದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಉಸ್ತುವಾರಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಶಾಸಕ ಶ್ರೀರಾಮುಲು ಮತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಇದ್ದಾರೆ

ಮುಂದಿದೆ ಸಂಪುಟ ರಚನೆಯ ಸವಾಲು

ಬೆಂಗಳೂರು: 24 ಗಂಟೆಗಳಿಂದಲೂ ಕುತೂಹಲದ ಕೇಂದ್ರ ಬಿಂದುವಾಗಿದ್ದ ನೂತನ ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆಗೆ ತೆರೆಬಿದ್ದಿದೆ. ಈಗ ಹೊಸ ಸಂಪುಟ ರಚನೆಯ ಸವಾಲು ಬಸವರಾಜ ಬೊಮ್ಮಾಯಿ ಮತ್ತು ಬಿಜೆಪಿ ವರಿಷ್ಠರ ಮುಂದಿದೆ.

ಯಡಿಯೂರಪ್ಪ ಅವರ ಸಂಪುಟದಲ್ಲಿ ಉಪ ಮುಖ್ಯಮಂತ್ರಿಯಾಗಿದ್ದ ಪರಿಶಿಷ್ಟ ಜಾತಿಗೆ ಸೇರಿದ ಗೋವಿಂದ ಕಾರಜೋಳ ಅವರಿಗೆ ಹಾಗೂ ಒಕ್ಕಲಿಗ ಸಮುದಾಯದ ಆರ್. ಅಶೋಕ ಹಾಗೂ ಪರಿಶಿಷ್ಟ ಪಂಗಡಕ್ಕೆ (ನಾಯಕ) ಸೇರಿದ ಬಿ. ಶ್ರೀರಾಮುಲು ಅವರಿಗೂ ಉಪ ಮುಖ್ಯಮಂತ್ರಿ ಹುದ್ದೆ ನೀಡುವ ಸಾಧ್ಯತೆ ಇದೆ ಎಂಬ ಮಾಹಿತಿ ಲಭಿಸಿದೆ.

ಯಾರೆಲ್ಲಾ ಬೊಮ್ಮಾಯಿ ಅವರ ಸಂಪುಟ ಸೇರುತ್ತಾರೆ ಎಂಬ ಪ್ರಶ್ನೆ ಈಗ ಬಲವಾಗಿದೆ. ಯಡಿಯೂರಪ್ಪ ಸಂಪುಟದಲ್ಲಿದ್ದ ಹಿರಿಯರನ್ನು ಸಂಪೂರ್ಣವಾಗಿ ಹೊರಗಿಡಲಾಗುತ್ತದೆ ಎಂಬ ಮಾತುಗಳು ಕೇಳಿಬಂದಿದ್ದವು. ಆದರೆ, ಕಾರಜೋಳ ಮತ್ತು ಅಶೋಕ ಅವರಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡುವುದು ಖಚಿತವಾಗಿರುವುರಿಂದ ಪೂರ್ಣ ಪ್ರಮಾಣದಲ್ಲಿ ಹಿರಿಯರನ್ನು ಕೈಬಿಡುವುದಿಲ್ಲ ಎಂಬ ಸುಳಿವು ದೊರಕಿದೆ.

ಈಗ ಜಾತಿ, ಪ್ರಾದೇಶಿಕತೆ, ಹಿರಿಯರು ಮತ್ತು ಯುವಕರು ಹೀಗೆ ನಾನಾ ಆಯಾಮಗಳಲ್ಲಿ ಅಳೆದು, ತೂಗಿ ಸಂಪುಟ ಸದಸ್ಯರನ್ನು ಆಯ್ಕೆ ಮಾಡಬೇಕಾದ ಸವಾಲು ಬಿಜೆಪಿ ಮುಂದಿದೆ. 2019ರಲ್ಲಿ ಬಿಜೆಪಿ ಸರ್ಕಾರ ರಚನೆಗೆ ಬೆಂಬಲವಾಗಿ ಕಾಂಗ್ರೆಸ್ ಮತ್ತು ಜೆಡಿಎಸ್ ತೊರೆದು ಬಂದವರಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ನೀಡಬೇಕಾದ ವಿಚಾರವೂ ಬಿಜೆಪಿಗೆ ದೊಡ್ಡ ಪರೀಕ್ಷೆಯೇ ಆಗಿದೆ.

6ನೇ ಪುಟ ನೋಡಿ

'ಉತ್ತಮ ಆಡಳಿತ ನೀಡುವೆ'

'ರಾಜ್ಯದ ಮುಖ್ಯಮಂತ್ರಿಯಾಗಿ ಬುಧವಾರ ಬೆಳಿಗ್ಗೆ ಪ್ರಮಾಣವಚನ ಸ್ವೀಕರಿಸುತ್ತೇನೆ. ಪ್ರಧಾನಿ ನರೇಂದ್ರ ಮೋದಿ ಹಾಗೂಯಡಿಯೂರಪ್ಪ ಅವರ ನಾಯಕತ್ವದಲ್ಲಿ ಹೊಸ ಸರ್ಕಾರವನ್ನು ರಚಿಸಿ, ಶಕ್ತಿಯುತವಾಗಿ ರಾಜ್ಯವನ್ನು ಮುನ್ನಡೆಸಲು ಪ್ರಯತ್ನಿಸುತ್ತೇನೆ' ಎಂದು ನಿಯೋಜಿತ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸರ್ವಾನುಮತದಿಂದ ನನ್ನನ್ನು ಆಯ್ಕೆ ಮಾಡಿರುವ ಬಿಜೆಪಿ ವರಿಷ್ಠರು ಹಾಗೂ ಎಲ್ಲ ಶಾಸಕರಿಗೆ ನಾನು ಚಿರ ಋಣಿ. ರೈತರು, ಬಡವರು ಮತ್ತು ದೀನ ದಲಿತರ ಪರವಾದ ಆಡಳಿತ ನೀಡುತ್ತೇವೆ. ಯಡಿಯೂರಪ್ಪ ಅವರಿಂದ ಸಾಕಷ್ಟು ಕಲಿತಿದ್ದೇನೆ. ಅವರ ಮಾರ್ಗದರ್ಶನದಲ್ಲಿ, ಅವರ ಮಾರ್ಗದಲ್ಲಿ ಮುನ್ನಡೆಯುವೆ. ಯಡಿಯೂರಪ್ಪ ಅವರ ಕನಸುಗಳನ್ನು ಸಾಕಾರಗೊಳಿಸುವ ಯತ್ನ ಮಾಡುತ್ತೇನೆ' ಎಂದು ಹೇಳಿದರು.

6ನೇ ಪುಟ ನೋಡಿ

ಬೊಮ್ಮಾಯಿ ಆಯ್ಕೆಯ ಹಿಂದಿನ ಲೆಕ್ಕಾಚಾರ

• ವೈ.ಗ. ಜಗದೀಶ್

ಸುದ್ದಿ ವಿಶ್ಲೇಷಣೆ

ಮುಖ್ಯಮಂತ್ರಿ ಗಾದಿಯಿಂದ ಯಡಿಯೂರಪ್ಪ ಇಳಿಯುವ ಸೂಚನೆ ಪಕ್ಕಾ ಆಗುತ್ತಿದ್ದಂತೆ ಈ ಕುರ್ಚಿಯ ಮೇಲೆ ಕಣ್ಣಿಟ್ಟಿದ್ದವರಿಗೆಲ್ಲ ಈಗ ನಿರಾಶೆಯಾಗಿದೆ. ನಾಯಕತ್ವದ ಮೇಲಿನ 'ಹಕ್ಕು' ಸಾಧನೆಗೆ ದೆಹಲಿಯಾತ್ರೆ ಮಾಡದ, ವರಿಷ್ಠರನ್ನು ಪದೇ ಪದೇ ಒಲೈಸುವ ಉಸಾಬರಿಗೆ ಹೋಗದ ತಮ್ಮ ಪಾಡಿಗೆ ಕೆಲಸ ಮಾಡಿಕೊಂಡಿದ್ದ ಬಸವರಾಜ ಬೊಮ್ಮಾಯಿ ಅವರಿಗೆ ಅದೃಷ್ಟ ಒಲಿದು ಬಂದಿರುವುದು ಬಿಜೆಪಿಯವರನ್ನೇ ಅಚ್ಚರಿಗೆ ದೂಡಿದೆ.

ವೀರಶೈವ-ಲಿಂಗಾಯತರ ಪ್ರಶ್ನಾತೀತ ನಾಯಕ ಯಡಿಯೂರಪ್ಪ ಅವರು 'ಸ್ವಯಮಾಸಕ್ತಿ'ಯಿಂದ ರಾಜೀನಾಮೆ ಕೊಡಲು ಮುಂದಾದ ಮೇಲೆ ಅವರ ಬೆಂಬಲಕ್ಕೆ ನಿಂತಿದ್ದ ಪ್ರಭಾವಿ ಸಮುದಾಯ ಅವರನ್ನೇ ಮುಂದುವರಿಸಬೇಕು ಎಂಬ ಹಕ್ಕೊತ್ತಾಯ ಮಾಡಿತ್ತು. ಮಠ ಬಿಟ್ಟು ಬೀದಿಗೆ ಬಂದಿದ್ದ ಸ್ವಾಮೀಜಿಗಳು ಸಮಾವೇಶ ನಡೆಸಿ ಯಡಿಯೂರಪ್ಪ ಅವರನ್ನೇ ಮುಂದುವರಿಸಬೇಕು ಎಂಬ ಬೇಡಿಕೆ ಮಂಡಿಸಿದ್ದರು. ಅವರನ್ನು ಬದಲಿಸಿದರೆ ಲಿಂಗಾಯತರನ್ನೇ ಮುಖ್ಯಮಂತ್ರಿ ಮಾಡಬೇಕು ಎಂಬ ವಾದವನ್ನೂ ಮುಂದಿಟ್ಟಿದ್ದರು. ಪ್ರಭಾವಿ ಲಿಂಗಾಯತ ನಾಯಕ ಯಡಿಯೂರಪ್ಪ ಅವರನ್ನು ಕೆಳಗಿಳಿಸಿ ಬೇರೆ ಸಮುದಾಯದವರಿಗೆ ಪಟ್ಟ ಕಟ್ಟಿದ್ದರೆ ಮುಂದೆ ಬೀಳಬಹುದಾದ 'ಹೊಡೆತ'ಕ್ಕೆ ಬೆಚ್ಚಿದ ಬಿಜೆಪಿ ವರಿಷ್ಠರು ಕೊನೆಗೂ ಅದೇ ಸಮುದಾಯಕ್ಕೆ ಸೇರಿದ ಬೊಮ್ಮಾಯಿ ಅವರಿಗೆ ಮುಖ್ಯಮಂತ್ರಿ ಪಟ್ಟ ಕಟ್ಟಲು ತೀರ್ಮಾನಿಸಿಬಿಟ್ಟಿದ್ದಾರೆ. 2023ರ ವಿಧಾನಸಭೆ, 2024ರ ಲೋಕಸಭೆ ಚುನಾವಣೆಯ ಮುಂದಾಲೋಚನೆ ಇದರ ಹಿಂದೆ ಕೆಲಸ ಮಾಡಿದ್ದನ್ನೂ ಅಲ್ಲಗಳೆಯಲಾಗದು. ಇವೆಲ್ಲ ತರ್ಕ ಏನೇ ಇದ್ದರೂ ಬಿಜೆಪಿಯ ವರಿಷ್ಠರು ವೀರಶೈವ-ಲಿಂಗಾಯತ ಲಾಬಿಗೆ ಮಣಿದಿರುವುದಂತೂ ಸ್ಪಷ್ಟ.

ಬೊಮ್ಮಾಯಿ ಅವರನ್ನು ಆಯ್ಕೆ ಮಾಡುವ ಮೂಲಕ ಅನೇಕ ತರ್ಕಗಳನ್ನು ಬಿಜೆಪಿ ವರಿಷ್ಠರು ಬದಿಗೆ ಇಟ್ಟಿದ್ದಾರೆ. ಸಂಘ ಪರಿವಾರದ ಮೂಲದವರನ್ನಲ್ಲದೇ ಹೊರಗಿನಿಂದ ಬಂದವರನ್ನೂ ಮುಖ್ಯಮಂತ್ರಿ ಮಾಡಬಹುದು ಎಂಬುದು ಈ ತೀರ್ಮಾನದಿಂದ ಹೊರಬಿದ್ದ ಮೊದಲ ಸಂದೇಶ.

ಆಯ್ಕೆಯ ಹಿಂದಿನ ಲೆಕ್ಕಾಚಾರ: ಲಿಂಗಾಯತರಲ್ಲದವರನ್ನು ಮುಖ್ಯಮಂತ್ರಿ ಮಾಡಬೇಕು ಎಂಬುದು ಯಡಿಯೂರಪ್ಪ ಅವರ ಒತ್ತಾಸೆಯಾಗಿತ್ತು ಎಂದೂ ಹೇಳಲಾಗುತ್ತಿದೆ.

6ನೇ ಪುಟ ನೋಡಿ

ಒಳ ಪುಟಗಳು
ನಗರದಲ್ಲಿ ಮತ್ತೆ ಹೋರ್ಡಿಂಗ್‌ಗೆ ಅವಕಾಶ! 3B
ಪ್ರವಾಹ: ಕೃಷ್ಣೆ ಆರ್ಭಟ ಹೆಚ್ಚಳ 4
'ಅಸ್ಸಾಂ-ಮಿಜೋರಾಂ ಸಂಘರ್ಷ: ಗಡಿ ಮರುವಿಂಗಡಣೆಯೇ ಪರಿಹಾರ' 5

ಇಂದಿನ ಪಾಡ್‌ಕಾಸ್ಟ್ ವಿಶೇಷ
ಝಣ ಝಣ ಕಾಂಚಾಣ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಪೆಗಾಸಸ್: ಮಧ್ಯಸ್ಥಿಕೆಗೆ ರಾಷ್ಟ್ರಪತಿಗೆ ಪತ್ರ

ನವದೆಹಲಿ: ಪೆಗಾಸಸ್ ಗೂಢಚಾರಿಕೆ ಹಾಗೂ ವಿವಾದಿತ ಕೃಷಿ ಕಾಯ್ದೆಗಳ ಬಗ್ಗೆ ಮುಂಗಾರು ಅಧಿವೇಶನದಲ್ಲಿ ಚರ್ಚಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವ ವಿಚಾರದಲ್ಲಿ ಮಧ್ಯಸ್ಥಿಕೆ ವಹಿಸಬೇಕು ಎಂದು ಮನವಿ ಮಾಡಿ, ವಿರೋಧ ಪಕ್ಷಗಳ ಸಂಸದರು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಗೆ ಮಂಗಳವಾರ ಪತ್ರ ಬರೆದಿದ್ದಾರೆ.

'ಗೂಢಚಾರಿಕೆ ಹಾಗೂ ಕೇಂದ್ರದ ಮೂರು ಕೃಷಿ ಕಾಯ್ದೆಗಳು ದೇಶಕ್ಕೆ ಆತಂಕಕಾರಿಯಾಗಿವೆ. ಕೃಷಿ ಭೂಮಿಯನ್ನು ಕಾರ್ಪೊರೇಟ್ ಸಂಸ್ಥೆಗಳ ಕೈಗೆ ಇಡುವ ಈ ಕಾಯ್ದೆಗಳಿಂದ ರೈತರ ಬದುಕು ಮೂರಾಬಟ್ಟೆಯಾಗುತ್ತದೆ. ಕಾಯ್ದೆ ವಿರೋಧಿಸಿ, ದೆಹಲಿಯ ಗಡಿಯಲ್ಲಿ ಕಳೆದ ಏಳು ತಿಂಗಳಿನಿಂದ ನಡೆದಿರುವ ರೈತ ಹೋರಾಟದಲ್ಲಿ 550ಕ್ಕೂ ಹೆಚ್ಚು ಕೃಷಿಕರು ಜೀವತೆತ್ತಿದ್ದು ಮನುಕುಲದ ದೊಡ್ಡ ದುರಂತ. ಪೆಗಾಸಸ್ ತಂತ್ರಾಂಶ ಬಳಸಿ, ರಾಜಕಾರಣಿಗಳು, ಸಾಮಾಜಿಕ ಕಾರ್ಯಕರ್ತರು ಹಾಗೂ ಪತ್ರಕರ್ತರ ಫೋನ್‌ಗಳ ಕದ್ದಾಲಿಕೆಯಾಗಿರುವ ಬೆಳವಣಿಗೆಯಿಂದ ನಾಗರಿಕ ಸಮಾಜ ಆಘಾತಗೊಂಡಿದೆ' ಎಂದು ಸಂಸದರು ಹೇಳಿದ್ದಾರೆ.

ಅಕಾಲಿದಳ, ಎನ್‌ಸಿಪಿ, ಬಿಎಸ್‌ಪಿ, ಸಿಪಿಐ, ಸಿಪಿಎಂ, ಆರ್‌ಎಲ್‌ಪಿ ಹಾಗೂ ಕಾಂಗ್ರೆಸ್ ಪಕ್ಷದ 10 ಸಂಸದರು ಪತ್ರಕ್ಕೆ ಸಹಿ ಮಾಡಿದ್ದಾರೆ.

ಇನ್ನಷ್ಟು ಸುದ್ದಿಗಳು 5

2020ರ ಪ್ರವಾಹ: ರಾಜ್ಯಕ್ಕೆ ₹ 629 ಕೋಟಿ ಪರಿಹಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಳೆದ ವರ್ಷ (2020) ಸುರಿದ ಭಾರಿ ಮಳೆಯಿಂದ ತಲೆದೋರಿದ್ದ ಪ್ರವಾಹದಿಂದಾಗಿ ರಾಜ್ಯದ ವಿವಿಧೆಡೆ ಸಂಭವಿಸಿದ ಬೆಳೆ ಹಾನಿ ಮತ್ತು ಭೂಕುಸಿತ ದಿಂದ ಸಂಕಷ್ಟಕ್ಕೆ ಈಡಾದವರಿಗೆ ಪರಿಹಾರ ವಿತರಿಸಲು ಕೇಂದ್ರ ಸರ್ಕಾರ ಮಂಗಳವಾರ ಅನುದಾನ ಬಿಡುಗಡೆ ಮಾಡಿದೆ.

ಹಾನಿಗೆ ಒಳಗಾದವರಿಗೆ ನೆರವು ನೀಡಲು ರಾಷ್ಟ್ರೀಯ ನೈಸರ್ಗಿಕ ವಿಕೋಪ ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಅಡಿ ₹ 629.03 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.

ಪ್ರವಾಹದಿಂದ ತತ್ತರಿಸಿದ್ದ ಮಹಾರಾಷ್ಟ್ರಕ್ಕೂ ₹ 701 ಕೋಟಿ ಪರಿಹಾರ ಒದಗಿಸಲು ನಿರ್ಧರಿಸಲಾಗಿದೆ.

ಕೇಂದ್ರದ ಗೃಹ ಸಚಿವ ಅಮಿತ್ ಶಾ ನೇತೃತ್ವದ ಉನ್ನತ ಮಟ್ಟದ ಸಮಿತಿ ಸೋಮವಾರ ಸಭೆ ನಡೆಸಿ ಈ ನಿರ್ಧಾರ ಕೈಗೊಂಡಿದೆ.

ಕಳೆದ ವರ್ಷ ಬರಗಾಲ ತಲೆದೋರಿದ್ದರಿಂದ ನಷ್ಟಕ್ಕೆ ಒಳಗಾಗಿದ್ದ ರಾಜಸ್ಥಾನದ ರೈತರಿಗೂ ಪರಿಹಾರದ ರೂಪದಲ್ಲಿ ₹ 113.69 ಕೋಟಿ ಒದಗಿಸಲಾಗಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಪಿಎಸ್‌ಐ ಆಕಾಂಕ್ಷಿಗಳಿಗೆ ಉಚಿತ ವಸತಿ

ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆಯು ಪಿಎಸ್‌ಐ ಹುದ್ದೆಗಳಿಗೆ ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ಜುಲೈ 28ರಿಂದ ಆಗಸ್ಟ್ 9ರವರೆಗೆ ನಡೆಸಲಿದ್ದು, ಪರೀಕ್ಷೆಗೆ ಹಾಜರಾಗಲು ಬೇರೆ ಜಿಲ್ಲೆಗಳಿಂದ ಬರುವ ಅಭ್ಯರ್ಥಿಗಳಿಗೆ ನಗರದ ಹೊಸಬೆಳಕು ತಪಸ್ಸು ಕೇಂದ್ರವು ಉಚಿತ ವಸತಿ ಮತ್ತು ಊಟದ ವ್ಯವಸ್ಥೆ ಕಲ್ಪಿಸಿದೆ.

ಅಭ್ಯರ್ಥಿಗಳಿಗೆ ಸಂಸ್ಥೆಯಲ್ಲಿ ತಂಗಲು ವ್ಯವಸ್ಥೆ ಇರಲಿದೆ. ಆಸಕ್ತಿವುಳ್ಳವರು ಸೌಲಭ್ಯ ಪಡೆದುಕೊಳ್ಳುವಂತೆ ಪ್ರಕಟಣೆ ತಿಳಿಸಿದೆ.

ವಿಳಾಸ: ಹೊಸಬೆಳಕು ತಪಸ್ಸು ಕೇಂದ್ರ, 2ನೇ ಅಡ್ಡರಸ್ತೆ, ಕುರುಬರ ಹಳ್ಳಿ ಮುಖ್ಯರಸ್ತೆ. ಸಂಪರ್ಕ: 6366828044, 9606091255

ಬೈರತಿ ಕ್ರಾಸ್ ನಿಂದ ಬಿಳಿಶಿವಾಲೆವರೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಹದಗೆಟ್ಟಿರುವುದು

ಬೈರತಿ ಕ್ರಾಸ್: ಹದಗೆಟ್ಟ ರಸ್ತೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬೈರತಿ ಕ್ರಾಸ್‌ನಿಂದ ಬಿಳಿಶಿವಾಲೆವರೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯು ಸಂಪೂರ್ಣವಾಗಿ ಹದಗೆಟ್ಟಿದೆ.

ವರ್ಷದ ಹಿಂದೆ ಅಭಿವೃದ್ಧಿಗಾಗಿ ರಸ್ತೆಯನ್ನು ಅಗೆಯಲಾಗಿದೆ. ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಸಲುವಾಗಿ ಪೈಪ್‌ಗಳನ್ನು ಹಾಕಲು ಹಾಗೂ ರಸ್ತೆ ಬದಿ ಚರಂಡಿ ನಿರ್ಮಿಸಲು ಯೋಜನೆ ರೂಪಿಸಲಾಗಿತ್ತು. ಈ ಯೋಜನೆ ಮುಗಿಯದೆ ಇರುವುದರಿಂದ ರಸ್ತೆ ತಗ್ಗುದಿಣ್ಣೆಗಳಿಂದ ಕೂಡಿದೆ.

ಮುಖ್ಯರಸ್ತೆಯಲ್ಲಿ ಬರುವ ಶ್ರೀ-ಸಿದ್ದರಾಮೇಶ್ವರ ಕಾಲೇಜು ಬಳಿ ಚಿಕ್ಕ ಚರಂಡಿಯಿಂದ ಹರಿಯುವ ನೀರು ರಸ್ತೆಗೆ ಬರುತ್ತದೆ. ಇಲ್ಲಿ ಬರುವ ನೀರಿನಿಂದ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಪಕ್ಕದಲ್ಲಿ ಇರುವ ಕೈಲಾಸನಹಳ್ಳಿಯಿಂದ ಬರುವ ಚರಂಡಿ ನೀರು ರಸ್ತೆಗೆ ಹರಿಯುತ್ತಿದೆ. ಕೈಲಾಸನಹಳ್ಳಿಯ ಚರಂಡಿ ನೀರು ಹಾಗೂ ಶ್ರೀಸಿದ್ದರಾಮೇಶ್ವರ ಕಾಲೇಜು ಬಳಿಯ ಚರಂಡಿ ನೀರು ಸೇರಿ ರಸ್ತೆಗೆ ಇಳಿಯುತ್ತಿದೆ.

ಕೆಲ ತಿಂಗಳಿನಿಂದಲೂ ಸಮಸ್ಯೆ ಬಗ್ಗೆ ಅಧಿಕಾರಿಗಳ ಗಮನಕ್ಕೂ ತಂದರೂ ಪ್ರಯೋಜನವಾಗುತ್ತಿಲ್ಲ. ಈ ರಸ್ತೆಯಿಂದಾಗಿ ಪ್ರತಿ ದಿನ ನಾಲ್ಕೈದು ಜನ ವಾಹನ ಸವಾರರಿಗೆ ಗಾಯಗಳು ಆಗುತ್ತಿವೆ ಎಂದು ಸ್ಥಳೀಯ ಡಾ.ರಾಧಾಕೃಷ್ಣ ಹೇಳಿದರು.

'ಸೇನೆಗೆ ಸೇರುವ ತುಡಿತ ಇರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತೀಯ ಸೇನೆ ಅಸಾಧಾರಣ ನಾಯಕತ್ವ ಕೌಶಲ, ಶೌರ್ಯ ಮತ್ತು ಹೋರಾಟಕ್ಕೆ ಖ್ಯಾತಿ ಹೊಂದಿದೆ. ಇಂತಹ ಸೇನೆಗೆ ಸೇರಲು ವಿದ್ಯಾರ್ಥಿಗಳು ಹೆಚ್ಚಿನ ತುಡಿತ ಹೊಂದಿರಬೇಕು' ಎಂದು ಕರ್ನಲ್ ಅಕ್ಕುಲ ಬಾಲಕೃಷ್ಣ ತಿಳಿಸಿದರು.

ಎಚ್‌ಎಸ್‌ಆರ್ ಬಡಾವಣೆಯ ನಾರಾಯಣ ಒಲಿಂಪಿಯಾಡ್ ಶಾಲೆಯಲ್ಲಿ ಕಾರ್ಗಿಲ್ ವಿಜಯ ದಿವಸದ ಅಂಗವಾಗಿ ಹಮ್ಮಿಕೊಂಡಿದ್ದ 'ಸೇವೆ, ತ್ಯಾಗ ಮತ್ತು ಗೌರವ ಸಶಸ್ತ್ರ ಪಡೆಗಳಲ್ಲಿ ಒಂದು ಜೀವನ' ಕುರಿತ ಸಂವಾದದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ರಾಜ್ಯದ ಗರುಡ ಕಮಾಂಡೋ ಪೊಲೀಸ್ ಪಡೆಯಲ್ಲಿ ಭಯೋತ್ಪಾದನೆ ನಿಗ್ರಹ ತರಬೇತಿ ನೀಡುತ್ತಿರುವ ಬಾಲಕೃಷ್ಣ ಅವರು ರಾಷ್ಟ್ರೀಯ ಭದ್ರತಾ ಪಡೆಯ (ಎನ್‌ಎಸ್‌ಜಿ) ಬಾಂಬ್ ವಿಲೇವಾರಿ ಘಟಕದ ಕಮಾಂಡರ್ ಆಗಿ ಕಾರ್ಯನಿರ್ವಹಿಸಿದ್ದರು.

ಕರ್ನಲ್ ಅಕ್ಕುಲ ಬಾಲಕೃಷ್ಣ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ನಾರಾಯಣ ಒಲಿಂಪಿಯಾಡ್ ಶಾಲೆಯ ಎಜಿಎಂ ಶೀಜು, ಪ್ರಾಂಶುಪಾಲರಾದ ಸಿ.ಎಸ್‌.ಲತಾ, ಆಡಳಿತ ಮಂಡಳಿ ಮುಖ್ಯಸ್ಥ ಅಶ್ವತ್ಥರಾಜು ಇದ್ದಾರೆ

ಪುಸ್ತಕ ಬಹುಮಾನಕ್ಕೆ ಕೃತಿಗಳ ಆಹ್ವಾನ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು 2020ನೇ ಸಾಲಿನ ಪುಸ್ತಕ ಬಹುಮಾನಕ್ಕೆ ವಿವಿಧ ಪ್ರಕಾರಗಳ ಕೃತಿಗಳನ್ನು ಆಹ್ವಾನಿಸಿದೆ.

ಕಾವ್ಯ (ವಚನಗಳು ಮತ್ತು ಹನಿಗವನಗಳು), ಕಾದಂಬರಿ, ಸಣ್ಣಕತೆ, ನಾಟಕ, ಲಲಿತ ಪ್ರಬಂಧ, ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ, ಆತ್ಮಕತೆ, ಸಾಹಿತ್ಯ ವಿಮರ್ಶೆ, ಗ್ರಂಥ ಸಂಪಾದನೆ (ಪ್ರಾಚೀನ ಕೃತಿಗಳ ಸಂಪಾದನೆ), ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ, ಮಾನವಿಕ ವಿಷಯಗಳು, ಸಂಶೋಧನೆ, ಅನುವಾದ, ಸಂಕೀರ್ಣ ಸೇರಿದಂತೆ 22 ವಿಭಾಗಗಳಲ್ಲಿ ಕೃತಿಗಳನ್ನು ಆಹ್ವಾನಿಸಿದ್ದು, ಪ್ರತಿ ಪ್ರಕಾರದಲ್ಲಿ ವಿಮರ್ಶಕರು ಆಯ್ಕೆ ಮಾಡಿದ ಒಂದು ಕೃತಿಗೆ ಪ್ರಶಸ್ತಿ ನೀಡಲಾಗುತ್ತದೆ.

ಕೃತಿಗಳು 2020ರ ಜನವರಿ 1 ರಿಂದ ಡಿಸೆಂಬರ್ 31 ರೊಳಗೆ ಪ್ರಥಮ ಆವೃತ್ತಿಯಾಗಿ ಪ್ರಕಟವಾಗಿರಬೇಕು. ಜನಪದ ಪ್ರಕಾರ ಹಾಗೂ ಪಿಎಚ್‌.ಡಿ ಪದವಿಗಾಗಿ ಸಿದ್ಧಪಡಿಸಿದ ಸಂಶೋಧನಾ ಗ್ರಂಥಗಳನ್ನು ಪ್ರಶಸ್ತಿಗೆ ಪರಿಗಣಿಸುವುದಿಲ್ಲ. ಕೃತಿಯ ನಾಲ್ಕು ಪ್ರತಿಗಳನ್ನು ಸೆ.15ರೊಳಗೆ ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2 ನೇ ಮಹಡಿ, ಜೆ.ಸಿ. ರಸ್ತೆ, 560002 ಈ ವಿಳಾಸಕ್ಕೆ ಕಳುಹಿಸುವಂತೆ ಅಕಾಡೆಮಿಯು ಪ್ರಕಟಣೆಯಲ್ಲಿ ತಿಳಿಸಿದೆ.

ವಿವರಕ್ಕೆ: www.karnatakasahityaacademy.org

कार्यालय प्रधान मुख्य वन संरक्षक (उत्पादन)
मध्य प्रदेश, सतपुड़ा भवन, भोपाल
मध्य वन विभाग
दूरभाष एवं फैक्स नं0 0755–2674354 E-mail: pccfprod@mp.gov.in
क्रमांक/उत्पा०/निर्वर्तन/विज्ञापन/124/1702 भोपाल, दिनांक 22/07/2021

वनोपज के घोष विक्रय की सूचना

मध्यप्रदेश शासन, वन विभाग के विभागीय काष्ठागारों/बाँसागारों में माह अगस्त, 2021 में विभिन्न स्थलों पर विभिन्न तिथियों में ईमारती काष्ठ, जलाऊ चट्टें, बाँस एवं अन्य सामाग्री के नीलाम की तिथियाँ पूर्व से अधिसूचित है। Covid-19 संक्रमण के दृष्टिगत भविष्य में शासन स्तर से जारी होने वाले निर्देशों के अनुरुप नीलामों की कार्यवाही की जाऐगी। नीलाम की तदर्थ तिथियाँ, नीलाम का प्रकार तथा काष्ठागारों में विक्रय हेतु उपलब्ध वनोपज व अन्य सामग्री की जानकारी मध्यप्रदेश शासन, वन विभाग की वैब साईट mpforest.gov.in पर देखी जा सकती है।

अपर प्रधान मुख्य वन संरक्षक (उत्पादन)
मध्यप्रदेश, भोपाल
G-14929/21 वन प्राकृतिक धरोहर है। इनका संरक्षण कीजिये।

ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,
ನಂ.14, ರಜತ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ,ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104 ದೂರವಾಣಿ: 23300497–41159606 ಫ್ಯಾಕ್ಸ್: 23359600,
Email: vjn@jscbl.com, ಶಾಖೆ: ಮೂಡಲಪಾಳ್ಯ

ಸ್ವಾಧೀನ ಸೂಚನೆ (ಸ್ಥಿರಾಸ್ತಿಗಳಿಗಾಗಿ) ನಿಯಮ 8(1)

ಅದಾಗಿ ಕೆಳಸಹಿದಾರರು ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ನ ಅಧಿಕೃತ ಅಧಿಕಾರಿಯಾಗಿದ್ದು, ದಿನಾಂಕ 20–04–2021 ರಂದು ಇದ್ದಂತೆ ನೋಟೀಸ್‌ನಲ್ಲಿ ತಿಳಿಸಿರುವ ಮೊತ್ತರೂ. 1,27,81,610/– (ಒಂದು ಕೋಟಿ ಇಪ್ಪತ್ತೇಳು ಲಕ್ಷದ ಎಂಭತ್ತೊಂದು ಸಾವಿರದ ಆರು ನೂರ ಹತ್ತು ರೂಪಾಯಿಗಳು ಮಾತ್ರ) ಅನ್ನು ಸದರಿ ನೋಟೀಸ್ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಮರುಪಾವತಿ ಮಾಡುವಂತೆ ಸಾಲಗಾರರಾದ 1. ಶ್ರೀ ರಾಜಣ್ಣ ಬಿನ್ ಶ್ರೀ ಚನ್ನನರಸಿಂಹಯ್ಯ, ನಂ. 34, 1ನೇ ಹಂತ, ಬಿ.ಇ.ಎಂ.ಎಲ್. ಲೇಔಟ್, ಕಾಮಾಕ್ಷಿಪಾಳ್ಯ ಮುಖ್ಯರಸ್ತೆ, ಬೆಂಗಳೂರು – 560 079, ಇಲ್ಲಿನ ನಿವಾಸಿ ಇವರಿಗೆ ಕರೆ ನೀಡಿ ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್‌ರಚನೆ ಮತ್ತು ಭದ್ರತಾ ಆಸಕ್ತಿ ಜಾರಿ ಕಾಯ್ದೆ, 2002 ರ ಅನ್ವಯ ಮತ್ತು ಭದ್ರತಾ ಆಸಕ್ತಿ (ಜಾರಿ) ನಿಯಮಗಳು 2002 ರ ನಿಯಮ 3 ಓದಿಕೊಂಡಂತೆ ಪ್ರಕರಣ 13 (12) ರ ಅನ್ವಯ ಪ್ರದತ್ತವಾದ ಅಧಿಕಾರ ಚಲಾಯಿಸಿ ದಿನಾಂಕ 20–04–2021 ರ ಡಿಮ್ಯಾಂಡ್ ನೋಟೀಸ್ ನೀಡಿದ್ದರು.

ಸಾಲಗಾರರು ನೋಟೀಸ್‌ನಲ್ಲಿ ತಿಳಿಸಿರುವ ಮೊತ್ತವನ್ನು ಮರುಪಾವತಿ ಮಾಡಲು ವಿಫಲರಾಗಿರುವುದರಿಂದ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಭದ್ರತಾ ಆಸಕ್ತಿ (ಜಾರಿ) ನಿಯಮಗಳು 2002 ರ ನಿಯಮ 8 ಓದಿಕೊಂಡಂತೆ ಕಾಯ್ದೆಯ ಪ್ರಕರಣ 13ರ ಉಪಪ್ರಕರಣ (4) ರ ಅನ್ವಯ ಅವರಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಈ ಕೆಳಗೆ ವಿವರಿಸಿರುವ ಸ್ವತ್ತನ್ನು ಕೆಳಸಹಿದಾರರು ದಿನಾಂಕ 22ನೇ ಜುಲೈ 2021 ರಂದು ಸ್ವಾಧಿನಪಡಿಸಿಕೊಂಡಿದ್ದಾರೆ.

ಸದರಿ ಸ್ವತ್ತಿನ ಬಗ್ಗೆ ವ್ಯವಹರಿಸಬಾರದಾಗಿ ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೇ ಆದರೆ ಅದು ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಮೂಡಲಪಾಳ್ಯ ಶಾಖೆ, ಬೆಂಗಳೂರು ಇದಕ್ಕೆ ಸಾಲದ ಸಂ.MTL/27 ರ ಸಂಬಂಧ ದಿನಾಂಕ 19–07–2021 ರಂದು ಇದ್ದಂತೆ ರೂ. 1,25,19,494/– (ಒಂದು ಕೋಟಿ ಇಪ್ಪತ್ತೈದು ಲಕ್ಷದ ಹತ್ತೊಂಬತ್ತು ಸಾವಿರದ ನಾಲ್ಕುನೂರ ತೊಂಬತ್ತು ನಾಲ್ಕು ರೂಪಾಯಿಗಳು ಮಾತ್ರ) ಮತ್ತು ಇದರ ಮೇಲಿನ ಬಡ್ಡಿ ಪಾವತಿ ಮಾಡುವುದಕ್ಕೆ ಒಳಪಟ್ಟಿರುತ್ತದೆ ಎಂಬುದಾಗಿ ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ.

ಭದ್ರತೆಯುಳ್ಳ ಆಸ್ತಿಗಳನ್ನು ಬಿಡಿಸಿಕೊಳ್ಳಲು ಲಭ್ಯವಿರುವ ಕಾಲಾವಕಾಶದ ಬಗ್ಗೆ ಕಾಯ್ದೆಯ ಪ್ರಕರಣ 13 (8) ರ ಉಪಬಂಧಗಳ ಬಗ್ಗೆ ಸಾಲಗಾರರ ಗಮನ ಸೆಳೆಯಲಾಗಿದೆ.

ಸಾಲಗಾರರು ಈಡು ಮಾಡಿರುವ ಸ್ವತ್ತುಗಳ ವಿವರ ಮತ್ತು ಆಧಾರ ಮಾಡಿರುವ ಸ್ವತ್ತುಗಳ ವಿವರ :

ಶ್ರೀ ರಾಜಣ್ಣ ಸಿ. ಇವರಿಗೆ ಸೇರಿದ ಸ್ವತ್ತು

ಬಿ.ಬಿ.ಎಂ.ಪಿ. ವಾರ್ಡ್ ನಂ. 21, ಮಾಗಡಿ ಮುಖ್ಯರಸ್ತೆ, ಅಗ್ರಹಾರ ದಾಸರಹಳ್ಳಿ, ಬೆಂಗಳೂರು ಇಲ್ಲಿರುವ, ಮುನಿಸಿಪಲ್ ಖಾತಾ ನಂ. 65/1, ಪಿ.ಐ.ಡಿ. ನಂ. 21–77–65/1 ಒಳಗೊಂಡಿರುವ ಮತ್ತು ಪೂರ್ವದಿಂದ ಪಶ್ಚಿಮಕ್ಕೆ : 32 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 85 ಅಡಿ ಹೀಗೆ ಒಟ್ಟಾರೆ 2720 ಚದರ ಅಡಿ ವಿಸ್ತೀರ್ಣದ ಸ್ಥಿರಾಸ್ತಿ ಮನೆ ಸ್ವತ್ತು. ಸದರಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು. ಪೂರ್ವಕ್ಕೆ : ಬೋರಲಿಂಗಯ್ಯನವರ ಮನೆ, ಪಶ್ಚಿಮಕ್ಕೆ : ಸಿದ್ದಣ್ಣನವರ ಮನೆ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಮಾಗಡಿ ಮುಖ್ಯರಸ್ತೆ.

ಈ ಹಿಂದಿನ ದಿನಾಂಕ 05–07–2021 ರಂದು ನೀಡಿದ ಸ್ವಾಧೀನ ನೋಟೀಸನ್ನು ಹಿಂಪಡಿಯಲಾಗಿದೆ.

ಸ್ಥಳ : ಬೆಂಗಳೂರು
ದಿನಾಂಕ : 22/07/2021
ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,

ನೈಋತ್ಯ ರೈಲ್ವೆ
E- Tender Notice No. 05/2021
Dated: 23.07.2021
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಆರ್‌ಡಿಎಸ್‌ಓ ಡಿಆರ್‌ಜಿ ಸಂ. ಟಿ–090 (ಎಮ್) ಪ್ರಕಾರ 52 ಕೆಜಿ (610 ಮಿಮೀ) ಫಿಶ್ ಪ್ಲೇಟ್‌ಗಳ ತಯಾರಿಕೆ ಮತ್ತು ಸರಬರಾಜು – 24000 ಸಂಖ್ಯೆ.	Rs. 4,78,60,800/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 13–08–2021, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನೀಯರ್ / ನಿರ್ಮಾಣ / ಸ್ಟೋರ್ಸ್ ಬೆಂಗಳೂರು ದಂಡು
PUB/125/AAV/PRB/SWR/2021-22

ನೈಋತ್ಯ ರೈಲ್ವೆ
E- Tender Notice No. CAO/CN/BNC/31/2021
Dated: 23.07.2021
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಗಿಣಿಗೇರಾ–ರಾಯಚೂರು ಹೊಸ ಬಿಜಿ ಲೈನ್ ಯೋಜನೆ: ಗೋರೆಬಾಳ – ಸಿಂಧನೂರು ಯಾರ್ಡ್ ಸೇರಿಸಿ ಕಿ.ಮೀ. 66.0 ರಿಂದ ಕಿ.ಮೀ. 84.7 ರ ನಡುವೆ ಬಿ ಜಿ ಲೈನ್ ಲಿಂಕಿಂಗ್ ಹಾಗೂ ಇತರ ಸಂಬಂಧಿತ ಕಾಮಗಾರಿಗಳು	Rs. 7,51,78,792.82/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 13–08–2021, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನೀಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು
PUB/124/AAV/PRB/SWR/2021-22

सेन्ट्रल मैन्युफैक्चरिंग टेक्नोलॉजि इंस्टिट्यूट cmti
CENTRAL MANUFACTURING TECHNOLOGY INSTITUTE
(An Autonomous R&D Institute under the Dept. of Heavy industry, Ministry of Heavy Industries & Public Enterprises, Govt. of India, New Delhi)
Tumkur Road, Bengaluru - 560 022. Advt. 06/2021

TENDER NOTICE
PROVIDING CANTEEN SERVICES AT CMTI

Sealed Tenders are invited from the reputed Canteen Contractors who have experience in the relevant field not less than Three Years and who are possessing Valid Licence & Valid Registration Number under the EPF & ESI Act, for Providing Canteen Services at CMTI for period of **Three Years.**

Tender forms containing complete details may be obtained from the Chief Administrative Officer, on payment of Rs. 1,770 /- inclusive of GST(non-refundable) by cash or DD drawn in favour of CMTI, on all working days between **10.00 Hrs to 15:00 Hrs** from **28.07.2021 onwards.** Application can also be downloaded from website and submit their Tender Forms along with DD on or before **14:00 Hrs** on **17.08.2021** in a sealed envelope superscribing **"Tender for Providing Canteen Services at CMTI".**

For further details please visit our website: ***www.cmti.res.in.***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಕೆಂಗೇರಿ ವಿಭಾಗ,
2ನೇ ಮುಖ್ಯರಸ್ತೆ, ಜಗಜ್ಯೋತಿ ಬಡಾವಣೆ, ಬೆಂಗಳೂರು
ಸಂಖ್ಯೆ: ಕಾಪಾಅ/ಕೆಂಗೇರಿ/ಟೆಂಡರ್/05/2021–22 ದಿನಾಂಕ: 26.07.2021

ಟೆಂಡರ್ ಮುಂದೂಡಿಕೆ ಪ್ರಕಟಣೆ – 1

ಉಲ್ಲೇಖ: 1. ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ಕೆಂಗೇರಿ/ಟೆಂಡರ್/05/2021–22 ದಿನಾಂಕ: 06.07.2021

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ರೀತ್ಯಾ ಟೆಂಡರ್ ಕರೆಯಲಾಗಿದ್ದು, ತಾಂತ್ರಿಕ ಕಾರಣಗಳಿಂದ ಕಾಮಗಾರಿಗಳ ಟೆಂಡರನ್ನು ಮುಂದೂಡಲಾಗಿರುತ್ತದೆ. ಕಾರಣಾಂತರಗಳಿಂದ ಟೆಂಡರ್‌ನ ದಿನಾಂಕಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದೆ. ಉಳಿದಂತೆ ಇನ್ಯಾವುದೇ ಬದಲಾವಣೆಗಳಿರುವುದಿಲ್ಲ.

ಮಾರ್ಪಾಡಾದ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **02.08.2021**ರ ಸಂಜೆ **4:00** ಗಂಟೆಯವರೆಗೆ. (2) ಬಿಡ್‌ಗಳನ್ನು ದಿನಾಂಕ: **03.08.2021**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೋಲಾರ ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.ಕೋಲಾರ
ಡೇರಿ ಆವರಣ, ಪಿ.ಬಿ.ನಂ 63, ಎನ್ ಹೆಚ್ – 75, ಹುತ್ತೂರು ಅಂಚೆ, ಕೋಲಾರ – 563102
[Ph.No 08152-282310,7760964517, E-mail: komulpurchase@yahoo.com]
ಕ್ರಸಂ: ಕೋಚಿಹಾಒ: ಖರೀದಿ: ಇ–ಟೆಂಡರ್: 3562: 2021-22 ದಿನಾಂಕ: 28.07.2021

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ವಿಮೆಗೆ ಟೆಂಡರ್ ಪ್ರಕಟಣೆ

ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರಿ ಹಾಲು ಒಕ್ಕೂಟವು ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಈ ಕೆಳಗೆ ವಿವರಿಸಿದ ಒಕ್ಕೂಟದ ಡೇರಿ, ಯು.ಎಚ್.ಟಿ ಘಟಕ ಮತ್ತು ಶೀತಲ ಕೇಂದ್ರಗಳಲ್ಲಿರುವ ಡೇರಿ ಪ್ಲಾಂಟ್ ಮತ್ತು ಯಂತ್ರೋಪಕರಣಗಳಿಗೆ ಹಾಗೂ ಮಾರುಕಟ್ಟೆ ವಿಭಾಗದ ಗುಡ್‌ಲೈಫ್ ಹಾಲು ಸಾಗಾಣಿಕೆಗೆ 2021–22 ಸಾಲಿಗೆ ವಿಮೆ ಮಾಡಿಸಲು ಟೆಂಡರ್ ಆಹ್ವಾನಿಸಿದೆ. ಸದರಿ ಸೇವೆಗಳಿಗೆ ಅರ್ಹ ಬಿಡ್ಡುದಾರರಿಂದ ದ್ವಿಲಕೋಟೆ ಟೆಂಡರ್ ಆಹ್ವಾನಿಸಿದ್ದು ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ವಿವರಗಳನ್ನು www.eproc.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ.ಸಂ	ಸೇವೆಗಳ ವಿವರ
1	ಡೇರಿ ಪ್ಲಾಂಟ್ ಮತ್ತು ಯಂತ್ರೋಪಕರಣಗಳಿಗೆ ವಿಮೆ ಮಾಡಿಸಲು
2	ಗುಡ್‌ಲೈಫ್ ಹಾಲು ಸಾಗಾಣಿಕೆಗೆ ವಿಮೆ ಮಾಡಿಸಲು

ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲಾತಿಗಳು ಚಾಲ್ತಿಗೆ ಬರುವ ದಿನಾಂಕ : 28.07.2021
ಟೆಂಡರ್ ಅಪ್‌ಲೋಡ್ ಮಾಡಲು ಕೊನೆ ದಿನಾಂಕ : 13.08.2021 ರ ಸಂಜೆ 5.00 ಗಂಟೆಯವರೆಗೆ
ಟೆಂಡರ್ ತಾಂತ್ರಿಕ ಭಾಗ–1ನ್ನು ತೆರೆಯುವ ದಿನಾಂಕ: 16.08.2021 ರಂದು ಬೆಳಗ್ಗೆ 11.00 ಗಂಟೆ ನಂತರ

ಸಹಿ/– ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಪರವಾಗಿ
ವ್ಯವಸ್ಥಾಪಕ ನಿರ್ದೇಶಕರು

(ಲೋಕೋಪಯೋಗಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ:
16/2021–22 ದಿನಾಂಕ: 23.07.2021

(ರಸ್ತೆ ಮತ್ತು ಕಟ್ಟಡ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 ರಂತೆ ಏಕ–ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಏಕ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ದಿನಾಂಕ: **28.07.2021** ರಿಂದ **05.08.2021**ರ ಸಂಜೆ **4.00** ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. **(1)** ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: **29.07.2021 (ಸಂಜೆ 3.00 ಗಂಟೆಗೆ ಕಛೇರಿ ವೇಳೆಯಲ್ಲಿ). (2)** ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: **05.08.2021 (ಸಂಜೆ 4.00 ಗಂಟೆಯವರೆಗೆ). (3)** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **06.08.2021 ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ತಿಮ್ಮರಾಯಪ್ಪ.ಬಿ, ಕಾರ್ಯಪಾಲಕ ಇಂಜಿನಿಯರ್,
ಲೋ.ಇ.ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ104/ಎಂ.ಸಿ.ಎ/2021–22

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಕಟಣೆ

ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230
ನೋಂದಣಿ ಕಛೇರಿ: ಸಂಖ್ಯೆ. 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100 ದೂರವಾಣಿ : 080 41362000 ಫ್ಯಾಕ್ಸ್ : 080 41362010
ಇ–ಮೇಲ್: tilinvestor@timken.com ವೆಬ್‌ಸೈಟ್ : www.timken.com/en-in

ಸೂಚನೆ

ಕಂಪನಿಯ 34ನೇ ವಾರ್ಷಿಕ ಸಾರ್ವತ್ರಿಕ ಸಭೆಯನ್ನು ('ಎಜಿಎಂ'), 23 ನೇ ಆಗಸ್ಟ್, 2021 ಸೋಮವಾರ ಮಧ್ಯಾಹ್ನ 3.00 ಗಂಟೆಗೆ (ಐಎಸ್‌ಟಿ) ವಿಡಿಯೋಕಾನ್ಫರೆನ್ಸ್ (ವಿಸಿ) / ಇತರೆ ಆಡಿಯೋ ವಿಷುಯಲ್ ಮೂಲಕ (ಒಎವಿಎಂ) ನಡೆಸಲಿದೆ ಎಂದು 2013 ರ ಕಂಪನಿ ಕಾಯ್ದೆಯಲ್ಲಿ ಅನ್ವಯಿಸುವ ಎಲ್ಲಾ ನಿಬಂಧನೆಗಳ ಪ್ರಕಾರ ಹಾಗೂ ಇದರ ನಿಯಮಾನುಸಾರ ಮತ್ತು ಸೆಕ್ಯೂರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯದ (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ನಿಬಂಧನೆ 2015 ಅನ್ನು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದ ಹಾಗೂ ಸೆಕ್ಯೂರಿಟಿಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯದವರು ನೀಡಿರುವ ವಿಷಯದ ಬಗ್ಗೆ ಅನ್ವಯಿಸುವ ಎಲ್ಲಾ ಸುತ್ತೋಲೆಗಳೊಂದಿಗೆ ಓದಿಕೊಳ್ಳುವುದು ಮತ್ತು ಕರೆಯಲಾದ ವಾರ್ಷಿಕ ಸಾರ್ವತ್ರಿಕ ಸಭೆಯಲ್ಲಿ (ಎಜಿಎಂ) ಸೂಚಿಸಲಾದ ವ್ಯವಹಾರ ಚಟುವಟಿಕೆಗಳನ್ನು ಚರ್ಚಿಸಲಾಗುವುದು .

ಈ ಸುತ್ತೋಲೆಗಳಿಗೆ ಅನುಗುಣವಾಗಿ, 34ನೇ ವಾರ್ಷಿಕ ಸಾರ್ವತ್ರಿಕ ಸಭೆಯ ಸೂಚನೆ ಹಾಗೂ 2020–21 ರ ವಾರ್ಷಿಕ ವರದಿಯನ್ನು ಎಲ್ಲಾ ಸದಸ್ಯರಿಗೆ, ಕಂಪನಿ/ಭಾಗವಹಿಸುವ (ವವರ) ಡಿಪಾಸಿಟರ್ ಗಳಲ್ಲಿ ಲಭ್ಯವಿರುವ ಇ–ಮೇಲ್ ಐಡಿಗಳಿಗೆ ಕಳುಹಿಸಲಾಗಿದೆ. 34ನೇ ಎಜಿಎಂ ಸೂಚನೆ ಹಾಗೂ 2020–21 ರ ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ www.timken.com/en-in ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ ಸಹ ಲಭ್ಯವಿದೆ. 34ನೇ ಎಜಿಎಂ ಸೂಚನೆಯು ನ್ಯಾಷನಲ್ ಸೆಕ್ಯೂರಿಟಿಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ವೆಬ್‌ಸೈಟ್ www.evoting.nsdl.com ನಲ್ಲಿಯು ಸಹ ಲಭ್ಯವಿದೆ.

ಸಂಸ್ಥೆಗಳ ನಿಯಮ 20 (ಆಡಳಿತ ವರ್ಗ ಹಾಗೂ ಆಡಳಿತ) ಸಮಯಕ್ಕೆ ಅನುಗುಣವಾಗಿ ಬದಲಾಯಿಸುವ ನಿಯಮಗಳು, 2014 ಮತ್ತು ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ ನಿಬಂಧನೆ 2015 ರ (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ನಿಬಂಧನೆ 44 ರ ಅನುಸಾರ ಸಂಸ್ಥೆಯ ಕಾಯ್ದೆ 2013 ರ ಸೆಕ್ಷನ್ 108 ರ ನಿಬಂಧನೆಗಳಿಗೆ ಅನ್ವಯ ಕಂಪನಿಯು ಎನ್‌ಎಸ್‌ಡಿಎಲ್‌ನೊಂದಿಗೆ 34ನೇ ವಾರ್ಷಿಕ ಸಾರ್ವತ್ರಿಕ ಸಭೆಯ ನಿರ್ಣಯಗಳಿಗಾಗಿ ಇ–ಮತ ಚಲಾಯಿಸಲು ವ್ಯವಸ್ಥೆ ಮಾಡಿದೆ. ಇ–ಮತ ಚಲಾವಣೆಯಲ್ಲಿ ಭಾಗವಹಿಸುವ ಸಂಪೂರ್ಣ ವಿಧಾನದ ಬಗ್ಗೆ ಎಜಿಎಂ ಸೂಚನೆಯಲ್ಲಿ ಲಭ್ಯವಿದೆ. ಭೌತಿಕ ಅಥವಾ ಡಿ ಮೆಟೀರಿಯಲೈಸ್ಡ್ ರೂಪದಲ್ಲಿ ಕಂಪನಿಯ ಷೇರುಗಳನ್ನು ಹೊಂದಿರುವ ಸದಸ್ಯರು ಕಟ್ಟ ಕಡೆಯ ದಿನವಾದ 2021, 16 ನೇ ಆಗಸ್ಟ್ ರಂದು ತಮ್ಮ ಮತವನ್ನು ಎಲೆಕ್ಟ್ರಾನಿಕ್ ಯಂತ್ರದ ಮೂಲಕ ಚಲಾಯಿಸಬಹುದು.

ರಿಮೋಟ್ ಇ–ಮತ ಚಲಾವಣೆಯು 2020, 20 ನೇ ಆಗಸ್ಟ್ ಬೆಳಿಗ್ಗೆ 9.00 ಗಂಟೆಗೆ (ಐಎಸ್‌ಟಿ) ಪ್ರಾರಂಭವಾಗುವುದು ಹಾಗೂ 2021, 22ನೇ ಆಗಸ್ಟ್, ಸಂಜೆ 5.00 ಗಂಟೆಗೆ (ಐಎಸ್‌ಟಿ) ಮುಕ್ತಾಯಗೊಳ್ಳುವುದು. ನಂತರ ರಿಮೋಟ್ ಇ–ಮತ ವಿಧಾನವನ್ನು ನಿಷ್ಕ್ರಿಯಗೊಳಿಸಲಾಗುವುದು. ಮತ ಚಲಾವಣೆಯ ಫಲಿತಾಂಶವನ್ನು ನಿಯಮದ ಅನುಸಾರ ಘೋಷಿಸಲಾಗುವುದು ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿಯು ಸಹ ಪ್ರಕಟಿಸಲಾಗುವುದು. ಯಾವ ವ್ಯಕ್ತಿಯ ಹೆಸರು ಸದಸ್ಯರ ರಿಜಿಸ್ಟರ್‌ನಲ್ಲಿ ಅಥವಾ ಡಿಪಾಸಿಟರಿಸ್‌ರವರ ಮಾಲೀಕತ್ವ ಹೊಂದಿರುವ ಫಲಾನುಭವಿಗಳು ರಿಜಿಸ್ಟರ್‌ನಲ್ಲಿ ಕಟ್ಟ ಕಡೆಯ ದಿನಾಂಕವಾದ 16ನೇ ಆಗಸ್ಟ್ 2021 ರಂದು ತಮ್ಮ ಹೆಸರು ಗೋಚರವಾದಲ್ಲಿ ರಿಮೋಟ್ ಇ–ಮತ ಚಲಾವಣೆ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ ಅಥವಾ ವಾರ್ಷಿಕ ಸಾರ್ವತ್ರಿಕ ಸಭೆ (ಎಜಿಎಂ) ಯಲ್ಲಿ ಮತ ಚೀಟಿ ಮೂಲಕ ಮತ ಚಲಾಯಿಸಬಹುದು. ಯಾವುದೇ ವ್ಯಕ್ತಿಯು ವಾರ್ಷಿಕ ಸಾರ್ವತ್ರಿಕ ಸಭೆಯ (ಎಜಿಎಂ) ಸೂಚನೆಯನ್ನು ರವಾನಿಸಿದ ನಂತರ ಕಂಪನಿಯ ಷೇರುಗಳನ್ನು ಹೊಂದಿ ಕಟ್ಟ ಕಡೆಯ ದಿನಾಂಕದಂದು ಅಂದರೆ 16ನೇ ಆಗಸ್ಟ್ 2021 ರಂದು ಸದಸ್ಯರಾದಲ್ಲಿ, ಜತಠಣುಟಿರ.ಟಿಜಟ.ಛಿಠ.ಟಿ ಗೆ ತಮ್ಮ ಮನವಿಯನ್ನು ಸಲ್ಲಿಸುವ ಮೂಲಕ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಅನ್ನು ಪಡೆಯಬಹುದು. ಯಾವ ವ್ಯಕ್ತಿಯು ಮೇಲೆ ತಿಳಿಸಲಾದ ಕಟ್ಟ ಕಡೆಯ ದಿನದಂದು ಸದಸ್ಯರಾಗದಿದ್ದಲ್ಲಿ (ಕಂಪನಿಯ ಶೇರು ಹೊಂದಿಲ್ಲವಾದರೆ) ಈ ಸೂಚನೆಯನ್ನು ಮಾಹಿತಿಯಾಗಿ ಮಾತ್ರ ಸ್ವೀಕರಿಸತಕ್ಕದ್ದು. ವಾರ್ಷಿಕ ಸಾರ್ವತ್ರಿಕ ಸಭೆಗೆ (ಎಜಿಎಂ) ಮುನ್ನ ರಿಮೋಟ್ ಇ–ಮತ ಚಲಾವಣೆ ಮೂಲಕ ಮತ ಚಲಾಯಿಸಿರುವ ಸದಸ್ಯರು 34ನೇ ವಾರ್ಷಿಕ ಸಾರ್ವತ್ರಿಕ ಸಭೆ (ಎಜಿಎಂ) ಯಲ್ಲಿ ಭಾಗವಹಿಸಬಹುದು ಆದರೆ ಪುನಃ ಮತ ಚಲಾಯಿಸಲು ಅವಕಾಶವಿರುವುದಿಲ್ಲ.

ಯಾವ ಸದಸ್ಯರ ಇ–ಮೇಲ್ ಐಡಿಗಳು ಕಂಪನಿ/ಡಿಪಾಸಿಟರಿಸ್‌ನಲ್ಲಿ ನೋಂದಾಯಿಸದಿದ್ದಲ್ಲಿ ಇವರು ಕೆಳಗೆ ತಿಳಿಸಿರುವ ದಾಖಲೆಗಳನ್ನು evoting.nsdl.co.in ಗೆ ಕಳುಹಿಸಿ ಇ–ಮತ ಚಲಾವಣೆಗಾಗಿ ಸೂಚನೆಯಲ್ಲಿ ದೃಢಪಡಿಸಿರುವಂತೆ ತಮ್ಮ ಯುಸರ್ ಐಡಿ ಹಾಗೂ ಪಾಸ್‌ವರ್ಡ್‌ಗಳನ್ನು ಸ್ವೀಕರಿಸಿ ತಮ್ಮ ಇ–ಮೇಲ್ ಐಡಿಯನ್ನು ನೋಂದಾಯಿಸತಕ್ಕದ್ದು.

- ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿದ್ದಲ್ಲಿ, ಫೋಲಿಯೋ ಸಂಖ್ಯೆ, ಷೇರುದಾರರ ಹೆಸರು, ಷೇರು ಪ್ರಮಾಣ ಪತ್ರದ ಸ್ಕ್ಯಾನ್ಡ್ ಪ್ರತಿಯನ್ನು (ಹಿಂಭಾಗದ ಹಾಗೂ ಮುಂಭಾಗದ), ಪ್ಯಾನ್ (ಸ್ವಯಂ ಘೋಷಿತವಾದ ಪ್ಯಾನ್ ಕಾರ್ಡ್‌ನ ಸ್ಕ್ಯಾನ್ಡ್ ಪ್ರತಿ), ಆಧಾರ್ (ಸ್ವಯಂ ಘೋಷಿತವಾದ ಆಧಾರ್ ಕಾರ್ಡ್‌ನ ಸ್ಕ್ಯಾನ್ಡ್ ಪ್ರತಿ) ಇವುಗಳೊಂದಿಗೆ ದಯವಿಟ್ಟು ಸಲ್ಲಿಸುವುದು.
- ಡೀಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿದ್ದಲ್ಲಿ ಡಿಪಿಐಡಿ–ಸಿಎಲ್‌ಐಡಿ (16 ಸಂಖ್ಯೆಯ ಡಿಪಿಐಡಿ + ಸಿಎಲ್‌ಐಡಿ ಅಥವಾ 16 ಸಂಖ್ಯೆಯ ಫಲಾನುಭವಿ ಐಡಿ), ಹೆಸರು, ಕ್ಲೈಂಟ್ ಮಾಸ್ಟರ್ ಅಥವಾ ಒಟ್ಟಾರೆ ಲೆಕ್ಕ ಪತ್ರ ಸಾರಾಂಶದ ಪ್ರತಿ, ಪ್ಯಾನ್ (ಸ್ವಯಂ ಘೋಷಿತವಾದ ಪ್ಯಾನ್ ಕಾರ್ಡ್‌ನ ಸ್ಕ್ಯಾನ್ಡ್ ಪ್ರತಿ), ಆಧಾರ್ (ಸ್ವಯಂ ಘೋಷಿತವಾದ ಆಧಾರ್ ಕಾರ್ಡ್‌ನ ಸ್ಕ್ಯಾನ್ಡ್ ಪ್ರತಿ) ಇವುಗಳೊಂದಿಗೆ ದಯವಿಟ್ಟು ಸಲ್ಲಿಸುವುದು.

ಯಾವ ಸದಸ್ಯರು ಕಂಪನಿಯಲ್ಲಿ ತಮ್ಮ ಇ–ಮೇಲ್ ಐಡಿ ಹಾಗೂ ಬ್ಯಾಂಕ್ ಖಾತೆಯನ್ನು ನೋಂದಾಯಿಸದಿದ್ದಲ್ಲಿ ತಾವುಗಳು tilinvestor@timken.com ಇವರಿಗೆ ಮನವಿ ಸಲ್ಲಿಸಿ ನೋಂದಾಯಿಸಕೊಳ್ಳಬೇಕು. ಡಿವಿಡೆಂಡ್ ಹಣದ ಪಾವತಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದ ಹಣವನ್ನು ಪಡೆಯಲು ಸದಸ್ಯರು ನೋಂದಾಯಿತ ಕಛೇರಿಯ ಕಂಪನಿ ಸದಸ್ಯರಿಗೆ ಮನವಿ ಸಲ್ಲಿಸಬೇಕು ಅಥವಾ tilinvestor@timken.com ಇಲ್ಲಿ ಮನವಿ ಸಲ್ಲಿಸುವುದು. ಡೀಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಫಲಾನುಭವಿಗಳು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆಗಳ ವಿವರಗಳನ್ನು ಹಾಗೂ ಪ್ಯಾನ್ ವಿವರಗಳನ್ನು ಭಾಗವಹಿಸುವ ಡಿಪಾಸಿಟರಿಗಳೊಂದಿಗೆ ದಾಖಲಿಸಿಕೊಳ್ಳಲು ಸಲಹೆ ನೀಡಲಾಗಿದೆ.

ಡಿವಿಡೆಂಡ್‌ಗಾಗಿ ಸದಸ್ಯರು ವಿವರವಾದ ಮಾರ್ಗಸೂಚಿಯನ್ನು ಎಜಿಎಂನ ಸೂಚನೆಯಲ್ಲಿ ವೀಕ್ಷಿಸಬೇಕಾಗಿ ಕೋರಲಾಗಿದೆ. ಇದಕ್ಕೆ ಸಂಬಂಧಿಸಿದ ಮನಿವಿ ಫಾರಂಗಳು/ದೃಢ ಪಡಿಸುವ ದಾಖಲೆಗಳು ಕಂಪನಿಯು ವೆಬ್‌ಸೈಟ್ httsp://www.timken.com/en-in/investors/statutory-compliances ನಲ್ಲಿ ಲಭ್ಯವಿದೆ. ಡಿವಿಡೆಂಡ್ ಮೇಲೆ ತೆರಿಗೆ ಬಗ್ಗೆ ವಿಚಾರಣೆಗಾಗಿ TIL.TDS@.timken.com ಮೂಲಕ ಸಂಪರ್ಕಿಸುವುದು.

ಹಣಕಾಸು ವಾರ್ಷಿಕ 2020–21 ರ ಡಿವಿಡೆಂಡ್ ಹಣವನ್ನು ಒಂದು ವೇಳೆ ಎಜಿಎಂನಲ್ಲಿ ಘೋಷಿಸಿದ್ದಲ್ಲಿ, ಷೇರುದಾರರ ಅರ್ಹತೆಯನ್ನು ದೃಢ ಪಡಿಸಲು ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ ನಿಬಂಧನೆ 2015 ರ (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ನಿಬಂಧನೆ 44 ರ ಅನುಸಾರ ಸಂಸ್ಥೆಯು 30 ಜುಲೈ, 2021 ರಂದು ದಾಖಲಾತಿ ದಿನಾಂಕ ಎಂದು ನಿಗಧಿ ಪಡಿಸಿದೆ.

ಯಾವುದೇ ವಿಚಾರಣೆಗೆ ಅಥವಾ ಇ–ಮತ ಚಲಾವಣೆಯ ಬಗ್ಗೆ ಸಮಸ್ಯೆಗಳಿಗೆ ಆಗಿಂದಾಗೆ ಕೇಳಲ್ಪಡುವ ಪ್ರಶ್ನೆ ("ಎಫ್‌ಎಕ್ಯೂ") ಗಳನ್ನು ಗಮನಿಸಿ ಮತ್ತು www.evoting.nsdl.com ನ ಡೌನ್ ಲೋಡಿಂಗ್ ಸೆಕ್ಷನಿನಲ್ಲಿ ಲಭ್ಯವಿರುವ ಇ–ಮತ ಮ್ಯಾನ್ಯುಯಲ್ ಅನ್ನು ಉಲ್ಲೇಖಿಸಬಹುದು. ಯಾವುದೇ ತೊಂದರೆ/ಕುಂದು ಕೊರತೆ ಇದ್ದಲ್ಲಿ, ಸದಸ್ಯರು ಕೆಳಸಹಿದಾರರನ್ನು tilinvestor@timken.com (ದೂರವಾಣಿ ಸಂಖ್ಯೆ.: 080–41362000) ಅಥವಾ ಆರ್‌ಟಿಎಯವರನ್ನು rta@cbmsl.com (ದೂರವಾಣಿ ಸಂಖ್ಯೆ.: 033–40116700 / 033–40116715) ಮೂಲಕ ಸಂಪರ್ಕಿಸಬಹುದು.

ಬೆಂಗಳೂರು
27 ಜುಲೈ, 2021
ಟಿಮ್‌ಕೆನ್ ಇಂಡಿಯ ನಿಯಮಿತ ಪರವಾಗಿ
ಸಹಿ/– ಮಂದಾರ್ ವಸಮತ್‌ಕರ್
ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ–ಕಾಂಪ್ಲಯನ್ಸ್

We apologize to bengaluru public....

ಅನಿವಾರ್ಯ ಕಾರಣಗಳಿಂದಾಗಿ ಹೋಟೆಲ್ ಜೆಡಬ್ಲ್ಯೂ ಮ್ಯಾರಿಯಟ್‌ನಲ್ಲಿನ ನಮ್ಮ ಮಾರಾಟ ಮೇಳವನ್ನು ಸ್ಥಗಿತಗೊಳಿಸಬೇಕಾಗಿದೆ.
ನಮ್ಮಿಂದ ಆಯ್ಕೆ ಮಾಡಲು ಇದೀಗ ನಾವು ಹೆಚ್ಚಿನ ಆಯ್ಕೆಗಳೊಂದಿಗೆ ಸಿಂಧೂರ್ ಕನ್ವೆನ್ಷನ್ ಸೆಂಟರ್‌ಗೆ ತೆರಳಿದ್ದೇವೆ...

Lockdown cause a lot of recession
ಎಲ್ಲಾ ಮಳಿಗೆಗಳು ಬಾಗಿಲು ಮುಚ್ಚಿರುವುದರಿಂದ
All the outlet garments and shoes, new 2020/21 fresh stock in Bengaluru
Venue: Sindhoor Convention Centre, J.P. Nagar, Bengaluru

ರಿಟೇಲ್ ಖರೀದಿದಾರರಿಗೆ 3 ದಿನಗಳ ನೇರ → 80% ರಿಯಾಯಿತಿ ದರದಲ್ಲಿ ಮಾರಾಟ

IZOD PARK AVENUE parx GUESS Lee Cooper Wrangler ColorPlus Raymond PUMA

ಬೆಂಗಳೂರಿನಲ್ಲಿ ಪ್ರಥಮ ಬಾರಿಗೆ ಪ್ರತಿಷ್ಠಿತ ಬ್ರಾಂಡ್‌ಗಳ ಉಡುಪು ಮತ್ತು ಶೂಗಳ ಬೃಹತ್ ರಿಯಾಯಿತಿ ಮಾರಾಟ ಮೇಳ
ಇವೆಲ್ಲಾ ಇಂಟರ್‌ನ್ಯಾಷನಲ್ ಬ್ರಾಂಡ್ ರೆಡಿಮೇಡ್ ಉಡುಪುಗಳನ್ನು ಕೆಳಗಿನ ದರದಲ್ಲಿ ಮಾರಾಟ ಮಾಡಲಾಗುತ್ತದೆ

Rs. 2000 worth Kids Garments	Only in Rs. 350/-	Rs. 3500/- worth Gents Lower & Shorts	Only in Rs. 350/-
Rs. 6000/- worth Ladies Sweatshirt & Fancy Dress	Only in Rs. 650/-	Rs. 5500/- worth Park Avenue Men's Shirts	Only in Rs. 850/-
Rs. 4000/- worth Ladies Mix Garments	Only in Rs. 400/-	Rs. 3000/- worth Branded Ladies Jeans	Only in Rs. 550/-
Rs. 4500/- worth Gents T-Shirts	Only in Rs. 450/-	Rs. 4500/- Raymond, Colorplus Trousers	Only in Rs. 750/-

BRANDED COMPANY Sweat shirts & Sweaters up to ₹3000/- in just ₹700/-
Formal and casual blazer coat up to ₹5000/- in just ₹800/-
Lovable & LIVIE'S Gents & Ladies Under Garments Panty at ₹150 Only and Bra at ₹150 Only
PUMA WILDCRAFT ₹ 8000 worth Men's Shoes Only in ₹1750/-
Other Mix Brand Shoes and Sandal only in ₹400/- to 750/-
BIBA W ₹ 3000/- worth ladies kurti only in ₹ 500/- to 900/-
CULT ₹ 5500/- winter wear Ladies, Gents Lower & Huddies Sweat-Shirts ₹ 650/-

ಕೇವಲ 3 ದಿನಗಳ ಮಾರಾಟ ಮೇಳ, ಬುಧವಾರ, ಗುರುವಾರ ಮತ್ತು ಶುಕ್ರವಾರ
28, 29 ಮತ್ತು 30ನೇ ಜುಲೈ 2021 ರಂದು

ಸೂಚನೆ: 1) ಶಾಪಿಂಗ್ ಹಾಲ್‌ನಲ್ಲಿ ಶಾಂತತೆಯನ್ನು ಕಾಪಾಡಿರಿ ಮತ್ತು ಬೆಂಗಳೂರು ನಾಗರಿಕರಿಗೆ ಸಹಕರಿಸಿರಿ.
2. ದಾಸ್ತಾನು ಪೂರ್ಣಗೊಳ್ಳುತ್ತಿದ್ದಂತೆ ಅದರ ಮಾರಾಟ ಸ್ಥಗಿತಗೊಳಿಸಲಾಗುತ್ತದೆ.
ಸದರಿ ಮಾರಾಟ ಮೇಳ ಇಂದು 28, 29 ಮತ್ತು 30ನೇ ಜುಲೈ 2021 ರಂದು, ನಿರಂತರ 3 ದಿನ ಜಾರಿಯಲ್ಲಿರುತ್ತದೆ.

ಸ್ಥಳ: ಸಿಂಧೂರ್ ಕನ್ವೆನ್ಷನ್ ಸೆಂಟರ್
48, 75, 15ನೇ ಕ್ರಾಸ್ ರೋಡ್, ಸಾರಕ್ಕಿ 1ನೇ ಹಂತ, ಜೆ.ಪಿ. ನಗರ, ಬೆಂಗಳೂರು.
TIME 10AM - 9.30PM
The Venue(s) are 100% Safe and sanitized to highest standards
ಉಚಿತ ಪ್ರವೇಶ | Shopping Rs. 2000/- & More Get Branded Mask Free | ಉಚಿತ ಪಾರ್ಕಿಂಗ್

ರಾಜ್ಯದಲ್ಲಿ ಕೋವಿಡ್ ಪರೀಕ್ಷೆ ಸಂಖ್ಯೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ನಾಲ್ಕು ದಿನಗಳಿಂದ ಇಳಿಮುಖ ಮಾಡಿದ್ದು, 1.02 ಲಕ್ಷ ಮಾದರಿಗಳನ್ನು ಮಂಗಳವಾರ ಪರೀಕ್ಷೆ ನಡೆಸಲಾಗಿದೆ. 1,501 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ.

ಸೋಂಕು ದೃಢ ಪ್ರಮಾಣವು ಶೇ 1.46ರಷ್ಟು ವರದಿಯಾಗಿದೆ. 17 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 9 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ.

ಬೆಂಗಳೂರಿನಲ್ಲಿ 354, ದಕ್ಷಿಣ ಕನ್ನಡದಲ್ಲಿ 247 ಹಾಗೂ ಮೈಸೂರಿನಲ್ಲಿ 108 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.97 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ 32 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 17 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ.

ಬೆಂಗಳೂರಿನಲ್ಲಿ 5, ಹಾಸನದಲ್ಲಿ 4, ಬೆಳಗಾವಿ ಹಾಗೂ ಕೋಲಾರದಲ್ಲಿ ತಲಾ 3, ಉತ್ತರ ಕನ್ನಡ, ತುಮಕೂರು, ಮೈಸೂರು ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ.

ಉಳಿದ ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 2.13ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ನಿಂದ ಸಾವಿಗೀಡಾದವರ ಒಟ್ಟು ಸಂಖ್ಯೆ 36,437ಕ್ಕೆ ಏರಿಕೆಯಾಗಿದೆ.

ಕೊರೊನಾ ಸೋಂಕಿತರಲ್ಲಿ 2,039 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 28.38 ಲಕ್ಷ ದಾಟಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಕಂಡಿದ್ದು, ಸದ್ಯ 22,487 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದಾರೆ.

ಕಾಳಜಿ ಕೇಂದ್ರ: ಲಸಿಕೆ ವಿತರಣೆಗೆ ಸೂಚನೆ

ಬೆಂಗಳೂರು: 'ನೆರೆಹಾವಳಿಗೆ ತುತ್ತಾದ ಜಿಲ್ಲೆಗಳ ಕಾಳಜಿ ಕೇಂದ್ರಗಳ ನಿವಾಸಿಗಳಿಗೆ ಕೋವಿಡ್ ಪರೀಕ್ಷೆ ಹಾಗೂ ಲಸಿಕೆ ವಿತರಣೆ ಕಾರ್ಯಕ್ರಮ ನಡೆಸಬೇಕು' ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಅವರು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ.

'ನೆರೆಹಾವಳಿಗೆ ತುತ್ತಾದ ಜಿಲ್ಲೆಗಳಲ್ಲಿ ಕಾಳಜಿ ಕೇಂದ್ರಗಳನ್ನು ಸ್ಥಾಪಿಸಿ ಆರೋಗ್ಯ ಸೇವೆಗಳನ್ನು ನೀಡಲಾಗುತ್ತಿದೆ. ಈ ಕಾಳಜಿ ಕೇಂದ್ರಗಳಲ್ಲಿ ಕೋವಿಡ್ ಜಾಗೃತಿ ಮೂಡಿಸಬೇಕಿದೆ. ನಿಯಮಗಳು ಪಾಲನೆಯಾಗುವಂತೆ ನೋಡಿಕೊಳ್ಳಬೇಕು. ರೋಗ ಲಕ್ಷಣ ಹೊಂದಿರುವವರಿಗೆ ಪರೀಕ್ಷೆ ನಡೆಸಿ, ಚಿಕಿತ್ಸೆಗೆ ವ್ಯವಸ್ಥೆ ಮಾಡಬೇಕು' ಎಂದು ತಿಳಿಸಿದ್ದಾರೆ.

'ಕಾಳಜಿ ಕೇಂದ್ರಗಳಲ್ಲಿರುವವರಿಗೆ ಲಸಿಕೆ ವಿತರಿಸಬೇಕು. ಇದರ ಮೇಲ್ವಿಚಾರಣೆಯನ್ನು ವೈದ್ಯಾಧಿಕಾರಿಗಳು ನಡೆಸಬೇಕು. ಗರ್ಭಿಣಿಯರು ಮತ್ತು ಮಕ್ಕಳಿಗೆ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ವೇಳಾಪಟ್ಟಿಯಂತೆ ಲಸಿಕೆಗಳನ್ನು ನೀಡುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕು' ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಮಂಗಳವಾರ ಒಂದೇ ದಿನ 2.72 ಲಕ್ಷ ಡೋಸ್ ಲಸಿಕೆ ವಿತರಿಸಲಾಗಿದೆ. ಈವರೆಗೆ ಮೊದಲ ಡೋಸ್ ಪಡೆದವರ ಸಂಖ್ಯೆ 2.32 ಕೋಟಿ ದಾಟಿದೆ. ಆರೂವರೆ ತಿಂಗಳಲ್ಲಿ 2.94 ಕೋಟಿ ಡೋಸ್ ಲಸಿಕೆ ವಿತರಿಸಲಾಗಿದೆ. 61.67 ಲಕ್ಷ ಮಂದಿ ಎರಡೂ ಡೋಸ್ ಪೂರ್ಣಗೊಳಿಸಿದ್ದಾರೆ.

'ಕೋವೊವ್ಯಾಕ್ಸ್'ನ 2 , 3ನೇ ಹಂತದ ಟ್ರಯಲ್ ಅನುಮತಿಗೆ ಶಿಫಾರಸು

ನವದೆಹಲಿ (ಪಿಟಿಐ): 2 ರಿಂದ 17 ವರ್ಷ ವಯೋಮಾನದವರ ಮೇಲೆ ಕೋವಿಡ್ ಲಸಿಕೆ 'ಕೋವೊವ್ಯಾಕ್ಸ್'ನ 2 ಮತ್ತು 3ನೇ ಹಂತದ ಟ್ರಯಲ್‌ಗಳನ್ನು ನಡೆಸಲು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾಗೆ (ಎಸ್‌ಐಐ) ಕೆಲವು ಷರತ್ತುಗಳೊಂದಿಗೆ ಅನುಮತಿ ನೀಡುವಂತೆ ಕೇಂದ್ರೀಯ ಔಷಧ ಪ್ರಾಧಿಕಾರ ಮಂಗಳವಾರ ಶಿಫಾರಸು ಮಾಡಿದೆ.

ಅಮೆರಿಕ ಮೂಲದ ನೋವಾವ್ಯಾಕ್ಸ್ ಕಂಪನಿ 'ಕೋವೊವ್ಯಾಕ್ಸ್' ಲಸಿಕೆ ಅಭಿವೃದ್ಧಿಪಡಿಸಿದೆ. ಭಾರತದಲ್ಲಿ ಈ ಲಸಿಕೆಯ ಉತ್ಪಾದನೆಗೆ ಎಸ್‌ಐಐಗೆ ಕಳೆದ ವರ್ಷ ಆಗಸ್ಟ್‌ನಲ್ಲಿ ಕಂಪನಿ ಪರವಾನಗಿ ನೀಡಿದೆ.

ಒಟ್ಟು 920 ಮಕ್ಕಳು ಈ ಟ್ರಯಲ್‌ನ ಭಾಗವಾಗಲಿದ್ದಾರೆ. 2–11 ವರ್ಷ ಹಾಗೂ 12 ರಿಂದ 17 ವರ್ಷ ವಯೋಮಾನದ ಗುಂಪುಗಳಿರಲಿದ್ದು, ತಲಾ 460 ಮಕ್ಕಳಿರಲಿದ್ದಾರೆ' ಎಂದು ಮೂಲಗಳು ಹೇಳಿವೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	19.57ಕೋಟಿ ▲	3.14 ಕೋಟಿ ▲
ಸಕ್ರಿಯ ಪ್ರಕರಣ	1.40ಕೋಟಿ ▲	3.93ಲಕ್ಷ ▲
ಗುಣಮುಖ	17.74 ಕೋಟಿ ▲	3.06 ಕೋಟಿ
ಸಾವು	41.89 ಲಕ್ಷ ▲	4.22ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.49 ಲಕ್ಷ ▲	42,877 ▲
ಗುಣಮುಖ	4.04 ಲಕ್ಷ ▲	41,353 ▼
ಸಾವು	7,420 ▲	637 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರಿಟನ್	ರಷ್ಯಾ
35,816	24,855 ▼	23,239 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಬ್ರಿಟನ್
51.11 ▲	7.58 ▼	11.33 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

1.31ಲಕ್ಷ	ಮಹಾರಾಷ್ಟ್ರ
33,937	ತಮಿಳುನಾಡು
25,046 ▲	ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

62.76	ಮಹಾರಾಷ್ಟ್ರ ▲
33.05	ಕೇರಳ ▲
25.52	ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,25,581 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
8,047 ▼	12,01,693 ▲	15,840 ▲

ಮಂಗಳವಾರದ ಏರಿಕೆ

ಹೊಸ ಪ್ರಕರಣ	354 ▼
ಗುಣಮುಖ	484 ▼
ಸಾವು	5 ▲

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಪುನರುಜ್ಜೀವನಗೊಂಡ ಬಳಿಕ ಮೊದಲ ಸಲ ಭರ್ತಿಯಾಯಿತು ಕೆರೆ ಒಡಲು

ತುಂಬಿ ತುಳುಕಿತು ಬಸವನಪುರ ಕೆರೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮೊದಲ ಮಳೆಗೆ ಕೆರೆ ಭರ್ತಿ
- ಐದು ವರ್ಷಗಳ ಹಿಂದೆ ಪುನರುಜ್ಜೀವನಗೊಂಡ ಕೆರೆ
- ಕೆರೆ ಒಡಲು ಸೇರುತ್ತಿಲ್ಲ ಕೊಳಚೆ ನೀರು

ಬೆಂಗಳೂರು: ಪುನರುಜ್ಜೀವನಗೊಂಡು ಐದು ವರ್ಷಗಳ ಬಳಿಕ ಕೆ.ಆರ್.ಪುರ ಸಮೀಪದ ಬಸವನಪುರ ಕೆರೆ ಭರ್ತಿಯಾಗಿ ಕೋಡಿ ಹರಿದಿದೆ. ಈ ಕೆರೆ ತುಂಬುವುದಕ್ಕೆ ಕಾತರದಿಂದ ಕಾಯುತ್ತಿದ್ದ ಸ್ಥಳೀಯರು ಖುಷಿಯಲ್ಲಿ ಮಿಂದೆದ್ದಿದ್ದಾರೆ.

'18 ಎಕರೆ ವಿಸ್ತೀರ್ಣದ ವಿಶಾಲವಾದ ಕೆರೆ ಇದು. ಎರಡು ದಶಕಗಳಲ್ಲಿ ಈ ಕೆರೆ ಇಷ್ಟೊಂದು ಸ್ವಚ್ಛ ನೀರಿನಿಂದ ತುಂಬಿದ್ದನ್ನು ಕಂಡಿಲ್ಲ. ಕೊಳಚೆ ನೀರಿನಿಂದ ಕಲುಷಿತಗೊಂಡಿದ್ದ ಈ ಜಲಕಾಯವನ್ನು ಐದು ವರ್ಷಗಳ ಹಿಂದೆ ಬಿಬಿಎಂಪಿಯು ₹ 3.5 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಿತ್ತು. ಕೆರೆಗೆ ಒಳಚರಂಡಿಯ ತ್ಯಾಜ್ಯ ನೀರು ಸೇರದಂತೆ ವ್ಯವಸ್ಥೆ ಕಲ್ಪಿಸಿತ್ತು. ಆ ಬಳಿಕ ಮಳೆ ನೀರು ಮಾತ್ರ ಕೆರೆ ಒಡಲು ಸೇರುತ್ತಿದೆ. ಸ್ವತಂತ್ರನಗರ, ಕೊಡಿಗೆಹಳ್ಳಿ ರಸ್ತೆಗಳ ಪ್ರದೇಶದ ಮಳೆನೀರು ಈ ಜಲಕಾಯಕ್ಕೆ ಹರಿದುಬರುತ್ತಿದೆ' ಎಂದು ಸ್ಥಳೀಯರಾದ ಬಾಲಾಜಿ ರಘೋತ್ತಮ್ ತಿಳಿಸಿದರು.

'ಜಲಕಾಯಗಳ ಸರಣಿಯ ಮೊದಲ ಕೆರೆ ಇದು. ಹಾಗಾಗಿ ಮಳೆ ನೀರು ಮಾತ್ರ ಇದರ ಒಡಲಿಗೆ ಹರಿದು ಬರುತ್ತದೆ. ಈ ಜಲಕಾಯ ಭರ್ತಿಯಾಗಿ ಕೋಡಿ ಹರಿದ ನೀರು ಬೇರೆ ಕೆರೆಗಳಿಗೆ ಹರಿಯುತ್ತದೆ. ಅಭಿವೃದ್ಧಿಗೊಂಡ ಬಳಿಕ ಒಮ್ಮೆಯೂ ಭರ್ತಿ ಆಗಿರಲಿಲ್ಲ. ಕಳೆದ ವರ್ಷ ಭಾರಿ ಮಳೆ ಸುರಿದರೂ ಕೋಡಿ ಹರಿದಿರಲಿಲ್ಲ. ಏಕೆ ಹೀಗಾಗುತ್ತಿದೆ ಎಂಬ ಸಂದೇಹ ಕಾಡಿತ್ತು. ನಾವು ಕೆರೆಗಿಳಿದು ಪರಿಶೀಲಿಸಿದಾಗ ಈ ಕೆರೆ ಅಭಿವೃದ್ಧಿ ಕಾಮಗಾರಿಗೆ ನೀರು ಬರಿದುಮಾಡಲು ಅಳವಡಿಸಿದ್ದ ಕೊಳವೆಯೊಂದನ್ನು ತೆರವುಗೊಳಿಸದೇ ಬಿಟ್ಟಿದ್ದು ಪತ್ತೆಯಾಗಿತ್ತು. ಬಿಬಿಎಂಪಿ ಎಂಜಿನಿಯರ್‌ಗಳ ಗಮನಕ್ಕೆ ತಂದು ಅದನ್ನು ತೆಗೆಯಿಸಿದ್ದೆವು. ಹಾಗಾಗಿ ನೀರು ಪೋಲಾಗುವುದು ನಿಂತಿದೆ. ಈ ಬಾರಿಯ ಮೊದಲ ಮಳೆಯಲ್ಲೇ ಜಲಕಾಯ ಭರ್ತಿಯಾಗುವ ದೃಶ್ಯ ಕಣ್ತುಂಬಿಕೊಳ್ಳುವ ಅವಕಾಶ ಸಿಕ್ಕಿದೆ' ಎಂದು ಅವರು ಸಂತಸ ಹಂಚಿಕೊಂಡರು.

'ಈ ಜಲಕಾಯ ಹಿಂದೆ ದುರ್ವಾಸನೆಯಿಂದ ಕೂಡಿತ್ತು. ಹಕ್ಕಿಗಳೂ ಕಣ್ಮರೆಯಾಗಿದ್ದವು. ಆದರೆ, ಪುನರುಜ್ಜೀವನಗೊಳಿಸಿದ ಬಳಿಕ ಕೆರೆಯಲ್ಲಿ ಹಕ್ಕಿಗಳ ಕಲರವ ಮತ್ತೆ ಕೇಳುತ್ತಿದೆ. ಕೊಕ್ಕರೆ, ನೀರುಗೋಳಿಗಳ ಹಿಂಡುಗಳು ಈ ಜಲಕಾಯದಲ್ಲಿ ವಿಹರಿಸುವುದನ್ನು ನೋಡಿದಾಗ ಮನ ಮುದಗೊಳ್ಳುತ್ತದೆ' ಎನ್ನುತ್ತಾರೆ ಸ್ಥಳೀಯರಾದ ವಿಶ್ವನಾಥ ತೋರಗಲ್.

'ನಾವು ಈ ಕೆರೆ ದಂಡೆಯ ಆಸುಪಾಸಿನಲ್ಲಿ 2ಸಾವಿರಕ್ಕೂ ಅಧಿಕ ಗಿಡ–ಮರಗಳನ್ನು ಬೆಳೆಸಿದ್ದೇವೆ. ನೂರಾರು ಹಕ್ಕಿಗಳು ಇಲ್ಲಿಗೆ ಬರುವುದಕ್ಕೆ ಇದು ಕೂಡಾ ಕಾರಣ. ಈ ಕೆರೆಯ ಸುತ್ತಲೂ ಬೇಲಿ ಹಾಕಿದ್ದಾರೆ. ಆದರೆ, ಪಶ್ಚಿಮ ದಿಕ್ಕಿನಲ್ಲಿ ಸ್ವಲ್ಪ ಭಾಗದಲ್ಲಿ ಮಾತ್ರ ಬೇಲಿ ಹಾಕುವ ಕೆಲಸ ಬಾಕಿ ಇದೆ. ಅದನ್ನು ಪೂರ್ಣಗೊಳಿಸಿದರೆ ಒಳ್ಳೆಯದು' ಎಂದು ಬಾಲಾಜಿ ತಿಳಿಸಿದರು.

ಬಸವನಪುರ ಕೆರೆ ಭರ್ತಿಯಾಗಿ ತೂಬಿನ ಮೂಲಕ ನೀರು ಹೊರಹರಿಯುತ್ತಿದೆ

ಬನ್ನೇರುಘಟ್ಟ ಉದ್ಯಾನದಲ್ಲಿ ಹಿಪ್ಪೋಪೊಟಮಸ್ ಮರಿಯ ಹುಟ್ಟುಹಬ್ಬದ ಅಂಗವಾಗಿ ವಿಶೇಷ ಆಹಾರ ನೀಡಲಾಯಿತು

ಬನ್ನೇರುಘಟ್ಟದಲ್ಲಿ ನೀರಾನೆಗೆ ಹುಟ್ಟುಹಬ್ಬ

ಪ್ರಜಾವಾಣಿ ವಾರ್ತೆ

ಆನೇಕಲ್ : ಮನೆಗಳಲ್ಲಿ ಮಕ್ಕಳಿಗೆ ಹುಟ್ಟುಹಬ್ಬ ಆಚರಿಸುವುದು ಸಾಮಾನ್ಯ. ಆದರೆ, ಪ್ರಾಣಿಗಳ ಹುಟ್ಟುಹಬ್ಬ ಅಪರೂಪ.

ಈ ದಿಸೆಯಲ್ಲಿ ಬನ್ನೇರುಘಟ್ಟ ಜೈವಿಕ ಉದ್ಯಾನದ ಹಿಪ್ಪೋಪೊಟಮಸ್(ನೀರಾನೆ) ನಾಗ ಮತ್ತು ದಶ್ಯಾಳಿಗೆ ಜನಿಸಿದ ಮರಿಗೆ ಸನ್ನಿ ಎಂದು ನಾಮಕರಣ ಮಾಡಿ ಹುಟ್ಟುಹಬ್ಬ ಆಚರಿಸಿದ್ದು ವಿಶೇಷವಾಗಿದೆ.

ಹುಟ್ಟುಹಬ್ಬದ ಪ್ರಯುಕ್ತ ಮರಿಯನ್ನು ದತ್ತು ತೆಗೆದುಕೊಂಡಿದ್ದ ನಿಖಿಲ್ ಗುಪ್ತಾ ಮತ್ತು ನೇಹ ಅಗರ್‌ವಾಲ್ ಅವರು ಹಿಪ್ಪೋಪೊಟಮಸ್‌ಗಳಿಗೆ ವಿಶೇಷ ಆಹಾರ ನೀಡಿ ಹುಟ್ಟುಹಬ್ಬದ ಸಂಭ್ರಮಕ್ಕೆ ಮೆರುಗು ನೀಡಿದರು.

ಹಿಪ್ಪೋಪೊಟಮಸ್ ಪಾಲಕರಾದ ತಿಮ್ಮರಾಜು ಮತ್ತು ವೆಂಕಟೇಶ್‌ಗೆ ಪ್ರಶಂಸಾಪತ್ರ ನೀಡಿ ಗೌರವಿಸಲಾಯಿತು. ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕಿ ವನಶ್ರೀ ವಿಪಿನ್‌ಸಿಂಗ್ ಹಾಜರಿದ್ದರು.

ಬಿಐಸಿ: ಬೆಂಗಳೂರಿನ ಕಿರುಚಿತ್ರಗಳ ಆಹ್ವಾನ

ಬೆಂಗಳೂರು: ನಗರದ ವೈಶಿಷ್ಟಗಳನ್ನು ಕಿರು ದೃಶ್ಯಗಳ ಮೂಲಕ ಪ್ರಚುರಪಡಿಸಲು ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರವು (ಬಿಐಸಿ) 'ಬಿ.ಲೋರ್' ಶೀರ್ಷಿಕೆಯಡಿ ದೃಶ್ಯ ನಿರೂಪಣೆ ಸರಣಿಗೆ ಆಸಕ್ತರಿಂದ ಕಿರುಚಿತ್ರಗಳನ್ನು ಆಹ್ವಾನಿಸಿದೆ.

ನಗರದ ಇತಿಹಾಸ, ರಚನೆ, ಸ್ವಾತಂತ್ರ್ಯ ಪೂರ್ವ, ನೈಸರ್ಗಿಕ, ಕೈಗಾರಿಕಾ, ಸಂಸ್ಕೃತಿ, ಪದ್ಧತಿಗಳು, ಉಪಭಾಷೆಗಳು, ಆಹಾರ, ಕೆಲಸ, ಪರಂಪರೆ, ಕಲೆಗಳು, ಸ್ಫೂರ್ತಿದಾಯಕ ಕಥೆಗಳು, ವ್ಯಕ್ತಿತ್ವ ತೋರಿಸಬಹುದು. ಕಿರುಚಿತ್ರ ಯಾವುದೇ ಭಾಷೆಯಲ್ಲಿರಬಹುದು. ಇಂಗ್ಲಿಷ್‌ನಲ್ಲಿ ಸಬ್‌ಟೈಟಲ್ ಕಡ್ಡಾಯ. ಗರಿಷ್ಠ 4 ನಿಮಿಷಗಳ ಕಿರುಚಿತ್ರಗಳನ್ನು ಆಯ್ಕೆ ಮಾಡಲಾಗುವುದು. ಬಿ.ಲೋರ್ ಭಾಗವಾಗಿ ಆಯ್ಕೆಯಾಗುವ ಕಿರುಚಿತ್ರಕ್ಕೆ ₹20 ಸಾವಿರ ಗೌರವಧನ ನೀಡಲಾಗುವುದು.

ಚಿತ್ರದ ಕರಡನ್ನು https://forms.gle/QjC1PeaogLbGx1Y56 ಮೂಲಕ ಸಲ್ಲಿಸಬಹುದು. bic@bangaloreinternationalcentre.org ಅನ್ನು ಸಂಪರ್ಕಿಸಬಹುದು.

ಉಬರ್ ಚಾಲಕನ ವಿಚಾರಣೆ; ಹುಬ್ಬಳ್ಳಿಗೆ ಪೊಲೀಸರ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಬಿಬಿಎಸ್ ವಿದ್ಯಾರ್ಥಿ ಉಮ್ಮೆದ್ ಅಹಮ್ಮದ್ ಅನುಮಾನಾಸ್ಪದ ಸಾವು ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿರುವ ಬೈಯಪ್ಪನಹಳ್ಳಿ ರೈಲ್ವೆ ಪೊಲೀಸರು, ಉಬರ್ ಚಾಲಕರೊಬ್ಬರನ್ನು ವಿಚಾರಣೆ ನಡೆಸುತ್ತಿದ್ದಾರೆ. ಪೊಲೀಸರ ಇನ್ನೊಂದು ತಂಡ, ವಿದ್ಯಾರ್ಥಿ ಬಗ್ಗೆ ಮಾಹಿತಿ ಕಲೆಹಾಕಲು ಹುಬ್ಬಳ್ಳಿಗೆ ಹೋಗಿದೆ.

ನಗರದ ಸುಲ್ತಾನ್ ಪಾಳ್ಯ ನಿವಾಸಿಯಾಗಿದ್ದ ಉಮ್ಮೆದ್, ರೈಲ್ವೆ ಇಲಾಖೆ ನಿವೃತ್ತ ಉದ್ಯೋಗಿಯೊಬ್ಬರ ಮಗ. ಕಸ್ತೂರಿನಗರ ಬಳಿಯ ರೈಲು ಹಳಿ ಮೇಲೆ ಜುಲೈ 26ರಂದು ಉಮ್ಮೆದ್ ಅವರ ಮೃತದೇಹ ಸಿಕ್ಕಿತ್ತು. ಕತ್ತಿನ ಮೇಲೆ ಗಾಯದ ಗುರುತು ಇರುವುದರಿಂದ ಇದೊಂದು ಕೊಲೆ ಎಂಬುದಾಗಿ ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ.

'ಹುಬ್ಬಳ್ಳಿಯ ಪ್ರತಿಷ್ಠಿತ ಮಹಾವಿದ್ಯಾಲಯದಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದ ಉಮ್ಮೆದ್, ಬಕ್ರೀದ್ ಹಬ್ಬಕ್ಕೆಂದು ಬೆಂಗಳೂರಿನಲ್ಲಿರುವ ತಮ್ಮ ಮನೆಗೆ ಬಂದಿದ್ದರು. ಹುಬ್ಬಳ್ಳಿಗೆ ಹೋಗುವುದಾಗಿ ಹೇಳಿ ಜುಲೈ 24ರಂದು ಮನೆ ಬಿಟ್ಟಿದ್ದರು. ಅದಾದ ನಂತರ ಅವರು ಹುಬ್ಬಳ್ಳಿಗೆ ಹೋಗಿಲ್ಲ. ಮೊಬೈಲ್ ಸಹ ಸ್ವಿಚ್ ಆಫ್ ಆಗಿತ್ತು. ಇದರ ನಡುವೆಯೇ ಮೃತದೇಹ ಸಿಕ್ಕಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಉಬರ್ ಚಾಲಕನ ವಿಚಾರಣೆ: 'ಉಮ್ಮೆದ್ ಅವರು ಉಬರ್ ಕ್ಯಾಬ್‌ನಲ್ಲಿ ಮನೆಯಿಂದ ಹೊರಟಿದ್ದರು. ಆದರೆ, ಅವರು ಎಲ್ಲಿ ಇಳಿದುಕೊಂಡರು ಎಂಬುದು ಗೊತ್ತಾಗಿಲ್ಲ. ಉಬರ್ ಕ್ಯಾಬ್ ಚಾಲಕನನ್ನು ಪತ್ತೆ ಮಾಡಲಾಗಿದ್ದು, ವಿಚಾರಣೆ ನಡೆಸಲಾಗುತ್ತಿದೆ' ಎಂದೂ ಮೂಲಗಳು ತಿಳಿಸಿವೆ.

'ಸಾವಿನಲ್ಲಿ ಹಲವು ಅನುಮಾನಗಳು ಇವೆ. ಸಂಬಂಧಿಕರು, ಸ್ನೇಹಿತರು ಹಾಗೂ ಪರಿಚಯಸ್ಥರನ್ನು ವಿಚಾರಣೆ ನಡೆಸಲಾಗುತ್ತಿದೆ. ಉಮ್ಮೆದ್ ಅವರ ಕರೆ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ' ಎಂದೂ ಹೇಳಿವೆ.

'ಎಸ್‌ಐಟಿ ಮುಖ್ಯಸ್ಥರಿಲ್ಲದ ತನಿಖೆ ಕಾನೂನು ಬದ್ಧತೆ ವಿಷಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶೇಷ ತನಿಖಾ ತಂಡದ(ಎಸ್‌ಐಟಿ) ಮುಖ್ಯಸ್ಥ ಸೌಮೇಂದು ಮುಖರ್ಜಿ ಗೈರಿನ ನಡುವೆ ಶಾಸಕ ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣದ ತನಿಖೆ ಮುಂದುವರಿಸಿರುವುದು ಕಾನೂನು ಬದ್ಧತೆಯ ವಿಷಯವಾಗುತ್ತದೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

2021ರ ಮಾರ್ಚ್ 10ರಂದು ಗೃಹ ಸಚಿವರು ಸಹಿ ಮಾಡಿದ ಟಿಪ್ಪಣಿ ಆಧರಿಸಿ 2021ರ ಮಾರ್ಚ್ 11ರಂದು ಎಸ್‌ಐಟಿ ರಚಿಸಿ ನಗರ ಪೊಲೀಸ್ ಆಯುಕ್ತರು ಆದೇಶ ಹೊರಡಿಸಿದ್ದರು. ಸೌಮೇಂದು ಮುಖರ್ಜಿ ಅವರನ್ನು ತಂಡದ ಮುಖ್ಯಸ್ಥರನ್ನಾಗಿ ನೇಮಿಸಲಾಗಿತ್ತು. ಆದರೆ, ಜಂಟಿ ಪೊಲೀಸ್ ಕಮಿಷನರ್(ಅಪರಾಧ) ಸಂದೀಪ್ ಪಾಟೀಲ ಸಹಿ ಮಾಡಿ ಸಲ್ಲಿಸಿದ್ದ ತನಿಖಾ ವರದಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಪರಿಶೀಲನೆ ನಡೆಸಿತು.

'ಮೇ 1ರಿಂದ ಸೌಮೇಂದು ಮುಖರ್ಜಿ ಅವರು ವೈದ್ಯಕೀಯ ರಜೆಯಲ್ಲಿದ್ದಾರೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ವರದಿಯನ್ನು ಎಸ್‌ಐಟಿ ಮುಖ್ಯಸ್ಥರು ಅಂಗೀಕರಿಸಿದ್ದಾರೆಯೇ ಎಂಬುದು ಕೂಡ ಇದರಲ್ಲಿ ಉಲ್ಲೇಖವಾಗಿಲ್ಲ' ಎಂದು ಪೀಠ ಹೇಳಿತು.

'ಎಸ್‌ಐಟಿ ತನಿಖೆ ಪ್ರಶ್ನಿಸಿ ಸಲ್ಲಿಕೆಯಾಗಿರುವ ನಾಲ್ಕು ಅರ್ಜಿಗಳಲ್ಲಿ ಎರಡು ಅರ್ಜಿಗಳಲ್ಲಿ ಈ ಪ್ರಶ್ನೆ ಇದೆ. ಸೌಮೇಂದು ಮುಖರ್ಜಿ ಅವರನ್ನು ಬದಲಾವಣೆ ಮಾಡಿರುವ ಬಗ್ಗೆ ಯಾವುದೇ ಆದೇಶ ಇಲ್ಲ' ಎಂದು ಪೀಠ ತಿಳಿಸಿದೆ.

ರಾಜ್ಯ ಸರ್ಕಾರ ಆಕ್ಷೇಪ ಹೇಳಿಕೆ ಸಲ್ಲಿಸಿದ ಬಳಿಕ ಎಸ್‌ಐಟಿ ರಚನೆ ಸಿಂಧುವೇ ಎಂಬ ವಿಷಯವನ್ನು ಪರಿಗಣಿಸಲಾಗುವುದು ಎಂದು ತಿಳಿಸಿದ ಪೀಠ, ವಿಚಾರಣೆಯನ್ನು ಆ.12ಕ್ಕೆ ಮುಂದೂಡಿತು.

ಸಂಕ್ಷಿಪ್ತ ಸುದ್ದಿ

ದೆಹಲಿ ಪೊಲೀಸ್ ಕಮಿಷನರ್ ಆಗಿ ರಾಕೇಶ್ ಅಸ್ತಾನಾ ನೇಮಕ

ನವದೆಹಲಿ (ಪಿಟಿಐ): ಗುಜರಾತ್ ಕೇಡರ್‌ನ ಐಪಿಎಸ್ ಅಧಿಕಾರಿ ರಾಕೇಶ್ ಅಸ್ತಾನಾ ಅವರನ್ನು ದೆಹಲಿ ಪೊಲೀಸ್ ಕಮಿಷನರ್ ಆಗಿ ಮಂಗಳವಾರ ನೇಮಕ ಮಾಡಲಾಗಿದೆ.

'ಬಿಎಸ್‌ಎಫ್‌ನ ಡಿಜಿಯಾಗಿ ಸೇವೆ ಸಲ್ಲಿಸುತ್ತಿದ್ದ ರಾಕೇಶ್ ಅಸ್ತಾನಾ ಅವರು ತತ್‌ಕ್ಷಣವೇ ದೆಹಲಿ ಪೊಲೀಸ್ ಕಮಿಷನರ್ ಆಗಿ ಅಧಿಕಾರ ಸ್ವೀಕರಿಸುವರು' ಎಂದು ಕೇಂದ್ರ ಗೃಹ ಸಚಿವಾಲಯದ ಆದೇಶದಲ್ಲಿ ತಿಳಿಸಲಾಗಿದೆ. ಅವರು ಇದೇ 31ರಂದು ನಿವೃತ್ತರಾಗಲಿದ್ದರು. ಅವರ ಅಧಿಕಾರಾವಧಿ ಒಂದು ವರ್ಷ ಇರಲಿದೆ.

ವಿಶ್ವ ಪಾರಂಪರಿಕ ಪಟ್ಟಿಗೆ ಗುಜರಾತ್‌ನ ಧೋಲಾವೀರಾ

ನವದೆಹಲಿ (ಪಿಟಿಐ): ಗುಜರಾತ್‌ನಲ್ಲಿರುವ, ಹರಪ್ಪ ನಾಗರಿಕತೆ ಕಾಲದ ನಗರ ಧೋಲಾವೀರಾವನ್ನು ಯುನೆಸ್ಕೊ ವಿಶ್ವ ಪಾರಂಪರಿಕ ತಾಣ ಪಟ್ಟಿಗೆ ಸೇರಿಸಲಾಗಿದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ತಿಳಿಸಿದೆ.

ಧೋಲಾವೀರಾ, ಕಛ್ ಜಿಲ್ಲೆಯಲ್ಲಿದೆ. ತೆಲಂಗಾಣದ ಪಾಲಂಪೇಟ್‌ನಲ್ಲಿರುವ ರಾಮಪ್ಪ ದೇವಸ್ಥಾನಕ್ಕೂ ಕೆಲ ದಿನಗಳ ಹಿಂದೆಯಷ್ಟೇ ಯುನೆಸ್ಕೊದ ವಿಶ್ವ ಪಾರಂಪರಿಕ ತಾಣ ಗೌರವ ಲಭಿಸಿದೆ.

ಯುಕೋ ಬ್ಯಾಂಕ್ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಯುಕೋ ಬ್ಯಾಂಕ್‌ನ ತ್ರೈಮಾಸಿಕ ಲಾಭದಲ್ಲಿ ನಾಲ್ಕು ಪಟ್ಟು ಹೆಚ್ಚಳ ಆಗಿದೆ. ಜೂನ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಬ್ಯಾಂಕ್ ₹ 101.81 ಕೋಟಿ ನಿವ್ವಳ ಲಾಭ ಗಳಿಸಿದೆ. ಬ್ಯಾಂಕ್‌ನ ಎನ್‌ಪಿಎ ಪ್ರಮಾಣ ಕೂಡ ತಗ್ಗಿದೆ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಯುಕೋ ಬ್ಯಾಂಕ್ ₹ 21.46 ಕೋಟಿ ನಿವ್ವಳ ಲಾಭ ಗಳಿಸಿತ್ತು. ಈ ವರ್ಷದ ಜೂನ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಆದಾಯವು ₹ 4,539 ಕೋಟಿಗೆ ಹೆಚ್ಚಳವಾಗಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹ 4,436 ಕೋಟಿ ಲಾಭ ಗಳಿಸಿತ್ತು.

ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 14.38ರಷ್ಟಿದ್ದ ಬ್ಯಾಂಕ್‌ನ ಎನ್‌ಪಿಎ ಪ್ರಮಾಣ ಈ ಬಾರಿ ಶೇ 9.37ಕ್ಕೆ ಇಳಿಕೆಯಾಗಿದೆ.

(ಬೆಂಗಳೂರು ವರದಿ): ಜುಲೈ 26ರವರೆಗೆ ಬ್ಯಾಂಕ್ ಒಟ್ಟು ₹ 3,008 ಕೋಟಿ ಮೊತ್ತದ 43 ಸಾವಿರ ಸಾಲದ ಖಾತೆಗಳನ್ನು ಮರುಹೊಂದಾಣಿಕೆ ಮಾಡಿಕೊಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಆರೋಗ್ಯಸೇವಾ ಕ್ಷೇತ್ರದ ಉದ್ದಿಮೆಗಳ ಸಾಲದ ತುರ್ತು ಅಗತ್ಯಗಳನ್ನು ಪೂರೈಸಲು ‘ಆರೋಗ್ಯಂ’, ‘ಸಂಜೀವಿನಿ’, ‘ಕವಚ’ ಎಂಬ ಮೂರು ಯೋಜನೆಗಳನ್ನು ಜಾರಿಗೆ ತಂದಿದೆ.

ಭೀಮಾ ಜ್ಯುವೆಲ್ಲರ್ಸ್ ವತಿಯಿಂದ ಬಡವರಿಗೆ ದಿನಸಿ ಕಿಟ್ ವಿತರಿಸಲಾಯಿತು

ಟ್ಯಾಬ್, ದಿನಸಿ ಕಿಟ್ ವಿತರಣೆ

ಬೆಂಗಳೂರು: ಭೀಮಾ ಜ್ಯುವೆಲ್ಲರ್ಸ್‌ನ ಕೋರಮಂಗಲದ ಮಳಿಗೆಯಲ್ಲಿ ಸಂಸ್ಥೆಯ 97ನೇ ಸಂಸ್ಥಾಪನಾ ದಿನದ ಅಂಗವಾಗಿ ಬಡ ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್ ಹಾಗೂ ಬಡ ಕುಟುಂಬಗಳಿಗೆ ದಿನಸಿ ಕಿಟ್ ವಿತರಿಸಲಾಯಿತು.

ಕೋವಿಡ್‌ನಿಂದ ಸಂಕಷ್ಟ ಅನುಭವಿಸಿರುವ ಜನರಿಗೆ ನೆರವಾಗುವ ಉದ್ದೇಶದಿಂದ ಒನ್ ಬಿಲಿಯನ್ ಲಿಟರೇಟ್ಸ್ ಫೌಂಡೇಷನ್ ಮೂಲಕ ₹4.75 ಲಕ್ಷ ವೆಚ್ಚದಲ್ಲಿ 50 ಟ್ಯಾಬ್‌ಗಳನ್ನು ಬಡ ವಿದ್ಯಾರ್ಥಿಗಳಿಗೆ ನೀಡಲಾಯಿತು.

ನಾಗವಾರಪಾಳ್ಯ, ಕಗ್ಗದಾಸಪುರ, ವಿದ್ಯಾರಣ್ಯಪುರದ ವಲಸೆ ಮತ್ತು ದಿನಗೂಲಿ ನೌಕರರು ಹಾಗೂ ತೃತೀಯ ಲಿಂಗಿಗಳು ಸೇರಿದಂತೆ 500 ಮಂದಿಗೆ ₹5 ಲಕ್ಷ ವೆಚ್ಚದಲ್ಲಿ ದಿನಸಿ ಕಿಟ್‌ಗಳನ್ನು ವಿತರಿಸಲಾಯಿತು. ಭೀಮಾ ಜ್ಯುವೆಲ್ಲರ್ಸ್‌ನ ಬೆಂಗಳೂರು ವಿಭಾಗದ ವಿಷ್ಣು ಶರಣ್ ಕೆ.ಭಟ್ ಇದ್ದರು.

ಆದಾಯ ಹೆಚ್ಚಿಸಿಕೊಳ್ಳಲು ಮುಂದಾದ ನಿಗಮ: ಹೊಸ ದಾರಿಗಳ ಹುಡುಕಾಟ

ಹಣ್ಣು–ತರಕಾರಿ ಸಾಗಣೆಗೆ ಕೆಎಸ್‌ಆರ್‌ಟಿಸಿ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಆರ್ಥಿಕವಾಗಿ ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಕೆಎಸ್‌ಆರ್‌ಟಿಸಿ, ಆದಾಯ ಹೆಚ್ಚಿಸಿಕೊಳ್ಳಲು ಹೊಸ ಮಾರ್ಗಗಳನ್ನು ಹುಡುಕಾಡುತ್ತಿದೆ. ರೈತರು ಕೃಷಿ ಉತ್ಪನ್ನಗಳನ್ನು ಒಂದೆಡೆಯಿಂದ ಮತ್ತೊಂದೆಡೆ ಸಾಗಿಸಲು ನೆರವಾಗಲು ಮುಂದಾಗಿದೆ. ಇದಕ್ಕಾಗಿ ಹವಾನಿಯಂತ್ರಿತ ಹಳೇ ಬಸ್‌ಗಳನ್ನು ಮರು ವಿನ್ಯಾಸಗೊಳಿಸುತ್ತಿದೆ.

ಕೆಎಸ್‌ಆರ್‌ಟಿಸಿಯಲ್ಲಿ ಹವಾನಿಯಂತ್ರಿತ ಬಸ್‌ಗಳನ್ನು 2003ರಿಂದ ಪರಿಚಯಿಸಲಾಗಿದೆ. 11 ಲಕ್ಷ ಅಥವಾ 12 ಲಕ್ಷ ಕಿಲೋ ಮೀಟರ್ ಸಂಚರಿಸಿದ ಬಳಿಕ ಅವುಗಳನ್ನು ಗುಜರಿಗೆ ಕಳುಹಿಸಲಾಗುತ್ತದೆ. ಈವರೆಗೆ 283 ಎ.ಸಿ ಬಸ್‌ಗಳನ್ನು ಗುಜರಿಗೆ ನಿಗಮ ಕಳುಹಿಸಿದೆ. ಸದ್ಯ ನಿಗಮದಲ್ಲಿ 500 ಬಸ್‌ಗಳಿವೆ.

ಕೋವಿಡ್ ಬಳಿಕ ಕಾರ್ಯಾಚರಣೆ ಕಡಿಮೆಯಾಗಿರುವ ಕಾರಣ ಇವುಗಳನ್ನು ಬೇರೆ ಉದ್ದೇಶಕ್ಕೆ ಬಳಸಿಕೊಂಡು ನಿಗಮಕ್ಕೆ ಆದಾಯ ಬರುವಂತೆ ಮಾಡಿಕೊಳ್ಳುವ ದಾರಿಯನ್ನು ನಿಗಮ ಕಂಡುಕೊಂಡಿದೆ.

ಮೊದಲ ಹಂತದಲ್ಲಿ ಚಿಕ್ಕಬಳ್ಳಾಪುರ, ಕೋಲಾರ, ಹೊಸಕೋಟೆ ಮತ್ತು ಬೆಂಗಳೂರು ಸುತ್ತಮುತ್ತಲ ಇತರ ನಗರಗಳಿಂದ ಬಸ್‌ಗಳ ಕಾರ್ಯಾಚರಣೆ ಮಾಡಲು ನಿಗಮ ಉದ್ದೇಶಿಸಿದೆ. ಪ್ರಯೋಗಿಕವಾಗಿ ಒಂದು ತಿಂಗಳ ಕಾಲ ಈ ಬಸ್‌ಗಳನ್ನು ಕಾರ್ಯಾಚರಣೆ ಮಾಡಲಾಗುವುದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಬೆಂಗಳೂರು ನಗರಕ್ಕೆ ಸುತ್ತಮುತ್ತಲ ಪ್ರದೇಶಗಳಿಂದ ತರಕಾರಿ ಮತ್ತು ಹಣ್ಣು ಸರಬರಾಜಾಗುತ್ತದೆ. ತರಕಾರಿ, ಹಣ್ಣು ಮತ್ತು ಇತರ ಕೃಷಿ ಉತ್ಪನ್ನಗಳನ್ನು ರೈತರು ಬಸ್‌ಗಳಲ್ಲಿ ತಂದು ಕೆ.ಆರ್. ಮಾರುಕಟ್ಟೆ, ಕಲಾಸಿಪಾಳ್ಯ ಮಾರುಕಟ್ಟೆ ಮತ್ತು ಇತರ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುತ್ತಾರೆ. ಹಣ್ಣು ಮತ್ತು ತರಕಾರಿ ಸಾಗಿಸಲು ಹವಾನಿಯಂತ್ರಿತ ಬಸ್‌ಗಳ ವ್ಯವಸ್ಥೆಯನ್ನು ಮಾಡಿದರೆ ರೈತರಿಗೆ ಇನ್ನಷ್ಟು ಅನುಕೂಲ ಆಗಲಿದೆ ಎಂದು ಅವರು ಹೇಳಿದರು.

ಗುತ್ತಿಗೆ ಆಧಾರದಲ್ಲಿ ಈ ಸೇವೆ ಒದಗಿಸುವ ಆಲೋಚನೆ ಇದೆ. ರೈತರು, ರೈತ ಗುಂಪುಗಳು, ಸಹಕಾರ ಸಂಘಗಳು ಬಸ್‌ಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳಬಹುದಾಗಿದೆ. ಮುಂದಿನ ದಿನಗಳಲ್ಲಿ ಎಲ್ಲಾ ವಿಭಾಗಗಳಲ್ಲೂ ಸುಸ್ಥಿತಿಯಲ್ಲಿರುವ ಹವಾನಿಯಂತ್ರಿತ ಬಸ್‌ಗಳನ್ನು ಮರು ವಿನ್ಯಾಸಗೊಳಿಸಲಾಗುವುದು ಎಂದು ವಿವರಿಸಿದರು.

ಈ ಯೋಜನೆಯನ್ನು ಏಪ್ರಿಲ್‌ನಲ್ಲೇ ಅನುಷ್ಠಾನ ಮಾಡುವ ಉದ್ದೇಶವನ್ನು ಕೆಎಸ್‌ಆರ್‌ಟಿಸಿ ಹೊಂದಿತ್ತು. ಆದರೆ, ನೌಕರರ ಮುಷ್ಕರ, ಅದರ ಜತೆಯಲ್ಲೇ ಆರಂಭವಾದ ಕೋವಿಡ್ ಎರಡನೇ ಅಲೆಯ ಲಾಕ್‌ಡೌನ್‌ನಿಂದ ಅದು ವಿಳಂಬವಾಯಿತು ಎಂದರು.

ಮುಖ್ಯಾಂಶಗಳು

- ಪ್ರಾಯೋಗಿಕವಾಗಿ ಬೆಂಗಳೂರು ಸುತ್ತಮುತ್ತಲ ನಗರಗಳಲ್ಲಿ ಕಾರ್ಯಾಚರಣೆ
- ಗುತ್ತಿಗೆ ಆಧಾರದಲ್ಲಿ ರೈತರಿರಿಗೆ ಸಾರಿಗೆ ಸೇವೆ ಒದಗಿಸಲು ಸಿದ್ಧತೆ
- ಪ್ರತಿಕ್ರಿಯೆ ಆಧರಿಸಿ ಇತರ ಜಿಲ್ಲೆಗಳಿಗೂ ಯೋಜನೆ ವಿಸ್ತರಣೆ

ರೈತರಿಗೆ ಅನುಕೂಲ ಕಲ್ಪಿಸುವ ಉದ್ದೇಶವನ್ನು ನಿಗಮ ಹೊಂದಿದೆ. ನಿಗಮದ ಕಾರ್ಯಾಗಾರಗಳಲ್ಲೇ ಬಸ್‌ಗಳ ಮರು ವಿನ್ಯಾಸ ಆಗುವುದರಿಂದ ವೆಚ್ಚ ದುಬಾರಿ ಆಗುವುದಿಲ್ಲ

ಶಿವಯೋಗಿ ಸಿ. ಕಳಸದ
ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ

ಗೂಂಡಾ ಕಾಯ್ದೆಯಡಿ ರೌಡಿ ‘ಪಾಯಿಸನ್’ ಬಂಧನ

ಬೆಂಗಳೂರು: ಅಪರಾಧ ಕೃತ್ಯಗಳಲ್ಲಿ ಪದೇ ಪದೇ ಭಾಗಿಯಾಗಿ ಸಾರ್ವಜನಿಕರಲ್ಲಿ ಭಯವನ್ನುಂಟು ಮಾಡುತ್ತಿದ್ದ ರೌಡಿ ಕೆ. ರಮೇಶ್ ಅಲಿಯಾಸ್ ಪಾಯಿಸನ್ (51) ಎಂಬಾತನನ್ನು ಗೂಂಡಾ ಕಾಯ್ದೆಯಡಿ ಬಂಧಿಸಿ ಜೈಲಿಗಟ್ಟಲಾಗಿದೆ.

‘ಕಡಬಗೆರೆ ಗ್ರಾಮದ ರಮೇಶ್ ವಿರುದ್ಧ ಕೊಲೆ, ಕೊಲೆ ಯತ್ನ ಸೇರಿದಂತೆ 28 ಪ್ರಕರಣಗಳು ದಾಖಲಾಗಿದ್ದವು. ಮಾದನಾಯಕನಹಳ್ಳಿ ಠಾಣೆ ರೌಡಿ ಪಟ್ಟಿಯಲ್ಲಿ ಈತನ ಹೆಸರಿದೆ. ಹಲವು ಬಾರಿ ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದಿದ್ದ ಆತ, ಅಪರಾಧ ಕೃತ್ಯಗಳನ್ನು ಮುಂದುವರಿಸಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಗೂಂಡಾ ಕಾಯ್ದೆಯಡಿ ರಮೇಶ್ ವಿರುದ್ಧ ಪ್ರಕರಣ ದಾಖಲಿಸಲು ಅನುಮತಿ ಕೋರಿ ಜಿಲ್ಲಾಧಿಕಾರಿ ಅವರಿಗೆ ವರದಿ ಸಲ್ಲಿಸಲಾಗಿತ್ತು. ವರದಿ ಪರಿಶೀಲಿಸಿದ ಜಿಲ್ಲಾಧಿಕಾರಿ, ಬಂಧನಕ್ಕೆ ಅನುಮತಿ ನೀಡಿದ್ದರು. ಅದರನ್ವಯ ರಮೇಶ್‌ನನ್ನು ಬಂಧಿಸಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ’ ಎಂದೂ ತಿಳಿಸಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	112.80	27,882	13,196
ಹಾರಂಗಿ	2,859	2,855.25	9,087	8,894
ಕಬಿನಿ	2284.00	2,280.25	22,400	15,000
ಹೇಮಾವತಿ	2,922	2,918.80	12,916	3,965
ಲಿಂಗನಮಕ್ಕಿ	1,819	1805.30	26,232	-
ಸೂಪಾ (ಮೀ)	564	550.75	20,188.0	3,157.0
ಮಾಣಿ	594.36	581	2,923	-
ತುಂಗಭದ್ರಾ	1,633	1,631.60	1,48,453	1,30,913
ಮಲಪ್ರಭಾ	2079.5	2074.80	3,538	17,594
ಘಟಪ್ರಭಾ	2175	2,172.15	37,677	33,142
ಭದ್ರಾ	186	180.4	19,101	1,902
ಆಲಮಟ್ಟಿ (ಮೀ)	519.6	516.24	355,396	3,01,010
ನಾರಾಯಣಪುರ (ಮೀ)	492.25	489.58	3,15,000	3,05,800

* ನೆಲಮಟ್ಟದಿಂದ

ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆಗೆ ಆಗ್ರಹ

ಬೆಂಗಳೂರು: ‘ರಾಜ್ಯದಾದ್ಯಂತ ಇರುವ ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆ ನಡೆಸುವ ಮೂಲಕ ಅವರಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕು’ ಎಂದು ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆ ಸರ್ಕಾರಕ್ಕೆ ಆಗ್ರಹಿಸಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ರಾಜ್ಯ ಸಂಚಾಲಕ ಮಲ್ಲು ಕುಂಬಾರ್,‘ಲಿಂಗತ್ವ ಅಲ್ಪಸಂಖ್ಯಾತರ ರಕ್ಷಣೆಗಾಗಿ ರಾಜ್ಯ ಟ್ರಾನ್ಸ್‌ಜೆಂಡರ್ ನೀತಿಯನ್ನು (2017) ಜಾರಿಗೊಳಿಸಲಾಗಿದೆ. ಕಳೆದ ಬಜೆಟ್‌ನಲ್ಲಿ ₹70 ಲಕ್ಷ ಘೋಷಿಸಿ, ಸಮುದಾಯದ ಸಮೀಕ್ಷೆ ನಡೆಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸೂಚಿಸಲಾಗಿದೆ. ಆದರೆ, ಇಲಾಖೆ ಈವರೆಗೆ ಸಮೀಕ್ಷೆಗೆ ಮುಂದಾಗಿಲ್ಲ’ ಎಂದು ದೂರಿದರು.

‘ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವ್ಯಾಪ್ತಿಯಲ್ಲಿರುವ ತೃತೀಯ ಲಿಂಗಿಗಳ ನೀತಿಯನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸಬೇಕು. ಲಿಂಗತ್ವ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಪ್ರತ್ಯೇಕ ನಿಗಮ ಸ್ಥಾಪಿಸಿ, ₹100 ಕೋಟಿ ಅನುದಾನ ಘೋಷಿಸಬೇಕು’ ಎಂದು ಒತ್ತಾಯಿಸಿದರು.

ವೇದಿಕೆಯ ಚಾಂದಿನಿ,‘ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಕ್ಕೆ ಶೈಕ್ಷಣಿಕ, ರಾಜಕೀಯ ಹಾಗೂ ಎಲ್ಲ ವಸತಿ ಯೋಜನೆಗಳಲ್ಲಿ ಶೇ 5ರಷ್ಟು ಮೀಸಲಾತಿ ಘೋಷಿಸಬೇಕು. ಸಮುದಾಯದವರಿಗೆ ದೌರ್ಜನ್ಯ, ಕಿರುಕುಳ ನೀಡುವ ಪೊಲೀಸರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED TRAINED and experienced teachers for a reputed school at Malur. High school Hindi, Computer_science. Primary_School Hindi, Maths, Gen.science, Social_Science & EVS. Email: unique.malur@gmail.com. Contact: 9448894417

Om Sai Ram
NEW BALDWIN
GROUP OF INTERNATIONAL SCHOOLS
* BANASWADI * MANDUR * T.C PALYA * ANEKAL * ANEKAL TOWN * CHANDAPUR
KINDERGARTEN - Teachers
Candidates with NTT & MTT, having experience handling KG students, should be humble and committed to provied quality & innovative teaching.
PRIMARY SCHOOL - ALL SUBJECTS
Graduated Candidates with experince teaching Primary classes from grade 1 TO 4-ICSE/CBSE & IGCSE Streams. should be team bounded and committed to provide quality & innovative teaching.
HIGH SCHOOL - ALL SUBJECTS
Graduate /post Graduate Candidates with experience teaching high school section from grade 5 to 10- ICSE/ CBSE & IGCSE & streams. should be result oriented and committed to provide quality & innovative teaching
Admin Staff - IT coordinators
Having experience in the relevant field
Remuneration: at par with the institutional standard. with additional facilities like food & transport in the Gross Package.
APPLY IMMEDIATELY
Applying candidates should clearly specify the Position Applied for, branch Opted with updated resume
Contact : 9108062731 / 9591960947 / 9008683601
hr.nbgi@gmail.com

VIDYA-VAHINI SCHOOL, CBSE, RHCS Layout, Srigandhadakaval, Bangalore-560091. Ph:9686282423, 080-23483398, Email: vvs_school@live.com, REQUIRED- Maths, Social and English TEACHER (8,9 &10 Grade).

WANTED EXPERIENCED Female Teachers to teach High School students Kannada - B.A, B.Ed, and Mathematics - B.Sc, B.Ed. Apply immediately to Principal, St.Anne's Girl's High School, Halasuru, Bangalore- 560008

PUTTANNA PUBLIC SCHOOL, Andrahalli,Magadi-Road, Bangalore-91. 9845295961,080-23245377 Teacher Required all Subject:B.Ed or Matser Degree,will provide best salary.fluency in English must.

RMS INTERNATIONAL SCHOOL requires PRINCIPAL. EXPERIENCE: Minimum 5 years as PRINCIPAL in school. Next to metro cash and carry, Kanakapura Road. 9738211017, 9606416534

STSOPHIA CONVENT (CBSE)Nagarabhavi requires trained experienced Female HODs and Coordinators for Maths Socialscience and English to primary and High school (Immediate Appointment) principal@stsophiaconvent.orgContact:9243031872

JUBILEE NATIONAL PUBLIC SCHOOL, Affiliated to CBSE, J.P.Nagar 8th Phase,Invite applications from Qualified and Experienced TEACHERS for Immediate Appointment in English for Middle School & High School and Trained Nursery TEACHERS. Contact-8197812901. jubileenational9740@gmail.com

REQUIRES_LADY Teachers for English (MA.BEd) and Physics (MSc.BEd) Walk-in Interview_with the_Secretary, Srikrishna International School, ITI-Layout, BSK_3rd_Stage, Bangalore-85, Ph:_65365824.

HERITAGE PUBLIC SCHOOL, Srinidhi Layout, Konanakunte, J.P.Nagar 8th-Phase, Bangalore-62. Urgently Requires Hindi and Chemistry/Biology TEACHERS For High School. Contact: 9901733776.

WANTED IMMEDIATELY PRINCIPAL: For Women's Degree College.M.Com with 6 to 8 years experience in College Administration, Managing University affairs and Teaching Commerce Subjects. LIBRARIAN: B.lib or M.lib with minimum 2 years experience in handling Degree & PU college Library. CLERK:B.com with minimum two years Experience in Managing Office and Handling University affairs. Apply immediately with Resume and Recent Passport size photograph to reach us on or before 5th August 2021 The Secretary, Bharathamatha Education Society Hanumanthanagar, Bangalore: 560019. 080-26672836 9110669225 Email: bharathamatha.edusoc@gmail.com

EDUCATION SPECIAL
DH Classifieds | PV Classifieds
We are coming out with special offer for Admission Notice, Education Success Congratulation Ads
For details contact:
Jerry: 9731810277 Vishal: 9845114560
Tanveer: 9886213331
E-mail: dhclassifieds@deccanherald.co.in
DH Classifieds

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/ 7676760399

General

REQUIRED-BUNK MAINTENANCE Supervisors Qualification: Any Degree, Exp: 5-10years Relevant Field, Salary: 35000/- & Above Accountant, Marketing Executive For Petroleum Product Exp: 5-10years Email glprojects7889@gmail.com Call:7338084555 9880727889

WANTED SHRIRAM City — MONEY WHEN YOU NEED IT MOST
Shriram City Union Finance Ltd.
India's Premier NBFC Specialized in TWO WHEELER, MSME LOANS, and GOLD LOAN FINANCE invites applications for the following positions for its Bangalore operations and across Karnataka.
Sr. Branch Managers / Branch Managers / Recovery Managers / Back Office Executives
Minimum Qualification: Any Degree
Experience: Minimum 1 ½ years and above. (Commensurate to position applied for)
Age Limit: 21 Yrs to 45 Yrs.
Salary will be commensurate with Qualification & Experience
Please send your CV to E-mail: tedkarnataka@shriramcity.com
Date of interview will be informed to the short-listed candidates
For more details Pl. Contact: 9071776589/ 7892255379

WANTED OFFICE ASSISTANTS (Male) & DRIVERS. Bommanahalli (Bangalore) Ph: 08041109278/ 41110253 Email:starsilks@gmail.com

REQUIRED B.PHARM / M.Pharm Faculties, Residential Male/Female Warden, Residential Office Staffs, Librarian, Hospital Staffs, Nurses, Laboratory Technician, Therapist, Digital Marketing, Offline Marketing, Field Staff, PRO.Contact: K.T.G. College & Hospital, Hegganahalli Cross, Sunkadakatte Road, Bangalore- 560 091. Phone.No. 9845051023 / 9980400641. E-mail: ktgcolleges@gmail.com

NEED MALE or Female fresher/ 1-2 years experience Graduate. For Data Entry Operation. Location: Doddaballapur, send your resume to jobs@tokitaseedindia.in/ 9480349110

Engg/ Production Technical

WE REQUIRE FRESHERS: 1.PURCHASE EXECUTIVE, 2.ITI/DIPLOMA MECHANICAL'S. 3.ACCOUNT ASSISTANT, For our special Pumps-Manufacturing-Unit at Devarachikkanahalli, Bannergatta Road, Bangalore. Email:flowoilpumps@hotmail.com

CNC TURNING, Milling, Surface Grinding Operaters, Fitter, Turner, Miller, Receptionist, Helper, Cleark. Contact: 9448558947/ 9916552712.

LEADING SUPER-GRADE Electrical Contractor Required Diploma/BE Electrical Engineers with 6-Months to 1-Year Experience. Contact: 9972056655

Marketing & Sales

A Consortium of German, Italian, Dutch & other European Companies represented in India by their agents **STANDARD MACHINERY CORPORATION** who are leaders in the Industrial Food Manufacturing Machinery Business, are looking for a
Marketing Manager-Female
Qualification : MBA
The incumbents must have excellent communication skills & computer knowledge to look after sales & support.
Min. 5 years exp. candidates can apply for this job. Excellent salary package can be offered for the right candidates.
Interested Candidates please send your CV to : smc@stanmac.net
STANDARD MACHINERY CORPORATION
#205B, Brooklyn Apartments #63, Banaswadi Main Road Jai Bharath Nagar Bangalore-560033.
www.stanmac.com

WANTED FEMALE Marketing Executives min 1 year experience in sales. Qualification: PUC/Degree, Salary +Incentives, basic computer knowledge Must. Ph: 9340099993/9341444444

WANTED MARKETING Executives For Private Limited Company Bangalore, Age Below 40 with Good Communication Skill fluent In English, Kannada, Hindi Contact: 9108458798/ 23384085

Hospital & Medical Jobs

We are HIRING
Medical Representative
For the Bangalore Division who has experience in the field of Marketing of Herbal / Ayurvedic / Nutraceuticals Products with proven track records. Should have contact of prospective Doctors who can prescribe our products. Preferably science graduate. local candidates preferred.
SEND YOUR RESUME to satish.mokashi@vidyaherbs.com
080-41654089
97313 79645

Medical Transcriptionist

WANTED PHARMACIST for a reputed medical store in Chandralayout, Bangalore. Good salary.Call :7349020277/ 9900124007

HRD & Admin

OFFICE ASSISTANT with computer knowledge required in chamrajpet jobs@eyesense.in

Graphic Designers

WANTED MALE/ Female Graphic Designer for HI- END Prepress Software for a Pvt Limited Company in around Rajajinagar Age below 40 years Contact: 9108458798/ 23384085

BUSINESS

Business to Business

Business

WANTED BUSINESS Partner, Lahab Veg Hotel, Investment Rs 5 Lakhs, Income 50:50. Contact: 8892501007/ 9606701007

Business Offers

General

EARN REGULAR INCOME through online TRADING from your home. Forex, Equity and Commodity segments. Get TRAINED by experts. Call 8105303232

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

REAL ESTATE SELLING

Sites

Kumaraswamy Layout

BDA 30X40 Intermediate Vacant 2nd Stage, Near 15F/G Bus Stop, ISKCON South, Genuine Buyers Call 9972095359 Brokers Excuse.

SOCIAL SERVICES

Others

HOME NURSES available for HOME/ HOSPITAL/ PATIENT CARE-24/7 MAJ Gandhinagar, Bangalore. Contact: 7022399993, 6366883838

PERSONAL

Lost

LOST OF DOCUMENT
I, Rajeshwari S. R/a No. 116/1, Devara Chikkanahalli Main Road, Bilekalli, Bangalore, have lost Manjunatha Bar & Restaurant Blue Print copy in J. P. Nagar 2nd Phase, Bangalore.
Finders please contact Mobile No. 9945979790 or inform near by Police Station

I, BHOOMIKA Narayanaswamy D/o Narayanaswamy.D.R aged about 25years, resident of No.12, Shakthi, 9th Main Road, Adithyanagara, Chikkabettahalli Vidhyaranyapura Bangalore 560097. Have changed my name to Bhoomika D.N vide affidavit dated 26.07.2021 before Notary N.L. Srinivasaprasad Kolar. Henceforth I shall be called as Bhoomika D.N only.

Change of Name

T MADHAVI spouse of No.16111685F Hav BATHULA SREENIVASULU Residing at E Ramapuram (Vill&Po), Kalasapadu(Mdl), Kadapa, Andrapradesh have changed my name from T.MADHAVI to BATHULA MADHAVI vide affidavit dated 27/07/2021 before AR.Muneer Ahmed, Bangalore.

I, BALASUBRAMANYA BABENAHALLI LAKSHMIKANTHAN have changed my name to BALASUBRAMANYAM BABENAHALLI LAKSHMIKANTHAN vide affidavit dated: 27/7/2021 Before Notary Shreeshail.B. Gobbani Bangalore.

BABITA DEVI, Wife/o, JC681839A, SUB, JASWANT, Vill- KHARHAR, BAHADURGARH, JHAJJAR, HARYANA, have changed my name from BABITA DEVI to BABITA, affidavit 27/07/2021, Notary K.V.Mani, Bangalore

I, YOGIRAJ.H.M residing at #26 Sri_Sai Nilaya, Patel Shamanna layout, Horamavu village and post, Bangalore-43 have changed my name to M RAJUGOWDA Vide affidavit dated 26-07-21 before notary Uday Kumar.K, Bangalore

JASBIR RATHI, Son/o, JC681839A, SUB, JASWANT, Vill- KHARHAR, BAHADURGARH, JHAJJAR, HARYANA, have changed my name from JASBIR RATHI to JASBIR SINGH, affidavit 27/07/2021, Notary K.V.Mani, Bangalore

I, VIRUPAKSHA PRABHUDEV MOOGI have changed my name to VINOD PRABHUDEV MOOGI vide affidavit dated: 30/06/2021 Before Notary C.Srinivas Bangalore

MEENAXI DEVI, Daughter/o, JC681839A, SUB, JASWANT, Vill-KHARHAR, BAHADURGARH, JHAJJAR, HARYANA, have changed my name from MEENAXI DEVI to MINAKSHI, affidavit 27/07/2021, Notary K.V. Mani, Bangalore

I, SMT.SOWMYASHREE.D.S D/o Subramanyappa.V, W/o Venu V.S, a/a 30yrs, R/at Doddnahalli Village, Huthur Hobli, Shapur Post, Kolar Taluk&Dist. Declare that, my correct Surname is Devaramallur Subramanyappa vide affidavit dated 26.07.2021 before Notary Bhaskar.B.P Sidlaghatta

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PUBLIC NOTICE

NOTICE

ಬಾನು ಚಂದು
ಈತನು ಮೊದಲು ನಮ್ಮ ಕಂಪನಿಯಾದ ರೆಡಕ್ಸ್‌ನಲ್ಲಿ ಕೆಲಸಮಾಡುತ್ತಿದ್ದ, ನಂತರ ನಾವು 5 ತಿಂಗಳ ಹಿಂದೆ ಕೆಲಸ ಬಿಡಿಸಿದರೂ ಸಹ, ನಮಗೆ ತಿಳಿಯದ ಹಾಗೆ ಗ್ರಾಹಕರಿಂದ ಇಂಟರನೆಟ್ ಸೇವೆ ಎಂದು ಹೇಳಿ 10ಲಕ್ಷ ರೂಗಳನ್ನು ವಸೂಲಿ ಮಾಡಿದ್ದೂ, ನಮ್ಮ ಕೈಗೆ ಸಿಗದಂತೆ ಯಾಮಾರಿಸಿದ್ದಾನೆ. ಈತನು ಇನ್ನು ಮುಂದೆ ಯಾರಿಗಾದರು ಮೋಸ ಮಾಡಿದ್ದಲ್ಲಿ, ನಾವು ರೆಡಕ್ಸ್ ಕಂಪನಿಯವರು ಹೊಣೆಯಾಗಿರುವುದಿಲ್ಲ. ಈ ಕುರಿತು ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ASC CENTRE AND COLLEGE, BANGALORE
ALLOTMENT OF REGIMENTAL SHOPS
NOTICE INVITING TENDER
Sealed tenders are invited from interested War Widows/Widows of defence personnel killed while on duty / Disabled Soldiers/ Ex-servicemen & Spouses/ Widows of Ex-servicemen subject to license period of one year (extendable to five years) with a three years cooling off/ break period for running Regimental Shops at ASC Centre & College, Agram Post, Bangalore-560007.
For details contact :-
Colonel Administration
For Commandant
Department of Administration
ASC Centre & College
Domlur, Agram Post Office
Bengaluru-560007
Mob No: 6303941480
E-Mail: doa.as3c@gmail.com

CANDEUR CONSTRUCTIONS
Build with Honesty
ENVIRONMENTAL CLEARANCE
The State Environment Impact Assessment Authority (SEIAA) Karnataka has accorded Environmental Clearance to Residential Complex of Candeur Constructions for Candeur Signature project located at Sy. No. 219/1(P), 219/6A, 219/6B, 224/2, 226/1(P), 227/1 (P) of Gunjur Village, Varthur Hobli, Bangalore East Taluk, Bengaluru-560087, Karnataka. The copies of Environmental Clearance SEIAA 39 CON 2019 dated: 14/10/2019 are available for reference with SEIAA, Karnataka and Karnataka State Pollution Control Board KSPCB and may also be seen at website of the Board.
The State Environment Impact Assessment Authority (SEIAA) has accorded the environmental clearance for the said project under the provision of EIA notification, 2006.
Sd/-
Operation Head,
Candeur Signature
Candeur Constructions

ಶಿಗ್ಗಾವಿ ಸರದಾರನಿಗೆ ಸಿ.ಎಂ ಪಟ್ಟ



ಬಿಜೆಪಿ ಕಚೇರಿಗೆ ಭೇಟಿ ನೀಡಿದ ಬಳಿಕ ನಿಯೋಜಿತ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಪಕ್ಷದ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಒತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಪಕ್ಷದ ಸಿದ್ಧಾಂತ,ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಮತ್ತು ಪಕ್ಷದಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯ ನಿರ್ವಹಿಸುತ್ತೇನೆ' ಎಂದು ನಿಯೋಜಿತ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮಂಗಳವಾರ ರಾತ್ರಿ ಪಕ್ಷದ ಕಚೇರಿಗೆ ಭೇಟಿ ನೀಡಿ, ಭಾರತಮಾತೆಯ ಭಾವಚಿತ್ರಕ್ಕೆ ಮತ್ತು ಜಗನ್ನಾಥರಾವ್ ಜೋಶಿ ಅವರ ಪುತ್ಥಳಿಗೆ ಪುಷ್ಪ ನಮನ ಮಾಡಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ನಾನು ದೆಹಲಿಗೆ ಹೋಗಲಿಲ್ಲ. ಆದರೆ, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಷಾ, ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ, ಯಡಿಯೂರಪ್ಪ ಅವರು ನನ್ನನ್ನು ಗುರುತಿಸಿ, ಈ ಜವಾಬ್ದಾರಿ ಕೊಟ್ಟಿದ್ದಾರೆ. ಇದೊಂದು ದೊಡ್ಡ ಜವಾಬ್ದಾರಿ. ಕೋವಿಡ್ ಮತ್ತು ಇತರ ಸಮಸ್ಯೆಗಳು ರಾಜ್ಯವನ್ನು ಕಾಡುತ್ತಿದ್ದು, ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುವ ವಿಶ್ವಾಸವಿದೆ' ಎಂದರು.

'ಸರ್ಕಾರ ಮತ್ತು ಪಕ್ಷದ ನಡುವೆ ಸಮನ್ವಯದಿಂದ ಕೆಲಸ ಮಾಡುತ್ತೇನೆ. ಬಡವರು, ದಲಿತರು, ರೈತರು, ಹಿಂದುಳಿದವರು ಮತ್ತು ಮಹಿಳೆಯರ ಪರವಾಗಿ ಸರ್ಕಾರ ಕೆಲಸ ಮಾಡುತ್ತದೆ. ಯಡಿಯೂರಪ್ಪ ಮತ್ತು ಪಕ್ಷದ ಇತರ ಹಿರಿಯರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸಲಾಗುವುದು' ಎಂದು ಬೊಮ್ಮಾಯಿ ಹೇಳಿದರು.

'ರಾಜ್ಯವನ್ನು ಕಾಡುವ ಎಲ್ಲ ಸವಾಲುಗಳನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸುವ ಆತ್ಮವಿಶ್ವಾಸವಿದೆ. ಜನರಿಗೆ ಉತ್ತಮ ಆಡಳಿತ ನೀಡುತ್ತೇನೆ ಎಂದ ಅವರು, ನನ್ನ ತಂದೆಯವರು ತತ್ವ ಮತ್ತು ಆದರ್ಶನದ ರಾಜಕಾರಣಿಯಾಗಿದ್ದರು. ಸೋಲು–ಗೆಲುವನ್ನು ತಾತ್ವಿಕವಾಗಿ ತೆಗೆದುಕೊಳ್ಳುತ್ತಿದ್ದರು. ಅವರ ವಿಚಾರಗಳು ದಾರಿ ದೀಪ' ಎಂದರು.

ಬೊಮ್ಮಾಯಿ ಅವರ ಜತೆ ಪಕ್ಷದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಹಿರಿಯಶಾಸಕರಾದಆರ್.ಅಶೋಕ,ಎಸ್.ಟಿ. ಸೋಮಶೇಖರ್, ಭೈರತಿ ಬಸವರಾಜು, ನಾರಾಯಣಗೌಡ ಇದ್ದರು.

ಬಳಿಕ ಅವರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕೇಂದ್ರ ಕಚೇರಿ ಕೇಶವ ಕೃಪಾಗೆ ಭೇಟಿ ನೀಡಿ, ಸಂಘದ ಪ್ರಮುಖರ ಜತೆ ಚರ್ಚೆ ನಡೆಸಿದರು.

ನಿಯೋಜಿತ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪಕ್ಷದ ಕಚೇರಿಗೆ ಭೇಟಿ ನೀಡಿದಾಗ, ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಶಾಲು ಹೊದಿಸಿ ಗೌರವಿಸಿದರು. ಶಾಸಕ ಆರ್.ಅಶೋಕ, ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್, ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಅರುಣ್ ಕುಮಾರ್ ಇದ್ದರು.

ಸಂಪುಟದಲ್ಲಿ ಕುರುಬರಿಗೆ ಪ್ರಾತಿನಿಧ್ಯಕ್ಕೆ ಆಗ್ರಹ

ಬೆಂಗಳೂರು: ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಅವರ ಹಿರಿತನಕ್ಕೆ ತಕ್ಕದಾದ ಸ್ಥಾನಮಾನದೊಂದಿಗೆ ಕುರುಬ ಸಮುದಾಯಕ್ಕೆ ಹೊಸ ಸಂಪುಟದಲ್ಲಿ ಪೂರ್ಣ ಪ್ರಮಾಣದ ಪ್ರಾತಿನಿಧ್ಯ ನೀಡಬೇಕು ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘ ಆಗ್ರಹಿಸಿದೆ.

ಸಂಘದ ಪದಾಧಿಕಾರಿಗಳ ಜತೆ ಮಂಗಳವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪ್ರದೇಶ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಡಿ. ವೆಂಕಟೇಶ ಮೂರ್ತಿ, 'ಕೆ.ಎಸ್. ಈಶ್ವರಪ್ಪ ಅವರು ಆರಂಭದಿಂದಲೂ ಬಿಜೆಪಿ ಕಟ್ಟಿ ಬೆಳೆಸುವಲ್ಲಿ ಕೆಲಸ ಮಾಡಿದ್ದಾರೆ. ಅವರಿಗೆ ಸೂಕ್ತ ಸ್ಥಾನಮಾನ ನೀಡಬೇಕು' ಎಂದರು.

ಕುರುಬ ಸಮುದಾಯದ ಭೈರತಿ ಬಸವರಾಜು, ಎಂ.ಟಿ.ಬಿ. ನಾಗರಾಜ್, ಎಚ್. ವಿಶ್ವನಾಥ್ ಮತ್ತು ಆರ್. ಶಂಕರ್ ಪಕ್ಷವನ್ನು ತೊರೆದು ಬೆಂಬಲ ನೀಡಿದ್ದರಿಂದಾಗಿಯೇ ಬಿಜೆಪಿ ಸರ್ಕಾರ ಬಂದಿತ್ತು. ನೂತನ ಮುಖ್ಯಮಂತ್ರಿಯ ಆಯ್ಕೆಗೆ ಸಿದ್ಧತೆಗಳು ನಡೆದಿವೆ. ಈಶ್ವರಪ್ಪ ಸೇರಿದಂತೆ ಕುರುಬ ಸಮುದಾಯದ ಐವರಿಗೂ ಸಂಪುಟದಲ್ಲಿ ಸ್ಥಾನ ನೀಡಬೇಕು. ಯಾರನ್ನಾದರೂ ಕೈಬಿಟ್ಟರೆ ಕುರುಬರ ಸಂಘದ ವತಿಯಿಂದ ಬೀದಿಗಿಳಿದು ಹೋರಾಟ ನಡೆಸಲಾಗುವುದು ಎಂದು ಹೇಳಿದರು.

ಪ್ರದೇಶ ಕುರುಬರ ಸಂಘದ ಹಿರಿಯ ಮುಖಂಡ ಲಿಂಗಪ್ಪ, ಖಜಾಂಚಿ ದೇವರಾಜ್, ಮುಖಂಡರಾದ ಪ್ರಹ್ಲಾದ್ ವಿ. ಹೊಸಳ್ಳಿ ಮತ್ತು ಮಲ್ಲನಗೌಡ ಪಾಟೀಲ ಪತ್ರಿಕಾಗೋಷ್ಠಿಯಲ್ಲಿದ್ದರು.

ಬೊಮ್ಮಾಯಿ ಆಯ್ಕೆ: ಹಲವರ ಸಂತಸ, ಕೆಲವರ ಬೇಸರ

ಬೆಂಗಳೂರು: ರಾಜಭವನ ಮತ್ತು ವಿಧಾನಸೌಧಕ್ಕೆ ಕೂಗಳತೆ ದೂರದಲ್ಲಿರುವ ಕ್ಯಾಪಿಟಲ್ ಹೋಟೆಲ್‌ನಲ್ಲಿ ಮಂಗಳವಾರ ರಾತ್ರಿ ಹೊಸ ಮುಖ್ಯಮಂತ್ರಿಯ ಆಯ್ಕೆ ಸುಸೂತ್ರವಾಗಿ ನಡೆದರೂ ಹಲವರ ಮುಖದಲ್ಲಿ ಸಂತಸ ಇನ್ನೂ ಕೆಲವರ ಮುಖದಲ್ಲಿ ಬೇಸರದ ಕಳೆ ಎದ್ದು ಕಾಣುತ್ತಿತ್ತು.

ಬಿ.ಎಸ್.ಯಡಿಯೂರಪ್ಪ ಅವರ ಉತ್ತರಾಧಿಕಾರಿ ಯಾರು ಕುತೂಹಲಕ್ಕೆ ಬಿಜೆಪಿಯ ಆಂತರಿಕ ವಲಯದಲ್ಲಿ ಸಂಜೆ ವೇಳೆಗೆ ತೆರೆ ಬಿದ್ದಿತ್ತು. ರಾತ್ರಿ ಹೊಸ ನಾಯಕನ ಆಯ್ಕೆ ಔಪಚಾರಿಕವಾಗಿಯೇ ನಡೆಯಿತು. ಶಾಸಕಾಂಗ ಪಕ್ಷದ ಸಭೆಯ ಎಲ್ಲ ಹಂತದಲ್ಲೂ ಯಡಿಯೂರಪ್ಪ ಅವರ ಛಾಯೆ ದಟ್ಟವಾಗಿತ್ತು.

ಶಾಸಕಾಂಗ ಪಕ್ಷದ ಸಭೆಗೆ ಸಂಜೆ 6 ಗಂಟೆಯಿಂದಲೇ ಶಾಸಕರು ಒಬ್ಬೊಬ್ಬರೇ ಬರಲಾರಂಭಿಸಿದರು. 7.20 ಕ್ಕೆ ಯಡಿಯೂರಪ್ಪ ಬಂದ ಬಳಿಕ 7.30 ಕ್ಕೆ ಶಾಸಕಾಂಗ ಪಕ್ಷದ ಸಭೆ ಆರಂಭಗೊಂಡಿತು. 15–20 ನಿಮಿಷಗಳಲ್ಲಿ ಆಯ್ಕೆ ಪ್ರಕ್ರಿಯೆ ಮುಗಿಯಿತು. ಯಡಿಯೂರಪ್ಪ ಅವರ ಕಡು ಟೀಕಾಕಾರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬೇಗನೇ ಸಭೆಯಿಂದ ಹೊರ ನಡೆದರು. ಯಾರಿಗೂ ಪ್ರತಿಕ್ರಿಯೆ ನೀಡಲಿಲ್ಲ. ಹಿರಿಯ ಶಾಸಕ ಉಮೇಶ ಕತ್ತಿಯವರೂ ಅವರನ್ನು ಹಿಂಬಾಲಿಸಿದರು.

ಉಪಮುಖ್ಯಮಂತ್ರಿಗಳ ಬದಲಾವಣೆ ಆಗುತ್ತದೆ ಎಂಬ ಸುದ್ದಿ ಹೊರ ಬೀಳುತ್ತಿದ್ದಂತೆ ಈ ಹಿಂದೆ ಉಪಮುಖ್ಯಮಂತ್ರಿ ಆಗಿದ್ದವರ ಮುಖ ಸಪ್ಪಗಾಗಿತ್ತು. ಮುಖ್ಯಮಂತ್ರಿ ಹುದ್ದೆಯ ನಿರೀಕ್ಷೆಯಲ್ಲಿದ್ದವರೂ ಮಂಕಾಗಿದ್ದರು. ಮಾಧ್ಯಮಗಳ ಮುಂದೆ ಬಲವಂತದ ನಗೆ ಬೀರಿ, ಸದ್ದಿಲ್ಲದೆ ಜಾಗ ಖಾಲಿ ಮಾಡಿದರು. ಆದರೆ, ಮುಂದೆ ಮಂತ್ರಿ ಆಗಬೇಕು ಎಂಬ ನಿರೀಕ್ಷೆಯಲ್ಲಿರುವ ಹಲವು ಶಾಸಕರು ಯಡಿಯೂರಪ್ಪ, ಬೊಮ್ಮಾಯಿ ಮತ್ತು ವೀಕ್ಷಕರನ್ನು ಎಡತಾಕಿದ್ದು ಕಂಡು ಬಂದಿತು.

ಶಾಸಕಾಂಗ ಪಕ್ಷದ ಸಭೆಯಲ್ಲಿ ಯಡಿಯೂರಪ್ಪ ಅವರ 'ಪ್ರಭಾವಳಿ' ಢಾಳಾಗಿಯೇ ಇತ್ತು. ಪಕ್ಷದ ಪ್ರಮುಖ ನಾಯಕರು ಒಂದೇ ಮೇಜಿನಲ್ಲಿ ಕುಳಿತು ಭೋಜನ ಸ್ವೀಕರಿಸುವ ಕಾರ್ಯಕ್ಕೆ ಭಾರಿ ಸಂಖ್ಯೆಯಲ್ಲಿ ಕ್ಯಾಮರಾಮನ್‌ಗಳು ಮುತ್ತಿಕೊಂಡಿದ್ದರಿಂದ ಕಡೆ ಗಳಿಗೆಯಲ್ಲಿ ಊಟ ಶಾಸ್ತ್ರ ಕೈಬಿಟ್ಟು, ರಾಜಭವನಕ್ಕೆ ತೆರಳಿದರು.

ಮದುವೆಗೆ ಭಂಗ!:

ಇದೇ ಹೋಟೆಲ್‌ನಲ್ಲಿ ವಿವಾಹವೊಂದು ಏರ್ಪಾಡಾಗಿತ್ತು. ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಿಂದಾಗಿ ರಾಜಕಾರಣಿಗಳ ದಂಡು ಮತ್ತು ಭಾರಿ ಸಂಖ್ಯೆಯಲ್ಲಿದ್ದ ಮಾಧ್ಯಮಗಳ ಗದ್ದಲದಿಂದಾಗಿ ಮದುವೆಯ ಸಂಭ್ರಮಕ್ಕೆ ಭಂಗ ಬಂದಿದ್ದೂ ನಡೆಯಿತು.

ಮದುವೆಗೆ ಅತಿಥಿಗಳಾಗಿ ಬಂದವರು ಒಳಗೆ ಪ್ರವೇಶಿಸಲು ಪರದಾಡಬೇಕಾಯಿತು. ಹೋಟೆಲ್ ಒಳಗೆ ಕಾರುಗಳನ್ನು ತರಲಾಗದೇ ಅತಿಥಿಗಳು ಬೇಸರ ಪಟ್ಟುಕೊಂಡಿದ್ದು ಕೇಳಿ ಬಂದಿತು. ರಾಜಕೀಯ ಸಭೆ ದಿಢೀರ್ ಎಂದು ಆಯೋಜನೆಗೊಂಡಿದ್ದರಿಂದ ಸಮಸ್ಯೆ ಆಯಿತು ಹೋಟೆಲ್ ಸಿಬ್ಬಂದಿಯೊಬ್ಬರು ಹೇಳಿದರು.

ಬಸವರಾಜ ಬೊಮ್ಮಾಯಿ ಅವರನ್ನು ಸರ್ವಾನುಮತದಿಂದ ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆ ಮಾಡಲಾಗಿದೆ.
ಬಿ.ಎಸ್. ಯಡಿಯೂರಪ್ಪ

ದೇವರ ದಯೆಯಿಂದ ತಂದೆಗೆ ಮುಖ್ಯಮಂತ್ರಿ ಸ್ಥಾನ ಒಲಿದಿದೆ. ರಾಜಕೀಯ ಅನುಭವದ ಮೇಲೆ ಅವರು ಒಳ್ಳೆಯ ಆಡಳಿತ ನೀಡುತ್ತಾರೆ. ಮುಂದಿನ ದಿನಗಳಲ್ಲಿ ಒಳ್ಳೆಯ ಕೆಲಸ ಮಾಡುವ ವಿಶ್ವಾಸವಿದೆ
ಭರತ್ ಬೊಮ್ಮಾಯಿ, (ಬಸವರಾಜ ಬೊಮ್ಮಾಯಿ ಪುತ್ರ)

ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಬಸವರಾಜ ಬೊಮ್ಮಾಯಿ ಆಡಳಿತದ ಮೇಲೆ ಮರಳಿ ಗಮನಹರಿಸಲಿದ್ದಾರೆ ಎಂದು ಕಾಂಗ್ರೆಸ್ ಪಕ್ಷ ಮತ್ತು ರಾಜ್ಯ ಭರವಸೆ ಇರಿಸಿದೆ. ಅವರಿಗೆ ಅಭಿನಂದನೆ ಗಳು
ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಬಸವರಾಜ ಬೊಮ್ಮಾಯಿ ಅವರಿಗೆ ಅನುಭವ ಇದೆ. ಸರ್ವಾನುಮತದಿಂದ ಅವರ ಆಯ್ಕೆ ಆಗಿದೆ. ಅವರ ಆಯ್ಕೆಯಲ್ಲಿ ತಪ್ಪೇನೂ ಇಲ್ಲ. ನನಗೆ ಖುಷಿ ನೀಡಿದೆ.
ಸಿ.ಪಿ. ಯೋಗೇಶ್ವರ

ಎಲ್ಲರ ವಿಶ್ವಾಸ ತೆಗೆದುಕೊಂಡು ಬಸವರಾಜ ಬೊಮ್ಮಾಯಿ ಅವರನ್ನು ಹೈಕಮಾಂಡ್ ಆಯ್ಕೆ ಮಾಡಿದೆ. ಸರ್ವಾನುಮತದಿಂದ ಆಯ್ಕೆ ಮಾಡಿದ್ದೇವೆ. ಬೊಮ್ಮಾಯಿ ಅವರ ನೇತೃತ್ವದಲ್ಲಿ ನಾವೆಲ್ಲ ಕೂಡಿ ಕೆಲಸ ಮಾಡುತ್ತೇವೆ. ಅವರ ಆಯ್ಕೆಗೆ ಸಹಮತಿ ಇದ್ದೇ ಇದೆ.
ಬಸನಗೌಡ ಪಾಟೀಲ ಯತ್ನಾಳ

ಹೈಕಮಾಂಡ್ ಒಳ್ಳೆಯ ಮತ್ತು ಸೂಕ್ತ ತೀರ್ಮಾನ ತೆಗೆದುಕೊಂಡಿದೆ. ನನಗೆ ಖುಷಿ ಆಗಿದೆ. ಬಸವರಾಜ ಬೊಮ್ಮಾಯಿ ಒಳ್ಳೆಯ ವ್ಯಕ್ತಿ. ಅನುಭವಿ. ಉತ್ತಮ ಆಡಳಿತಗಾರ. ಪಕ್ಷವನ್ನು ಒಗ್ಗೂಡಿಸಿಕೊಂಡು ಹೋಗುವ ಶಕ್ತಿ ಅವರಿಗೆ ಇದೆ.
ಅರವಿಂದ ಬೆಲ್ಲದ

ಬೊಮ್ಮಾಯಿ ಅವರ ಆಯ್ಕೆ ಎಲ್ಲರ ಸರ್ವಸಮ್ಮತದ ತೀರ್ಮಾನ. ಯಡಿಯೂರಪ್ಪ ಅವರೇ ಅವರ ಹೆಸರನ್ನು ಪ್ರಸ್ತಾಪಿಸುವ ಮೂಲಕ ಹೊಸ ಪರಂಪರೆಗೆ ನಾಂದಿ ಹಾಡಿದ್ದಾರೆ
ನಳಿನ್‌ಕುಮಾರ್ ಕಟೀಲ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಬೊಮ್ಮಾಯಿ ಅನುಭವಿ ರಾಜಕಾರಣಿ. ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಉತ್ತಮ ಆಯ್ಕೆ. ಒಳ್ಳೆಯ ತೀರ್ಮಾನ;ಇದನ್ನು ಸ್ವಾಗತಿಸುತ್ತೇನೆ
ವಿ. ಸೋಮಣ್ಣ

ಚಟುವಟಿಕೆಯ ಕೇಂದ್ರವಾಗಿದ್ದ ಯಡಿಯೂರಪ್ಪ ನಿವಾಸ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ನಿವಾಸ 'ಕಾವೇರಿ' ಮಂಗಳವಾರ ಬೆಳಿಗ್ಗೆಯಿಂದಲೇ ಚಟುವಟಿಕೆಯ ಕೇಂದ್ರವಾಗಿತ್ತು. ಮಾಜಿ ಸಚಿವರು, ಶಾಸಕರು ಮತ್ತು ಸ್ವಾಮೀಜಿಗಳು ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಆರ್.ಅಶೋಕ, ಮುರುಗೇಶ ನಿರಾಣಿ, ಬಸವರಾಜ ಬೊಮ್ಮಾಯಿ, ವಿ. ಸೋಮಣ್ಣ, ಎಂ.ಪಿ.ರೇಣುಕಾಚಾರ್ಯ ಇನ್ನೂ ಮುಂತಾದವರು ಭೇಟಿ ಮಾಡಿದವರಲ್ಲಿ ಪ್ರಮುಖರು. ಕೆಲವರು ಧೈರ್ಯ ಹೇಳಲು ಬಂದರೆ, ಇನ್ನು ಕೆಲವರು ಮುಂದಿನ ನಡೆಯ ಬಗ್ಗೆ ವಿಚಾರಿಸಲು ಅಲ್ಲಿಗೆ ಬಂದಿದ್ದರು.

ಮುರುಗೇಶ್ ನಿರಾಣಿ ಅವರು ಯಡಿಯೂರಪ್ಪ ಜತೆಗೆ ಸುಮಾರು ಒಂದು ತಾಸು ಪ್ರತ್ಯೇಕವಾಗಿ ಮಾತುಕತೆ ನಡೆಸಿದರು ಎಂಬ ವದಂತಿ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿತ್ತು.

ಯಡಿಯೂರಪ್ಪ ಅವರ ಜತೆ ಮಾತುಕತೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ನಿರಾಣಿ, ಹೊಸ ಮುಖ್ಯಮಂತ್ರಿ ಆಯ್ಕೆಯ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನ ತೆಗೆದುಕೊಳ್ಳುತ್ತಾರೆ. ನನ್ನ ಹೆಸರನ್ನು ಚಾಲ್ತಿಗೆ ಬಿಟ್ಟಿರುವುದು ಮಾಧ್ಯಮಗಳು. ಮುಖ್ಯಮಂತ್ರಿ ಹುದ್ದೆಗಾಗಿ ಯಾವುದೇ ಲಾಬಿ ಮಾಡಿಲ್ಲ ಎಂದು ಹೇಳಿದ್ದರು.

ಆರಾಮವಾಗಿ ಕಳೆದ ಬಿಎಸ್‌ವೈ: ಯಡಿಯೂರಪ್ಪ ಅವರು ಬೆಳಗ್ಗಿನಿಂದ ಉಲ್ಲಾಸಿತರಾಗಿಯೇ ಇದ್ದರು. ಎಂದಿನಂತೆ ಹಲವು ಸುತ್ತು ವಾಕಿಂಗ್ ಮಾಡಿದರು. ತಮ್ಮನ್ನು ಭೇಟಿ ಮಾಡಲು ಬಂದ ಎಲ್ಲರ ಜತೆಗೂ ಮುಕ್ತವಾಗಿ ಮಾತನಾಡಿದರು. ಮನೆಯ ಹಸುಗಳನ್ನು ಪ್ರೀತಿಯಿಂದ ನೇವರಿಸಿದರು.

ಉಸ್ತುವಾರಿ ಅರುಣ್ ಸಿಂಗ್, ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ವೀಕ್ಷಕರಾಗಿ ಬಂದಿದ್ದ ಕೇಂದ್ರ ಸಚಿವರಾದ ಧರ್ಮೇಂದ್ರ ಪ್ರಧಾನ್ ಹಾಗೂ ಕಿಶನ್ ರೆಡ್ಡಿ ಅವರು ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಗುಂಡ್ಲುಪೇಟೆ: ಯಡಿಯೂರಪ್ಪ ಅಭಿಮಾನಿ ಆತ್ಮಹತ್ಯೆ

ಗುಂಡ್ಲುಪೇಟೆ: ತಾಲ್ಲೂಕಿನ ಬೊಮ್ಮಲಾಪುರದಲ್ಲಿ ಬಿ.ಎಸ್. ಯಡಿಯೂರಪ್ಪ ಅವರ ಅಭಿಯಾನಿ ರವಿ (35) ಸೋಮವಾರ ರಾತ್ರಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರು.

'ಮುಖ್ಯಮಂತ್ರಿ ಸ್ಥಾನಕ್ಕೆ ಯಡಿಯೂರಪ್ಪ ರಾಜೀನಾಮೆ ನೀಡಿದ್ದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ರವಿ ಚಿಕ್ಕಪ್ಪ ಮಹದೇವಪ್ಪ ಗುಂಡ್ಲುಪೇಟೆ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

'ಗ್ರಾಮದ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ರವಿ ತರಕಾರಿ ವ್ಯಾಪಾರವನ್ನೂ ಮಾಡುತ್ತಿದ್ದರು. ಕೆಲವರಿಂದ ಹಣ ಸಾಲ ಪಡೆದಿದ್ದರು' ಎಂದೂ ಗ್ರಾಮಸ್ಥರು ಹೇಳಿದ್ದಾರೆ. ರವಿ ಸೋಮವಾರ ಸ್ನೇಹಿತರೊಂದಿಗೆ ನೋವು ತೋಡಿಕೊಂಡಿದ್ದು, ಕೆಲಸ ಮಾಡುತ್ತಿದ್ದ ಹೋಟೆಲ್‌ನಲ್ಲೇ ನೇಣುಹಾಕಿಕೊಂಡಿದ್ದಾರೆ ಎನ್ನಲಾಗಿದೆ.

ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಕಾಪು ಸಿದ್ದಲಿಂಗಸ್ವಾಮಿ ರವಿ ಕುಟುಂಬದವರಿಗೆ ಸಾಂತ್ವನ ಹೇಳಿದ್ದು, ಕುಟುಂಬವನ್ನು ಶೀಘ್ರದಲ್ಲಿ ಭೇಟಿ ಮಾಡುವುದಾಗಿ ಯಡಿಯೂರಪ್ಪ ಭರವಸೆ ನೀಡಿದ್ದಾರೆ.

ರವಿ

ಘಟನೆಗೆ ಬೇಸರ ವ್ಯಕ್ತಪಡಿಸಿ ಟ್ವೀಟ್ ಮಾಡಿರುವ ಯಡಿಯೂರಪ್ಪ, 'ಈ ಸುದ್ದಿ ಅತೀವ ನೋವು ಹಾಗೂ ಬೇಸರ ತರಿಸಿದೆ. ರಾಜಕಾರಣದಲ್ಲಿ ಏರಿಳಿತಗಳು ಸಹಜ. ಇದಕ್ಕಾಗಿ ಪ್ರಾಣಾರ್ಪಣೆ ಮಾಡಿಕೊಳ್ಳಲು ಮುಂದಾಗುವುದು ಸರ್ವಥಾ ಒಪ್ಪಲಾಗದು. ಇದರಿಂದ ಕುಟುಂಬಕ್ಕಾಗುವ ನಷ್ಟ ಯಾರಿಂದಲೂ ಭರಿಸಲಾಗದು. ಅಭಿಮಾನ ಅತಿರೇಕಕ್ಕೆ ಹೋಗಬಾರದೆಂದು ಕೈ ಮುಗಿದು ವಿನಂತಿಸುವೆ. ರವಿ ಕುಟುಂಬದ ನೋವಿನೊಂದಿಗೆ ನಾನಿರುವೆ' ಎಂದು ಹೇಳಿದ್ದಾರೆ.

ಬೊಮ್ಮಾಯಿ ಅವರ ಅಕ್ಕ, ಮಾವ ಮೆಚ್ಚುಗೆ ಮಾತು

ಬಸಣ್ಣ ಸಿ.ಎಂ ಆಗ್ತಾನಂತ ನಂಬಿಕೆ ಇತ್ತು

• ಓದೇಶ ಸಕಲೇಶಪುರ

ಹುಬ್ಬಳ್ಳಿ: 'ಬಸಣ್ಣ ಇಂದಲ್ಲ ನಾಳೆ ಮುಖ್ಯಮಂತ್ರಿ ಆಗೇ ಆಗ್ತಾನೆ ಅನ್ನೊ ನಂಬಿಕೆ ನನಗಿತ್ತು. ಇಂದು ಆ ಕನಸು ಈಡೇರಿದೆ. ತಂದೆಯ ಹಾದಿಯಲ್ಲೇ ಸ್ವಚ್ಛ ರಾಜಕಾರಣ ಮಾಡಿದ ಬಸಣ್ಣ ಕಡೆಗೂ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದಾನೆ. ಈಗ ತಂದೆ ಎಸ್. ಆರ್. ಬೊಮ್ಮಾಯಿ ಅವರಿದ್ದಿದ್ದರೆ ಎಷ್ಟು ಖುಷಿಪಡುತ್ತಿದ್ದರೊ....'

– ಮುಖ್ಯಮಂತ್ರಿಯಾಗಿ ಬಸವರಾಜ ಬೊಮ್ಮಾಯಿ ಅವರ ಅಕ್ಕ ಉಮಾ ಪಾಟೀಲ ಹಾಗೂ ಮಾವ ಎನ್.ಎಂ. ಪಾಟೀಲ ಅವರ ಸಂತಸದ ನುಡಿಗಳಿವು. ಬೊಮ್ಮಾಯಿ ಅವರು ಸಿ.ಎಂ ಆದ ವಿಷಯ ಗೊತ್ತಾಗುತ್ತಿದ್ದಂತೆ, ಹುಬ್ಬಳ್ಳಿಯ ಆದರ್ಶನಗರದಲ್ಲಿರುವ ಬೊಮ್ಮಾಯಿ ಅವರ ನಿವಾಸದಲ್ಲಿ ದಂಪತಿ ಪರಸ್ಪರ ಸಿಹಿ ಹಂಚಿ ಸಂಭ್ರಮಿಸಿದರು.

'ಬಸಣ್ಣ ರಾಜಕಾರಣಕ್ಕೆ ಬರುವುದು ತಂದೆಗೆ ಇಷ್ಟವಿರಲಿಲ್ಲ. ಕೆಮಿಕಲ್ ಎಂಜಿನಿಯರಿಂಗ್ ಓದಿದ್ದ ಬಸಣ್ಣ ಕೈಗಾರಿಕೆಯೊಂದನ್ನು ನೋಡಿಕೊಂಡಿದ್ದ. ಆದರೆ, ರಾಜಕೀಯ ಪರಿಸ್ಥಿತಿ ಅನಿವಾರ್ಯವಾಗಿ ರಾಜಕೀಯಕ್ಕೆ ಬರುವಂತೆ ಮಾಡಿತು. ತಂದೆಯಂತೆ ಮಿತಭಾಷಿ ಮತ್ತು ಸಂಕಷ್ಟಕ್ಕೆ ಮಿಡಿಯುವ ಮನೋಭಾವದ ಬಸಣ್ಣ ಮೊದಲ ಚುನಾವಣೆಯಲ್ಲಿ ಸೋತರೂ ನಂತರ, ವಿಧಾನ ಪರಿಷತ್ ಸದಸ್ಯರಾಗಿ, ಸತತ ಮೂರು ಸಲ ಶಾಸಕನಾಗಿ ಗೆದ್ದು ಬಂದ. ಸಚಿವನಾಗಿ ಒಳ್ಳೆಯ ಕೆಲಸಗಳನ್ನು ಮಾಡಿದ' ಎಂದು ಉಮಾ ಪಾಟೀಲ ಮೆಲುಕು ಹಾಕಿದರು.

'ಬಿ.ಎಸ್. ಯಡಿಯೂರಪ್ಪ ಅವರು ರಾಜೀನಾಮೆ ಕೊಟ್ಟ ಬಳಿಕ, ಮುಖ್ಯಮಂತ್ರಿ ಸ್ಥಾನಕ್ಕೆ ಬಸಣ್ಣನ ಹೆಸರಿನ ಜತೆಗೆ, ಹಲವರ ಹೆಸರುಗಳು ಹರಿದಾಡುತ್ತಿದ್ದವು. ಆದರೆ, ಉಳಿದವರೆಲ್ಲರಿಗಿಂತಲೂ ಬಸಣ್ಣನಿಗೆ ಮುಖ್ಯಮಂತ್ರಿಯಾಗಲು ಹೆಚ್ಚಿನ ಅರ್ಹತೆ ಇತ್ತು. ತಂದೆಯಂತೆ ಜಾತಿ ಮೀರಿ ರಾಜಕಾರಣ ಮಾಡಿಕೊಂಡು ಬಂದಿದ್ದಾನೆ. ಯಾವುದೇ ಭ್ರಷ್ಟಾಚಾರದ ಆರೋಪಗಳಿಲ್ಲ. ಜನತಾ ಪಕ್ಷದಲ್ಲಿದ್ದ ತಂದೆ ಪ್ರಧಾನಿ ಹುದ್ದೆಗೇರುವ ಮಟ್ಟಕ್ಕೆ ಹೋಗಿದ್ದರು. ತಂದೆಯ ಹಾದಿಯಲ್ಲೇ ಬಂದ ಬಸಣ್ಣ ಕೂಡ, ಒಂದಲ್ಲ ಒಂದು ಒಂದು ದಿನ ಮುಖ್ಯಮಂತ್ರಿಯಾಗುತ್ತಾನೆ ಎಂಬ ವಿಶ್ವಾಸ ನನಗಿತ್ತು. ಅದು ಇಂದು ನನಸಾಗಿದೆ' ಎಂದು ಸಂಭ್ರಮ ಹಂಚಿಕೊಂಡರು.

ಮೂರನೇ ತಲೆಮಾರಿನ ರಾಜಕಾರಣಿ: 'ಬಸಣ್ಣ ನಮ್ಮ ಕುಟುಂಬದ ಮೂರನೇ ತಲೆಮಾರಿನ ರಾಜಕಾರಣಿ. ನಮ್ಮ ತಾಯಿಯ ತಂದೆ ಮಲ್ಲಪ್ಪ ಹುರಳಿಕೊಪ್ಪ ಅವರು ಬಾಂಬೆ ಪ್ರಾಂತ್ಯವಿದ್ದಾಗ ಶಿಗ್ಗಾವಿಯಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಬಳಿಕ, ನಮ್ಮ ತಂದೆ ರಾಜಕಾರಣ ಪ್ರವೇಶಿಸಿ ಸಿ.ಎಂ ಆಗಿದ್ದರು. ಅವರ ಹಾದಿಯಲ್ಲಿ ಸಾಗಿ, ಇದೀಗ ಮುಖ್ಯಮಂತ್ರಿ ಹುದ್ದೆಗೆ ಆಯ್ಕೆಯಾಗಿದ್ದಾನೆ' ಎಂದರು.

ಅಕ್ಕ ಉಮಾ ಪಾಟೀಲ ಹಾಗೂ ಮಾವ ಎನ್.ಎಂ. ಪಾಟೀಲ ಅವರು ಪರಸ್ಪರ ಸಿಹಿ ತಿನ್ನಿಸಿ ಸಂಭ್ರಮಿಸಿದರು

ಸೆಪ್ಟೆಂಬರ್ ಬಳಿಕ ರಾಜಕೀಯದಲ್ಲಿ ಹೊಸ ಬೆಳವಣಿಗೆ: ಇಬ್ರಾಹಿಂ

ಬೆಂಗಳೂರು: 'ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಯಡಿಯೂರಪ್ಪ ಮೇಲೆ ಒತ್ತಡ ಹಾಕಿರುವುದು ಸರಿಯಲ್ಲ. ಹೀಗೆ ಅಧಿಕಾರ ಹಿಂಪಡೆಯುವುದು ಒಳ್ಳೆಯ ಸಂಪ್ರದಾಯವಲ್ಲ' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಸಿ.ಎಂ. ಇಬ್ರಾಹಿಂ ಅಭಿಪ್ರಾಯಪಟ್ಟರು.

ಯಡಿಯೂರಪ್ಪ ಅವರನ್ನು ಮಂಗಳವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ನಾನು ಅವರ ಮನೆ, ಕಚೇರಿಗೆ ಹೋದವನಲ್ಲ. ಜೈ ವೀರಭದ್ರ ಎದ್ದೇಳು, ರುದ್ರಾ ರೆಡಿಯಾಗಿ ಎಂದು ಧೈರ್ಯ ಹೇಳಲು ಈಗ ಬಂದಿದ್ದೇನೆ. ಸೆಪ್ಟೆಂಬರ್ ನಂತರ ರಾಜಕೀಯದಲ್ಲಿ ಹೊಸ ಬೆಳವಣಿಗೆ ಆಗಲಿದೆ ಕಾದುನೋಡಿ' ಎಂದು ಭವಿಷ್ಯ ನುಡಿದರು.

'ಸೆಪ್ಟೆಂಬರ್‌ನಲ್ಲಿ ನಾವು (ಕಾಂಗ್ರೆಸ್) ರಾಜ್ಯದಲ್ಲಿ ಅಲ್ಪಸಂಖ್ಯಾತ ಸಭೆ ಮಾಡುತ್ತೇವೆ. ಜೂನ್, ಜುಲೈ, ಆಗಸ್ಟ್‌ನಲ್ಲಿ ರಾಜಕೀಯ ವಿಕೇಂದ್ರೀಕರಣ ಆಗಲಿದೆ ಎಂದು ಹಿಂದೆಯೇ ಹೇಳಿದ್ದೆ. ಕೇಶವಕೃಪ (ಆರೆಸ್ಸೆಸ್ ಕಚೇರಿ) ಎನ್ನುವುದು ಬಸವ ಕೃಪ ಆಗಿದೆ' ಎಂದರು.

'ಯಡಿಯೂರಪ್ಪ ಲವಲವಿಕೆಯಿಂದ ಇದ್ದಾರೆ. ಅವರು ರಾಜ್ಯಪಾಲ ಹುದ್ದೆ ತಿರಸ್ಕರಿಸಿದ್ದಾರೆ. ಕನ್ನಡಿಗರು ನೀಡುವವರು, ಬೇಡುವವರಲ್ಲ. ಅವರ ಮೇಲೆ ಆರೋಪ, ಪ್ರತ್ಯಾರೋಪ ಇರಬಹುದು. ಅದು ಬೇರೆ ವಿಷಯ. ಅಧಿಕಾರ ಇದ್ದಾಗ ನಾನು ದೂರ ಇರುವ ಮನುಷ್ಯ. ರಾಜೀನಾಮೆ ನೀಡಿರುವುದರಿಂದ ಭೇಟಿ ಮಾಡಲು ಬಂದಿದ್ದೇನೆ' ಎಂದು ಸಮರ್ಥಿಸಿದರು. ಯಡಿಯೂರಪ್ಪ ಬದಲಾವಣೆಯ ಬಗ್ಗೆ ಮಾತನಾಡಿದ ಅವರು, 'ಒರಿಜಿನಲ್ ಕಾಪಿ ಇಲ್ಲ. ಜೆರಾಕ್ಸ್ ತಗೊಂಡು ಏನು ಮಾಡುವುದು. ಯಡಿಯೂರಪ್ಪ ಅವರನ್ನು ಬಿಟ್ಟು ಮುಖ್ಯಮಂತ್ರಿ ಯಾರೇ ಆಗಲಿ, ನಮ್ಮ ಜನ ಒಪ್ಪಲ್ಲ. ನಾನು ಏನು ಹೇಳಿದರೂ ನಂಬುತ್ತಿರಲಿಲ್ಲ. ಈಗ ನನ್ನ ಅಂದಾಜಿನ ಪ್ರಕಾರವೇ ನಡೆದಿದೆ' ಎಂದರು.

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಸಂವಾದ
ಹೊಸ ಮುಖ್ಯಮಂತ್ರಿಯ ಮುಂದಿರುವ ಸವಾಲುಗಳೇನು?
ಸಂವಾದದಲ್ಲಿ ಭಾಗವಹಿಸುವವರು

ಕ್ಯಾಪ್ಟನ್ ಗೋಪಿನಾಥ್, ಅಂಕಣಕಾರ

ಡಾ. ವಾಮನ ಆಚಾರ್ಯ, ಬಿಜೆಪಿ ರಾಜ್ಯ ಮುಖಂಡ

ಕೆ.ಟಿ. ಶ್ರೀಕಂಠೇಗೌಡ, ಎಂ. ಎಲ್‌ಸಿ ಜೆಡಿ-ಎಸ್

ಮೋಹನ್ ಕೊಂಡಜ್ಜಿ, ಎಂ. ಎಲ್‌ಸಿ ಕಾಂಗ್ರೆಸ್
ಬುಧವಾರ, 28-7-2021 ಸಮಯ- ಸಂಜೆ 4 ರಿಂದ 5

ಪ್ರಜಾವಾಣಿ LIVE
prajavani.net prajavani prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಜಾಂಡಿಸ್ ಮತ್ತು ಹೆಪಟೈಟಿಸ್ ಬಿ, ಸಿ

'ವಿಶ್ವ ಹೆಪಟೈಟಿಸ್ ದಿನ'ದ ಅಂಗವಾಗಿ ಜಾಂಡಿಸ್, ಹೆಪಟೈಟಿಸ್ ಬಿ, ಸಿ ಮತ್ತು ಯಕೃತ್ತಿನ ಸಮಸ್ಯೆಗಳು ಹಾಗೂ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಾತನಾಡಲಿದ್ದಾರೆ ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ ಫೋರ್ಟಿಸ್ ಆಸ್ಪತ್ರೆಯ ವೈದ್ಯ ಡಾ. ರವೀಂದ್ರ ಬಿ. ಎಸ್.
ನೀವೂ ಪ್ರಶ್ನೆಗಳನ್ನು ಕೇಳಬಹುದು
ಇಂದು ಬೆಳಿಗ್ಗೆ 11 ಕ್ಕೆ

ಪ್ರಜಾವಾಣಿ
ಗ್ರೀನ್ ಟಾಕ್ | ಪ್ರಕೃತಿ ಮಡಿಲ ಮಾತು

ಕೆರೆಗೆ ಕಂಠಹಾರ
ಏಳು ಕೆರೆ ನೀರು ಕುಡಿದ್ದೇನೆ ಎನ್ನುವವರು ಈಗ, ಇಂದಿನ ಜಲಕಲ್ಮಶ ಕಾಲದಲ್ಲಿ ಅದನ್ನು ನಿಜವಾಗಿಸಲು ಸಾಧ್ಯವೇ? ಖಂಡಿತಾ, ಕಂಠಹಾರ ಕೆರೆಯಲ್ಲಿ ಮಾತ್ರ ಅದು ಸಾಧ್ಯ...
https://bit.ly/3BKzAth

ಬಿಬಿಎಂಪಿ ಜಾಹೀರಾತು ನಿಯಮ ಜಾರಿ ಅಧಿಸೂಚನೆ ● ಜಾಹೀರಾತು ಏಜೆನ್ಸಿಗಳ ಲಾಬಿಗೆ ಮಣಿಯಿತೇ ಸರ್ಕಾರ?

ನಗರದಲ್ಲಿ ಮತ್ತೆ ಹೋರ್ಡಿಂಗ್‌ಗೆ ಅವಕಾಶ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಖಾಸಗಿ ಜಾಹೀರಾತು ಏಜೆನ್ಸಿಗಳು ಬೇಕಾಬಿಟ್ಟಿ ಹೋರ್ಡಿಂಗ್‌ಗಳನ್ನು ಅಳವಡಿಸುವುದಕ್ಕೆ ಇದ್ದ ನಿರ್ಬಂಧ ಕೊನೆಗೊಂಡಿದೆ. ಹೋರ್ಡಿಂಗ್‌ಗಳನ್ನು ಅಳವಡಿಸಲು ಅವಕಾಶ ಕಲ್ಪಿಸುವ 'ಬಿಬಿಎಂಪಿ ಜಾಹೀರಾತು ನಿಯಮಗಳು 2019' ಜಾರಿಗೆ ಬಿಜೆಪಿ ಸರ್ಕಾರವು 2021ರ ಜುಲೈ 26ರಂದು ಅಧಿಸೂಚನೆ ಹೊರಡಿಸಿದೆ.

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಮುನ್ನ ಬಿ.ಎಸ್. ಯಡಿಯೂರಪ್ಪ ತರಾತುರಿಯಲ್ಲಿ ಸಹಿ ಹಾಕಿದ ಕಡತಗಳಲ್ಲಿ ಇದೂ ಒಂದು. ಅಚ್ಚರಿ ಎಂದರೆ, 'ಬಿಬಿಎಂಪಿ ಜಾಹೀರಾತು ನಿಯಮಗಳು–2019' ಸ್ವತಃ ಬಿಬಿಎಂಪಿ 2018ರಲ್ಲಿ ಅಂಗೀಕರಿಸಿರುವ ಜಾಹೀರಾತು ನೀತಿಯ ಆಶಯಗಳಿಗೆ ಹಾಗೂ ಅದರನ್ವಯ ಬಿಬಿಎಂಪಿ ರೂಪಿಸಿರುವ ಬೈಲಾಗಳಿಗೆ ತದ್ವಿರುದ್ಧವಾಗಿದೆ. ನಗರದಲ್ಲಿ ಖಾಸಗಿ ಹಾಗೂ ವಾಣಿಜ್ಯ ಉದ್ದೇಶದ ಹೋರ್ಡಿಂಗ್‌ಗಳ ಅಳವಡಿಕೆಯನ್ನು ಬಿಬಿಎಂಪಿ ಬೈಲಾದಲ್ಲಿ ಸಂಪೂರ್ಣ ನಿಷೇಧಿಸಲಾಗಿತ್ತು.

ಹೈಕೋರ್ಟ್ ಸೂಚನೆ ಮೇಲೆ ಜಾರಿಗೊಳಿಸಲಾದ ಹೋರ್ಡಿಂಗ್ ನಿಷೇಧ ತೆರವುಗೊಳಿಸುವ ಧೈರ್ಯವನ್ನು 2018ರ ಬಳಿಕದ ಯಾವುದೇ ಸರ್ಕಾರವೂ ತೋರಿಸಿರಲಿಲ್ಲ. ಹೋರ್ಡಿಂಗ್‌ಗಳ ಅಳವಡಿಕೆಗೆ ಮತ್ತೆ ಅವಕಾಶ ನೀಡುವಂತೆ ಜಾಹೀರಾತು ಏಜೆನ್ಸಿಗಳು ಆಗಿನಿಂದಲೂ ಸರ್ಕಾರದ ಮೇಲೆ ಒತ್ತಡ ಹೇರುತ್ತಲೇ ಇದ್ದವು. ನಗರದಲ್ಲಿ ಹೊರಾಂಗಣ ಜಾಹೀರಾತುಗಳ ಸಂಪೂರ್ಣ ನಿಷೇಧ ಮಾಡುವುದನ್ನು ಬಿಬಿಎಂಪಿಯಲ್ಲಿ ವಿರೋಧ ಪಕ್ಷವಾಗಿದ್ದ ಬಿಜೆಪಿಯೂ ಬೆಂಬಲಿಸಿತ್ತು. ಬಿಜೆಪಿಯ ಸದಸ್ಯರೇ ಈ ನಿಷೇಧದ ಪರವಾಗಿ ಕೌನ್ಸಿಲ್ ಸಭೆಯಲ್ಲಿ ಮಾತನಾಡಿದ್ದರು. ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ನಿಷೇಧ ತೆರವಿಗೆ ಪ್ರಯತ್ನ ನಡೆದಾಗಲೂ ಬಿಜೆಪಿ ಬಲವಾಗಿ ವಿರೋಧಿಸಿತ್ತು. ಈಗ ಬಿಜೆಪಿ ನೇತೃತ್ವದ ಸರ್ಕಾರವೇ ಜಾಹೀರಾತು ಲಾಬಿಗೆ ಮಣಿದು ಈ ನಿರ್ಧಾರ ಕೈಗೊಂಡಿತೇ ಎಂಬ ಶಂಕೆ ವ್ಯಕ್ತವಾಗಿದೆ.

25 ಮೀ ಎತ್ತರದವರೆಗಿನ ಹೋರ್ಡಿಂಗ್‌ಗೆ ಅವಕಾಶ: ನೆಲದಲ್ಲಿ ಅಳವಡಿಸುವ ಹೋರ್ಡಿಂಗ್ ಮಾತ್ರವಲ್ಲ, ಕಟ್ಟಡದ ಮೇಲಿನ ಹೋರ್ಡಿಂಗ್, ಒಂದರ ಹಿಂದೆ ಒಂದರಂತೆ ಅಳವಡಿಸುವ ಸ್ಯಾಂಡ್‌ವಿಚ್, ಕಿಯಾಸ್ಕ್‌ಗಳು ಹಾಗೂ ನಿಯಾನ್ ಸೈನ್ ಹೋರ್ಡಿಂಗ್‌ಗಳಿಗೂ ಅವಕಾಶ ಕಲ್ಪಿಸಲಾಗುತ್ತಿದೆ.

ಹೊಸ ಜಾಹೀರಾತು ನಿಯಮದಲ್ಲಿ ವಾಣಿಜ್ಯ ಉದ್ದೇಶಗಳಿಗೆ ಹೋರ್ಡಿಂಗ್ ಅಳವಡಿಸುವುದಕ್ಕೆ ಅವಕಾಶ ನೀಡಲಾಗಿದ್ದರೂ, ಅವುಗಳ ಗಾತ್ರಗಳಿಗೆ ಸಂಬಂಧಿಸಿ ಕೆಲವು ನಿರ್ಬಂಧ ಹೇರಲಾಗಿದೆ. ರಸ್ತೆ ಮಟ್ಟಕ್ಕಿಂತ 25 ಮೀ ಎತ್ತರದವರೆಗಿನ ಹೋರ್ಡಿಂಗ್‌ಗೆ ಅನುಮತಿ ನೀಡಲಾಗುತ್ತದೆ.

ಕಟ್ಟಡದ ಮೇಲೂ ಹೋರ್ಡಿಂಗ್ ಅಳವಡಿಸಲು ಅವಕಾಶವಿದೆ. ಆದರೆ, ಅವುಗಳ ಗರಿಷ್ಠ ಎತ್ತರ ಚಾವಣಿ ಮಟ್ಟದಿಂದ 12.2 ಮೀಟರ್‌ಗಳಿಗಿಂತ ಹೆಚ್ಚು ಇರುವಂತಿಲ್ಲ. ಅಂಚಿನಿಂದ ಕನಿಷ್ಠ 1.5 ಮೀ ಅಂತರ ಕಾಪಾಡಬೇಕು. ಹೋರ್ಡಿಂಗ್‌ನ ಕೆಳ ಅಂಚು ನೆಲ ಮಟ್ಟದಿಂದ 10 ಅಡಿಗಳಿಗಿಂತ (3.05 ಮೀ) ಕಡಿಮೆ ಇರುವಂತಿಲ್ಲ.

ಇವುಗಳಿಗೆ ಇಲ್ಲ ಅನುಮತಿ: ಸಂಚಾರ ದ್ವೀಪಗಳಲ್ಲಿ, ಸಿಗ್ನಲ್ ಜಂಕ್ಷನ್‌ಗಳಲ್ಲಿ ನಿಲುಗಡೆ ರೇಖೆಯಿಂದ 25 ಮೀ ವ್ಯಾಪ್ತಿಯಲ್ಲಿ ಹೋರ್ಡಿಂಗ್ ಅಳವಡಿಸುವಂತಿಲ್ಲ. ಜಾಹೀರಾತುಗಳಿಗೆ ಡೀಸೆಲ್ ಜನರೇಟರ್ ಬಳಸುವಂತಿಲ್ಲ. 400 ಚ.ಮೀ ವಿಸ್ತೀರ್ಣದಲ್ಲಿ ಎರಡಕ್ಕಿಂತ ಹೆಚ್ಚು ಹೋರ್ಡಿಂಗ್‌ಗೆ ಅವಕಾಶ ಇಲ್ಲ. ಪಾದಚಾರಿ ಮಾರ್ಗಗಳಲ್ಲಿ ಇವುಗಳನ್ನು ಅಳವಡಿಸುವಂತಿಲ್ಲ. ಎರಡು ಹೋರ್ಡಿಂಗ್‌ಗಳನ್ನು ಜೋಡಿಸುವಂತಿಲ್ಲ.

ಅನಧಿಕೃತ, ಅಶ್ಲೀಲ ಅಥವಾ ಆಕ್ಷೇಪಾರ್ಹ ಹೋರ್ಡಿಂಗ್‌ಗೆ ಮುಖ್ಯ ಆಯುಕ್ತರು ಅನುಮತಿ ನಿರಾಕರಿಸಬಹುದು. ಏಳು ದಿನಗಳ ಒಳಗೆ ಅಂತಹ ಜಾಹೀರಾತು ತೆರವುಗೊಳಿಸುವಂತೆ ಆದೇಶದ ನೀಡುವ ಅಧಿಕಾರ ಮುಖ್ಯ ಆಯುಕ್ತರಿಗೆ ಇದೆ. ಯಾವುದಾದರೂ ದೂರು ಬಂದರೆ ಅಥವಾ ಸ್ವಯಂಪ್ರೇರಿತವಾಗಿ ಈ ಕ್ರಮ ಕೈಗೊಳ್ಳಬಹುದು. ತೆರವುಗೊಳಿಸದಿದ್ದರೆ ಬಿಬಿಎಂಪಿಯಿಂದಲೇ ಅದನ್ನು ತೆರವುಗೊಳಿಸಿ ಅದಕ್ಕೆ ತಗುಲಿದ ವೆಚ್ಚವನ್ನು ಆ ಹೋರ್ಡಿಂಗ್‌ನ ಮಾಲೀಕರಿಂದ ವಸೂಲಿ ಮಾಡಬಹುದು.

ಹೈಕೋರ್ಟ್ ಚಾಟಿ ಬೀಸಿದ್ದರಿಂದ ಜಾರಿಯಾಗಿತ್ತು ನಿಷೇಧ

ನಗರದಲ್ಲಿ ಬೇಕಾಬಿಟ್ಟಿ ಜಾಹೀರಾತು ಅಳವಡಿಸುತ್ತಿರುವ ಬಗ್ಗೆ ಹೈಕೋರ್ಟ್ 2018ರಲ್ಲಿ ಕೆಂಡಾಮಂಡಲವಾಗಿತ್ತು. ನಗರದಲ್ಲಿರುವ ಎಲ್ಲ ಅನಧಿಕೃತ ಹೊರಾಂಗಣ ಜಾಹೀರಾತುಗಳನ್ನು ತೆರವುಗೊಳಿಸುವಂತೆ 2018ರ ಆ.1ರಂದು ಹೈಕೋರ್ಟ್ ಸೂಚನೆ ನೀಡಿತ್ತು. ನ್ಯಾಯಾಲಯದ ಆದೇಶದ ಮೇರೆಗೆ ಬಿಬಿಎಂಪಿ ಕೌನ್ಸಿಲ್ ಸಭೆಯು 'ಹೊರಾಂಗಣ ಸೈನೇಜ್ ಮತ್ತು ಸಾರ್ವಜನಿಕ ಸಂದೇಶ ನೀತಿ ಹಾಗೂ ಹೊರಾಂಗಣ ಜಾಹೀರಾತು ಮತ್ತು ಸಾರ್ವಜನಿಕ ಸಂದೇಶ ಬೈಲಾ -2018' ಅನ್ನು ಸರ್ವಾನುಮತದಿಂದ ಅಂಗೀಕರಿಸಿತ್ತು. ಈ ನೀತಿಗೆ ನಗರಾಭಿವೃದ್ಧಿ ಇಲಾಖೆ 2018ರ ಸೆ.11ರಂದು ಅನುಮೋದನೆಯನ್ನೂ ನೀಡಿತ್ತು. ಅದರ ಪ್ರಕಾರ, ನಗರದಲ್ಲಿ ವಾಣಿಜ್ಯ ಉದ್ದೇಶದ ಹೋರ್ಡಿಂಗ್‌ಗಳನ್ನು ನಿರ್ಬಂಧಿಸಲಾಗಿತ್ತು.

ಹೋರ್ಡಿಂಗ್ ಮಾಫಿಯಾಕ್ಕೆ ಮಣೆ 1

ಮೂರು ವರ್ಷಗಳಲ್ಲಿ ನಡೆದಿದ್ದೇನು?

2018 ಆ. 01: ನಗರದಲ್ಲಿ ಎಲ್ಲ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಿ ಎಂದ ಹೈಕೋರ್ಟ್

2018 ಆ.6: ಒಂದು ವರ್ಷ ಹೊರಾಂಗಣ ಜಾಹೀರಾತು ನಿಷೇಧಿಸಿ ಪಾಲಿಕೆ ಕೌನ್ಸಿಲ್ ಸಭೆ ನಿರ್ಣಯ

2018 ಆ.28: 'ಹೊರಾಂಗಣ ಸೈನೇಜ್ ಮತ್ತು ಸಾರ್ವಜನಿಕ ಸಂದೇಶ ನೀತಿ ಹಾಗೂ ಹೊರಾಂಗಣ ಜಾಹೀರಾತು ಮತ್ತು ಸಾರ್ವಜನಿಕ ಸಂದೇಶ ಬೈಲಾ -2018'ಕ್ಕೆ ಪಾಲಿಕೆ ಕೌನ್ಸಿಲ್ ಸಭೆ ಅನುಮೋದನೆ

2018ರ ಸೆ. 11: ಬೈಲಾ ಕರಡು ರಾಜ್ಯಪತ್ರದಲ್ಲಿ ಪ್ರಕಟ– ಸಾರ್ವಜನಿಕರಿಂದ ಸಲಹೆ ಆಹ್ವಾನ ಎರಡು ತಿಂಗಳ ಬಳಿಕ ಸರ್ಕಾರಕ್ಕೆ ಪರಿಷ್ಕೃತ ಕರಡು ಸಲ್ಲಿಕೆ.

2019ರ ಫೆ.6: ಜಾಹೀರಾತು ನಿಷೇಧಿಸುವ ಪಾಲಿಕೆ ನಿರ್ಣಯಕ್ಕೆ ಹೈಕೋರ್ಟ್ ಏಕ ಸದಸ್ಯ ಪೀಠದಿಂದ ತಡೆ

2019ರ ಫೆ.7: ಏಕ ಸದಸ್ಯ ಪೀಠದ ಆದೇಶ ರದ್ದುಪಡಿಸಿದ ವಿಭಾಗೀಯ ನ್ಯಾಯಪೀಠ

2019 ಜು 15: 'ಬಿಬಿಎಂಪಿ ಜಾಹೀರಾತು ನಿಯಮ 2019'ರ ಕರಡು ಅಧಿಸೂಚನೆ ಪ್ರಕಟಿಸಿದ ನಗರಾಭಿವೃದ್ಧಿ ಇಲಾಖೆ

2021ರ ಜು 26: 'ಬಿಬಿಎಂಪಿ ಜಾಹೀರಾತು ನಿಯಮ 2019' ಅಂತಿಮ ಅಧಿಸೂಚನೆ ಪ್ರಕಟ

ಇವುಗಳಿಗೆ ನಿಷೇಧ ಮುಂದುವರಿಕೆ

- ನಗರದ ಸೌಂದರ್ಯಕ್ಕೆ ಧಕ್ಕೆ ತರುವ ಭಿತ್ತಿಪತ್ರಗಳು ಹಾಗೂ ಬಿತ್ತಿ ಬರಹಗಳು
- ಮರಗಳಿಗೆ ಯಾವುದೇ ತರಹದ ಜಾಹೀರಾತು ಹಚ್ಚುವುದು, ಮೊಳೆ ಹೊಡೆದು ಅಳವಡಿಸುವುದು, ಕಟ್ಟುವುದು.
- ಪ್ರಾಣಿಗಳ ಮೇಲೆ, ಅವುಗಳನ್ನು ಸಾಗಿಸುವ ವಾಹನಗಳಲ್ಲಿ ಜಾಹೀರಾತು ಅಳವಡಿಕೆ ಹಾಗೂ ಜಾಹೀರಾತಿಗೆ ಪ್ರಾಣಿಗಳ ಬಳಕೆ

ಕಟ್ಟಡದಲ್ಲೂ ಹೋರ್ಡಿಂಗ್‌ಗೆ ಅವಕಾಶ

ಹೊಸ ನಿಯಮದ ಪ್ರಕಾರ ಕಟ್ಟಡದ ಮೇಲೂ ಹೋರ್ಡಿಂಗ್ ಅಳವಡಿಸಲು ಅವಕಾಶವಿದೆ. ಆದರೆ, ಅವುಗಳ ಗರಿಷ್ಠ ಎತ್ತರ ಚಾವಣಿ ಮಟ್ಟದಿಂದ 12.2 ಮೀಟರ್‌ಗಳಿಗಿಂತ ಹೆಚ್ಚು ಇರುವಂತಿಲ್ಲ. ಅಂಚಿನಿಂದ ಕನಿಷ್ಠ 1.5 ಮೀ ಅಂತರ ಕಾಪಾಡಬೇಕು. ಹೋರ್ಡಿಂಗ್‌ನ ಕೆಳ ಅಂಚು ನೆಲ ಮಟ್ಟದಿಂದ 10 ಅಡಿಗಳಿಗಿಂತ (3.05 ಮೀ) ಕಡಿಮೆ ಇರುವಂತಿಲ್ಲ.

ಶಾಲೆಗಳಲ್ಲಿ 'ಬುಕ್ ಬ್ಯಾಂಕ್' ನಿರ್ವಹಿಸಲು ಸೂಚನೆ

ಬೆಂಗಳೂರು: ಪಠ್ಯಪುಸ್ತಕಗಳು ಸಿಗದೆ ವಿದ್ಯಾರ್ಥಿಗಳ ಕಲಿಕೆಗೆ ತೊಂದರೆ ಆಗದಂತೆ ಮಾಡಲು ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿಯೂ ಎಲ್ಲ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ 'ಬುಕ್ ಬ್ಯಾಂಕ್' ಚಟುವಟಿಕೆಯನ್ನು ನಿರ್ವಹಿಸಬೇಕು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಈ ಯೋಜನೆಯಡಿಯಲ್ಲಿ ಸಂಗ್ರಹಿಸುವ ಪಠ್ಯ ಪುಸ್ತಕಗಳನ್ನು ಆಯಾಯ ಶೈಕ್ಷಣಿಕ ಸಾಲಿನಲ್ಲಿ ಶಾಲೆ ಆರಂಭವಾದ ಕೂಡಲೇ ವಿದ್ಯಾರ್ಥಿಗಳ ಕಲಿಕೆಗೆ ಬಳಸಿಕೊಳ್ಳಬೇಕು. ಹೊಸ ಪಠ್ಯ ಪುಸ್ತಕಗಳು ವಿತರಣೆಯಾದ ತಕ್ಷಣ, ಹೀಗೆ ವಿತರಿಸಿರುವ ಪುಸ್ತಕಗಳನ್ನು ವಾಪಸು ಪಡೆದು ಗ್ರಾಮ ಪಂಚಾಯಿತಿ ಅಥವಾ ಶಾಲಾ ಗ್ರಂಥಾಲಯಗಳಲ್ಲಿ ಕಾಯ್ದಿರಿಸಬೇಕು ಎಂದು ತಿಳಿಸಲಾಗಿದೆ.

ಪ್ರಕೃತಿ ವಿಕೋಪ, ವಲಸೆ, ಅಥವಾ ಇತರ ವಿಶೇಷ ಸಂದರ್ಭಗಳಲ್ಲಿ ಬುಕ್ ಬ್ಯಾಂಕ್‌ನಲ್ಲಿರುವ ಪುಸ್ತಕಗಳನ್ನು ಬಳಸಿಕೊಳ್ಳಬೇಕು. ಎಂದೂ ಇಲಾಖೆಯ ಆಯುಕ್ತರು ತಿಳಿಸಿದ್ದಾರೆ.

ಬೆಳಗಾವಿ: ₹230 ಕೋಟಿ ಹಾನಿ

ಬೆಳಗಾವಿ: ಜಿಲ್ಲೆಯಲ್ಲಿ ಕೃಷ್ಣಾ, ವೇದಗಂಗಾ, ದೂಧ್‌ಗಂಗಾ, ಮಾರ್ಕಂಡೇಯ, ಹಿರಣ್ಯಕೇಶಿ, ಮಲಪ್ರಭಾ ಮತ್ತು ಘಟಪ್ರಭಾ ನದಿಗಳು ಉಕ್ಕಿ ಹರಿದಿವೆ. ಜೊತೆಗೆ ಅತಿವೃಷ್ಟಿಯೂ ಬಾಧಿಸಿದೆ.

ಪ್ರಾಥಮಿಕ ವರದಿಗಳ ಪ್ರಕಾರ, ಜಿಲ್ಲೆಯಲ್ಲಿ 39 ಸಾವಿರ ಹೆಕ್ಟೇರ್‌ನಲ್ಲಿ ಬೆಳೆ ಹಾನಿಯಾಗಿದೆ. ಪ್ರವಾದ ಪರಿಣಾಮ, ಕಬ್ಬು, ಶೇಂಗಾ, ಹೆಸರು, ಸೋಯಾಬೀನ್, ಈರುಳ್ಳಿ, ಭತ್ತ ಕೊಳೆಯುವ ಭೀತಿಯೂ ರೈತರಿಗೆ ಕಾಡುತ್ತಿದೆ. 40 ಮನೆಗಳು ಸಂಪೂರ್ಣ ಮತ್ತು 1,300 ಮನೆಗಳು ಭಾಗಶಃ ಹಾನಿಗೊಳಗಾಗಿವೆ. 10 ಪರಿವರ್ತಕಗಳು, 94 ವಿದ್ಯುತ್ ಕಂಬಗಳು, 52 ಸೇತುವೆಗಳು, 40 ಸರ್ಕಾರಿ ಕಟ್ಟಡಗಳಿಗೆ ಹಾನಿಯಾಗಿದೆ. 893 ಕಿ.ಮೀ. ರಸ್ತೆ ಹಾಳಾಗಿದೆ. ₹ 230 ಕೋಟಿ ನಷ್ಟ ಆಗಿದೆ ಎಂದು ಜಿಲ್ಲಾಡಳಿತ ಅಂದಾಜಿಸಿದೆ ಎಂದು ಮೂಲಗಳು ತಿಳಿಸಿವೆ.

ಕರಾವಳಿಯಲ್ಲಿ ತಗ್ಗಿದ ಮಳೆ

ಮಂಗಳೂರು/ ಮೈಸೂರು: ಕರಾವಳಿ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆಯ ಅಬ್ಬರ ಕಡಿಮೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2 ಮನೆಗಳು ಪೂರ್ಣ, 4 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನಲ್ಲಿ ಮಳೆ ಇಳಿಮುಖವಾಗಿದೆ. ಉಡುಪಿ ಜಿಲ್ಲೆ ಹಾಗೂ ಮೈಸೂರಿನಲ್ಲಿ ಸಾಧಾರಣ ಮಳೆಯಾಗಿದೆ. ಕೊಡಗು, ಹಾಸನ ಜಿಲ್ಲೆಗಳಲ್ಲಿ ಮಂಗಳವಾರ ಮಳೆ ಕಡಿಮೆಯಾಗಿದೆ. ಕೊಡಗು ಜಿಲ್ಲೆಯ ಮಡಿಕೇರಿ, ನಾಪೋಕ್ಲು, ಸುಂಟಿಕೊಪ್ಪ, ವಿರಾಜಪೇಟೆಯಲ್ಲಿ ತುಂತುರು ಮಳೆಯಾಗಿದೆ.

ಘಟಪ್ರಭಾ, ಮಲಪ್ರಭಾ ನದಿಗಳಲ್ಲಿ ಯಥಾಸ್ಥಿತಿ: ರಾಷ್ಟ್ರೀಯ ಹೆದ್ದಾರಿಗೆ ತೀವ್ರ ಹಾನಿ

ಪ್ರವಾಹ: ಕೃಷ್ಣೆ ಆರ್ಭಟ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಜಿಲ್ಲೆಯಲ್ಲಿ ಕೃಷ್ಣಾ, ಘಟಪ್ರಭಾ ಹಾಗೂ ಮಲಪ್ರಭಾ ನದಿಗಳಲ್ಲಿ ಪ್ರವಾಹ ಪರಿಸ್ಥಿತಿ ಮಂಗಳವಾರವೂ ಮುಂದುವರಿದಿದೆ. ಘಟಪ್ರಭಾ ಹಾಗೂ ಮಲಪ್ರಭಾ ನದಿಗಳಲ್ಲಿ ಪ್ರವಾಹದ ತೀವ್ರತೆ ಸೋಮವಾರದಂತೆ ಯಥಾ ಸ್ಥಿತಿಯೇ ಇದೆ.

ಕೋಯ್ನಾ ಜಲಾಶಯದಿಂದ ನೀರು ಬಿಟ್ಟಿರುವ ಕಾರಣ ಕೃಷ್ಣೆಯಲ್ಲಿ ನೀರಿನ ಹರಿವು ಏರಿಕೆಯಾಗಿದೆ. ಜಮಖಂಡಿ ತಾಲ್ಲೂಕಿನ 18 ಗ್ರಾಮಗಳಿಗೆ ಪ್ರವಾಹದ ನೀರು ನುಗ್ಗಿದೆ. ಶೂರ್ಪಾಲಿ ಗ್ರಾಮದ ಲಕ್ಷ್ಮೀ-ನರಸಿಂಹಸ್ವಾಮಿ ದೇವಸ್ಥಾನ ಜಲಾವೃತವಾಗಿದೆ.

ನೆರೆ ಸಂತ್ರಸ್ತರ ನೆರವಿಗೆ 42 ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಜಿಲ್ಲಾಡಳಿತ ಹೇಳಿದ್ದರೂ, ಪ್ರವಾಹದಿಂದ ತೀವ್ರ ಪರಿಣಾಮಕ್ಕೆ ಗುರಿಯಾಗಿರುವ ಜಮಖಂಡಿ ತಾಲ್ಲೂಕಿನಲ್ಲಿ ಹಿರೇಪಡಸಲಗಿ, ಆಲಗೂರು ಮತ್ತು ಸಾವಳಗಿ ಬಳಿಯ ನಾಕೂರು ಪುನರ್ವಸತಿ ಕೇಂದ್ರದಲ್ಲಿ ಮಾತ್ರ ಕಾಳಜಿ ಕೇಂದ್ರಗಳು ಚಾಲನೆಯಲ್ಲಿರುವುದು 'ಪ್ರಜಾವಾಣಿ' ಭೇಟಿ ನೀಡಿದಾಗ ಕಂಡುಬಂದಿತು.

ಘಟಪ್ರಭಾ ನದಿ ನೀರು ಮುಧೋಳ ತಾಲ್ಲೂಕಿನ ಆಲಗುಂಡಿ ಗ್ರಾಮಕ್ಕೆ ನುಗ್ಗಿದೆ. ಹೊಲ-ಕಬ್ಬಿನ ಗದ್ದೆಗಳು ಮುಳುಗಿವೆ. ನೀರು ಪ್ರಮಾಣ ಹೆಚ್ಚಾದಂತೆ ಗ್ರಾಮಸ್ಥರೂ ಮನೆ ಖಾಲಿ ಮಾಡಿದ್ದಾರೆ.

ಮಲಪ್ರಭಾ ನದಿ ಪ್ರವಾಹದಿಂದ ಹುಬ್ಬಳ್ಳಿ-ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ 218ಕ್ಕೆ ಭಾರೀ ಹಾನಿಯಾಗಿದೆ. ಬಾದಾಮಿ ತಾಲ್ಲೂಕಿನ ಗೋವನಕೊಪ್ಪ-ಗದಗ ಜಿಲ್ಲೆ ನರಗುಂದ ತಾಲ್ಲೂಕಿನ ಕೊಣ್ಣೂರು ಸಂಪರ್ಕಿಸುವ ರಸ್ತೆಯ ಮೇಲೆ ಇನ್ನೂ ನೀರು ಹರಿಯುತ್ತಿದೆ. ಹೊರ ರಾಜ್ಯದ ಸರಕು ಸಾಗಣೆ ಲಾರಿಗಳು ಹೆದ್ದಾರಿಯಲ್ಲಿ ಸಾಲುಗಟ್ಟಿವೆ.

ಸವದಿ- ರೈತ ಶವವಾಗಿ ಪತ್ತೆ: ಮಹಾರಾಷ್ಟ್ರದಿಂದ ಕೃಷ್ಣಾ ನದಿಗೆ ಬಂದು ಸೇರುತ್ತಿರುವ ನೀರಿನ ಪ್ರಮಾಣದಲ್ಲಿ ಇಳಿಕೆ ಕಂಡುಬಂದಿಲ್ಲ. ಆ ರಾಜ್ಯದ ರಾಜಾಪುರ ಬ್ಯಾರೇಜ್‌ನಿಂದ 3.40 ಲಕ್ಷ ಕ್ಯುಸೆಕ್ ನೀರು ಬಿಡಲಾಗಿದೆ. ಇದೂ ಸೇರಿದಂತೆ 3.91 ಲಕ್ಷ ಕ್ಯುಸೆಕ್ ನೀರು ಬೆಳಗಾವಿ ಜಿಲ್ಲೆಯಲ್ಲಿ ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣೆಗೆ ಸೇರುತ್ತಿದೆ. ಚಿಕ್ಕೋಡಿ, ಅಥಣಿ, ಕಾಗವಾಡ, ರಾಯಬಾಗ ತಾಲ್ಲೂಕುಗಳಲ್ಲಿನ ಸೇತುವೆಗಳು ಮುಳುಗಡೆ ಸ್ಥಿತಿಯಲ್ಲೆ ಇವೆ.

ಅಥಣಿ ತಾಲ್ಲೂಕಿನ ಸವದಿ ಗ್ರಾಮದ ಬಳಿ ಕೃಷ್ಣಾ ನದಿ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದ ರೈತ ರಾಮನಗೌಡ ಪಾಟೀಲ (55) ಅವರು ಶವವಾಗಿ ಮಂಗಳವಾರ ಪತ್ತೆಯಾಗಿದ್ದಾರೆ. ಘಟಪ್ರಭಾ ಮತ್ತು ಮಲಪ್ರಭಾ ಜಲಾಶಯಗಳಿಂದ ಹೊರಹರಿವಿನ ಪ್ರಮಾಣ ಇಳಿಸಿದ್ದು, ಇದರಿಂದ ಜಿಲ್ಲೆಯಲ್ಲಿ ನದಿ ತೀರದ ಜನರಲ್ಲಿ ಉಂಟಾಗಿದ್ದ ಆತಂಕ ಕೊಂಚ ಕಡಿಮೆಯಾಗಿದೆ.

The Classic KAS & IAS Study Circle

The Classic Study Circle, Dharwad — Since 1997

ಸತತ 24 ವರ್ಷಗಳಿಂದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ಹೆಸರುವಾಸಿಯಾದ ಅಧ್ಯಯನ ಕೇಂದ್ರ

ಮುಖ್ಯ ಕಚೇರಿ : ಯುನಿಟ್–ಎ, ಸಪ್ತಾಪುರ ಬಾವಿ ಸರ್ಕಲ್, ಧಾರವಾಡ.
ಫೋನ್ : 0836–2449005 ಮೊ: 9980552080

ಉಪ ಕಚೇರಿಗಳು :
ಯುನಿಟ್–ಬಿ, ಜಯನಗರ, ಧಾರವಾಡ
ಯುನಿಟ್–ಸಿ, ಸಪ್ತಾಪುರ ಬಾವಿ ಸರ್ಕಲ್, ಧಾರವಾಡ

ಆಗಸ್ಟ್ 10 ರಿಂದ ಹೊಸ ಬ್ಯಾಚ್‌ಗಳು ಪ್ರಾರಂಭ

- IAS/KAS Prelims (Kan & Eng Medium)
- PSI/PC
- Bank PO

Online Crash Course

- PSI / PC / B.Ed. TET

Special Features :
- Systematic Coaching as per the latest syllabus
- Excellent Teaching staff
- Separate Hostel facility
- 24 x 7 Library Service
- Well equipped classrooms
- Excellent track of results

Classic Model Tests
Offline & Online
ಕ್ಲಾಸಿಕ್ ಸಂಸ್ಥೆಯ ಧಾರವಾಡ, ಬೆಂಗಳೂರು & ಕಲಬುರಗಿ ಕೇಂದ್ರಗಳಲ್ಲಿ ಪ್ರತಿ ರವಿವಾರ ಬೆಳಿಗ್ಗೆ 10 ರಿಂದ.
IAS (P), KAS (P), PSI (Paper1 & 2), PC
SDA/FDA-1,2, TET, Bank Clerk/PO

Classic Education You Tube Channel
ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನಿರಂತರ Online ಮಾರ್ಗದರ್ಶನ
Subscribe now!

ಕ್ಲಾಸಿಕ್ ಸಂಸ್ಥೆಯ ಬೆಂಗಳೂರು ಮತ್ತು ಕಲಬುರಗಿ ಶಾಖೆಗಳಲ್ಲಿ

KAS & PSI ಪರೀಕ್ಷೆಗಳಿಗೆ ಆಗಸ್ಟ್ 15ರಿಂದ ಹೊಸ ಬ್ಯಾಚ್‌ಗಳು ಪ್ರಾರಂಭ

ಆರ್.ವಿ. ಕಾಂಪ್ಲೆಕ್ಸ್, 860/29, 4ನೇ ಮೇನ್, 3ನೇ ಕ್ರಾಸ್, ಹೊಸಹಳ್ಳಿ ಮೆಟ್ರೋಸ್ಟೇಶನ್ ಹತ್ತಿರ, ವಿಜಯನಗರ, ಬೆಂಗಳೂರು. ಮೊ: 9980552080/81

ಪ್ಲಾಟ ನಂ.6, ಅರಿಹಂತ ನಗರ, ವೀರೇಂದ್ರ ಪಾಟೀಲ ನಗರದ ಎದುರಿಗೆ, ಸೇಡಂ ರಸ್ತೆ (ಯುನಿವರ್ಸಿಟಿ ರಸ್ತೆ) ಕಲಬುರಗಿ–585 101. ಮೊ : 6366395426/27

ಸ್ಪರ್ಧಾ ಸ್ಫೂರ್ತಿ ಪಬ್ಲಿಷರ್ಸ್ & ಪ್ರಿಂಟರ್ಸ್ ಪ್ರೈ. ಲಿ., ಧಾರವಾಡ

• ಸ್ಪರ್ಧಾ ಸ್ಫೂರ್ತಿ • Competition Vision • ಉದ್ಯೋಗ ವಾರ್ತೆ

3 ತಿಂಗಳ ಪ್ರಚಲಿತ ಘಟನೆಗಳ ಅವಲೋಕನದ ಸ್ಪಧಾ ಸ್ಫೂರ್ತಿ ಜುಲೈ ಸಂಚಿಕೆ ಈಗ ಎಲ್ಲೆಡೆ ಲಭ್ಯ

KAS, PSI, PC, FDA, SDA, PDO ಇತ್ಯಾದಿ ಪರೀಕ್ಷೆಗಳಿಗೆ ಅಧ್ಯಯನ ಸಾಮಗ್ರಿಯ ಪುಸ್ತಕಗಳು ಹಾಗೂ ಪ್ರಶ್ನೆ ಪತ್ರಿಕೆಗಳ ಕೈಪಿಡಿಗಳು ರಾಜ್ಯಾದ್ಯಂತ ಲಭ್ಯ – ಮಾಹಿತಿಗೆ ಸಂಪರ್ಕಿಸಿರಿ : 9980552082

Classic International Public School (CIPS)
Affiliated to CISCE (ICSE Syllabus) Code No.: KA412
ತಪೋವನ ಆಶ್ರಮದ ಎದುರಿಗೆ, ಕ್ಯಾರಕೊಪ್ಪ ರಸ್ತೆ, ಬೈಪಾಸ್ ಹತ್ತಿರ, ಧಾರವಾಡ
Ph: 0836-2775791, 8197049780 / 81, E-mail: cipsdharwad@gmail.com www.cipsedu.com
A reputed English medium residential school in peaceful atmosphere

Admissions Started
- 1st to 10th Standard
- Nursery • LKG • UKG

HOSTEL FOR BOYS & GIRLS (6th to 10th Std)
Vehicle Facility Available

Classic PU College
Near Tapovana, Kyarakoppa Road, Dharwad
Admission Started for
PUC I & II Arts, Science & Comm.
Integrated with IIT-JEE/NEET/K-CET, CA/CS and KAS/IAS/PSI/Bank PO etc.
Contact No. : 0836-2449009, 9449847687, 9606064879

Classic Degree College
Near Tapovana, Kyarakoppa Road, Dharwad
Admission Started for
B.Sc., BA & B.Com
Integrated with KAS, IAS, PSI, Bank Exam etc.
Contact No. : 0836-2449010, 9449847687, 9606064880

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ,
ಬೆಂಗಳೂರು ನಗರ ವಿಭಾಗ, ಅರಣ್ಯ ಭವನ ಸಂಕೀರ್ಣ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.

ಸಂ. ಎ9/ಮರ ಕತ್ತಾವಣೆ–K-RIDDES/ಸಿ–ಆರ್–588/2020–21/809 ದಿನಾಂಕ:26.07.2021

ಪ್ರಕಟಣೆ

ಈ ಮೂಲಕ ಬೆಂಗಳೂರು ಮಹಾನಗರ ಮತ್ತು ಸುತ್ತಮುತ್ತಲಿನ ಸಮಸ್ತ ನಾಗರೀಕರ ಗಮನಕ್ಕೆ ತರುವುದೇನೆಂದರೆ ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ ಇಲ್ಲಿ ಕರ್ನಾಟಕ ರೈಲ್ ಇನ್‌ಫ್ರಾಸ್ಟ್ರಕ್ಚರ್ ರೈಲು ನಿಗಮ ನಿಯಮಿತ ಸಂಸ್ಥೆಯವತಿಯಿಂದ ನಡೆಯುತ್ತಿರುವ ರೈಲು ಕಾಮಗಾರಿಗೆ ಅಡ್ಡಬರುತ್ತಿರುವ ನೀಲಗಿರಿ ಮತ್ತು ಜಾಲಿ ಮರಗಳ ತೆರವಿಗಾಗಿ ಮನವಿ ಸಲ್ಲಿಸಿದ್ದು, ವಿವರಗಳು ಈ ಕೆಳಕಂಡಂತಿವೆ.

ಯೋಜನೆಯ ಹೆಸರು	Construction of Anekal Road Railway Station to Km 165/000 (up to Tamilnadu Border within the Railway Boundary) in connection with Baiyyappanahalli-Hosur Doubling Project)				
ಏಜೆನ್ಸಿಯ ಹೆಸರು	Rail Infrastructure Development Company (Karnataka) Limited, (KRIDES)				
ಮರ ತೆರವುಗೊಳಿಸುವ ಉದ್ದೇಶ	ರೈಲು ಕಾಮಗಾರಿಗೆ ಮರಗಳು ಅಡ್ಡಬರುತ್ತಿರುವುದರಿಂದ ಮತ್ತು ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು.				
ಯೋಜನೆಯು ಬರುತ್ತಿರುವ ಪ್ರದೇಶದಿಂದ ಜಿ.ಪಿ.ಎಸ್.ರೀಡಿಂಗ್ಸ್	GPS details.				
	1	N-12.71913° E-077.71070°	N-12.71813° E-077.71100°	Area Starting	Anekal Railway Station-2 to Anekal Maranayakanahalli Middle Section
	2	N-12.71380° E-077.75480°	N-12.72743° E-077.71084°	Area ending	
ಯೋಜನಾ ಪ್ರದೇಶದಲ್ಲಿ ಪ್ರಸ್ತುತ ಇರುವ ಮರಗಳು	385 (Annex-I)	ಮರಗಳ ವಿವರ, ಜಾತಿ, ಮರಗಳಿರುವ ಜಾಗ, ನಕಾಶೆಗಳ ವಿವರಗಳನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಮಾಹಿತಿಗಾಗಿ ಒದಗಿಸಲಾಗಿದೆ.			
ಯೋಜನಾ ಪ್ರದೇಶದಲ್ಲಿ ತೆರವುಗೊಳಿಸಬೇಕಾದ ಮರಗಳು	385 (Annex-II)				
ಆಕ್ಷೇಪಣೆಗಳನ್ನು ಪ್ರದೇಶದಲ್ಲಿ ವಿಧಾನ (ಸಾರ್ವಜನಿಕರು ನೇರವಾಗಿ/ಇ–ಮೇಲ್/ಅಂಚೆ ಮುಖಾಂತರ ಈ ಕೆಳಸಹಿದಾರರ ಕಛೇರಿಗೆ ಸಲ್ಲಿಸಬಹುದು)	ವಿಳಾಸ: ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ವಿಭಾಗ, ಬೆಂಗಳೂರು, ಅರಣ್ಯ ಸಂಕೀರ್ಣ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003. ಇ–ಮೇಲ್ ವಿಳಾಸ: dcfurban82@yahoo.co.in				
ಆಕ್ಷೇಪಣೆಗಳನ್ನು ಸಲ್ಲಿಸಬೇಕಾದ ಅವಧಿ	ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 10 ದಿನಗಳೊಳಗಾಗಿ. ಸೂಚನೆ: ಆಕ್ಷೇಪಣೆಗಳನ್ನು ಪ್ರಸ್ತಾವಿತ ಯೋಜನೆಗೆ ಮಾತ್ರ ಸಂಬಂಧಸಿರಬೇಕು.				

ಮೇಲ್ಕಂಡ ಪ್ರೇಶದಲ್ಲಿನ ಮರಗಳನ್ನು ತೆರವುಗೊಳಿಸುವ ಸಂಬಂಧ ಸಾರ್ವಜನಿಕರ ಆಕ್ಷೇಪಣೆ / ಸಲಹೆಗಳಿದ್ದಲ್ಲಿ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ 1976 ಸೆಕ್ಷನ್8(3)(VII) ಪ್ರಕಾರ ಸಲಹೆ–ಸೂಚನೆಗಳನ್ನು ನೀಡಲು ಆಹ್ವಾನಿಸಲಾಗಿದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ನಗರ ವಿಭಾಗ, ಬೆಂಗಳೂರು

ವಾಸಾಸಂಇ/ಬೆಂನ/954/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಬೆಂಗಳೂರು ನಗರ ವಿಭಾಗ, ಅರಣ್ಯ ಭವನ ಸಂಕೀರ್ಣ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003. ದೂ./ಫ್ಯಾಕ್ಸ್: 080–23343464
ಇ–ಮೇಲ್: dcfurban82@yahoo.co.in

ಸಂಖ್ಯೆ : ಎ9/ಮರ ಕತ್ತಾವಣೆ-BMRCL-Phase-2B/ಸಿ.ಆರ್–313(2)/2020–21/792 ದಿನಾಂಕ: 26.07.2021

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಬೆಂಗಳೂರು ಮಹಾನಗರ ಮತ್ತು ಸುತ್ತಮುತ್ತಲಿನ ಸಮಸ್ತ ನಾಗರಿಕರ ಗಮನಕ್ಕೆ ತರುವುದೇನೆಂದರೆ ಹೆಬ್ಬಾಳದಿಂದ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗುವ ರಸ್ತೆಯ ಬಲ ಮತ್ತು ಎಡ ಭಾಗದಲ್ಲಿ ಮೆಟ್ರೋ ರೈಲು ಮಾರ್ಗ ಬರುತ್ತಿದ್ದು, ಈ ರೈಲು ಮಾರ್ಗದ ಕಾಮಗಾರಿಗೆ ಅಡ್ಡಬರುತ್ತಿರುವ ಮರಗಳ ತೆರವಿಗಾಗಿ ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ ಸಂಸ್ಥೆಯವರು ಮನವಿ ಸಲ್ಲಿಸಿದ್ದು, ವಿವರಗಳು ಈ ಕೆಳಕಂಡಂತಿರುತ್ತವೆ.

ಯೋಜನೆಯ ಹೆಸರು	Construction of Elevated structures(Viaduct & Stations) of length 26.439Km from Chainage 10072.00m to 36511.00m and Seven elevated metro stations Viz, Hebbala, Kadigenahalli, Jakkuru Cross, Yelhanka , Bagalur Cross, 250m Pocket Track , Bettahalasuru and doddajala, road widening ,Utility diversion and allied work of Bangalore Metro Rail Project Phase 2B		
ಏಜೆನ್ಸಿಯ ಹೆಸರು	Bangalore Metro Rail Corporation Limited		
ಮರ ತೆರವುಗೊಳಿಸುವ ಉದ್ದೇಶ	ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗುವ ರಸ್ತೆಯ ಬಲ ಮತ್ತು ಎಡ ಭಾಗದಲ್ಲಿ ಮೆಟ್ರೋ ರೈಲು ಮಾರ್ಗ ಬರುತ್ತಿದ್ದು, ಈ ರೈಲು ಮಾರ್ಗದ ಕಾಮಗಾರಿಗೆ ಅಡ್ಡಬರುತ್ತಿರುವ ಕಾರಣ.		
ಯೋಜನೆಯು ಬರುತ್ತಿರುವ ಪ್ರದೇಶದ ಜಿ.ಪಿ.ಎಸ್. ರೀಡಿಂಗ್ಸ್.	Hebbala(KIADB Land) to 250m Pocket Track		
	KIADB Land	13 ° 2' 32.1193"N	77° 35' 40.5009" E
	Railway Land	13 ° 11' 38.7364"N	77° 39' 10.1573" E
ಯೋಜನಾ ಪ್ರದೇಶದಲ್ಲಿ ಪ್ರಸ್ತುತ ಇರುವ ಮರಗಳು	487 (Annex-I)	ಮರಗಳ ವಿವರ, ಜಾತಿ, ಮರಗಳಿರುವ ಜಾಗ, ನಕಾಶೆಗಳ ವಿವರಗಳನ್ನು ಬಿಬಿಎಂಪಿ ವೆಬ್ ಸೈಟ್‌ನಲ್ಲಿ ಮಾಹಿತಿಗಾಗಿ ಒದಗಿಸಲಾಗಿದೆ.	
ಯೋಜನಾ ಪ್ರದೇಶಲ್ಲಿ ತೆರವುಗೊಳಿಸಬೇಕಾದ ಮರಗಳು	487 (Annex-I)		
ಆಕ್ಷೇಪಣೆಗಳನ್ನು ಸಲ್ಲಿಸುವ ವಿಧಾನ (ಸಾರ್ವಜನಿಕರು ನೇರವಾಗಿ/ ಇ–ಮೇಲ್/ಅಂಚೆ ಮುಖಾಂತರ ಈ ಕೆಳಸಹಿದಾರರ ಕಛೇರಿಗೆ ಸಲ್ಲಿಸಬಹುದು)	Adress: The Deputy Conservator of Forests, Bangalore Urban Division, Aranya Bhavan Annexe, 18th Cross, Malleshwaram,Bangalore-560003. Email ID – dcfurban82@yahoo.co.in		
ಆಕ್ಷೇಪಣೆಗಳನ್ನು ಸಲ್ಲಿಸಬೇಕಾದ ಅವಧಿ	ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 10 ದಿನಗಳೊಳಗಾಗಿ. ಸೂಚನೆ: ಆಕ್ಷೇಪಣೆಗಳು ಪ್ರಸ್ತಾವಿತ ಯೋಜನೆಗೆ ಮಾತ್ರ ಸಂಬಂಧಿಸಿರಬೇಕು.)		

ಮೇಲ್ಕಂಡ ಪ್ರದೇಶದಲ್ಲಿನ ಮರಗಳನ್ನು ತೆರವುಗೊಳಿಸುವ ಸಂಬಂಧ ಸಾರ್ವಜನಿಕರ ಆಕ್ಷೇಪಣೆ/ಸಲಹೆಗಳಿದ್ದಲ್ಲಿ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ 1976 ಸೆಕ್ಷನ್8 (3) (vii) ಪ್ರಕಾರ ಸಲಹೆ–ಸೂಚನೆಗಳನ್ನು ನೀಡಲು ಆಹ್ವಾನಿಸಲಾಗಿದೆ.

ಸಹಿ/–
ಉಪ ಅರಣ್ಯ ಸಂರಕ್ಷಣಾಧಿಕಾರಿ
ಬೆಂಗಳೂರು ನಗರ ವಿಭಾಗ, ಬೆಂಗಳೂರು

ವಾಸಾಸಂಇ/ಬೆಂನ/959/ಅಲಕ್‌ನಂದ/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ,
ಕೊಪ್ಪಳ. ಇವರ ಕಾರ್ಯಾಲಯ

ಸಂ:ಕಾನಿಇಂ:ಲೋಇ:ವಿಕೊ:KW-3:ಟೆಂ:2021–22: 1147 ದಿನಾಂಕ : 22–07–2021

ಅಲ್ಪಾಕಾಲಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ **KW-3** ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ "ಇ–ಪ್ರೊಕ್ಯೂರಮೆಂಟ್ ಪೋರ್ಟಲ್" ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ **2020–21ನೇ ಸಾಲಿನ ಲೆಕ್ಕ ಶೀರ್ಷಿಕೆ ಕೆಕೆಆರ್‌ಡಿಬಿ ಮೈಕ್ರೋ (ಸಾಮಾನ್ಯ) ಹಾಗೂ ಕೆಕೆಆರ್‌ಡಿಬಿ ಮೈಕ್ರೋ (ಎಸ್.ಸಿ.ಪಿ) ಮತ್ತು ಕೆಕೆಆರ್‌ಡಿಬಿ ಮ್ಯಾಕ್ರೋ (ಸಾಮಾನ್ಯ)** ಅಡಿಯಲ್ಲಿ ಮಂಜೂರಾಗಿರುವ ಕಾಮಗಾರಿಗಳಿಗೆ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು "ಇ–ಪ್ರಕ್ಯೂರಮೆಂಟ್ ಪೋರ್ಟಲ್" http://eproc.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು :– 1. ಗುತ್ತಿಗೆದಾರರು ಗುತ್ತಿಗೆಯನ್ನು ಆನ್ ಲೈನ್ ಮೂಲಕ ಸಲ್ಲಿಸಬೇಕು. 2. ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್‌ನಲ್ಲಿ ಗುತ್ತಿಗೆ ಜೊತೆಯಲ್ಲಿ ಲಗತ್ತಿಸಬೇಕು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 08539 – 222318 ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್ ಜಾಲದ ಮೂಲಕ ವೆಬ್ ಸೈಟ್‌ನಲ್ಲಿಯ http://eproc.karnataka.gov.in ರಲ್ಲಿ ಪಡೆಯಬಹುದು. ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್ ಸೈಟ್‌ನಲ್ಲಿಯ ದಾಖಲೆಯಿಂದ ದಿನಾಂಕ: **22–07–2021**ರ ನಂತರ ನಿಗದಿತ ಅವಧಿಯೊಳಗೆ ನಕಲು ತಗೆಯುವುದು (Down load) ಮಾಡಿಕೊಳ್ಳಬಹುದಾಗಿದೆ. –:: **ಅನುಬಂಧ** ::–

2020–21ನೇ ಸಾಲಿನ ಲೆಕ್ಕ ಶೀರ್ಷಿಕೆ ಕೆಕೆಆರ್‌ಡಿಬಿ ಮೈಕ್ರೋ (ಸಾಮಾನ್ಯ) ಅಡಿಯಲ್ಲಿ: 1. **ವರ್ಕ ಇಂಡೆಂಟ್ ಸಂಖ್ಯೆ: KPWD/ 2021-22/ BD/ WORK_ INDENT 137964. ಕಾಮಗಾರಿಯ ಹೆಸರು:** ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಯಡ್ಡೋಣಿ ಗ್ರಾಮದ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಕಟ್ಟಡದ ಸುತ್ತಲೂ ಕಾಂಪೌಂಡ್ ನಿರ್ಮಾಣ. **ಅಂದಾಜು ಮೊತ್ತ(ರೂ.ಲಕ್ಷಗಳಲ್ಲಿ):** 57.23. 2. **ವರ್ಕ ಇಂಡೆಂಟ್ ಸಂಖ್ಯೆ: KPWD/ 2021-22/ BD/ WORK_ INDENT 137963. ಕಾಮಗಾರಿಯ ಹೆಸರು:** ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಮುಧೋಳ ಗ್ರಾಮದ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಕಟ್ಟಡದ ಸುತ್ತಲೂ ಕಾಂಪೌಂಡ್ ನಿರ್ಮಾಣ. **ಅಂದಾಜು ಮೊತ್ತ(ರೂ.ಲಕ್ಷಗಳಲ್ಲಿ):** 60.00. **2020–21ನೇ ಸಾಲಿನ ಲೆಕ್ಕ ಶೀರ್ಷಿಕೆ ಕೆಕೆಆರ್‌ಡಿಬಿ ಮೈಕ್ರೋ (ಎಸ್.ಸಿ.ಪಿ) ಅಡಿಯಲ್ಲಿ:** 3. **ವರ್ಕ ಇಂಡೆಂಟ್ ಸಂಖ್ಯೆ: KPWD/ 2021-22/ BD/ WORK_ INDENT138184. ಕಾಮಗಾರಿಯ ಹೆಸರು:** ಕುಕನೂರ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ತರಗತಿ ಕೊಠಡಿಗಳ ನಿರ್ಮಾಣ. **ಅಂದಾಜು ಮೊತ್ತ(ರೂ.ಲಕ್ಷಗಳಲ್ಲಿ):** 100.00. 4. **ವರ್ಕ ಇಂಡೆಂಟ್ ಸಂಖ್ಯೆ: KPWD/ 2021-22/ BD/ WORK_ INDENT137962. ಕಾಮಗಾರಿಯ ಹೆಸರು:** ಯಲಬುರ್ಗಾ ಪಟ್ಟಣದ ಸರ್ಕಾರಿ ಬಾಲಕೀಯರ ಪದವಿ ಪೂರ್ವ ಕಾಲೇಜಿನ ತರಗತಿ ಕೊಠಡಿಗಳ ನಿರ್ಮಾಣ. **ಅಂದಾಜು ಮೊತ್ತ(ರೂ.ಲಕ್ಷಗಳಲ್ಲಿ):** 100.00. **2020–21ನೇ ಸಾಲಿನ ಲೆಕ್ಕ ಶೀರ್ಷಿಕೆ ಕೆಕೆಆರ್‌ಡಿಬಿ ಮ್ಯಾಕ್ರೋ (ಸಾಮಾನ್ಯ) ಅಡಿಯಲ್ಲಿ:** 5. **ವರ್ಕ ಇಂಡೆಂಟ್ ಸಂಖ್ಯೆ: KPWD/ 2021-22/ BD/ WORK_ INDENT 138183. ಕಾಮಗಾರಿಯ ಹೆಸರು:** ಕುಕನೂರ ತಾಲೂಕಿನ ಮಸಬಹಂಚಿನಾಳ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಆಡಿಟೋರಿಯಂ ನಿರ್ಮಾಣ ಹಾಗೂ ಇನ್ನಿತರೆ ಕಾಮಗಾರಿ. **ಅಂದಾಜು ಮೊತ್ತ(ರೂ.ಲಕ್ಷಗಳಲ್ಲಿ):** 91.28

ಇಎಂಡಿ ಮೊತ್ತ : **ಇ–ಪ್ರೂಕ್ಯೂರ್‌ಮೆಂಟ್‌ನಲ್ಲಿರುವಂತೆ.** ಟೆಂಡರ್ ಪ್ರೊಸೆಸಿಂಗ್ ಶುಲ್ಕ : **ಇ–ಪ್ರೂಕ್ಯೂರ್‌ಮೆಂಟ್‌ನಲ್ಲಿರುವಂತೆ.** ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿತ ಕಾಲಾವಧಿ : **ಇ–ಪ್ರೂಕ್ಯೂರ್‌ಮೆಂಟ್‌ನಲ್ಲಿರುವಂತೆ.** ಪ್ರೀಬಿಡ್ ಮೀಟಿಂಗ್ ದಿನಾಂಕ : **ಇ–ಪ್ರೂಕ್ಯೂರ್‌ಮೆಂಟ್‌ನಲ್ಲಿರುವಂತೆ.** ಟೆಂಡರ್ ಆಕ್ಷೇಪಣೆ:ಸ್ಪಷ್ಟೀಕರಣಗಳಿಗಾಗಿ ನಿಗದಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯ : **ಇ–ಪ್ರೂಕ್ಯೂರ್‌ಮೆಂಟ್‌ನಲ್ಲಿರುವಂತೆ.** ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : **07–08–2021 ಸಮಯ 16.00 ಗಂಟೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : **09–08–2021 ಸಮಯ 11.00 ಗಂಟೆ.** ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : **13–08–2021 ಸಮಯ 11.00 ಗಂಟೆ**

ಟಿಪ್ಪಣಿ: – ತಾಂತ್ರಿಕ ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಇ.ಎಂ.ಡಿ. ದೃಢೀಕರಣ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು.

ಷರತ್ತುಗಳು:– 1. ಯಾವುದೇ ಅಥವಾ ಎಲ್ಲಾ ಟೆಂಡರ್‌ನ್ನು ಯಾವುದೇ ಕಾರಣವಿಲ್ಲದೇ, ಯಾವುದೇ ಹಂತದಲ್ಲಿ ತಿರಸ್ಕರಿಸುವ ಅಥವಾ ಹಿಂತೆಗೆದುಕೊಳ್ಳುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದ್ದಾರೆ. 2. ಕಾಮಗಾರಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ ದಿನಾಂಕದಿಂದ **1 ವರ್ಷ (12 ಕ್ಯಾಲೆಂಡರ್ ತಿಂಗಳುಗಳು)** ವರೆಗೆ ಸ್ವತಃ ಗುತ್ತೇದಾರರೇ ನಿರ್ವಹಣೆ ಮಾಡತಕ್ಕದ್ದು. 3. ಇತರೆ ಷರತ್ತುಗಳನ್ನು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/182/ಎಂಸಿಎ/2021–22

ತುಂಗಭದ್ರಾ ನದಿ ಪಾತ್ರದಲ್ಲಿ ಪ್ರವಾಹ ಭೀತಿ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ತುಂಗಭದ್ರಾ ಜಲಾಶಯದಿಂದ ಹೆಚ್ಚಿನ ಪ್ರಮಾಣದ ನೀರು ಬಿಡುತ್ತಿರುವುದರಿಂದ ನದಿ ಪಾತ್ರದಲ್ಲಿ ಪ್ರವಾಹದ ಸ್ಥಿತಿ ತಲೆದೋರಿದೆ.

ಕೊಪ್ಪಳ ಜಿಲ್ಲೆಯ ಹುಲಿಗೆಮ್ಮ ದೇವಸ್ಥಾನದ ಸ್ನಾನಘಟ್ಟಗಳನ್ನು ಬಂದ್ ಮಾಡಲಾಗಿದೆ.

ಆನಗೊಂದಿಯಲ್ಲಿರುವ ಶ್ರೀಕೃಷ್ಣದೇವರಾಯರ ಸಮಾಧಿ 63 ಕಾಲಿನ ಮಂಟಪ ಭಾಗಶಃ ಮುಳುಗಡೆಯಾಗಿದೆ. ವಿರುಪಾಪುರ ಗಡ್ಡೆಗೆ ಸಂಪರ್ಕ ಕಡಿತಗೊಂಡಿದೆ. ಸುರಕ್ಷತೆಯ ಕಾರಣ ಕಂಪ್ಲಿ-ಗಂಗಾವತಿ ಸೇತುವೆ ಮೇಲೆ ಸಂಚಾರ ಬಂದ್ ಮಾಡಲಾಗಿದೆ.

ಶ್ರೀರಾಘವೇಂದ್ರ ಸ್ವಾಮಿಗಳ ಶಿಷ್ಯ ಅಪ್ಪಣಾಚಾರ್ಯರ ನೆಲೆಯಾದ ರಾಯಚೂರು ತಾಲ್ಲೂಕಿನ ಯಲಿಬಿಚ್ಚಾಲಿ ಗ್ರಾಮದಲ್ಲಿಯ ರಾಘವೇಂದ್ರ ಸ್ವಾಮಿಗಳ ಏಕಶಿಲಾ ವೃಂದಾವನವು ಜಲಾವೃತವಾಗಿದೆ.

ನಾರಾಯಣಪುರ ಬಸವಸಾಗರ ಜಲಾಶಯದಿಂದ ಕೃಷ್ಣಾ ನದಿಗೆ 3 ಲಕ್ಷಕ್ಕೂ ಅಧಿಕ ಕ್ಯುಸೆಕ್ ನೀರು ಬಿಡುತ್ತಿದ್ದು, ಯಾದಗಿರಿ ಜಿಲ್ಲೆಯಲ್ಲಿ ನದಿ ಅಪಾಯದ ಮಟ್ಟವನ್ನೂ ಮೀರಿ ಹರಿಯುತ್ತಿದೆ. ಶಹಾಪುರ ತಾಲ್ಲೂಕಿನ ಕೊಳ್ಳೂರು (ಎಂ) ಸೇತುವೆ ನಾಲ್ಕು ದಿನಗಳಿಂದ ಮುಳುಗಿದೆ. ಜಮೀನುಗಳಿಗೆ ನೀರು ನುಗ್ಗಿದ್ದು, ಬೆಳೆ ಜಲಾವೃತ್ತವಾಗಿವೆ.

ಆಸ್ಕರ್‌ಗೆ ಯಶಸ್ವಿ ಶಸ್ತ್ರಚಿಕಿತ್ಸೆ: ಆರೋಗ್ಯ ಸ್ಥಿರ

ಪ್ರಜಾವಾಣಿ ವಾರ್ತೆ

ಮಂಗಳೂರು: ಹಿರಿಯ ಕಾಂಗ್ರೆಸ್ ಮುಖಂಡ, ರಾಜ್ಯಸಭಾ ಸದಸ್ಯ ಆಸ್ಕರ್ ಫರ್ನಾಂಡಿಸ್ ಅವರಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದ್ದು, ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ನಗರದ ಯೇನೆಪೋಯ ಆಸ್ಪತ್ರೆಯಲ್ಲಿ ಸೋಮವಾರ ತಡರಾತ್ರಿಯಿಂದ ಮಂಗಳವಾರ ಬೆಳಗಿನವರೆಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಡಾ.ದಿವಾಕರ್ ರಾವ್ ಹಾಗೂ ಡಾ. ಸುನಿಲ್ ಶೆಟ್ಟಿ ನೇತೃತ್ವದ ವೈದ್ಯರ ತಂಡವು ಮಿದುಳಿನಲ್ಲಿನ ಹೆಪ್ಪುಗಟ್ಟಿದ್ದ ರಕ್ತವನ್ನು ಶಸ್ತ್ರಚಿಕಿತ್ಸೆ ಮೂಲಕ ತೆಗೆದು ಹಾಕಿದೆ. ಆಸ್ಕರ್ ಫರ್ನಾಂಡಿಸ್ ಅವರಿಗೆ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿದಿದೆ. ಅವರಿಗೆ ಶೀಘ್ರದಲ್ಲಿಯೇ ಪ್ರಜ್ಞೆ ಬರುವ ಸಾಧ್ಯತೆ ಇದೆ ಎಂದು ಹೇಳಿವೆ.

ಜುಲೈ 18ರಂದು ನಗರದ ಅತ್ತಾವರದ ಫ್ಲ್ಯಾಟ್‌ನಲ್ಲಿ ಯೋಗ ಮಾಡುವ ವೇಳೆ ಜಾರಿ ಬಿದ್ದಿದ್ದ ಆಸ್ಕರ್ ಫರ್ನಾಂಡಿಸ್ ಅವರ ತಲೆಗೆ ಪೆಟ್ಟಾಗಿತ್ತು. ಡಯಾಲಿಸಿಸ್‌ಗಾಗಿ ಯೇನೆಪೋಯ ಆಸ್ಪತ್ರೆಗೆ ಬಂದಾಗ, ಮಿದುಳಿನಲ್ಲಿ ರಕ್ತಸ್ರಾವವಾಗಿ, ರಕ್ತ ಹೆಪ್ಪುಗಟ್ಟಿರುವುದು ಪತ್ತೆಯಾಗಿತ್ತು. ಜು.19ರಿಂದ ಅವರು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾರೆ.

ಅಸ್ಸಾಂ –ಮಿಜೋರಾಂ ಸಂಘರ್ಷ: ಬಿಜೆಪಿ ನಾಯಕರ ಪ್ರತಿಪಾದನೆ

‘ಗಡಿ ಮರುವಿಂಗಡಣೆಯೇ ಪರಿಹಾರ’

ನವದೆಹಲಿ/ಗುವಾಹಟಿ (ಪಿಟಿಐ): ಅಸ್ಸಾಂ ಜತೆ ಗಡಿ ಹಂಚಿಕೊಂಡಿರುವ ರಾಜ್ಯಗಳ ಗಡಿಗಳನ್ನು ಮರುವಿಂಗಡಣೆ ಮಾಡುವುದೇ ಗಡಿ ಸಂಘರ್ಷಕ್ಕೆ ಕೊನೆಹಾಡಲು ಪರಿಣಾಮಕಾರಿ ಪರಿಹಾರ ಮಾರ್ಗ ಎಂದು ಬಿಜೆಪಿ ಮುಖಂಡ ಎಂ.ಕಿಕೋನ್ ಹೇಳಿದ್ದಾರೆ. ನಾಗಾಲ್ಯಾಂಡ್ ಶಾಸಕರಾಗಿರುವ ಕಿಕೋನ್ ಅವರು, ಮಿಜೋರಾಂನ ಬಿಜೆಪಿ ಉಸ್ತುವಾರಿಯೂ ಆಗಿದ್ದಾರೆ.

ಅಸ್ಸಾಂ ರಾಜ್ಯವು ತನ್ನೊಂದಿಗೆ ಗಡಿ ಹಂಚಿಕೊಂಡಿರುವ ಮಿಜೋರಾಂ, ಮೇಘಾಲಯ ಮತ್ತು ನಾಗಾಲ್ಯಾಂಡ್‌ಗಳ ಜತೆ ಗಡಿ ತಕರಾರು ಹೊಂದಿದೆ. ಈ ಎಲ್ಲಾ ರಾಜ್ಯಗಳು ತಮ್ಮ ಗಡಿಯನ್ನು ಒತ್ತುವರಿ ಮಾಡಿವೆ ಎಂದು ಅಸ್ಸಾಂ ಆರೋಪಿಸಿದೆ. ಈ ಸಂಬಂಧ ಈ ಮೂರೂ ರಾಜ್ಯಗಳ ಜತೆಗೆ ಅಸ್ಸಾಂ ಸಂಘರ್ಷ ನಡೆಸಿದೆ. ಇದೇ ಮೇನಲ್ಲಿ ಅಸ್ಸಾಂ-ನಾಗಾಲ್ಯಾಂಡ್ ಗಡಿಯಲ್ಲಿ ಸಂಘರ್ಷ ನಡೆದಿತ್ತು. ಈ ಸಂಘರ್ಷದಲ್ಲಿ ಎರಡೂ ಕಡೆಯ ಹಲವು ಪೊಲೀಸರು ಗಾಯಗೊಂಡಿದ್ದರು. ಮೇಘಾಲಯದ ಜತೆ ಸೋಮವಾರ ಬೆಳಿಗ್ಗೆ ಅಸ್ಸಾಂ ಪೊಲೀಸರು ಘರ್ಷಣೆ ನಡೆಸಿದ್ದಾರೆ. ಈ ಎಲ್ಲಾ ಸಂಘರ್ಷಗಳನ್ನು ಕೊನೆಹಾಡಲು, ಗಡಿ ಮರುವಿಂಗಡಣೆಯೇ ಉಳಿದಿರುವ ಏಕೈಕ ಮಾರ್ಗ ಎಂದು ಕಿಕೋನ್ ಪ್ರತಿಪಾದಿಸಿದ್ದಾರೆ.

ಗಡಿ ಸಮಸ್ಯೆ ಕುರಿತು ಈ ಎಲ್ಲಾ ರಾಜ್ಯಗಳ ಪ್ರತಿನಿಧಿಗಳ ಜತೆಗೆ ಶನಿವಾರವಷ್ಟೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶಾಂತಿ ಮಾತುಕತೆ ನಡೆಸಿದ್ದರು. ಮಾತುಕತೆ ನಡೆದ ಎರಡು ದಿನಗಳ ನಂತರ ಅಸ್ಸಾಂ ಪೊಲೀಸರು ಮತ್ತು ಗಡಿ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮಿಜೋರಾಂ ಮತ್ತು ಮೇಘಾಲಯ ಗಡಿಗಳಲ್ಲಿ ಒತ್ತುವರಿ ಆಗಿದೆ ಎನ್ನಲಾದ ಪ್ರದೇಶಗಳನ್ನು ಮರಳಿ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಹೋಗಿದ್ದರು. ಈ ವೇಳೆ ಮಿಜೋರಾಂ ಪೊಲೀಸರೊಂದಿಗೆ ನಡೆದ ಸಂಘರ್ಷದಲ್ಲಿ ಅಸ್ಸಾಂ ಪೊಲೀಸ್‌ನ ಆರು ಸಿಬ್ಬಂದಿ ಮೃತಪಟ್ಟಿದ್ದಾರೆ.

ಶಾಂತಿ ಮಾತುಕತೆಯಿಂದ ಹೆಚ್ಚು ಪ್ರಯೋಜನವಾಗುತ್ತಿಲ್ಲ ಎಂದು ತೋರುತ್ತಿದೆ. ಅಸ್ಸಾಂನಲ್ಲಿ ಬಿಜೆಪಿ ಸರ್ಕಾರವೇ ಇದೆ. ಬಿಜೆಪಿ ನೇತೃತ್ವದ ಈಶಾನ್ಯ ಭಾರತ ಪ್ರಜಾಸತ್ತಾತ್ಮಕ ಒಕ್ಕೂಟದ ಮಿಜೋ ನ್ಯಾಷನಲ್ ಪಾರ್ಟಿ ಮಿಜೋರಾಂನಲ್ಲಿ ಸರ್ಕಾರ ನಡೆಸುತ್ತಿದೆ. ಮಿತ್ರಪಕ್ಷ ಅಧಿಕಾರದಲ್ಲಿರುವ ರಾಜ್ಯಗಳ ಜತೆಗೇ ಬಿಜೆಪಿ ಗಡಿ ಸಂಘರ್ಷಕ್ಕೆ ಮುಂದಾಗಿದೆ ಎಂದು ಇಲ್ಲಿನ ಬಿಜೆಪಿ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೇಘಾಲಯ ಜತೆಗೂ ಸಂಘರ್ಷ: ಅಸ್ಸಾಂ ಜತೆ ಗಡಿ ಹಂಚಿಕೊಂಡಿರುವ ಮೇಘಾಲಯದ ಗ್ರಾಮಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಸಲುವಾಗಿ, ವಿದ್ಯುತ್ ಕಂಬ ಅಳವಡಿಸುತ್ತಿದ್ದ ಮೇಘಾಲಯ ಅಧಿಕಾರಿಗಳನ್ನು ಅಸ್ಸಾಂ ಅಧಿಕಾರಿಗಳು ಸೋಮವಾರ ಸಂಜೆ ತಡೆದಿದ್ದಾರೆ. ಎರಡೂ ಕಡೆಯ ಅಧಿಕಾರಿಗಳ ಮಧ್ಯೆ ಮಾತಿನ ಚಕಮಕಿ ನಡೆದಿದೆ. ಕಾಮಗಾರಿ ಸ್ಥಗಿತಗೊಳಿಸಲಾಗಿದೆ.

ಅಸ್ಸಾಂಮಿ–ಜೋರಾಂ ಗಡಿಯಲ್ಲಿರುವ ಅಸ್ಸಾಂನ ಕಚಾರ್ ಜಿಲ್ಲೆಯ ಲೈಲಾಪುರದ ಗಡಿ ಠಾಣೆ ಬಳಿ ವಾಹನಗಳ ಸಂಚಾರವನ್ನು ನಿಲ್ಲಿಸಲು ಮುಂದಾದ ಅಸ್ಸಾಂ ಜನರು ಪಿಟಿಐ ಚಿತ್ರ

ಆರ್ಥಿಕ ದಿಗ್ಬಂಧನದ ಬೆದರಿಕೆ

ಮಿಜೋರಾಂ ಜತೆ ಗಡಿ ಹಂಚಿಕೊಂಡಿರುವ ಅಸ್ಸಾಂನ ಗಡಿ ಜಿಲ್ಲೆಗಳ ಜನರು ಮಿಜೋರಾಂಗೆ ಆರ್ಥಿಕ ದಿಗ್ಬಂಧನದ ಬೆದರಿಕೆ ಒಡ್ಡಿವೆ. ಹಲವು ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳು ಈಗಾಗಲೇ ಆರ್ಥಿಕ ದಿಗ್ಬಂಧನ ಘೋಷಿಸಿವೆ.

ಎರಡೂ ರಾಜ್ಯಗಳ ನಡುವೆ ಸಾರ್ವಜನಿಕ ಸಾರಿಗೆ ಬಸ್‌ಗಳು, ಖಾಸಗಿ ವಾಹನಗಳು ಮತ್ತು ಸರಕು ಸಾಗಣೆ ವಾಹನಗಳ ಸಂಚಾರವನ್ನು ಅಸ್ಸಾಂ ಗಡಿ ಜಿಲ್ಲೆಗಳ ಜನರು ತಡೆದು ನಿಲ್ಲಿಸಿದ್ದಾರೆ. ಹೀಗಾಗಿ ಎರಡೂ ರಾಜ್ಯಗಳ ನಡುವೆ ರಸ್ತೆ ಸಂಪರ್ಕ ಸ್ಥಗಿತವಾಗಿದೆ.

ಪೆಟ್ರೋಲ್-ಡೀಸೆಲ್, ಅಡುಗೆ ಅನಿಲ, ಆಹಾರ ಸಾಮಗ್ರಿ ಮತ್ತಿತರ ಅತ್ಯವಶ್ಯಕ ವಸ್ತುಗಳಿಗಾಗಿ ಮಿಜೋರಾಂ ಅಸ್ಸಾಂ ರಾಜ್ಯವನ್ನು ಅವಲಂಬಿಸಿದೆ. ಸಂಚಾರ ಸ್ಥಗಿತವಾದರೆ ಮಿಜೋರಾಂನಲ್ಲಿ ಈ ವಸ್ತುಗಳ ಕೊರತೆ ಉಂಟಾಗಲಿದೆ. ಮಿಜೋರಾಂ ಮೇಲೆ ಒತ್ತಡ ಹೇರುವ ತಂತ್ರವಾಗಿ ಅಸ್ಸಾಂ ಪ್ರಾದೇಶಿಕ ಪಕ್ಷಗಳು ಆರ್ಥಿಕ ದಿಗ್ಬಂಧನ ಹೇರಿವೆ. ರಾಜ್ಯ ಸರ್ಕಾರ ಸಹ ಇದಕ್ಕೆ ಸಂಬಂಧಿಸಿದಂತೆ ಯಾವುದೇ ಹೇಳಿಕೆ ನೀಡಿಲ್ಲ.

- ಗಡಿ ಜಿಲ್ಲೆಗಳಲ್ಲಿ ರಾಜ್ಯ ಕಮಾಂಡೊ ಪಡೆಯ ತುಕಡಿಗಳನ್ನು ನಿಯೋಜನೆ ಮಾಡಿದ ಅಸ್ಸಾಂ ಸರ್ಕಾರ
- ಗಡಿಯಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜನೆ ಮಾಡಿರುವ ಮಿಜೋರಾಂ ಸರ್ಕಾರ
- ಅಸ್ಸಾಂನಲ್ಲಿ ಮೂರು ದಿನ ಶೋಕಾಚರಣೆ, ಗಡಿ ಭಾಗದ ಜನರಲ್ಲಿ ಆಕ್ರೋಶ
- ಗಡಿ ಭಾಗದಲ್ಲಿ ಮಿಜೋರಾಂ ನಮ್ಮ ಅರಣ್ಯ ಪ್ರದೇಶಗಳನ್ನು ಒತ್ತುವರಿ ಮಾಡಿದೆ. ಇದನ್ನು ತೆರವು ಮಾಡಿಸಿ ಎಂದು ಸುಪ್ರೀಂ ಕೋರ್ಟ್ ಮೊರೆ ಹೋಗಲು ನಿರ್ಧರಿಸಲಾಗಿದೆ ಎಂದು ಅಸ್ಸಾಂ ಸರ್ಕಾರ ಹೇಳಿದೆ
- ಸಂಘರ್ಷ ಕುರಿತು ತನಿಖೆ ನಡೆಸಲು ಮುಂದಾದ ಅಸ್ಸಾಂ ಮತ್ತು ಮಿಜೋರಾಂ ಸರ್ಕಾರ

ಜನರ ಮಧ್ಯೆ ದ್ವೇಷ ಮತ್ತು ಅಪನಂಬಿಕೆ ಬಿತ್ತಿದ್ದರ ಭೀಕರ ಪರಿಣಾಮವನ್ನು ದೇಶ ಎದುರಿಸುತ್ತಿದೆ. ಶಾಂತಿ ಕಾಪಾಡುವಲ್ಲಿ ಗೃಹ ಸಚಿವರು ವಿಫಲರಾಗಿದ್ದಾರೆ

ರಾಹುಲ್ ಗಾಂಧಿ, ಕಾಂಗ್ರೆಸ್ ಸಂಸದ

ಎರಡೂ ರಾಜ್ಯಗಳ ಮಧ್ಯೆ ಸಂಘರ್ಷವನ್ನು ಕೊನೆಗಾಣಿಸುವುದು ಕೇಂದ್ರ ಸರ್ಕಾರದ ಕರ್ತವ್ಯ. ಕೇಂದ್ರ ಈ ವಿಷಯದಲ್ಲಿ ಮಧ್ಯಪ್ರವೇಶಿಸಬೇಕು

ಗೌರವ್ ಗೊಗೊಯಿ, ಕಾಂಗ್ರೆಸ್ ಸಂಸದ

ಪರಸ್ಪರ ಮಾತುಕತೆಯಿಂದ ಮಾತ್ರವೇ ಎರಡೂ ರಾಜ್ಯಗಳು ಗಡಿ ಸಮಸ್ಯೆ ಬಗೆಹರಿಸಿಕೊಳ್ಳಬೇಕು. ಕೇಂದ್ರ ಸರ್ಕಾರ ಮಧ್ಯಸ್ಥಿಕೆ ವಹಿಸಲಿದೆ

ನಿತ್ಯಾನಂದ ರಾಯ್, ಕೇಂದ್ರ ಗೃಹ ಖಾತೆ ರಾಜ್ಯ ಸಚಿವ

ನಮ್ಮ ಗಡಿಗಳನ್ನು ಬೇರೆಯವರು ಒತ್ತುವರಿ ಮಾಡಲು ಅವಕಾಶ ನೀಡುವುದಿಲ್ಲ. ಯಾವ ಬೆಲೆ ತೆತ್ತಾದರೂ ನಮ್ಮ ನೆಲವನ್ನು ನಾವು ಉಳಿಸಿಕೊಳ್ಳುತ್ತೇವೆ

ಹಿಮಂತಾ ಬಿಸ್ವಾ ಶರ್ಮಾ, ಅಸ್ಸಾಂ ಮುಖ್ಯಮಂತ್ರಿ

ಎಂತಹ ಭೀಕರ ಸಂಘರ್ಷ. ಬಿಜೆಪಿ ಮೂಗಿನಡಿಯಲ್ಲಿಯೇ ಇಂತಹ ಅವಿವೇಕದ ದುರ್ಘಟನೆಗಳು ನಡೆದಿವೆ. ಇದು ದೇಶದ ಪ್ರಜಾಪ್ರಭುತ್ವಕ್ಕೆ ಮಾರಕ

ಅಭಿಷೇಕ್ ಬ್ಯಾನರ್ಜಿ, ಟಿಎಂಸಿ ಸಂಸದ

ಮುಂದೂಡಿಕೆಯಲ್ಲೇ ಮುಗಿದ ಕಲಾಪ

ಪೆಗಾಸಸ್: ಪ್ರತಿಪಕ್ಷಗಳ ಪ್ರತಿಭಟನೆ ಮುಂದುವರಿಕೆ

ನವದೆಹಲಿ (ಪಿಟಿಐ): ಪೆಗಾಸಸ್ ಗೂಢಚರ್ಯೆ ಹಾಗೂ ವಿವಾದಿತ ಕೃಷಿ ಕಾಯ್ದೆಗಳ ವಿಚಾರವಾಗಿ ಪ್ರತಿಪಕ್ಷಗಳ ಸಂಸದರ ಪ್ರತಿಭಟನೆ ಮುಂದುವರಿದಿದ್ದರಿಂದ, ಸಂಸತ್ತಿನ ಉಭಯ ಸದನಗಳ ಕಲಾಪವು ಮಂಗಳವಾರ ಮುಂದೂಡಿಕೆಯಲ್ಲಿಯೇ ಮುಗಿದುಹೋಯಿತು.

ಸಂಜೆ 4.30ರವರೆಗೆ ಲೋಕಸಭೆಯ ಕಲಾಪವು ಒಂಬತ್ತು ಬಾರಿ ಮುಂದೂಡಿಕೆಯಾದರೆ, ರಾಜ್ಯಸಭೆ ಕಲಾಪವು ಸಂಜೆ ಮೂರೂವರೆ ತನಕ ನಾಲ್ಕು ಸಲ ಮುಂದೂಡಿಕೆಯಾಗಿ, ನಂತರ ಎರಡೂ ಸದನಗಳ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು.

ನಾಲ್ಕೂವರೆಗೆ ಮತ್ತೆ ಲೋಕಸಭೆ ಕಲಾಪಆರಂಭವಾದಾಗಸಭಾಧ್ಯಕ್ಷಸ್ಥಾನದಲ್ಲಿದ್ದ ರಾಜೇಂದ್ರ ಅಗರ್‌ವಾಲ್, ಪ್ರಮುಖ ಪ್ರಸ್ತಾಪಗಳ ಚರ್ಚೆಗೆ ಅನುಮತಿ ನೀಡಿದರು. ಆದರೆ, ಪ್ರತಿಪಕ್ಷಗಳ ಸದಸ್ಯರು ಮತ್ತೆ ಸಭಾಧ್ಯಕ್ಷರ ಪೀಠದ ಎದುರು ಜಮಾಯಿಸಿ ಘೋಷಣೆಗಳೊಂದಿಗೆ, ಪ್ರತಿಭಟನೆ ತೀವ್ರಗೊಳಿಸಿದರು.

ಗದ್ದಲ–ಘೋಷಣೆಗಳ ನಡುವೆಯೇ ಕೆಲವು ಸದಸ್ಯರು ವಿಷಯಗಳನ್ನು ಪ್ರಸ್ತಾಪಿಸಿದರು. ಸುಗಮ ಕಲಾಪಕ್ಕೆ ಸಹಕರಿಸುವಂತೆ ಸಭಾಧ್ಯಕ್ಷರು ಮಾಡಿದ ಮನವಿಗೆ ಸ್ಪಂದನ ದೊರೆಯಲಿಲ್ಲ. ಪ್ರತಿಭಟನೆ ನಿಲ್ಲದಾದಾಗ, ಕಲಾಪವನ್ನು ದಿನದಮಟ್ಟಿಗೆ ಮುಂದೂಡಿದರು.

ತೋಮರ್ ತಿರುಗೇಟು: ಪ್ರಶ್ನೋತ್ತರ ಅವಧಿಯಲ್ಲಿ ಘೋಷಣೆಗಳು ತೀವ್ರಗೊಂಡಾಗ, ಕೃಷಿ ಸಚಿವ ನರೇಂದ್ರಸಿಂಗ್ ತೋಮರ್ ಪ್ರತಿಪಕ್ಷಗಳ ಸದಸ್ಯರನ್ನು ತರಾಟೆಗೆ ತೆಗೆದುಕೊಂಡರು.

‘ಅವರಿಗೆ ನಿಜಕ್ಕೂ ರೈತರ ಕಾಳಜಿ ಇದ್ದಿದ್ದರೆ ಕಲಾಪಕ್ಕೆ ಅವಕಾಶ ಕೊಡುತ್ತಿದ್ದರು’ ಎಂದು ಟೀಕಿಸಿದರು. ರೈತರಿಗೆ ಸಂಬಂಧಿಸಿದ ಅಂದಾಜು 15 ಪ್ರಶ್ನೆಗಳಿವೆ. ಅವರ ಬಗ್ಗೆ ನಿಮಗೆ ಕಳಕಳಿ ಇದ್ದಲ್ಲಿ, ಕಲಾಪ ನಡೆಯಲು ಅವಕಾಶ ಕೊಡಿ. ಕೇಂದ್ರ ಸರ್ಕಾರವು ಏನು ಹೇಳುತ್ತಿದೆ ಎಂಬುದನ್ನು ಮೊದಲು ಕೇಳಿಸಿಕೊಳ್ಳಿ. ಅದು ಬಿಟ್ಟು, ಈ ರೀತಿ ಅಡ್ಡಿ ಮಾಡುವುದು ಸದನದ ಘನತೆಗೆ ಚ್ಯುತಿ ತಂದಂತೆ’ ಎಂದು ಕಿಡಿಕಾರಿದರು.

ಅದಾದ ಬಳಿಕ ಕಲಾಪವು ಮುಂದೂಡಿಕೆಯಾಗುತ್ತಲೇ ಹೋಯಿತು. ಇತ್ತ ರಾಜ್ಯಸಭೆಯಲ್ಲೂ ಅದೇ ವಾತಾವರಣ ಮುಂದುವರಿದಿದ್ದರಿಂದ, ಕಲಾಪವನ್ನು ಬುಧವಾರಕ್ಕೆ ಮುಂದೂಡಲಾಯಿತು.

ಕಲಾಪಕ್ಕೆ ಕಾಂಗ್ರೆಸ್ ಅಡ್ಡಿ: ಪ್ರಧಾನಿ

ಸಂಸತ್ತಿನ ಎರಡೂ ಸದನಗಳಲ್ಲಿ ಸುಗಮ ಕಲಾಪ ನಡೆಯಲು ಕಾಂಗ್ರೆಸ್ ಬಿಡುತ್ತಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ, ಮಂಗಳವಾರ ಹರಿಹಾಯ್ದಿದ್ದಾರೆ. ಬಿಜೆಪಿ ಸಂಸದೀಯ ಪಕ್ಷದ ಸಭೆಯಲ್ಲಿ ಮಾತನಾಡಿದ ಅವರು, ಮುಂಗಾರು ಅಧಿವೇಶನವನ್ನು ಹಳಿತಪ್ಪಿಸಲು ಪ್ರಯತ್ನಿಸುತ್ತಿರುವ ಕಾಂಗ್ರೆಸ್ ಬಂಡವಾಳವನ್ನು ಬಯಲು ಮಾಡುವಂತೆ ಪಕ್ಷದ ಸಂಸದರಿಗೆ ಸೂಚಿಸಿದರು.

ಉನ್ನತ ಶಿಕ್ಷಣ ಇಲಾಖೆ

ಬಹುಮಹಡಿಗಳ ಕಟ್ಟಡ, ಬೆಂಗಳೂರು

ಇ–ಕ್ರಮಾಂಕ.: ಇಡಿ/199/ಯುಬಿವಿ/2021(ಭಾಗ–2) ದಿನಾಂಕ:27.07.2021

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯ ನೇಮಕಾತಿ

1. ಕೋಲಾರದಲ್ಲಿರುವ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000 ಪ್ರಕರಣ 14(2)ರ ಉಪಬಂಧಗಳನುಸಾರ ನೇಮಕಾತಿ ಮಾಡಲು ಈ ಕೆಳಕಂಡ ಅರ್ಹತೆಯುಳ್ಳ ಪ್ರಾಧ್ಯಾಪಕರು/ಶಿಕ್ಷಣ ತಜ್ಞರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
   i) ಉನ್ನತ ಮಟ್ಟದ ಆಡಳಿತ, ಶೈಕ್ಷಣಿಕ ಹಾಗೂ ಸಂಶೋಧನಾ ಸಾಮರ್ಥ್ಯ, ಪ್ರಾಮಾಣಿಕತೆ, ಸಮಗ್ರತೆ/ಋಜುತ್ವ ನೈತಿಕ ಮೌಲ್ಯಗಳನ್ನು ಹಾಗೂ ಸಾಂಸ್ಥಿಕ ಬದ್ಧತೆಯನ್ನು ಹೊಂದಿರತಕ್ಕದ್ದು;
   ii) ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಕನಿಷ್ಠ 10 ವರ್ಷಗಳ ಸೇವೆ ಸಲ್ಲಿಸಿದ ಅಥವಾ ವಿಖ್ಯಾತ ಸಂಶೋಧನಾ/ಅಥವಾ ಶೈಕ್ಷಣಿಕ ಆಡಳಿತ ಸಂಸ್ಥೆಗಳಲ್ಲಿ ಕನಿಷ್ಠ 10 ವರ್ಷಗಳು ಕಾರ್ಯನಿರ್ವಹಿಸಿದ ಅನುಭವವನ್ನು ಹಾಗೂ ರುಜುವಾತದ ಶೈಕ್ಷಣಿಕ ಅಗ್ರಗಾಮಿತ್ವವನ್ನು ಹೊಂದಿರತಕ್ಕದ್ದು;
   iii) ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000ರ ಪ್ರಕರಣ 14(5) ಹಾಗೂ ಪ್ರಕರಣ 14(6) ರಲ್ಲಿ ನಿಯಮಿಸಿರುವಂತೆ, 4 ವರ್ಷಗಳು ಅಥವಾ 67 ವರ್ಷಗಳ ವಯಸ್ಸಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕುಲಾಧಿಪತಿಗಳ ಇಷ್ಟಪರ್ಯಂತ ಪದಧಾರಣಾವಧಿಯನ್ನು ಹೊಂದಿರುತ್ತಾರೆ. ಆದುದರಿಂದ ಕುಲಾಧಿಪತಿಗಳ ಇಷ್ಟಪರ್ಯಂತ 4 ವರ್ಷಗಳ ಪದಧಾರಣಾವಧಿಯ ಅವಕಾಶವಿರುವ ವಯೋಮಿತಿಯನ್ನು ಹೊಂದಿರತಕ್ಕದ್ದು.
2. ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯ ನೇಮಕಾತಿಗೆ ಉಮೇದುವಾರಿಕೆ ಸಲ್ಲಿಸ ಬಯಸುವ ಆಸಕ್ತರು ತಮ್ಮ ವಿದ್ಯಾರ್ಹತೆ, ಸಂಶೋಧನೆ, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಅನುಭವಗಳು, ಸಾಧನೆಗಳು ಹಾಗೂ ಇತರೆ ವಿವರಗಳನ್ನು ಯುಜಿಸಿಯಿಂದ ನಿಗದಿಪಡಿಸಲಾಗಿರುವ ನಮೂನೆಯಲ್ಲಿ ಭರ್ತಿ ಮಾಡಿ ಮುದ್ರಿತ ಅರ್ಜಿಗಳನ್ನು ತ್ರಿಪ್ರತಿಗಳಲ್ಲಿ ಈ ನೇಮಕಾತಿ ಜಾಹೀರಾತು ಪ್ರಕಟಣೆಯಾದ 15 ದಿನಗಳ ಒಳಗಾಗಿ ಸ್ವೀಕೃತವಾಗುವಂತೆ **“ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, 6 ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು–560001”** ಇವರಿಗೆ ಸಲ್ಲಿಸತಕ್ಕದ್ದು.
3. ಪಿಡಿಎಫ್ ರೂಪದ ವಿದ್ಯುನ್ಮಾನ ಅರ್ಜಿಗಳನ್ನು ಏಕ ಪ್ರತಿಯಲ್ಲಿ e-mail: kgsheduni2020@gmail.com ಗೆ ಕಳುಹಿಸತಕ್ಕದ್ದು.
4. ಪ್ರಸ್ತುತ ಸೇವೆಯಲ್ಲಿರುವ ವ್ಯಕ್ತಿಗಳು ಅವರ ವಿರುದ್ಧ ಇಲಾಖಾ / ಕ್ರಿಮಿನಲ್ ವಿಚಾರಣೆಗಳು ಬಾಕಿ ಇರದ / ಹೂಡಲು ಉದ್ದೇಶಿಸಿರದ ಮತ್ತು ಈ ಹಿಂದೆ ವಿಚಾರಣೆಗಳನ್ನು ನಡೆಸಿ ದಂಡನೆ ವಿಧಿಸಲಾಗಿರದ ಬಗ್ಗೆ ಹಾಗೂ ಕಳಂಕಿತ ಸೇವಾ ಚರಿತ್ರೆ ಹಾಗೂ ನೇಮಕಾತಿ ವಿವಾದಗಳನ್ನು ಹೊಂದಿರದ ಬಗ್ಗೆ, ಅವರು ಸೇವೆ ಸಲ್ಲಿಸುತ್ತಿರುವ ಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಿಸಿ ಪ್ರಮಾಣ ಪತ್ರಗಳನ್ನು ಹಾಗೂ ಸೇವೆಯಿಂದ ವಯೋನಿವೃತ್ತಿ ಹೊಂದಿರುವವರು ಈ ಕುರಿತಂತೆ ಸ್ವಯಂ ದೃಢೀಕರಣ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಪ್ರಮಾಣ ಪತ್ರಗಳಲ್ಲಿ ತಪ್ಪು ಮಾಹಿತಿ ನೀಡಿರುವುದು ಕಂಡುಬಂದಲ್ಲಿ ಸಂಬಂಧಿಸಿದವರನ್ನು ಕಠಿಣ ಕ್ರಮಕ್ಕೆ ಗುರಿಪಡಿಸಲಾಗುವುದು. ಈ ರೀತಿಯಲ್ಲಿ ಪ್ರಮಾಣ ಪತ್ರಗಳನ್ನು ಸಲ್ಲಿಸದ ವ್ಯಕ್ತಿಗಳ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
5. ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿರುವ ನಮೂನೆ/ಪ್ರಪತ್ರವನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣದಿಂದ ಪಡೆಯಬಹುದು.
6. ನಿಗದಿತ ಅವಧಿ/ಗಡುವು ಮುಕ್ತಾಯವಾದ ನಂತರ ಸ್ವೀಕೃತವಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅಂಚೆ ಅಥವಾ ಇತರೆ ಸ್ವರೂಪದ ವಿಳಂಬಗಳಿಗೆ ಉನ್ನತ ಶಿಕ್ಷಣ ಇಲಾಖೆಯು ಜವಾಬ್ದಾರವಾಗುವುದಿಲ್ಲ.
7. ನೇಮಕಾತಿ ಪ್ರಕ್ರಿಯೆಯಲ್ಲಿ ವಾಮಮಾರ್ಗದ ಮೂಲಕ ಅನುಚಿತ ಪ್ರಭಾವ ಬೀರಲು ಪ್ರಯತ್ನಿಸುವ ವ್ಯಕ್ತಿಗಳ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು.

ಸಹಿ/– ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ.

ವಾಸಾಸಂಇ/ಬೆಂ.ನ./ಜಿಎ/952/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮುಂಬೈ–ಬೆಂಗಳೂರು ಹೆದ್ದಾರಿಯಲ್ಲಿ ಮೇಲ್ಸೇತುವೆ ನಿರ್ಮಿಸಲು ಚಿಂತನೆ

ಪುಣೆ (ಪಿಟಿಐ): ಪ್ರವಾಹದ ಕಾರಣದಿಂದ ವಾಹನಗಳ ಮುಕ್ತ ಸಂಚಾರಕ್ಕೆ ತೊಂದರೆಯಾಗುವುದನ್ನು ತಡೆಯಲು ಮುಂಬೈ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕೊಲ್ಲಾಪುರದ ಬಳಿ ಮೇಲ್ಸೇತುವೆ ನಿರ್ಮಾಣ ಮಾಡಲು ಮಹಾರಾಷ್ಟ್ರ ಸರ್ಕಾರ ಚಿಂತನೆ ನಡೆಸಿದೆ.

ಕಳೆದ ವಾರ ಭಾರಿ ಮಳೆಯಿಂದ ಕೊಲ್ಲಾಪುರದಲ್ಲಿ ಉಂಟಾದ ಪ್ರವಾಹ ಪರಿಸ್ಥಿತಿಯನ್ನು ಪರಿಶೀಲನೆ ನಡೆಸಲು ಉಪಮುಖ್ಯಮಂತ್ರಿ ಅಜಿತ್ ಪವಾರ್ ಮಂಗಳವಾರ ಭೇಟಿ ನೀಡಿದ್ದರು. ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರೊಂದಿಗೆ ಮೇಲ್ಸೇತುವೆ ನಿರ್ಮಾಣ ಕುರಿತಂತೆ ಮಾತುಕತೆ ನಡೆಸುವುದಾಗಿ ಪವಾರ್ ಹೇಳಿದರು.

ಪಂಚಗಂಗಾ ನದಿಗೆ ಹರಿಯುವ ತೊರೆಗಳ ಮೇಲಿನ ಒತ್ತುವರಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಈ ವೇಳೆ ಸೂಚಿಸಿದರು.

ಬೆಂಗಳೂರು–ಮುಂಬೈ ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರವಾಹದಿಂದಾಗಿ ನಾಲ್ಕು ದಿನಗಳಿಂದ ಸಂಚಾರ ಸ್ಥಗಿತವಾಗಿತ್ತು. ಸೋಮವಾರದಿಂದ ಸಂಚಾರ ಪುನರಾರಂಭವಾಗಿದೆ. ಲಾರಿ ಮತ್ತು ಕಾರು ಸೇರಿದಂತೆ ಎರಡು ಸಾವಿರಕ್ಕೂ ಹೆಚ್ಚು ವಾಹನಗಳು ಅಲ್ಲಿ ಸಿಲುಕಿಕೊಂಡಿದ್ದವು.

‘ರಾಷ್ಟ್ರೀಯ ಹೆದ್ದಾರಿ ಯಾವಾಗಲೂ ವಾಹನಗಳ ಸಂಚಾರಕ್ಕೆ ಮುಕ್ತವಾಗಿರಬೇಕು. ಪುಣೆ (ಮುಂಬೈ)–ಬೆಂಗಳೂರು ಹೆದ್ದಾರಿಯಲ್ಲಿ ಪ್ರವಾಹದ ಸಂದರ್ಭದಲ್ಲಿ ವಾಹನಗಳ ಸಂಚಾರಕ್ಕೆ ಅಡ್ಡಿಯಾಗದಂತೆ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಮೇಲ್ಸೇತುವೆಗಳನ್ನು ನಿರ್ಮಿಸುವ ಬಗ್ಗೆ ಗಡ್ಕರಿ ಅವರೊಡನೆ ಮಾತುಕತೆ ನಡೆಸುತ್ತೇನೆ’ ಎಂದು ಅವರು ಹೇಳಿದರು.

‘ಕರ್ನಾಟಕದ ಆಲಮಟ್ಟಿ ಜಲಾಶಯದಿಂದಾಗಿ ಸಾಂಗ್ಲಿ ಮತ್ತು ಕೊಲ್ಲಾಪುರದಲ್ಲಿ ಸಾಮಾನ್ಯವಾಗಿ ಪ್ರವಾಹ ಉಂಟಾಗುತ್ತದೆ ಎಂದು ಹೇಳಲಾಗುತ್ತಿತ್ತು. ಆದರೆ ಸಾಂಗ್ಲಿ–ಕೊಲ್ಲಾಪುರದಲ್ಲಿ ಪ್ರವಾಹ ಉಂಟಾಗಲು ಆಲಮಟ್ಟಿ ಜಲಾಶಯ ಕಾರಣ ಅಲ್ಲ ಎಂದು ಈ ಹಿಂದೆ ಅಧಿಕಾರದಲ್ಲಿದ್ದ (ಬಿಜೆಪಿ ನೇತೃತ್ವ) ಸರ್ಕಾರವು ರಚಿಸಿದ್ದ ಸಮಿತಿಯು ವರದಿ ನೀಡಿತ್ತು’ ಎಂದು ಪವಾರ್ ಹೇಳಿದರು.

ಪೆಗಾಸಸ್: ಸುಪ್ರೀಂ ಮೆಟ್ಟಿಲೇರಿದ ಪತ್ರಕರ್ತರು

ನವದೆಹಲಿ (ಪಿಟಿಐ): ಪೆಗಾಸಸ್ ಕುತಂತ್ರಾಂಶ ಬಳಸಿಕೊಂಡು ರಾಜಕಾರಣಿಗಳು, ಪತ್ರಕರ್ತರು ಹಾಗೂ ನಾಗರಿಕರ ಮೇಲೆ ಸರ್ಕಾರ ಕಣ್ಗಾವಲು ಇಟ್ಟಿದೆ ಎಂಬ ವರದಿಗಳ ಕುರಿತು ಹಾಲಿ ಅಥವಾ ನಿವೃತ್ತ ನ್ಯಾಯಮೂರ್ತಿಯಿಂದ ಸ್ವತಂತ್ರ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ಹಿರಿಯ ಪತ್ರಕರ್ತ ಎನ್. ರಾಮ್ ಮತ್ತು ಶಶಿ ಕುಮಾರ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಮುಂದಿನ ಕೆಲವು ದಿನಗಳಲ್ಲಿ ಈ ಅರ್ಜಿ ವಿಚಾರಣೆಗೆ ಬರುವ ಸಾಧ್ಯತೆಯಿದೆ. ಭಾರತದಲ್ಲಿ ಮುಕ್ತ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ತಣ್ಣಗಾಗಿಸುವ ಯತ್ನವಿದು ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

‘ಸರ್ಕಾರ ಅಥವಾ ಅದರ ಯಾವುದೇ ಸಂಸ್ಥೆಗಳು ಪೆಗಾಸಸ್ ತಂತ್ರಾಂಶದ ಪರವಾನಗಿ ಪಡೆದಿವೆಯೇ ಮತ್ತು ಕಣ್ಗಾವಲು ನಡೆಸಲು ಅದನ್ನು ನೇರವಾಗಿ ಅಥವಾ ಪರೋಕ್ಷವಾಗಿ ಬಳಸುತ್ತಿವೆಯೇ’ ಎಂದು ಬಹಿರಂಗಪಡಿಸಲು ಕೇಂದ್ರಕ್ಕೆ ನಿರ್ದೇಶನ ನೀಡುವಂತೆ ಕೋರಲಾಗಿದೆ.

ಇಂದು ವಿಚಾರಣೆ

ಪೆಗಾಸಸ್ ಕುತಂತ್ರಾಂಶ ಬಳಸಿಕೊಂಡು ರಾಜಕಾರಣಿಗಳು, ಪತ್ರಕರ್ತರು ಹಾಗೂ ಇತರರ ದೂರವಾಣಿಗಳನ್ನು ಕದ್ದಾಲಿಸಿರುವ ವಿಷಯವಾಗಿ ಮಾಹಿತಿ ತಂತ್ರಜ್ಞಾನ (ಐ.ಟಿ) ಕುರಿತ ಸಂಸದೀಯ ಸ್ಥಾಯಿ ಸಮಿತಿಯು ಅಧಿಕಾರಿಗಳನ್ನು ಪ್ರಶ್ನೆ ಮಾಡಲಿದೆ.

32 ಸದಸ್ಯರ ಸಂಸದೀಯ ಸ್ಥಾಯಿ ಸಮಿತಿಯು ಬುಧವಾರ ಸಭೆ ಸೇರಲಿದ್ದು, ಪಟ್ಟಿ ಮಾಡಲಾದ ಸಭೆಯ ಕಾರ್ಯಸೂಚಿಯಲ್ಲಿ ನಾಗರಿಕರ ದತ್ತಾಂಶ ಸುರಕ್ಷತೆ ಮತ್ತು ಗೋಪ್ಯತೆ ವಿಷಯದ ಬಗ್ಗೆ ಚರ್ಚಿಸಲಾಗುತ್ತದೆ ಎಂದು ಲೋಕಸಭಾ ಸಚಿವಾಲಯ ಹೊರಡಿಸಿದ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಜಂಟಿ ನಿಲುವಳಿ ಮಂಡನೆಗೆ ನಿರ್ಧಾರ

ಕಾಂಗ್ರೆಸ್, ಡಿಎಂಕೆ, ಶಿವಸೇನಾ ಸೇರಿದಂತೆ ವಿರೋಧ ಪಕ್ಷದ ನಾಯಕರು ಬುಧವಾರ ಲೋಕಸಭೆಯಲ್ಲಿ ಪೆಗಾಸಸ್ ವಿಷಯದ ಬಗ್ಗೆ ಜಂಟಿ ಗೊತ್ತುವಳಿ ಮಂಡಿಸಲು ನಿರ್ಧರಿಸಿದ್ದಾರೆ. ಪ್ರತಿಪಕ್ಷಗಳ ಬೇಡಿಕೆಯನ್ನು ಸರ್ಕಾರ ನಿರ್ಲಕ್ಷಿಸಿದರೆ ತೆಗೆದುಕೊಳ್ಳಬೇಕಾದ ಮುಂದಿನ ಕ್ರಮಗಳ ಬಗ್ಗೆ ಎಲ್ಲ ಸಮಾನ ಮನಸ್ಕ ಪಕ್ಷಗಳು ಸಭೆ ನಡೆಸಲಿವೆ. ಲೋಕಸಭೆ ಮತ್ತು ರಾಜ್ಯಸಭೆಯು ಬುಧವಾರ ಸಮಾವೇಶಗೊಳ್ಳುವುದಕ್ಕಿಂತ ಮೊದಲು ಈ ಸಭೆ ನಡೆಯಲಿದೆ. ಸಭೆಯಲ್ಲಿ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಭಾಗವಹಿಸಲಿದ್ದಾರೆ. ಕಾಂಗ್ರೆಸ್, ಎನ್‌ಸಿಪಿ, ಶಿವಸೇನಾ, ಸಿಪಿಎಂ, ಆರ್‌ಎಸ್‌ಪಿ, ಮುಸ್ಲಿಂ ಲೀಗ್, ಎನ್‌ಸಿ ಮತ್ತು ಬಿಎಸ್‌ಪಿ ಒಳಗೊಂಡ ಹತ್ತು ಪಕ್ಷಗಳ ನಾಯಕರು ಮಂಗಳವಾರ ಸಂಜೆ ಸಭೆ ಸೇರಿ ಮುಂದಿನ ತಂತ್ರಗಾರಿಕೆ ಬಗ್ಗೆ ಚರ್ಚಿಸಿದ್ದಾರೆ.

ಸದ್ಯದಲ್ಲೇ ಬಹಿರಂಗ: ಚಿದಂಬರಂ

ಪೆಗಾಸಸ್ ಗೂಢಚರ್ಯೆ ಪ್ರಕರಣದಲ್ಲಿ ‘ಭಾರತೀಯ ಗ್ರಾಹಕ’ ಯಾರು ಎಂಬುದು ಶೀಘ್ರದಲ್ಲೇ ಬಹಿರಂಗವಾಗಲಿದೆ ಎಂದು ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ ಮಂಗಳವಾರ ಹೇಳಿದ್ದಾರೆ. ‘ಆ ಗ್ರಾಹಕರ ಹೆಸರು ಪತ್ತೆಯಾಗುವವರೆಗೂ ಕೇಂದ್ರ ಸರ್ಕಾರವು ತನ್ನ ವಿರುದ್ಧದ ಎಲ್ಲ ಆರೋಪಗಳನ್ನು ನಿರಾಕರಿಸುತ್ತಿರುತ್ತದೆ. ಗೂಢಚರ್ಯೆ ತಂತ್ರಾಂಶವನ್ನು ಖರೀದಿಸಿರುವ ಭಾರತೀಯ ಗ್ರಾಹಕ ಯಾರು, ಅದು ಕೇಂದ್ರ ಸರ್ಕಾರವೇ, ಅಥವಾ ಸರ್ಕಾರದ ಸಂಸ್ಥೆಯೇ ಅಥವಾ ಖಾಸಗಿ ಘಟಕವೇ’ ಎಂದು ಅವರು ಟ್ವಿಟರ್‌ನಲ್ಲಿ ಪ್ರಶ್ನಿಸಿದ್ದಾರೆ.

- ಜೆಟ್ ಏರ್‌ವೇಸ್‌ನ ಮಾಜಿ ಮುಖ್ಯಸ್ಥ ನರೇಶ್ ಗೋಯೆಲ್, ಸ್ಪೈಸ್‌ಜೆಟ್‌ನ ವ್ಯವಸ್ಥಾಪಕ ನಿರ್ದೇಶಕ ಅಜಯ್ ಸಿಂಗ್ ಮತ್ತು ಎಸ್ಸಾರ್ ಗ್ರೂಪ್‌ನ ಪ್ರಶಾಂತ್ ರೂಯಾ ಅವರ ಫೋನ್ ಸಂಖ್ಯೆ ಪೆಗಾಸಸ್ ಗೂಢಚರ್ಯೆ ಪಟ್ಟಿಯಲ್ಲಿ
- ಪಶ್ಚಿಮ ಬಂಗಾಳದಂತೆಯೇ ಪೆಗಾಸಸ್ ಗೂಢಚರ್ಯೆ ತನಿಖೆಗೆ ಆಯೋಗ ರಚಿಸುವಂತೆ ಮಹಾರಾಷ್ಟ್ರ ಸರ್ಕಾರಕ್ಕೆ ಕಾಂಗ್ರೆಸ್ ಒತ್ತಾಯ
- ಪೆಗಾಸಸ್ ಗೂಢಚರ್ಯೆಯನ್ನು ಖಂಡಿಸಿ 'ಆಲ್ ಇಂಡಿಯಾ ರೈಲ್ವೆಮೆನ್ಸ್ ಫೆಡರೇಷನ್ 'ಧಿಕ್ಕಾರ ದಿನ' ಆಚರಿಸಿದೆ

The Karnataka Bank Ltd.

Your Family Bank. Across India.

Regd. & Head Office : Mangaluru - 575 002 CIN : L85110KA1924PLC001128 e-mail : info@ktkbank.com visit us at : https://karnatakabank.com

STANDALONE REVIEWED FINANCIAL RESULTS FOR / AS ON QUARTER ENDED JUNE 30, 2021 (₹ in crore)

Particulars	Quarter ended 30.06.2021 (Reviewed)	Quarter ended 31.03.2021 (Audited)	Quarter ended 30.06.2020 (Reviewed)	Year ended 31.03.2021 (Audited)
Total income from operations (net)	1759.41	1790.70	2134.63	7727.48
Net Profit / (Loss) from ordinary activities after tax	106.08	31.36	196.38	482.57
Net Profit / (Loss) for the period after tax (after Extraordinary items)	106.08	31.36	196.38	482.57
Equity Share Capital	310.88	310.88	310.88	310.88
Reserves (excluding Revaluation Reserve) as shown in the Balance Sheet of previous year	------	5866.14	------	5866.14
Earnings Per Share (before extraordinary items) (of Rs 10/- each)				
Basic:	3.41*	1.01*	6.32*	15.52
Diluted:	3.40*	1.01*	6.32*	15.48
Earnings Per Share (After extraordinary items) (of Rs 10/- each)				
Basic:	3.41*	1.01*	6.32*	15.52
Diluted:	3.40*	1.01*	6.32*	15.48

CONSOLIDATED REVIEWED FINANCIAL RESULTS FOR / AS ON QUARTER ENDED JUNE 30, 2021 (₹ in crore)

Particulars	Quarter ended 30.06.2021 (Reviewed)	Quarter ended 31.03.2021 (Audited)	Quarter ended 30.06.2020 (Reviewed)	Year ended 31.03.2021 (Audited)
Total income from operations (net)	1759.38	1790.70	2134.63	7727.48
Net Profit / (Loss) from ordinary activities after tax	105.91	31.36	196.38	482.46
Net Profit / (Loss) for the period after tax (after Extraordinary items)	105.91	31.36	196.38	482.46
Equity Share Capital	310.88	310.88	310.88	310.88
Reserves (excluding Revaluation Reserve) as shown in the Balance Sheet of previous year	-----	5866.14	------	5866.14
Earnings Per Share (before extraordinary items) (of Rs 10/- each)				
Basic:	3.41*	1.01*	6.32*	15.52
Diluted:	3.39*	1.01*	6.32*	15.47
Earnings Per Share (After extraordinary items) (of Rs 10/- each)				
Basic:	3.41*	1.01*	6.32*	15.52
Diluted:	3.39*	1.01*	6.32*	15.47

* Not annualized

Note: The above is an extract of the detailed format of period ended results for June 30, 2021 filed with the Stock Exchange under Regulation 33 of the SEBI (Listing and Other Disclosure Requirements) Regulations, 2015. The full format of the results for June 30, 2021 is available on the Stock Exchange websites. BSE: http://www.bseindia.com, NSE: http://www.nseindia.com, Bank website: https://www.karnatakaBank.com/index.jspp.

Place : Mangaluru
Date : 27.07.2021

For and on behalf of Board of Directors
Sd/-
Mahabaleshwara M S
Managing Director & CEO

ಶಿಗ್ಗಾವಿ ಸರದಾರನಿಗೆ ಸಿ.ಎಂ ಪಟ್ಟ

ನಿಯೋಜಿತ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಗಳವಾರ ರಾಜಭವನದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಭೇಟಿಯಾಗಿ ಸರ್ಕಾರ ರಚಿಸಲು ಹಕ್ಕುಮಂಡನೆಯ ಪತ್ರವನ್ನು ನೀಡಿದರು. ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ವೀಕ್ಷಕ ಧರ್ಮೇಂದ್ರ ಪ್ರಧಾನ್, ಉಸ್ತುವಾರಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ವೀಕ್ಷಕ ಕಿಶನ್ ರೆಡ್ಡಿ ಇದ್ದರು

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಹುಬ್ಬಳ್ಳಿ ಚನ್ನಮ್ಮ ವೃತ್ತದಲ್ಲಿ ಮಂಗಳವಾರ ರಾತ್ರಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಸಂಭ್ರಮಾಚರಿಸಿದರು

ಬಹುಮತ ಸಾಬೀತಿನ ವ್ಯಾಖ್ಯೆ ಬದಲಿಸಿದ್ದ ಬೊಮ್ಮಾಯಿ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವರಾಜ ಬೊಮ್ಮಾಯಿ ಅವರ ತಂದೆ ಎಸ್.ಆರ್. ಬೊಮ್ಮಾಯಿ ಅವರು ಎಂಟು ತಿಂಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಬಹುಮತ ಸಾಬೀತಿಗೆ ಅವಕಾಶ ನೀಡದೇ ನೇರವಾಗಿ ರಾಷ್ಟ್ರಪತಿ ಆಳ್ವಿಕೆ ಜಾರಿಮಾಡಿದ್ದ ಆಗಿನ ಕೇಂದ್ರ ಸರ್ಕಾರದ ನಿರ್ಧಾರ ಮತ್ತು ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಐತಿಹಾಸಿಕ ದಾಖಲೆಯಾಗಿ ಉಳಿದಿದೆ.

1989ರ ಏಪ್ರಿಲ್‌ನಲ್ಲಿ ಆಡಳಿತ ಪಕ್ಷದ ಕೆಲವು ಶಾಸಕರು ರಾಜ್ಯಪಾಲರನ್ನು ಭೇಟಿ ಮಾಡಿ, ಸರ್ಕಾರಕ್ಕೆ ತಮ್ಮ ಬೆಂಬಲವಿಲ್ಲ ಎಂದು ಘೋಷಿಸಿದ್ದರು. ಮುಖ್ಯಮಂತ್ರಿಯಾಗಿದ್ದ ಎಸ್.ಆರ್. ಬೊಮ್ಮಾಯಿ ಅವರು ರಾಜ್ಯಪಾಲರನ್ನು ಭೇಟಿ ಮಾಡಿ, 'ಅಧಿವೇಶನ ಕರೆದು ಬಹುಮತ ಸಾಬೀತುಮಾಡುತ್ತೇನೆ' ಎಂದು ಅವಕಾಶ ಕೋರಿದ್ದರು. ಆದರೆ ಅಂದಿನ ರಾಷ್ಟ್ರಪತಿ ಆರ್. ವೆಂಕಟರಾಮನ್ ಅವರು ಬೊಮ್ಮಾಯಿ ನೇತೃತ್ವದ ಸರ್ಕಾರವನ್ನು ವಜಾಗೊಳಿಸಿ 1989ರ ಏಪ್ರಿಲ್ 21ರಂದು ಆದೇಶ ಹೊರಡಿಸಿದ್ದರು. ಬಳಿಕ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿದ್ದರು.

ಕೇಂದ್ರ ಸರ್ಕಾರದ ನಿರ್ಧಾರ ಪ್ರಶ್ನಿಸಿ ಬೊಮ್ಮಾಯಿ ಅವರು ಹೈಕೋರ್ಟ್ ಮೊರೆ ಹೋಗಿದ್ದರು. ಅವರ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿತ್ತು. ಬೊಮ್ಮಾಯಿ ಅವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಸುದೀರ್ಘ ವಿಚಾರಣೆಯ ನಂತರ 1994ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು.

'ಸರ್ಕಾರವು ಬಹುಮತ ಹೊಂದಿದೆಯೇ ಇಲ್ಲವೇ ಎಂಬುದನ್ನು ವಿಧಾನಸಭೆಯ ಅಧಿವೇಶನವೇ ನಿರ್ಧರಿಸಬೇಕು. ರಾಜಭವನ ಅಥವಾ ರಾಷ್ಟ್ರಪತಿ ಭವನದಲ್ಲಿ ಇದನ್ನು ನಿರ್ಧರಿಸುವುದಲ್ಲ' ಎಂದು ತೀರ್ಪಿನಲ್ಲಿ ಹೇಳಲಾಗಿತ್ತು. ಬಹುಮತ ಸಾಬೀತುಪಡಿಸುವುದಕ್ಕೆ ಸಂಬಂಧಿಸಿ ಬೇರೆ ಬೇರೆ ರಾಜ್ಯಗಳಲ್ಲಿ ಬಿಕ್ಕಟ್ಟು ತಲೆದೋರಿದಾಗಲೆಲ್ಲ ಎಸ್.ಆರ್. ಬೊಮ್ಮಾಯಿ ಪ್ರಕರಣದ ಆಧಾರದಲ್ಲೇ ಸುಪ್ರೀಂ ಕೋರ್ಟ್ ತೀರ್ಮಾನಕ್ಕೆ ಬರುತ್ತಿದೆ.

ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ 2018ರಲ್ಲಿ ಅಧಿಕಾರ ಸ್ವೀಕರಿಸಿದಾಗ, ಸದನದಲ್ಲಿ ಬಹುಮತ ಸಾಬೀತುಮಾಡಿರಲಿಲ್ಲ. ರಾಜ್ಯಪಾಲರ ಎದುರು ಮಾತ್ರವೇ ತಮ್ಮ ಬೆಂಬಲಿಗ ಶಾಸಕರ ಪಟ್ಟಿ ಪ್ರದರ್ಶಿಸಿದ್ದರು. ಅವರು ಸದನದಲ್ಲಿ ಬಹುಮತ ಸಾಬೀತುಮಾಡಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಸದನದಲ್ಲಿ ಬಹುಮತ ಸಾಬೀತುಮಾಡಿ ಎಂದು ಯಡಿಯೂರಪ್ಪ ಅವರಿಗೆ ಸುಪ್ರೀಂ ಕೋರ್ಟ್ ಸೂಚಿಸಿತ್ತು. ಆಗಲೂ ಎಸ್.ಆರ್. ಬೊಮ್ಮಾಯಿ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣವನ್ನು ನ್ಯಾಯಾಲಯ ಉಲ್ಲೇಖಿಸಿತ್ತು.

ಲಿಂಗಾಯತ ಸಮುದಾಯವರು ಸಿ.ಎಂ ಆದ ಅವಧಿ

ಹೆಸರು	ಅವಧಿ
ಎಸ್.ನಿಜಲಿಂಗಪ್ಪ	01-11-1956ರಿಂದ 16-05-1958
ಬಿ.ಡಿ.ಜತ್ತಿ	16-05-1958 ರಿಂದ 09-03-1962
ಎಸ್.ಆರ್.ಕಂಠಿ	14-03-1962 ರಿಂದ 20-06-1962
ಎಸ್.ನಿಜಲಿಂಗಪ್ಪ	21-06-1962ರಿಂದ 28-05-1968
ವೀರೇಂದ್ರ ಪಾಟೀಲ	29-05-1968ರಿಂದ 18-03-1971
ಎಸ್.ಆರ್.ಬೊಮ್ಮಾಯಿ	13-08-1988 ರಿಂದ 21-04-1989
ವೀರೇಂದ್ರ ಪಾಟೀಲ	30-11-1989ರಿಂದ 10-10-1990
ಜೆ.ಎಚ್.ಪಟೇಲ್	31-05-1996 ರಿಂದ 07-10-1999
ಬಿ.ಎಸ್.ಯಡಿಯೂರಪ್ಪ	12-11-2007ರಿಂದ 19-11-2007
ಬಿ.ಎಸ್.ಯಡಿಯೂರಪ್ಪ	30-05-2008 ರಿಂದ 04-08-2011
ಜಗದೀಶ ಶೆಟ್ಟರ್	12-07-2012ರಿಂದ 12-5-2013
ಬಿ.ಎಸ್.ಯಡಿಯೂರಪ್ಪ	17-05-2018ರಿಂದ 23-05-2018
ಬಿ.ಎಸ್.ಯಡಿಯೂರಪ್ಪ	26-07-2019ರಿಂದ 26-07-2021

ಬಸವರಾಜ ಬೊಮ್ಮಾಯಿ ಜತೆ ಮೂರು ಸುತ್ತು ಮಾತುಕತೆ ನಡೆಸಿ ಸಿದ್ಧತೆಗೆ ಸೂಚಿಸಿದ್ದ ಹೈಕಮಾಂಡ್

ಮೇ 8ರಂದೇ ನಿರ್ಧಾರ ಕೈಗೊಂಡಿದ್ದ ವರಿಷ್ಠರು?

• ಸಿದ್ದಯ್ಯ ಹಿರೇಮಠ

ನವದೆಹಲಿ: ಮುಖ್ಯಮಂತ್ರಿ ಸ್ಥಾನದಿಂದ ಬಿ.ಎಸ್. ಯಡಿಯೂರಪ್ಪ ಅವರ ರಾಜೀನಾಮೆ ಪಡೆದು, ಬಸವರಾಜ ಬೊಮ್ಮಾಯಿ ಅವರಿಗೆ ನಾಯಕತ್ವ ವಹಿಸುವ ನಿಟ್ಟಿನಲ್ಲಿ ಬಿಜೆಪಿ ವರಿಷ್ಠರು ಮೇ 8ರಂದೇ ನಿರ್ಧರಿಸಿದ್ದರೇ?

ಈ ಪ್ರಶ್ನೆಗೆ ಬಿಜೆಪಿ ಹೈಕಮಾಂಡ್ ಮೂಲಗಳಿಂದ 'ಹೌದು' ಎಂಬ ಉತ್ತರ ದೊರೆತಿದೆ.

ಕೊರೊನಾ ಎರಡನೇ ಅಲೆ ರಾಜ್ಯದಾದ್ಯಂತ ಗಂಭೀರ ಪರಿಣಾಮ ಬೀರುತ್ತಿದ್ದ ಸಂದರ್ಭದಲ್ಲಿ, ಮೇ 7ರ ಸಂಜೆ ವಿಶೇಷ ವಿಮಾನದಲ್ಲಿ ಯಡಿಯೂರಪ್ಪ ಅವರ ಪುತ್ರ ಬಿ.ವೈ. ವಿಜಯೇಂದ್ರ ಹಾಗೂ ಅಡ್ವೋಕೇಟ್ ಜನರಲ್ ಪ್ರಭುಲಿಂಗ ನಾವದಗಿ ಅವರೊಂದಿಗೆ ದೆಹಲಿಗೆ ಧಾವಿಸಿದ್ದ ಬೊಮ್ಮಾಯಿ, ವರಿಷ್ಠರನ್ನು ಭೇಟಿ ಮಾಡಿದ್ದರು.

ಈ ಗೋಪ್ಯ ಭೇಟಿಯ ವೇಳೆ ಕೇಂದ್ರದ ಗೃಹ ಸಚಿವ ಅಮಿತ್ ಶಾ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಬೊಮ್ಮಾಯಿ ಅವರೊಂದಿಗೆ ಪ್ರತ್ಯೇಕವಾಗಿ ಚರ್ಚಿಸಿದ್ದರು. 'ನನ್ನ ಉತ್ತರಾಧಿಕಾರಿಯಾಗಿ ಬಸವರಾಜ ಬೊಮ್ಮಾಯಿ ಆಯ್ಕೆ ಮಾಡಬಹುದು' ಎಂಬ ಬೇಡಿಕೆಯನ್ನು ಯಡಿಯೂರಪ್ಪ ಅವರೇ ವರಿಷ್ಠರೆದುರು ಇರಿಸಿದ್ದರು ಎಂದೂ ತಿಳಿದುಬಂದಿದೆ.

ಈ ಹಿನ್ನೆಲೆಯಲ್ಲಿ ಅಮಿತ್ ಶಾ ಮತ್ತಿತರ ವರಿಷ್ಠರು ಬೊಮ್ಮಾಯಿ ಅವರೊಂದಿಗೆ ಸತತ ಮೂರು ಸುತ್ತು ಮಾತುಕತೆ ನಡೆಸಿ ಸಿದ್ಧತೆಗೆ ಸೂಚಿಸಿದ್ದರು. ಆದರೆ, ಯಡಿಯೂರಪ್ಪ ಅವರು ರಾಜೀನಾಮೆ ನಿರ್ಧಾರವನ್ನು ತೆಗೆದುಕೊಳ್ಳಲು ವಿಳಂಬ ನೀತಿ ಅನುಸರಿಸಿದ್ದರು ಎಂದು ಪಕ್ಷದ ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಮಾತುಕತೆಯ ವಿವರವನ್ನು ಗೋಪ್ಯವಾಗಿ ಇಡುವಂತೆ ಬೊಮ್ಮಾಯಿ ಅವರಿಗೆ ಸೂಚಿಸಿದ್ದ ವರಿಷ್ಠರು, ನಾಯಕತ್ವ ಬದಲಾವಣೆಗೆ ಸಂಬಂಧಿಸಿದ ಚರ್ಚೆಯ ವಿವರಗಳನ್ನು ಯಾವುದೇ ಕಾರಣಕ್ಕೂ ಬಹಿರಂಗಪಡಿಸದಂತೆ ಕಿವಿಮಾತು ಹೇಳಿದ್ದರು ಎಂದು ಹೇಳಲಾಗಿದೆ.

ಯೋಗೇಶ್ವರ್ ದೂರು: ಮೇ 5ರಿಂದ ಎರಡು ದಿನಗಳ ಕಾಲ ನವದೆಹಲಿಯಲ್ಲಿ ಬೀಡು ಬಿಟ್ಟು, ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಜೆ.ಪಿ. ನಡ್ಡಾ ಮತ್ತಿತರರನ್ನು ಭೇಟಿ ಮಾಡಿದ್ದ ಸಚಿವ ಸಿ.ಪಿ. ಯೋಗೇಶ್ವರ್, ಆಡಳಿತದಲ್ಲಿ ಯಡಿಯೂರಪ್ಪ ಪುತ್ರ ವಿಜಯೇಂದ್ರ ಅವರ ಹಸ್ತಕ್ಷೇಪದ ಕುರಿತು ದೂರನ್ನು ಸಲ್ಲಿಸಿದ್ದರು ಎನ್ನಲಾಗಿದೆ.

ಆ ದೂರಿನನ್ವಯ ತಕ್ಷಣ ದೆಹಲಿಗೆ ಬರುವಂತೆ ವಿಜಯೇಂದ್ರ ಅವರಿಗೆ ವರಿಷ್ಠರು ಆಹ್ವಾನ ನೀಡಿದ್ದರು. ಈ ಆಹ್ವಾನದ ಮೇರೆಗೆ ಮೇ 7ರಂದು ಸಂಜೆ ವಿಶೇಷ ವಿಮಾನದಲ್ಲಿ ಬೊಮ್ಮಾಯಿ ಅವರನ್ನೂ ತಮ್ಮೊಂದಿಗೆ ಕರೆತಂದಿದ್ದ ವಿಜಯೇಂದ್ರ, ಹಲವು ಸುತ್ತಿನ ಮಾತುಕತೆಯ ನಂತರ ಮೇ 9ರಂದು ಬೆಂಗಳೂರಿಗೆ ಮರಳಿದ್ದರು.

ವರಿಷ್ಠರೊಂದಿಗೆ ಚರ್ಚಿಸಿ, ದೂರು ಸಲ್ಲಿಸಿದ ಬಳಿಕ ನಡೆಸಿ ಬೆಂಗಳೂರಿಗೆ ಮರಳಿದ್ದ ಸಚಿವ ಯೋಗೇಶ್ವರ್, 'ಪರೀಕ್ಷೆ ಬರೆದಾಗಿದೆ. ಶೀಘ್ರವೇ ಫಲಿತಾಂಶ ಬರಲಿದೆ' ಎಂದು ಹೇಳಿದ್ದರು.

ಬಸವರಾಜ ಬೊಮ್ಮಾಯಿ ಪರಿಚಯ

- ಜನನ: 28-01-1960
- ಜನ್ಮಸ್ಥಳ: ಹುಬ್ಬಳ್ಳಿ
- ತಂದೆ: ದಿವಂಗತ ಎಸ್.ಆರ್. ಬೊಮ್ಮಾಯಿ (ಮಾಜಿ ಮುಖ್ಯಮಂತ್ರಿ)
- ತಾಯಿ: ಗಂಗಮ್ಮ ಎಸ್. ಬೊಮ್ಮಾಯಿ
- ಪತ್ನಿ: ಚನ್ನಮ್ಮ ಬಿ.ಬೊಮ್ಮಾಯಿ
- ಮಕ್ಕಳು: ಪುತ್ರ ಭರತ, ಪುತ್ರಿ ಅದಿತಿ
- ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸ: ರೋಟರಿ ಇಂಗ್ಲಿಷ್ ಮಾಧ್ಯಮ ಶಾಲೆ, ಹುಬ್ಬಳ್ಳಿ
- ಪಿಯುಸಿ: ಪಿ.ಸಿ.ಜಾಬಿನ ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿ
- ಎಂಜಿನಿಯರಿಂಗ್: (ಬಿ.ಇ. ಮೆಕ್ಯಾನಿಕಲ್): ಬಿ.ವಿ. ಭೂಮರಡ್ಡಿ ವಿಜ್ಞಾನ ತಾಂತ್ರಿಕ ಮಹಾವಿದ್ಯಾಲಯ, ಹುಬ್ಬಳ್ಳಿ
- 1983ರಿಂದ 1985ರವರೆಗೆ ಪುಣೆಯ ಟೆಲ್ಕೊ ಕಂಪನಿಯಲ್ಲಿ ಎರಡು ವರ್ಷಗಳ ತಾಂತ್ರಿಕ ತರಬೇತಿ
- 2007 ಜುಲೈ: ಧಾರವಾಡದಿಂದ ನರಗುಂದದವರೆಗೆ 21 ದಿನಗಳ ಕಾಲ ರೈತರೊಂದಿಗೆ ಬೃಹತ್ ಪಾದಯಾತ್ರೆ
- 1993: ಹುಬ್ಬಳ್ಳಿಯಲ್ಲಿ ನಡೆದ ರಾಜ್ಯ ಯುವಜನತಾ ದಳದ ಬೃಹತ್ ರ‍್ಯಾಲಿಯ ಸಂಘಟನೆಯ ನೇತೃತ್ವ
- 1995: ಹುಬ್ಬಳ್ಳಿ ನಗರದ ಈದ್ಗಾ ಮೈದಾನದ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ರಾಜ್ಯ ಸರ್ಕಾರದ ಮೂಲಕ ಪ್ರಯತ್ನ/ ನೇತೃತ್ವ
- 1995ರಲ್ಲಿ ರಾಜ್ಯದ ಜನತಾದಳದ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ

ರಾಜಕೀಯ ಸ್ಥಾನಮಾನ:

- 1996ರಿಂದ 1997: ಮುಖ್ಯಮಂತ್ರಿಯಾಗಿದ್ದ ಜೆ.ಎಚ್. ಪಟೇಲ್ ಅವರಿಗೆ ರಾಜಕೀಯ ಕಾರ್ಯದರ್ಶಿಯಾಗಿ ನೇಮಕ
- 1997 ಹಾಗೂ 2003ರಲ್ಲಿ ವಿಧಾನ ಪರಿಷತ್ತಿಗೆ ಸ್ಥಳೀಯ ಸಂಸ್ಥೆಗಳಿಂದ (ಧಾರವಾಡ-ಹಾವೇರಿ-ಗದಗ) ನಡೆದ ಚುನಾವಣೆಯಲ್ಲಿ ಸತತ ಎರಡು ಬಾರಿ ಆಯ್ಕೆ
- 2008: ವಿಧಾನಸಭೆ ಚುನಾವಣೆಯಲ್ಲಿ ಹಾವೇರಿ ಜಿಲ್ಲೆ ಶಿಗ್ಗಾವಿ ಕ್ಷೇತ್ರದಿಂದ ಆಯ್ಕೆ.
- ಬಿಜೆಪಿ ಸರ್ಕಾರದಲ್ಲಿ (ಬಿ.ಎಸ್. ಯಡಿಯೂರಪ್ಪ, ಡಿ.ವಿ. ಸದಾನಂದಗೌಡ ಹಾಗೂ ಜಗದೀಶ ಶೆಟ್ಟರ್ ಸಂಪುಟದಲ್ಲಿ) ಐದು ವರ್ಷ ಜಲಸಂಪನ್ಮೂಲ ಸಚಿವರಾಗಿ ಕಾರ್ಯನಿರ್ವಹಣೆ.
- 2013: ವಿಧಾನಸಭಾ ಚುನಾವಣೆಯಲ್ಲಿ ಶಿಗ್ಗಾವಿ ಕ್ಷೇತ್ರದಿಂದ ಎರಡನೇ ಬಾರಿಗೆ ಆಯ್ಕೆ
- 2018: ಶಿಗ್ಗಾವಿ ಕ್ಷೇತ್ರದಿಂದ ಮೂರನೇ ಬಾರಿ ಆಯ್ಕೆ. ಗೃಹ ಸಚಿವ ಮತ್ತು ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ.

ಬೊಮ್ಮಾಯಿ ರಾಜ್ಯದ ಹೊಸ ಸಾರಥಿ

ಒಂದನೇ ಪುಟದಿಂದ

ಆದರೆ, ಅವರು ಈ ಮಾಹಿತಿಯನ್ನು ಗೋಪ್ಯವಾಗಿಯೇ ಇರಿಸಿದ್ದರು. ಆದರೆ, ರಾಜಕೀಯ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡುತ್ತಿದ್ದ ಸಂದರ್ಭದಲ್ಲಿನ ಅವರ ಹಾವಭಾವಗಳು ಬೊಮ್ಮಾಯಿ ಅವರೇ ಸರ್ಕಾರದ ಹೊಸ ಸಾರಥಿಯಾಗುವ ಸುಳಿವು ನೀಡುವಂತಿದ್ದವು.

ಹೆಸರು ಪ್ರಸ್ತಾಪಿಸಿದ ಬಿಎಸ್‌ವೈ: ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಪ್ರಕ್ರಿಯೆ ವೀಕ್ಷಕರಾಗಿ ನೇಮಕಗೊಂಡಿದ್ದ ಕೇಂದ್ರ ಸಚಿವರಾದ ಧರ್ಮೇಂದ್ರ ಪ್ರಧಾನ್, ಕಿಶನ್ ರೆಡ್ಡಿ, ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಬಿಜೆಪಿ ವರಿಷ್ಠರ ಸೂಚನೆಯಂತೆ ಮಂಗಳವಾರ ಸಂಜೆಯ ವೇಳೆಗೆ ನಗರಕ್ಕೆ ಬಂದರು. ಮೂವರೂ ಯಡಿಯೂರಪ್ಪ ಅವರನ್ನು ಭೇಟಿಮಾಡಿ ಚರ್ಚಿಸಿದರು. ನಂತರ ಕುಮಾರಕೃಪಾ ಅತಿಥಿ ಗೃಹದಲ್ಲಿ ಬೊಮ್ಮಾಯಿ ಸೇರಿದಂತೆ ಕೆಲವು ಶಾಸಕರ ಜತೆಗೂ ಚರ್ಚಿಸಿದರು.

ಕ್ಯಾಪಿಟಲ್ ಹೋಟೆಲ್‌ನಲ್ಲಿ ರಾತ್ರಿ 7 ಗಂಟೆಗೆ ಶಾಸಕಾಂಗ ಪಕ್ಷದ ಸಭೆ ಆರಂಭವಾಯಿತು. ಕೇಂದ್ರದ ವೀಕ್ಷಕರೊಂದಿಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಕೂಡ ಇದ್ದರು. ಉಸ್ತುವಾರಿ ಮುಖ್ಯಮಂತ್ರಿ ಯಡಿಯೂರಪ್ಪ ಅವರೇ ಬೊಮ್ಮಾಯಿ ಅವರ ಹೆಸರನ್ನು ಶಾಸಕಾಂಗ ಪಕ್ಷದ ನಾಯಕನ ಸ್ಥಾನಕ್ಕೆ ಸೂಚಿಸಿದರು. ಗೋವಿಂದ ಎಂ. ಕಾರಜೋಳ, ಆರ್. ಅಶೋಕ, ಕೆ.ಎಸ್. ಈಶ್ವರಪ್ಪ, ಕೆ. ಪೂರ್ಣಿಮಾ ಸೇರಿದಂತೆ ಹಲವರು ಅನುಮೋದಿಸಿದರು. ಸಭೆಯಲ್ಲಿದ್ದ ಎಲ್ಲ ಶಾಸಕರೂ ಸರ್ವಾನುಮತದಿಂದ ಬೆಂಬಲ ಸೂಚಿಸಿದರು. ಕೇಂದ್ರದಿಂದ ಬಂದಿದ್ದ ವೀಕ್ಷಕರು ಬಸವರಾಜ ಬೊಮ್ಮಾಯಿ ಅವರ ಆಯ್ಕೆಯನ್ನು ಅಧಿಕೃತವಾಗಿ ಪ್ರಕಟಿಸಿದರು. ತಕ್ಷಣವೇ ವೇದಿಕೆಗೆ ಬಂದ ಬೊಮ್ಮಾಯಿ ಅವರು ಯಡಿಯೂರಪ್ಪ ಅವರ ಕಾಲಿಗೆರಗಿ ಆಶೀರ್ವಾದ ಪಡೆದರು.

ಹಕ್ಕು ಮಂಡಿಸಿದ ಬೊಮ್ಮಾಯಿ: ಶಾಸಕಾಂಗ ಪಕ್ಷದ ಸಭೆ ಮುಗಿಯುತ್ತಿದ್ದಂತೆಯೇ ರಾಜಭವನಕ್ಕೆ ತೆರಳಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಭೇಟಿಮಾಡಿದ ಬೊಮ್ಮಾಯಿ, ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಯಾಗಿರುವ ನಿರ್ಣಯದ ಪ್ರತಿಯನ್ನೂ ರಾಜ್ಯಪಾಲರಿಗೆ ಸಲ್ಲಿಸಿದರು.

ಬುಧವಾರ ಬೆಳಿಗ್ಗೆ 11 ಗಂಟೆಗೆ ರಾಜಭವನದ ಗಾಜಿನ ಮನೆಯಲ್ಲಿ ನಡೆಯುವ ಸಮಾರಂಭದಲ್ಲಿ ಬೊಮ್ಮಾಯಿ ಅವರು ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವರು.

ಮುಂದಿದೆ ಸಂಪುಟ ರಚನೆಯ ಸವಾಲು

ಒಂದನೇ ಪುಟದಿಂದ

ಕಾಂಗ್ರೆಸ್, ಜೆಡಿಎಸ್ ತೊರೆದು ಬಿಜೆಪಿ ಸೇರಿದ್ದ 17 ಜನರಲ್ಲಿ 11 ಮಂದಿಗೆ ಯಡಿಯೂರಪ್ಪ ಸಂಪುಟದಲ್ಲಿ ಅವಕಾಶ ನೀಡಲಾಗಿತ್ತು. ಬೊಮ್ಮಾಯಿ ಅವರ ಸಂಪುಟದಲ್ಲಿ ಈ ಪೈಕಿ ಅರ್ಧದಷ್ಟು ಮಂದಿಗೆ ಮಾತ್ರ ಸಚಿವ ಸ್ಥಾನ ದೊರಕಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

ಯಡಿಯೂರಪ್ಪ ಸಂಪುಟದಲ್ಲಿದ್ದ ಹಿರಿಯರಲ್ಲಿ ಕೆಲವರನ್ನು ಹೊಸ ಸಂಪುಟದಿಂದ ಹೊರಗಿಡುವ ಸಾಧ್ಯತೆ ಹೆಚ್ಚಿದೆ. 2019ರಲ್ಲಿ ಯಡಿಯೂರಪ್ಪ ಅವರು ಸಂಪುಟದ ರಚಿಸಿದ ಸಂದರ್ಭದಲ್ಲೂ ಸಚಿವ ಸ್ಥಾನ ವಂಚಿತರಾಗಿದ್ದ ಹಲವರು ಅಸಮಾಧಾನ ಹೊರಹಾಕಿದ್ದರು. ಈಗ ಮತ್ತೆ ಶಾಸಕರು ಬಂಡೇಳದಂತೆ ಸಮಾಧಾನಕರವಾದ ಸೂತ್ರ ರೂಪಿಸುವ ದಿಸೆಯಲ್ಲಿ ಬಿಜೆಪಿ ವರಿಷ್ಠರು ಯೋಚಿಸುತ್ತಿದ್ದಾರೆ ಎಂದು ಹೇಳಲಾಗಿದೆ.

'ಉತ್ತಮ ಆಡಳಿತ ನೀಡುವೆ'

ಒಂದನೇ ಪುಟದಿಂದ

'ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಜನರಿಗೋಸ್ಕರ ಜನಪರ ಆಡಳಿತ ನೀಡುತ್ತೇನೆ. ಸಾರ್ವಜನಿಕರ, ಬಡಜನರ ಸಂಕಷ್ಟ, ಪ್ರವಾಹದಿಂದ ತೊಂದರೆಗೆ ಸಿಲುಕಿರುವ ಜನರ ಕಷ್ಟ ನಿವಾರಣೆ ಮಾಡುವುದು ಮೊದಲ ಆದ್ಯತೆ. ಹಣಕಾಸಿನ ಸ್ಥಿತಿಯನ್ನು ಉತ್ತಮ ಗೊಳಿಸಲು ಶ್ರಮಿಸುತ್ತೇನೆ. ವರಿಷ್ಠರು ಯಾವುದೇ ಷರತ್ತು ವಿಧಿಸಿಲ್ಲ. ಪಕ್ಷದ ವರಿಷ್ಠರ ಆಶೀರ್ವಾದವೇ ನನಗೆ ಬಲ' ಎಂದೂ ಹೇಳಿದರು.

ಬೊಮ್ಮಾಯಿಗೆ ಸಂತೋಷ್ ಅಭಿನಂದನೆ

ಬೆಂಗಳೂರು: ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಮತ್ತು ಮುಖ್ಯಮಂತ್ರಿ ಹುದ್ದೆಗೆ ಆಯ್ಕೆ ಆಗಿರುವ ಬಸವರಾಜ ಬೊಮ್ಮಾಯಿ ಅವರು ರಾಜ್ಯವನ್ನು ಅಭಿವೃದ್ಧಿಯಲ್ಲಿ ಇನ್ನಷ್ಟು ಎತ್ತರಕ್ಕೆ ಒಯ್ಯುತ್ತಾರೆ ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಟ್ವೀಟ್ ಮೂಲಕ ಅಭಿನಂದಿಸಿರುವ ಅವರು, 'ಬಸವರಾಜ ಅವರು ಒಬ್ಬ ನುರಿತ ರಾಜಕಾರಣಿ ಮತ್ತು ಆಡಳಿತದಲ್ಲಿ ಸುದೀರ್ಘ ಅನುಭವ ಹೊಂದಿದ್ದಾರೆ' ಎಂದು ಹೇಳಿದ್ದಾರೆ.

ಬೊಮ್ಮಾಯಿ ಆಯ್ಕೆಯ ಹಿಂದಿನ ಲೆಕ್ಕಾಚಾರ

ಒಂದನೇ ಪುಟದಿಂದ

ಯಡಿಯೂರಪ್ಪನವರ ಜತೆಗೆ ನಿಕಟ ಬಾಂಧವ್ಯ ಹೊಂದಿರುವ, ಕೆಜೆಪಿ ಸೇರಿದಾಗ ಬಿಟ್ಟು ಉಳಿದೆಲ್ಲ ಅವಧಿಯಲ್ಲೂ ತಮ್ಮ ರಾಜಕೀಯ ಮರುಹುಟ್ಟಿಗೆ ಯಡಿಯೂರಪ್ಪನವರನ್ನೇ ತಮ್ಮ ರಾಜಕೀಯ ಗುರು ಎಂದು ನಂಬಿರುವ ಬೊಮ್ಮಾಯಿ ಅವರನ್ನು ಮಾಡಿದರೆ ಅವರ ವಿರೋಧಿಸುವುದಕ್ಕೆ ಮುಂದಾಗಲಾರರು. ಯಡಿಯೂರಪ್ಪ ಅವರ ಸಿಟ್ಟು-ಸೆಡವು, ದೌರ್ಬಲ್ಯ-ಶಕ್ತಿಗಳನ್ನು ಕಂಡಿರುವ ಬೊಮ್ಮಾಯಿ ಕೂಡ ನಾನಾ ಮಾರ್ಗಗಳನ್ನು ಬಳಸಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಒಲಿಸಿಕೊಳ್ಳಬಲ್ಲರು. ಮುಖ್ಯಮಂತ್ರಿ ಆಯ್ಕೆಗೆ ಇದ್ದ ಹೆಸರುಗಳ ಪೈಕಿ ಈ ವಿಷಯದಲ್ಲಿ ಬೊಮ್ಮಾಯಿಯಷ್ಟು ಸಮರ್ಥರು ಮತ್ತೊಬ್ಬರಿಲ್ಲ ಎಂಬುದು ಆಯ್ಕೆಗೆ ಇದ್ದ ಪ್ರಧಾನ ಆದ್ಯತೆ.

ಲಿಂಗಾಯತರ ಒಳಪಂಗಡಗಳ ಪೈಕಿ ರಾಜಕೀಯವಾಗಿ ಪ್ರಭಾವಿಯಾಗಿರುವ ಪಂಚಮಸಾಲಿ, ಬಣಜಿಗ ಮತ್ತು ಗಾಣಿಗರ ಮಧ್ಯೆ ನಾಯಕತ್ವದ ತೀವ್ರ ಪೈಪೋಟಿ ಇದೆ. ಅವರೆಲ್ಲರನ್ನೂ ಒಗ್ಗೂಡಿಸಿಯೇ ಯಡಿಯೂರಪ್ಪ ನಾಯಕರಾಗಿ ಹೊರಹೊಮ್ಮಿದ್ದರು. ಲಿಂಗಾಯತರ ಪೈಕಿ 'ಸಾದರು' ಉಪ ಪಂಗಡಕ್ಕೆ ಸೇರಿದ ಬೊಮ್ಮಾಯಿ ಅವರನ್ನು ಆಯ್ಕೆ ಮಾಡಿದರೆ ಈ ಒಳಜಗಳದ ಪ್ರಮೇಯ ಬರುವುದಿಲ್ಲ ಎಂಬ ಲೆಕ್ಕಾಚಾರವೂ ಇದ್ದೀತು. ಆದರೆ, ಉಪೇಕ್ಷಿಸಲ್ಪಟ್ಟ ಉಳಿದ ಉಪಪಂಗಡಗಳು ಮುಂದಿನ ದಿನಗಳಲ್ಲಿ ತಿರುಗಿ ಬಿದ್ದರೂ ಅಚ್ಚರಿಯೇನಿಲ್ಲ. ಈ ಅಂಶವನ್ನು ವರಿಷ್ಠರು ಸದ್ಯಕ್ಕೆ ಪರಿಗಣನೆಗೆ ತೆಗೆದುಕೊಂಡಂತೆ ಕಾಣಿಸುವುದಿಲ್ಲ.

ರಾಜ್ಯದಲ್ಲಿ ಆಡಳಿತ ಪಕ್ಷಕ್ಕಿಂತ ವಿರೋಧ ಪಕ್ಷದಲ್ಲಿ ವಾಗ್ಮಿಗಳು ಬಲಿಷ್ಠರಾಗಿದ್ದಾರೆ. ಅದರಲ್ಲೂ ಸಿದ್ದರಾಮಯ್ಯ ಅವರಂತಹ ವಿರೋಧ ಪಕ್ಷದ ನಾಯಕರು ಇರುವಾಗ ವಿಧಾನಮಂಡಲ ಅಧಿವೇಶನದಲ್ಲಿ ವಿರೋಧ ಪಕ್ಷವನ್ನು ಎದುರಿಸುವುದು ಸುಲಭವಲ್ಲ. ಸರ್ಕಾರವನ್ನು ಸಮರ್ಥಿಸಿಕೊಳ್ಳುವ ಛಾತಿ, ಬಿಜೆಪಿಯಲ್ಲಿ ಅನೇಕರಿಗೆ ಇದೆ. ಆದರೆ, ಮುಖ್ಯಮಂತ್ರಿ ಆಯ್ಕೆ ಪಟ್ಟಿಯಲ್ಲಿ ಇದ್ದ ಹೆಸರಿನವರಿಗಿಂತ ಬೊಮ್ಮಾಯಿ ಸೂಕ್ತ ಆಯ್ಕೆ ಎನಿಸಿದ್ದೀತು.

ತಮ್ಮ ತಂದೆ ಎಸ್.ಆರ್. ಬೊಮ್ಮಾಯಿ, ಎಚ್.ಡಿ. ದೇವೇಗೌಡ, ಜೆ.ಎಚ್. ಪಟೇಲ್, ಯಡಿಯೂರಪ್ಪ, ಡಿ.ವಿ.ಸದಾನಂದಗೌಡ, ಜಗದೀಶ ಶೆಟ್ಟರ್ ಅವರು ಮುಖ್ಯಮಂತ್ರಿಯಾಗಿದ್ದಾಗ ನಿಕಟ ಒಡನಾಟ ಹೊಂದಿದವರು ಬೊಮ್ಮಾಯಿ. ಈ ಅನುಭವ ಕೂಡ ಅವರನ್ನು ಮುನ್ನೆಲೆಗೆ ತಂದಿರಬಹುದು.

ಮುಖ್ಯಮಂತ್ರಿಯಾದವರು ತಮ್ಮವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರ ನಡೆಸುವುದು ಅನಿವಾರ್ಯ. ವಿರೋಧ ಪಕ್ಷದವರನ್ನು ಒಪ್ಪಿಸಿ, ಅವರನ್ನೂ ಒಲಿಸಿಕೊಂಡು ಸರ್ಕಾರ ನಡೆಸುವುದು ಸವಾಲು. ಜೆಡಿಎಸ್ ವರಿಷ್ಠ ದೇವೇಗೌಡರನ್ನು ತಂದೆಯ ಸಮಾನವಾಗಿ ಕಾಣುವ ಬೊಮ್ಮಾಯಿ, ಒಂದು ಕಾಲದಲ್ಲಿ ಗೌಡರ ನೀಲಿಕಣ್ಣಿನ ಹುಡುಗ. ಬಳಿಕ ಪಕ್ಷ ತೊರೆದು ಹೊರ ಬಂದವರು. ಆದರೆ, ಅವರಿಬ್ಬರ ಒಡನಾಟ ಅದೇ ಮಾದರಿಯಲ್ಲೇ ಇದೆ. ಅಲ್ಲದೇ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಜತೆಗೂ ಅವರು ಸಂಬಂಧ ಕೆಡಿಸಿಕೊಂಡವರಲ್ಲ. ಸಿದ್ದರಾಮಯ್ಯನವರನ್ನು ರಾಜಕೀಯವಾಗಿ ಎದುರಿಸಿದರೂ ಹಿಂದೆ ಜನತಾಪರಿವಾರದ ಮೂಲದ ಕಾರಣಕ್ಕೆ, ಹಳೆಯ ನಂಟನ್ನು ಇನ್ನೂ ಬೆಸೆದುಕೊಂಡವರು. ಹೀಗೆ ವಿರೋಧ ಪಕ್ಷದವರನ್ನೂ ಎದುರುಹಾಕಿಕೊಂಡು ರಾಜಕಾರಣ ಮಾಡುವುದಕ್ಕಿಂತ, ಮನವರಿಕೆ ಮಾಡಿಕೊಡುವ ಮಾರ್ಗವನ್ನು ಅನುಸರಿಸುತ್ತಾರೆ ಎಂಬ ಭರವಸೆಯೂ ವರಿಷ್ಠರದ್ದಾಗಿದ್ದೀತು.

ಹಿಂದಿನ ಬಿಜೆಪಿ ಸರ್ಕಾರದಲ್ಲಿ ಐದು ವರ್ಷ ಹಾಗೂ ಈಗ ಎರಡು ವರ್ಷ ಸಚಿವರಾಗಿ ಕೆಲಸ ಮಾಡಿರುವ ಬೊಮ್ಮಾಯಿ ವಿರುದ್ಧ ಭ್ರಷ್ಟಾಚಾರದ ದೂರುಗಳು ದಾಖಲಾಗಿಲ್ಲ. ಹಣಕಾಸು, ನೀರಾವರಿ ವಿಷಯದ ಬಗೆಗಿನ ಅವರ ತಿಳಿವಳಿಕೆಗಳು ಹಾಗೂ ಅನುಭವ ಅವರನ್ನು ಮುಖ್ಯಮಂತ್ರಿ ಕುರ್ಚಿಯ ಮೇಲೆ ತಂದು ಕೂರಿಸಿರುವ ಸಾಧ್ಯತೆಯೂ ಇದೆ. ಇದೆಲ್ಲದರ ಜತೆಗೆ ಉತ್ತರ ಕರ್ನಾಟಕಕ್ಕೆ ಮುಖ್ಯಮಂತ್ರಿ ಪಟ್ಟ ಕೊಡಬೇಕೆಂಬ ಲೆಕ್ಕಾಚಾರವೂ ಸೇರಿದ್ದೀತು.

ಬೊಮ್ಮಾಯಿ ಆಯ್ಕೆ: ಹಲವರ ಸಂತಸ, ಕೆಲವರ ಬೇಸರ

ಬೆಂಗಳೂರು: ರಾಜಭವನ ಮತ್ತು ವಿಧಾನಸೌಧಕ್ಕೆ ಕೂಗಳತೆ ದೂರದಲ್ಲಿರುವ ಕ್ಯಾಪಿಟಲ್ ಹೋಟೆಲ್‌ನಲ್ಲಿ ಮಂಗಳವಾರ ರಾತ್ರಿ ಹೊಸ ಮುಖ್ಯಮಂತ್ರಿಯ ಆಯ್ಕೆ ಸುಸೂತ್ರವಾಗಿ ನಡೆದರೂ ಹಲವರ ಮುಖದಲ್ಲಿ ಸಂತಸ ಇನ್ನೂ ಕೆಲವರ ಮುಖದಲ್ಲಿ ಬೇಸರದ ಕಳೆ ಎದ್ದು ಕಾಣುತ್ತಿತ್ತು.

ಬಿ.ಎಸ್.ಯಡಿಯೂರಪ್ಪ ಅವರ ಉತ್ತರಾಧಿಕಾರಿ ಯಾರು ಕುತೂಹಲಕ್ಕೆ ಬಿಜೆಪಿಯ ಆಂತರಿಕ ವಲಯದಲ್ಲಿ ಸಂಜೆ ವೇಳೆಗೆ ತೆರೆ ಬಿದ್ದಿತ್ತು. ರಾತ್ರಿ ಹೊಸ ನಾಯಕನ ಆಯ್ಕೆ ಔಪಚಾರಿಕವಾಗಿಯೇ ನಡೆಯಿತು. ಶಾಸಕಾಂಗ ಪಕ್ಷದ ಸಭೆಯ ಎಲ್ಲ ಹಂತದಲ್ಲೂ ಯಡಿಯೂರಪ್ಪ ಅವರ ಛಾಯೆ ದಟ್ಟವಾಗಿತ್ತು.

ಶಾಸಕಾಂಗ ಪಕ್ಷದ ಸಭೆಗೆ ಸಂಜೆ 6 ಗಂಟೆಯಿಂದಲೇ ಶಾಸಕರು ಒಬ್ಬೊಬ್ಬರೇ ಬರಲಾರಂಭಿಸಿದರು. 7.20 ಕ್ಕೆ ಯಡಿಯೂರಪ್ಪ ಬಂದ ಬಳಿಕ 7.30 ಕ್ಕೆ ಶಾಸಕಾಂಗ ಪಕ್ಷದ ಸಭೆ ಆರಂಭಗೊಂಡಿತು. 15-20 ನಿಮಿಷಗಳಲ್ಲಿ ಆಯ್ಕೆ ಪ್ರಕ್ರಿಯೆ ಮುಗಿಯಿತು. ಯಡಿಯೂರಪ್ಪ ಅವರ ಕಡು ಟೀಕಾಕಾರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬೇಗನೇ ಸಭೆಯಿಂದ ಹೊರ ನಡೆದರು. ಯಾರಿಗೂ ಪ್ರತಿಕ್ರಿಯೆ ನೀಡಲಿಲ್ಲ. ಹಿರಿಯ ಶಾಸಕ ಉಮೇಶ ಕತ್ತಿಯವರೂ ಅವರನ್ನು ಹಿಂಬಾಲಿಸಿದರು.

ಒಲಿಯದ ತಂದೆ ಕ್ಷೇತ್ರ, ಒಲಿದ ಸಿ.ಎಂ ಸ್ಥಾನ

• ಬಸವರಾಜ ಹವಾಲ್ದಾರ

ಹುಬ್ಬಳ್ಳಿ: ಮಾಜಿ ಮುಖ್ಯಮಂತ್ರಿ ಎಸ್.ಆರ್. ಬೊಮ್ಮಾಯಿ ಅವರು ಪ್ರತಿನಿಧಿಸುತ್ತಿದ್ದ ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರ, ಅವರ ಪುತ್ರ ಬಸವರಾಜ ಬೊಮ್ಮಾಯಿ ಅವರಿಗೆ ಒಲಿಯಲಿಲ್ಲ. ಆದರೆ, ಎಸ್.ಆರ್. ಬೊಮ್ಮಾಯಿ ಅವರು ಏರಿದ್ದ ಮುಖ್ಯಮಂತ್ರಿ ಸ್ಥಾನ ಅವರಿಗೆ ಒಲಿದಿದೆ.

1985ರಲ್ಲಿ ನಡೆದ ಹುಬ್ಬಳ್ಳಿ ಗ್ರಾಮೀಣ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದ ಎಸ್.ಆರ್. ಬೊಮ್ಮಾಯಿ ಅವರು, 1988ರಲ್ಲಿ ಮುಖ್ಯಮಂತ್ರಿಯಾಗಿದ್ದರು. 1994ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ತಂದೆ ಪ್ರತಿನಿಧಿಸುತ್ತಿದ್ದ ಹುಬ್ಬಳ್ಳಿ ಗ್ರಾಮೀಣ (ಈಗಿನ ಹುಬ್ಬಳ್ಳಿ ಸೆಂಟ್ರಲ್) ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಮೂಲಕ ರಾಜಕೀಯ ಜೀವನ ಕಾಲಿಟ್ಟರು. ಆದರೆ, ಗೆಲುವು ದಕ್ಕಲಿಲ್ಲ.

1994ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಸವರಾಜ ಬೊಮ್ಮಾಯಿ ಅವರಿಗೆ ಎದುರಾಳಿಯಾಗಿದ್ದು, ಮಾಜಿ ಸಚಿವರಾಗಿರುವ ಜಗದೀಶ ಶೆಟ್ಟರ್. ನಂತರ ಅವರು ಧಾರವಾಡ ಜಿಲ್ಲಾ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗುವ ಮೂಲಕ ವಿಧಾನಸೌಧದ ಮೆಟ್ಟಿಲೇರಿದರು. ನಂತರ ಹಾವೇರಿ ಜಿಲ್ಲೆಯ ಶಿಗ್ಗಾವಿ ವಿಧಾನಸಭಾ ಕ್ಷೇತ್ರಕ್ಕೆ ವಲಸೆ ಹೋದರು.

ಹುಬ್ಬಳ್ಳಿಗೆ ಮೂರನೇ ಬಾರಿಗೆ ಒಲಿದ ಮುಖ್ಯಮಂತ್ರಿ ಹುದ್ದೆ: ಹುಬ್ಬಳ್ಳಿಗೆ ಮೂರನೇ ಬಾರಿಗೆ ಮುಖ್ಯಮಂತ್ರಿ ಹುದ್ದೆ ಒಲಿದಿದೆ.

1988ರಲ್ಲಿ ಎಸ್.ಆರ್. ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದರು. ನಂತರ 2012ರಲ್ಲಿ ಜಗದೀಶ ಶೆಟ್ಟರ್ ಅವರಿಗೆ ಮುಖ್ಯಮಂತ್ರಿ ಹುದ್ದೆ ಒಲಿದಿತ್ತು. ಇಬ್ಬರೂ ಹುಬ್ಬಳ್ಳಿ ಕ್ಷೇತ್ರ ಪ್ರತಿನಿಧಿಸುವಾಗಲೇ ಮುಖ್ಯಮಂತ್ರಿಯಾಗಿದ್ದರು ಎನ್ನುವುದು ವಿಶೇಷ. ಬಸವರಾಜ ಬೊಮ್ಮಾಯಿ ಅವರು ಶಿಗ್ಗಾವಿ ವಿಧಾನಸಭಾ ಕ್ಷೇತ್ರ ಪ್ರತಿನಿಧಿಸುತ್ತಿದ್ದರೂ, ಹುಬ್ಬಳ್ಳಿಯಲ್ಲಿ ಇಂದಿಗೂ ಮನೆಯಿದೆ. ಶಿಗ್ಗಾವಿ ವಿಧಾನಸಭಾ ಕ್ಷೇತ್ರಕ್ಕೆ ಬಂದಾಗಲೂ ಅವರು ಹುಬ್ಬಳ್ಳಿಯಲ್ಲಿಯೇ ವಾಸ್ತವ್ಯ ಮಾಡುತ್ತಾರೆ.



ಬಸವರಾಜ ಬೊಮ್ಮಾಯಿ ಅವರ ವಿವಾಹಕ್ಕೆ ಬಂದು ಶುಭ ಹಾರೈಸಿದ್ದ ವರನಟ ಡಾ.ರಾಜ್‌ಕುಮಾರ್ ಮತ್ತು ಪಾರ್ವತಮ್ಮ ದಂಪತಿ. ಮಾಜಿ ಮುಖ್ಯಮಂತ್ರಿ, ಬಸವರಾಜ ಬೊಮ್ಮಾಯಿ ಅವರ ತಂದೆ ದಿವಂಗತ ಎಸ್.ಆರ್. ಬೊಮ್ಮಾಯಿ ಇದ್ದಾರೆ

ಬಸವರಾಜ ಬೊಮ್ಮಾಯಿ ಮನದಾಳದ ಮಾತು

'ಜೆ.ಪಿ' ಪ್ರೇರಣೆಯಿಂದ ರಾಜಕೀಯಕ್ಕೆ ಬಂದೆ

ಪ್ರಜಾವಾಣಿ ವಾರ್ತೆ

ಶಿಗ್ಗಾವಿ/ಹಾವೇರಿ: ಎಂಜಿನಿಯರಿಂಗ್ ಪದವಿ ವ್ಯಾಸಂಗ ಮಾಡಿ, ಉದ್ಯಮಿಯಾಗಬೇಕು ಎಂಬ ಕನಸು ಕಂಡಿದ್ದೆ. ಆದರೆ, ಲೋಕ ನಾಯಕ ಜಯಪ್ರಕಾಶ ನಾರಾಯಣ (ಜೆಪಿ) ವಿಚಾರಧಾರೆಗಳ ಪ್ರಭಾವಕ್ಕೆ ಒಳಗಾಗಿ ದೇಶದ ಅಭಿವೃದ್ಧಿ ತುಡಿತ ಆರಂಭವಾಯಿತು. ಹೀಗಾಗಿ ರಾಜಕೀಯ ಕ್ಷೇತ್ರಕ್ಕೆ ಬಂದೆ...

ಇದು ರಾಜ್ಯದ ನೂತನ ಮುಖ್ಯಮಂತ್ರಿ ಎಂದು ಘೋಷಣೆಯಾಗಿರುವ ಬಸವರಾಜ ಬೊಮ್ಮಾಯಿ ಅವರ ಮನದಾಳದ ಮಾತು. ಈ ಹಿಂದೆ 'ಪ್ರಜಾವಾಣಿ'ಯೊಂದಿಗೆ ಅವರು ತಾವು ನಡೆದು ಬಂದ ಹಾದಿಯ ನೆನಪುಗಳನ್ನು ಹಂಚಿಕೊಂಡಿದ್ದು ಹೀಗೆ.

ಮಾಜಿ ಮುಖ್ಯಮಂತ್ರಿ ಎಸ್.ಆರ್. ಬೊಮ್ಮಾಯಿ ಅವರ ಪುತ್ರನಾದರೂ ಸಹ ರಾಜಕೀಯಕ್ಕೆ ಬರುತ್ತೇನೆ ಎಂದು ಎಂದಿಗೂ ಭಾವಿಸಿರಲಿಲ್ಲ. ನಿರುದ್ಯೋಗ ಸಮಸ್ಯೆ ನಿರ್ಮೂಲನೆ, ಅಸಮಾನತೆ ನಿವಾರಣೆ, ಕೃಷಿ ಕ್ಷೇತ್ರದಲ್ಲಿ ಕ್ರಾಂತಿ, ರೈತರ ಅಭ್ಯುದಯ ಸೇರಿದಂತೆ ಹತ್ತಾರು ಕನಸುಗಳು ಹೋರಾಟಕ್ಕೆ ಸೆಳೆದವು. ಅದರಿಂದ ನಾಡಿನ ಜನತೆಗೆ ಕೊಡುಗೆ ನೀಡಬೇಕೆಂಬ ಕಾತರ ಹೆಚ್ಚಾಯಿತು. ಮುಖ್ಯಮಂತ್ರಿ ಮಗನಾಗಿ ಮಾತ್ರ ಉಳಿಯದೇ, ಜನರ ಸೇವೆ ಮಾಡಬೇಕು ಎಂದು ಸಂಕಲ್ಪ ತೊಟ್ಟೆ.

ನಾನು ಕಾಲೇಜಿನಲ್ಲಿ ಓದುತ್ತಿರುವಾಗಲೇ ಜೆ.ಪಿ ಅವರ ಕ್ರಾಂತಿಕಾರಕ ವಿಚಾರಗಳು ನನಗೆ ಪ್ರೇರಣೆ ನೀಡಿದವು. ಹೀಗಾಗಿ 1997ರಲ್ಲಿ ಧಾರವಾಡದ ಸ್ಥಳೀಯಾಡಳಿತ ಸಂಸ್ಥೆಗಳ ಕ್ಷೇತ್ರದಿಂದ ಮೊದಲ ಬಾರಿಗೆ ಜನತಾದಳದಿಂದ ಅಭ್ಯರ್ಥಿಯಾಗಿ ವಿಧಾನ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿದೆ. ಸಾಕಷ್ಟು ವಿರೋಧಗಳ ನಡುವೆ ಅತಿ ಹೆಚ್ಚು ಮತಗಳಿಂದ ಗೆಲುವು ಸಾಧಿಸಿದ್ದೆ.

ಅಲ್ಲಿಂದ ರಾಜಕೀಯ ಕ್ಷೇತ್ರದಲ್ಲಿ ಮುನ್ನಡೆಯುತ್ತಾ ಸಾಗಿದೆ. ಅಪ್ಪನ ನೆರಳಿನಲ್ಲಿ ಉಳಿಯದೇ ನನ್ನ ಕನಸುಗಳನ್ನು ನನಸಾಗಿಸುವ ತುಡಿತದಲ್ಲಿ ಮುನ್ನಡೆದೆ.

ಹ್ಯಾಟ್ರಿಕ್ ಗೆಲುವು: 2008, 2013, 2018ರಲ್ಲಿ ಶಿಗ್ಗಾವಿ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಹ್ಯಾಟ್ರಿಕ್ ಗೆಲುವು ಸಾಧಿಸುವ ಮೂಲಕ 'ಸೋಲಿಲ್ಲದ ಸರದಾರ' ಎನಿಸಿಕೊಂಡಿದ್ದಾರೆ. ವಿಧಾನಸಭೆ ಸದಸ್ಯರಾಗಿ, ಜಲ ಸಂಪನ್ಮೂಲ ಸಚಿವರಾಗಿ, ನಂತರ ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ.

'ಕ್ಷೇತ್ರದ ಜನತೆ ಒಂದು ಮತ ಹಾಕಿ ಶಾಸಕರನ್ನಾಗಿ ಮಾಡಿರಿ ಎಂದು ಮನವಿ ಮಾಡಿದರೆ ಸಚಿವರನ್ನಾಗಿ ಮಾಡಿದ್ದಾರೆ. ಶಿಗ್ಗಾವಿ-ಸವಣೂರ ಕ್ಷೇತ್ರದ ಜನತೆಗೆ ಎಂದೆಂದಿಗೂ ಋಣಿಯಾಗಿರುತ್ತೇನೆ' ಎಂದು ಬಸವರಾಜ ಬೊಮ್ಮಾಯಿ ಅವರು ಸದಾ ಹೇಳುವ ಮಾತು.

ಉತ್ತರ ಕರ್ನಾಟಕಕ್ಕಾದ ಅನ್ಯಾಯ ಮತ್ತು ಅಸಮಾನತೆ ವಿರುದ್ಧ ಹೋರಾಟ, ಬರ ನಿರ್ಮೂಲನೆಗೆ ಹೊಸ ಆಯಾಮ, ನೀರಾವರಿ ಯೋಜನೆಯಲ್ಲಿ ಕ್ರಾಂತಿ, ಕಳಸಾ ಬಂಡೂರಿ ಯೋಜನೆಗೆ ಮೊದಲು ಧ್ವನಿ ಎತ್ತಿದವರು ಬಸವರಾಜ ಬೊಮ್ಮಾಯಿ.

'ಬಿಜೆಪಿಗೆ ಬರಲು ಉದಾಸಿ ಕಾರಣ'

'ಆಗ ನಾನು ಜನತಾ ಪರಿವಾರದಲ್ಲಿ ಇದ್ದೆ. ಸಿ.ಎಂ. ಉದಾಸಿ ಅವರು ಒಂದು ದಿನ ನನ್ನನ್ನು ಹಾನಗಲ್ಲಿಗೆ ಕರೆಯಿಸಿಕೊಂಡರು. ಅಂದು ಅವರ ಹುಟ್ಟುಹಬ್ಬ. ಇಡೀ ದಿನ ಅವರು ನನ್ನನ್ನು ತಮ್ಮ ಜೊತೆ ಇರಿಸಿಕೊಂಡಿದ್ದರು. ಮರುದಿನ ಬೆಂಗಳೂರಿಗೆ ಕರೆದುಕೊಂಡು ಹೋದರು. ಬಿಜೆಪಿ ರಾಷ್ಟ್ರೀಯ ಮುಖಂಡ ರಾಜನಾಥ್ ಸಿಂಗ್ ಹಾಗೂ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿ ಮಾಡಿಸಿದರು. ಭಾರತೀಯ ಜನತಾ ಪಕ್ಷ ಸೇರುವಂತೆ ಸಲಹೆ ನೀಡಿದರು' ಎಂದು ಬಸವರಾಜ ಬೊಮ್ಮಾಯಿ ನೆನಪು ಹಂಚಿಕೊಂಡಿದ್ದರು.

ಆದರೆ, ಆಗ ಬಿಜೆಪಿ ಸೇರಲು ಮಾನಸಿಕವಾಗಿ ನಾನು ಸಿದ್ಧವಿರಲಿಲ್ಲ. ಆದರೂ, ಬಿಜೆಪಿಗೆ ಬರುವಂತೆ ನನ್ನ ಮನ ಒಲಿಸಿದರು. ಹೀಗಾಗಿ ನಾನು ಬಿಜೆಪಿಗೆ ಬರಲು ಸಿ.ಎಂ. ಉದಾಸಿ ಅವರೇ ಕಾರಣೀಭೂತ ವ್ಯಕ್ತಿ. ನನ್ನ ತಂದೆ ಎಸ್.ಆರ್. ಬೊಮ್ಮಾಯಿ ಅವರು ತೀರಿಕೊಂಡ ನಂತರ ಸಿ.ಎಂ. ಉದಾಸಿ ಅವರೇ ನನಗೆ 'ಗಾಡ್ ಫಾದರ್' ಆದರು ಎಂದು ಬೊಮ್ಮಾಯಿ ತಿಳಿಸಿದ್ದರು.

ಜು. 30 ರಂದು ಮಧು ಬಂಗಾರಪ್ಪ ಕಾಂಗ್ರೆಸ್ ಸೇರ್ಪಡೆ

ಹುಬ್ಬಳ್ಳಿ: ಇಲ್ಲಿನ ಗೋಕುಲ ಗಾರ್ಡನ್‌ನಲ್ಲಿ ಇದೇ 30 ರಂದು ಬೆಳಿಗ್ಗೆ 9 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಸಮ್ಮುಖದಲ್ಲಿ ಜೆಡಿಎಸ್ ಮುಖಂಡ ಮಧು ಬಂಗಾರಪ್ಪ ಅವರು ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ.



ಮಧು ಬಂಗಾರಪ್ಪ

ಮಧು ಬಂಗಾರಪ್ಪ ಅವರು ಅಪಾರ ಬೆಂಬಲಿಗರೊಂದಿಗೆ ಸೇರ್ಪಡೆಯಾಗಲಿದ್ದು, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಉಪಸ್ಥಿತರಿರಲಿದ್ದಾರೆ.

ಹುಬ್ಬಳ್ಳಿ- ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಘಟಕದ ಅಧ್ಯಕ್ಷ ಕಿರಣ್ ಹಿರೇಮಠ, ಮುಖಂಡ ಬಸವರಾಜ ಮಾಯಕರ್ ಸಹ ಇದೇ ಸಂದರ್ಭದಲ್ಲಿ ಸೇರ್ಪಡೆಯಾಗಲಿದ್ದಾರೆ ಎಂದು ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಜತ್ ಉಳ್ಳಾಗಡ್ಡಿಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಚಿಪ್‌ಗಳ ರಾಜ್ಯದಲ್ಲಿ ಪ್ಲಾಸ್ಟಿಕ್ ಚಿಪ್ ನರ್ತನ

> ಎಆರ್‌ಎಂ ಪ್ಲಾಸ್ಟಿಕ್ ಚಿಪ್ ಇದನ್ನು ಪ್ಲಾಸ್ಟಿಕ್‌ನಿಂದ ಮಾಡಿರುವುದರಿಂದ, ಇದು ನಮ್ಯತೆಯ ಪ್ರತಿರೂಪ. ಹೀಗಾಗಿ ಇದನ್ನು ಬಾಗಿಸಬಹುದು, ಬಳುಕಿಸಬಹುದು, ಮಡಚಿ ಬಿಡಬಹುದು.

ಕ್ಷಮಾ ವಿ. ಭಾನುಪ್ರಕಾಶ್

ಕಾಲ ನಿಜವಾಗಿಯೂ ಬದಲಾಗಿಹೋಗಿದೆ. ಅಂದೊಂದಿತ್ತು ಕಾಲ! ಎಲ್ಲವೂ ಬೃಹತ್. ಬೃಹತ್ತಾದ ಅಂಗಳವಿರುವ ಮನೆಗಳು, ಬೃಹತ್ತಾದ ಒರಳು, ಬೃಹತ್ತಾದ ದಾಸ್ತಾನು ಹಗೇವು, ಆ ಕಾಲದ ರೇಡಿಯೊ, ಟಿ.ವಿ., ಹೊಲಿಗೆಯಂತ್ರದಂತಹ ಎಲ್ಲ ಮಶೀನ್‌ಗಳೂ ದೊಡ್ಡ ಗಾತ್ರವೇ! ಅಷ್ಟೇ ಏಕೆ ಮೊದಲಿಗೆ ತಯಾರಾದ ಚಾರ್ಲ್ಸ್ ಬ್ಯಾಬೇಜ್‌ನ ಮೊಟ್ಟಮೊದಲ ಕಂಪ್ಯೂಟರ್ ಇರಬಹುದು, ಅದಕ್ಕೆ ಮೂಲವೆಂಬಂತಿದ್ದ ಗಣಿತತಜ್ಞ ಆಲನ್ ಟ್ಯೂರಿಂಗ್‌ನ ಮಶೀನ್ ಇರಬಹುದು, ಇಡಿಯ ಕೋಣೆಯ ಗಾತ್ರದ್ದೇ. ಮೊಬೈಲ್ ಫೋನ್‌ಗಳೂ ಮೊದಲು ಮಾರುಕಟ್ಟೆಗೆ ಕಾಲಿಟ್ಟಾಗ ಅವುಗಳ ಭಾರ, ಗಾತ್ರ ಕಡಿಮೆಯೇನಿರಲಿಲ್ಲ. ಇದಕ್ಕೆಲ್ಲಾ ಒಂದು ಕಾರಣವಿರಲೇಬೇಕಲ್ಲಾ? ಹೇಗೆ ತುಂಬು ಕುಟುಂಬದ ಹೆಚ್ಚು ಜನರಿಗೆ ದೊಡ್ಡ ಮನೆ, ದೊಡ್ಡ ದಾಸ್ತಾನು, ದೊಡ್ಡ ಪಾತ್ರೆ–ಪರಡ ಬೇಕೋ, ದೊಡ್ಡ ದೊಡ್ಡ ಅನೇಕ ಭಾಗಗಳನ್ನು ಒಳಗೊಂಡು ತಯಾರಾದ ಮಶೀನ್‌ಗಳಿಗೂ ದೊಡ್ಡ ಗಾತ್ರವಿರುವುದು, ಭಾರವಿರುವುದು ಸಹಜ. ಆದರೆ ಸಂಶೋಧನೆಗಳು, ಅನ್ವೇಷಣೆಗಳು ನಡೆಯುತ್ತಾ ಸಾಗಿದ ಹಾಗೆ, ಸುಧಾರಣೆಗಳು ಎಲ್ಲಾ ಕ್ಷೇತ್ರಗಳಲ್ಲೂ ಬಂದು, ಕಡಿಮೆ ಜಾಗ ಆಕ್ರಮಿಸುವ, ವೇಗವಾಗಿ ಕಾರ್ಯನಿರ್ವಹಿಸುವ ಮಶೀನ್‌ಗಳ ರಾಜ್ಯಭಾರ ಪ್ರಾರಂಭವಾಯಿತು. ಅದರ ಫಲಿತಾಂಶವೇ ವರ್ಷವರ್ಷಕ್ಕೂ ಹೊರಬರುತ್ತಿರುವ ಸ್ಮಾರ್ಟ್ ಮಶೀನ್‌ಗಳಾದ ಟಿವಿ, ಲ್ಯಾಪ್‌ಟಾಪ್, ಟ್ಯಾಬ್, ಫೋನ್, ಧರಿಸಬಲ್ಲ ಬ್ಯಾಂಡ್‌ನ ನವನವೀನ ಆವೃತ್ತಿಗಳು

ಈ ಎಲ್ಲ ಮಶೀನ್‌ಗಳ ಹೊಸ ವರ್ಶನ್‌ಗಳನ್ನು ಮೀರಿಸಬಲ್ಲ ಸಾಧ್ಯತೆಯೊಂದು ಕಂಡುಬಂದಿದೆ. ಅದೇನಾದರೂ ಸಾಧ್ಯವಾಗಿಬಿಟ್ಟರೆ ಅಂಗೈಯಲ್ಲಿ ಅಡಗಿರುವ ಸ್ಮಾರ್ಟ್ ಫೋನ್‌ಗಳನ್ನು ಬೆರಳಿನಂಚಿಗೆ ಮಡಚಿ ಇಡಬಹುದು, ಹೆಬ್ಬೆಟ್ಟಿನ ಗಾತ್ರದ ಸ್ಮಾರ್ಟ್ ಬ್ಯಾಂಡ್ ಅನ್ನು ಪುಟ್ಟ ಮಾತ್ರೆಗಿಂತ ಚಿಕ್ಕದಾಗಿ ಕುಗ್ಗಿಸಬಹುದು. ಇದನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ ಎಆರ್‌ಎಂ ಸಂಸ್ಥೆಯು ಸಂಪೂರ್ಣವಾಗಿ ಪ್ಲಾಸ್ಟಿಕ್ ಎಆರ್‌ಎಂ ಚಿಪ್‌ಗಳನ್ನು ರೂಪಿಸಿದೆ. ಇದರಲ್ಲಿ ಹೊಸದೇನಿದೆ ಎಂದಿರಾ? ಈಗಾಗಲೇ ಮೈಕ್ರೋಚಿಪ್‌ಗಳ ಬಳಕೆ ಇದೆಯಲ್ವೇ? ಆ ಮೈಕ್ರೋಚಿಪ್‌ಗಳು ಎಷ್ಟೇ ಪುಟ್ಟವಾದ್ರೂ, ಅದರ ಪ್ರಮುಖ ಅಂಶ ಸಿಲಿಕಾನ್. ಸಿಲಿಕಾನ್ ಎಆರ್‌ಎಂ ಚಿಪ್‌ಗಳು ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರೂ ಸಹ, ಆ ಚಿಪ್ ಇರುವ ಭಾಗವನ್ನು ಮಾತ್ರ ಮಡಚುವ ಅವಕಾಶವಿಲ್ಲ. ಅದು ಫೋಲ್ಡೆಬಲ್ ಟ್ಯಾಬ್ ಆಗಿರಬಹುದು, ಮಡಚಬಲ್ಲ ಫೋನ್ ಆಗಿರಬಹುದು, ಅದರೊಳಗೆ ಅಡಗಿರುವ ಚಿಪ್ ಮಾತ್ರ ಇದ್ದ ಹಾಗೆ ಇರಬೇಕಾಗಿತ್ತು. ಆದರೆ, ತಂತ್ರಜ್ಞಾನ ಜಗತ್ತಿನಲ್ಲಿ ದಿನದಿನಕ್ಕೂ ಬದಲಾಗುವ ಸತ್ಯಗಳಲ್ಲಿ ಇದೂ ಒಂದು ಎಂದು ಸಾಬೀತು ಮಾಡಿರುವುದು ಎಆರ್‌ಎಂ ಪ್ಲಾಸ್ಟಿಕ್ ಚಿಪ್. ಇದನ್ನು ಪ್ಲಾಸ್ಟಿಕ್‌ನಿಂದ ಮಾಡಲಾಗಿರುವುದರಿಂದ, ಇದು ನಮ್ಯತೆಯ ಪ್ರತಿರೂಪ. ಹೀಗಾಗಿ ಇದನ್ನು ಬಾಗಿಸಬಹುದು, ಬಳುಕಿಸಬಹುದು, ಮಡಚಿಬಿಡಬಹುದು. ಹಾಗಾಗಿ, ಇದನ್ನು ಒಳಗೊಂಡ ಸ್ಮಾರ್ಟ್ ಸಾಧನವು ಮತ್ತಷ್ಟು ಮಗದಷ್ಟು ಕಿರಿದಾಗಲು ಇನ್ನಾವುದೇ ಅಂಕೆಶಂಕೆಯಿಲ್ಲ. ಈ 32 ಬಿಟ್‌ನ ಎಆರ್‌ಎಂ ಪ್ಲಾಸ್ಟಿಕ್ ಚಿಪ್,



ಅತ್ಯಂತ ಮೂಲಭೂತ ಆವೃತ್ತಿಯಾದ ಕಾರ್ಟೆಕ್ಸ್ ಎಂ. 0 ಪ್ರೊಸೆಸರ್ ವಿನ್ಯಾಸದ ಮೇಲೆ ಆಧರಿತ ರಚನೆಯಾಗಿದ್ದು, ರ್‍ಯಾಮ್‌ನ 128 ಬೈಟ್‌ಗಳು ಮತ್ತು ರೋಮ್‌ನ 456 ಬೈಟ್‌ಗಳನ್ನು ಬಳಸುತ್ತದೆ. ಈ ಹಿಂದೆ ವಿನ್ಯಾಸಗೊಳಿಸಲಾದ ಇದೇ ರೀತಿಯ ಚಿಪ್‌ಗಳಿಗಿಂತ 12 ಪಟ್ಟು ಉತ್ಕೃಷ್ಟವಾಗಿ ಇದು ಕಾರ್ಯನಿರ್ವಹಿಸಲಿದೆ ಎನ್ನುತ್ತಾರೆ, ಇದರ ತಯಾರಕರು. ತಾಂತ್ರಿಕವಾಗಿ ಇಷ್ಟೆಲ್ಲಾ ಅನುಕೂಲತೆಯಿರುವ ಈ ಚಿಪ್ ಅನ್ನು ಕಾಗದದಿಂದ ಹಿಡಿದು ಪ್ಲಾಸ್ಟಿಕ್ ಬ್ಯಾಗ್‌ಗಳವರೆಗೆ, ವಿವಿಧ ಬಗೆಯ ಆಹಾರ ಪ್ಯಾಕೇಜಿಂಗ್ ಸಾಮಗ್ರಿಗಳಿಂದ ಮೊದಲ್ಗೊಂಡು ಬ್ಯಾಂಡೇಡ್‌ನಂತಹ ವೈದ್ಯಕೀಯ ಕ್ಷೇತ್ರದ ಪುಟ್ಟ ಪುಟ್ಟ ಅಗತ್ಯತೆಗಳೊಳಗೂ ಸೇರಿಸಬಹುದಾಗಿದೆ. ಇದರಿಂದ ಆರೋಗ್ಯಕ್ಷೇತ್ರವನ್ನು ಸುಧಾರಿಸಲು, ವಿವಿಧ ಜೀವಿಗಳ ಜೀವನಚಕ್ರವನ್ನು ಅಧ್ಯಯನಿಸಲು, ಸಾಮಾಜಿಕ ಬದಲಾವಣೆಗಳನ್ನು ದಾಖಲಿಸಲು, ವಾಣಿಜ್ಯಿಕ ಏರುಪೇರುಗಳನ್ನು ವಿಶ್ಲೇಷಿಸಲು – ಹೀಗೆ ಎಲ್ಲೆಡೆಯೂ ಎಆರ್‌ಎಂ ಪ್ಲಾಸ್ಟಿಕ್ ಚಿಪ್‌ಗಳ ಬಳಕೆ ಸಾಧ್ಯ ಎಂಬುದು ಅಚ್ಚರಿದಾಯಕ, ಭರವಸೆದಾಯಕ ಎನ್ನುತ್ತಾರೆ, ಎಆರ್‌ಎಂ ಸಂಶೋಧಕರು.

ಆದರೂ, ನಮ್ಮ ನಿಮ್ಮ ಕೈಯಲ್ಲಿನ ಚತುರ ಸಾಧನಗಳ ಭಾಗವಾಗಿ ಬರಲು ಈ ಎಆರ್‌ಎಂ ಪ್ಲಾಸ್ಟಿಕ್ ಚಿಪ್‌ಗಳಿಗೆ ಒಂಚೂರು ಕಾಲಾವಕಾಶ ಬೇಕಿದೆ. ಇದಕ್ಕೆ ಕಾರಣ, ಮಾರುಕಟ್ಟೆಯಲ್ಲಿ ಉತ್ಕೃಷ್ಟವೆನಿಸಿರುವ ಸ್ನಾಪ್ ಡ್ರ್ಯಾಗನ್ 888 ಚಿಪ್‌ಗೆ ಹೋಲಿಸಿದರೆ, ಅದರ 3 ಗಿಗಾ ಹರ್ಟ್ಸ್ ವೇಗಕ್ಕಿಂತ ಇದರ 29 ಕಿಲೋ ಹರ್ಟ್ಸ್ ಕ್ಲಾಕ್ ಸ್ಪೀಡ್ ಬಹಳ ಕಡಿಮೆ. ಅಷ್ಟೇ ಅಲ್ಲ, ಇದೇ ಎಆರ್‌ಎಂ ವಿನ್ಯಾಸದ ಸಿಲಿಕಾನ್ ಚಿಪ್ ಕೇವಲ 10 ಮೈಕ್ರೋವಾಟ್‌ಗಳಷ್ಟು ಶಕ್ತಿ ಬಳಸುವಾಗ, ಎಆರ್‌ಎಂ ಪ್ಲಾಸ್ಟಿಕ್ ಚಿಪ್‌ಗಳು 20 ಮಿಲಿವ್ಯಾಟ್‌ಗಳಷ್ಟು ಶಕ್ತಿ ಬಳಸುತ್ತದೆಯೆಂದರೆ ಅದು ಲಾಭದಾಯಕವಲ್ಲ. ಆದರೆ ಈ ಎಆರ್‌ಎಂ ಪ್ಲಾಸ್ಟಿಕ್ ಚಿಪ್‌ಗಳು ಕೊಡಮಾಡುವ ಅನುಕೂಲತೆಗಳಿಗೆ ಹೋಲಿಸಿದರೆ ಇದು ದೊಡ್ಡ ಮಾತೇನಲ್ಲ. ಹಾಗಾಗಿ, ಕೊಂಚ ಸುಧಾರಣೆಗಳ ನಂತರ, ಇರುವ ಸವಾಲುಗಳಿಗೆ ಉತ್ತರ ಕಂಡುಕೊಂಡು ನಿಮ್ಮೆದುರಿಗೆ ಹಾಜರ್ ಆಗಲಿದೆ ಪಳಗಿದ ನೃತ್ಯಪಟುವಿನಂತೆ ಬಾಗಬಲ್ಲ, ಬಳುಕಬಲ್ಲ ಸ್ಮಾರ್ಟ್ ಸಾಧನಗಳು ಮತ್ತು ಅದಕ್ಕೆ ಕಾರಣವಾಗಿ ಅದರೊಳಗೆ ಅಡಗಿ ಕುಳಿತ ಎಆರ್‌ಎಂ ಪ್ಲಾಸ್ಟಿಕ್ ಚಿಪ್‌ಗಳು. ಆ ಹೊಸ ಸಾಧ್ಯತೆಗಳಿಗೆ ಎದುರು ನೋಡೋಣ.

ಮೊಬೈಲ್‌ಫೋನ್ ಹ್ಯಾಕ್ ಆಗಿದೆಯೆ?...

ಪೃಥ್ವಿರಾಜ್

ಪೆಗಾಸಸ್ ಸ್ಪೈ ವೇರ್. ಪ್ರಸ್ತುತ ವಿಶ್ವದಾದ್ಯಂತ ಈ ಕು-ತಂತ್ರಾಂಶದ್ದೇ ಚರ್ಚೆ. ನಿಗಾ ಚಟುವಟಿಕೆಗಳಿಗಾಗಿ ಇಸ್ರೇಲ್‌ನ ಎನ್‌ಎಸ್‌ಒ ಸಂಸ್ಥೆ ಅಭಿವೃದ್ಧಿಪಡಿಸಿದ ಈ ಸ್ಪೈವೇರ್, ವಿಶ್ವದ ಹಲವು ಗಣ್ಯರ ಮೊಬೈಲ್‌ಫೋನ್‌ಗಳನ್ನು ಹೊಕ್ಕಿದೆ ಎಂಬ ಅನುಮಾನ ಈಗ ಕಾಡುತ್ತಿದೆ. ಈ ಸ್ಪೈವೇರ್ ಒಮ್ಮೆ ನಮ್ಮ ಸ್ಮಾರ್ಟ್‌ಫೋನ್‌ಗೆ ಹೊಕ್ಕರೆ ಸುಲಭವಾಗಿ ಪತ್ತೆಹಚ್ಚಲು ಸಾಧ್ಯವಿಲ್ಲ ಎನ್ನುತ್ತಿದ್ದಾರೆ ತಂತ್ರಜ್ಞರು. ಇದರಿಂದ ನಮ್ಮ ಫೋನ್‌ನಲ್ಲಿರುವ ಫೋಟೊ ಗ್ಯಾಲರಿ, ಕರೆ, ಸಂದೇಶಗಳ ವಿವರವೆಲ್ಲಾ ಮತ್ತೊಬ್ಬರ ಕೈಗೆ ಸುಲಭವಾಗಿ ಸಿಗುತ್ತವೆ. ಒಂದು ವೇಳೆ ಇಂಥ ಸ್ಪೈ ವೇರ್‌ಗಳು ನಮ್ಮ ಫೋನ್‌ನಲ್ಲಿದ್ದರೆ ತಿಳಿಯುವುದು ಹೇಗೆ?

ಬ್ಯಾಟರಿ ಹಾಗೂ ಆ್ಯಪ್‌ಗಳನ್ನು ಪರಿಶೀಲಿಸಿ

ಮೊಬೈಲ್‌ಫೋನ್ ಬ್ಯಾಟರಿ ಸಾಮರ್ಥ್ಯ ವೇಗವಾಗಿ ಕುಗ್ಗುತ್ತಿದ್ದರೆ ಅಪಾಯಕಾರಿ ಆ್ಯಪ್‌ಗಳ ಮೂಲಕ ಮಾಲ್‌ವೇರ್ ಅಥವಾ ಸ್ಪೈವೇರ್ ಫೋನ್‌ಗೆ ಹೊಕ್ಕಿರುವ ಸಾಧ್ಯತೆ ಇರುತ್ತದೆ. ಆದರೆ ಬ್ಯಾಕ್‌ಗ್ರೌಂಡ್‌ನಲ್ಲೂ ಕೆಲವು ಆ್ಯಪ್‌ಗಳು ಕ್ರಿಯಾಶೀಲವಾಗಿರುವುದರಿಂದ ಬ್ಯಾಟರಿ ಬೇಗ ಖಾಲಿಯಾಗುತ್ತಿರುತ್ತದೆ. ಹೀಗಾಗಿ ಮೊದಲು ಅಂಥ ಆ್ಯಪ್‌ಗಳನ್ನು ನಿಯಂತ್ರಿಸಬೇಕು. ಆದರೂ ಬ್ಯಾಟರಿ ಸಾಮರ್ಥ್ಯ ಕಡಿಮೆಯಾಗುತ್ತಿದ್ದರೆ ಪರಿಶೀಲಿಸಬೇಕು. ನಿಮ್ಮ ಪ್ರಮೇಯವಿಲ್ಲದೆ ಆ್ಯಪ್‌ಗಳು ಡೌನ್‌ಲೋಡ್ ಆಗಿದ್ದರೆ, ಡಿಲೀಟ್ ಮಾಡಿದ ನಂತರವೂ ಪುನಃ ಡೌನ್‌ಲೋಡ್ ಆಗುತ್ತಿದ್ದರೆ ನಿಮ್ಮ ಮೊಬೈಲ್‌ಫೋನ್ ಹ್ಯಾಕಿಂಗ್‌ಗೆ ಗುರಿಯಾಗಿರುವ ಸಂಕೇತವದು.

ಹೆಚ್ಚು ಡೇಟಾ ಖರ್ಚಾದರೆ

ನಿತ್ಯ ಬಳಸುವ ಡೇಟಾ ಪ್ರಮಾಣಕ್ಕಿಂತ ಹೆಚ್ಚು ಖರ್ಚಾಗುತ್ತಿದ್ದರೆ ಮಾಲ್‌ವೇರ್‌ಗಳು ಮೊಬೈಲ್‌ಫೋನ್‌ನಲ್ಲಿ ಕ್ರಿಯಾಶೀಲವಾಗಿರುವ ಸಾಧ್ಯತೆ ಇರುತ್ತದೆ. ಹಾನಿಕಾರಕ ಆ್ಯಪ್‌ಗಳು ಅಥವಾ ತಂತ್ರಾಂಶಗಳು ಹಿನ್ನೆಲೆಯಲ್ಲಿ ಡೇಟಾ ಬಳಸುತ್ತಿರಬಹುದು. ಇದ್ದಕ್ಕಿದ್ದಂತೆಯೇ ಫೋನ್ ಸ್ಲೋ ಆಗುವುದು, ಯಾವುದಾದರೂ ಆ್ಯಪ್ ಅಥವಾ ಗೇಮಿಂಗ್ ತಂತ್ರಾಂಶ ತೆರೆದಾಗ ಕಿರಿಕಿರಿ ಎನಿಸಿದರೆ ಕುತಂತ್ರಾಂಶಗಳು ಹೊಕ್ಕಿರಬಹುದು.

> ಹ್ಯಾಕರ್‌ಗಳು ಹೆಚ್ಚಾಗಿ ಬಳಕೆಯಲ್ಲಿರುವ ಆಪರೇಟಿಂಗ್ ಸಿಸ್ಟಂಗಳ ಮೇಲೆಯೇ ದಾಳಿ ಮಾಡುತ್ತಾರೆ. ಕಾರಣ ಸಮಯ, ಹಣ ಖರ್ಚು ಮಾಡಿ ಅಭಿವೃದ್ಧಿಪಡಿಸಿದ ಕುತಂತ್ರಾಂಶಗಳು ಹೆಚ್ಚು ಜನ ಬಳಸುವ ಆಪರೇಟಿಂಗ್ ತಂತ್ರಾಂಶಗಳ ಮೇಲೆ ದಾಳಿ ಮಾಡಿದರಷ್ಟೇ ಅವರಿಗೆ ಅನುಕೂಲ.

ಸ್ಮಾರ್ಟ್‌ಫೋನ್ ಕಾರ್ಯವೈಖರಿ ಬದಲಾಗುವುದು

ಇದ್ದಕ್ಕಿದ್ದಂತೆ ಫೋನ್ ಕ್ರ್ಯಾಶ್ ಆಗುವುದು, ಲೋಡಿಂಗ್ ಸಮಯದಲ್ಲಿ ವಿಫಲವಾಗುವುದು – ಇಂತಹ ಸಮಸ್ಯೆಗಳು ಎದುರಾದರೆ ಎಚ್ಚರದಿಂದಿರಬೇಕು. ಈ ಮುಂಚೆ ನೋಡುತ್ತಿದ್ದ ವೆಬ್‌ಸೈಟ್‌ಗಳ ರೂಪುರೇಷೆಗಳು ಬದಲಾಗಿದ್ದರೂ ಮಾಲ್‌ವೇರ್, ಸ್ಪೈ ವೇರ್‌ಗಳು ಹೊಕ್ಕಿರುವ ಸಾಧ್ಯತೆ ಇರುತ್ತದೆ. ಫೋನ್‌ಲಾಗ್‌ನಲ್ಲಿ ನಿಮ್ಮ ಪ್ರಮೇಯವಿಲ್ಲದೆ ಯಾವುದಾದರೂ ಸಂದೇಶ ಅಥವಾ ಕರೆಗಳು ಕಾಣಿಸಿಕೊಂಡರೆ ಫೋನ್ ಹ್ಯಾಕ್‌ಗೆ ಗುರಿಯಾಗಿದೆ ಎಂದು ಭಾವಿಸಬಹುದು.

ಫ್ಲ್ಯಾಶ್ ಲೈಟ್ ಹಾಗೂ ಗ್ಯಾಲರಿ

ನಿಮ್ಮ ಗ್ಯಾಲರಿಯಲ್ಲಿ ನೀವು ಚಿತ್ರೀಕರಿಸದ ಚಿತ್ರಗಳು, ವಿಡಿಯೊಗಳು ಕಾಣಿಸಿಕೊಂಡರೆ ಅಥವಾ ಇತರರ ಮೊಬೈಲ್‌ಫೋನ್‌ಗಳಿಂದ ನಿಮ್ಮ ಫೋನ್‌ಗೆ ಬಂದಿದ್ದರೆ ಪರಿಶೀಲಿಸಬೇಕು. ನಿಮ್ಮ ಫೋನ್ ಕ್ಯಾಮೆರಾ ಇತರರ ನಿಯಂತ್ರಣಕ್ಕೆ ಸಿಕ್ಕಿದೆ ಎಂಬುದಕ್ಕೆ ಇದೊಂದು ಸಂಕೇತ. ನಿಮ್ಮ ಫೋನ್ ಬಳಕೆಯಲ್ಲಿ ಇಲ್ಲದಿದ್ದರೂ ಫ್ಲ್ಯಾಶ್‌ಲೈಟ್ ಮಿನುಗುತ್ತಿದ್ದರೆ ಎಚ್ಚರಿಕೆಯಾಗಿ ಪರಿಗಣಿಸಬೇಕು. ಹೆಚ್ಚು ಹೊತ್ತು ಬಳಸಿದರೆ ಹಲವು ಸ್ಮಾರ್ಟ್‌ಫೋನ್‌ಗಳು ಬಿಸಿಯಾಗುತ್ತವೆ. ಬಳಸದಿದ್ದರೂ ಬಿಸಿಯಾಗುತ್ತಿದ್ದರೆ ಹಿನ್ನೆಲೆಯಲ್ಲಿ ಕುತಂತ್ರಾಂಶಗಳು ಕ್ರಿಯಾಶೀಲವಾಗಿರುವ ಸಾಧ್ಯತೆ ಇರುತ್ತದೆ.

ಒಂದಿಷ್ಟು ಸಲಹೆ

ಹ್ಯಾಕರ್‌ಗಳು ಹೆಚ್ಚಾಗಿ ಬಳಕೆಯಲ್ಲಿರುವ ಆಪರೇಟಿಂಗ್ ಸಿಸ್ಟಂಗಳ ಮೇಲೆಯೇ ದಾಳಿ ಮಾಡುತ್ತಾರೆ. ಕಾರಣ ಸಮಯ, ಹಣ ಖರ್ಚು ಮಾಡಿ ಅಭಿವೃದ್ಧಿಪಡಿಸಿದ ಕುತಂತ್ರಾಂಶಗಳು ಹೆಚ್ಚು ಜನ ಬಳಸುವ ಆಪರೇಟಿಂಗ್ ತಂತ್ರಾಂಶಗಳ ಮೇಲೆ ದಾಳಿ ಮಾಡಿದರಷ್ಟೇ ಅವರಿಗೆ ಅನುಕೂಲ. ಹೀಗಾಗಿ ಕೋಟ್ಯಂತರ ಹಣ ಖರ್ಚು ಮಾಡಿ ಅಭಿವೃದ್ಧಿಪಡಿಸಿದ ಪೆಗಾಸಸ್ ವೈರಸ್ ಐಒಎಸ್ ಹಾಗೂ ಆಂಡ್ರಾಯ್ಡ್ ತಂತ್ರಾಂಶಗಳಿಗೆ ಹೊಕ್ಕಿದೆ ಎಂಬ ಅನುಮಾನ ಹಲವರನ್ನು ಕಾಡುತ್ತಿದೆ. ಇದಕ್ಕೆ ಪರ್ಯಾಯವಾಗಿ ಕೆಲವು ತಂತ್ರಾಂಶಗಳು ಇಲ್ಲಿವೆ.

- ಉಬಂಟು ಟಚ್ ಅಥವಾ ಪ್ಲಾಸ್ಮಾ ಮೊಬೈಲ್‌ನಂಥ ಓಪನ್ ಸೋರ್ಸ್ ತಂತ್ರಾಂಶಗಳು ಆಂಡ್ರಾಯ್ಡ್ ಹಾಗೂ ಐಒಎಸ್‌ಗಿಂತ ಹೆಚ್ಚು ಸುರಕ್ಷಿತ. ಇವುಗಳ ನಿರ್ವಹಣೆ ಹಾಗೂ ಬೆಲೆಯೂ ಕಡಿಮೆ.
- ಮೊಜಿಲ್ಲಾ ಫೈರ್‌ಫಾಕ್ಸ್, ಬ್ರೇವ್ ಅಥವಾ ಟಿಒಆರ್‌ನಂಥ ಓಪನ್ ಸೋರ್ಸ್ ಬ್ರೌಸರ್‌ಗಳಲ್ಲಿ ಹ್ಯಾಕಿಂಗ್ ಸಮಸ್ಯೆ ಕಡಿಮೆ. ಇದರೊಂದಿಗೆ ವಿಪಿಎನ್ ಬಳಸಿದರೆ ಇನ್ನೂ ಸುರಕ್ಷಿತ.
- ಮೆಸೆಂಜರ್ ತಂತ್ರಾಂಶಗಳ ಪೈಕಿ ವಾಟ್ಸ್‌ಆ್ಯಪ್‌ಗಿಂತ ಸಿಗ್ನಲ್ ಉತ್ತಮ ಎಂದು ಹೇಳಲಾಗುತ್ತಿದೆ. ಇವಲ್ಲದೆ ಟೆಲಿಗ್ರಾಮ್, ಎಲಿಮೆಂಟ್, ವೈರ್ ಆ್ಯಪ್‌ಗಳೂ ಎಂಡ್-ಟು-ಎಂಡ್ ಎನ್‌ಕ್ರಿಪ್ಟೆಡ್ ಸೌಲಭ್ಯ ಒದಗಿಸುತ್ತಿವೆ.
- ಇಮೇಲ್ ಸೌಲಭ್ಯಕ್ಕಾಗಿ ಉಚಿತವಾಗಿ ಲಭ್ಯವಿರುವ ಪ್ರೊಟೊಮೇಲ್ ಹಾಗೂ ಔಟ್‌ಲುಕ್‌ನಂತಹ ಓಪನ್ ಸೋರ್ಸ್ ಸೌಲಭ್ಯಗಳನ್ನು ಬಳಸಬಹುದು.

ಸಿಇಟಿ ದಿಕ್ಸೂಚಿ

Chemistry - Thermodynamics & Equilibrium-1

1. The amount of heat evolved when 500 cm^3 of 0.1 M HCl is mixed with 200 cm^3 of 0.2 M NaOH is

(1) 2.292 kJ (2) 1.292 kJ

(3) 22.9 kJ (4) 0.292 kJ

2. The enthalpy of vaporization of benzene is +35.3 kJ/mol at its boiling point 80° c of The entropy change in the transition of vapour to liquid at its boiling point is (in $J\ mol^{-1} K^{-1}$)

(1) -100 (2) +100

(3) +342 (4) -342

3. Based on the first law of thermodynamics, which one of the following is correct?

(1) For an isothermal process, q = +w

(2) For an isochoric process, $\Delta U = -q$

(3) For an adiabatic process, $\Delta U = -w$

(4) For a cyclic process, $q = -w$

4. For the reversible reaction, ,

$A(s)+B(g) \rightleftharpoons C(g)+D(g), \Delta G^o = -350\ kJ$,

which one of the following statements is true?

(1) The reaction is thermodynamically non-feasible

(2) The entropy change is negative

(3) Equilibrium constant is greater than one

(4) The reaction should be instantaneous

5. Conversion of oxygen into ozone is non – spontaneous at

(1) High temperature (2) Low temperature

(3) All temperature (4) Room temperature

6. The ratio of heats liberated at 298 K from the combustion of one kg of coke and by burning water gas obtained from kg of coke is (Assume coke to be 100 % carbon.)

(Given enthalpies of combustion of , CO_2 CO and H_2 as 393.5 kJ, 285 kJ, 285 kJ respectively all at 298 K)

(1)0.69 : 1 (2)0.96 : 1 (3)0.79 : 1 (4)0.86 : 1

7. Given thermochemical equation,

$2H_{2(g)} + O_{2(g)} \rightarrow 2H_2O_{(\ell)}; \Delta H = -571.6\ kJ.$

Heat of decomposition of water is

(1) −571.6 kJ (2) +571.6 kJ

(3) −1143.2 kJ (4) +285.8 kJ

8. The process is spontaneous at the given temperature, if

(1) ΔH is +veand ΔS is –ve

(2) ΔH is –ve and ΔS is +ve

(3) ΔH is +ve and ΔS is +ve

(4) ΔH is +ve and ΔS is equal to zero

9. The value of entropy of solar system is

(1) Increasing (2) Decreasing

(3) Constant (4) Zero

10. If the bond energies of H–H, Br–Br and H–Br are 433, 192 and 364 kJ mol^{-1} respectively, then $\Delta H°$ for the reaction: H2(g) + Br2(g) - 2HBr(g) is

(1) – 261 kJ (2) + 103 kJ

(3) + 261 kJ (4) –103 kJ

Answers

1. Answer (1)

Solution :No. of equivalent of NaOH reacting

$$= \frac{40}{1000}$$

$$1\ eq = 57.3$$

$$\frac{40}{1000} eq = \frac{57.3 \times 40}{1000} = 2.292\ kJ$$

2. Answer (1)

Solution :

$$\text{Solution} : \Delta H = +35.3\ kJ/mol$$

$$T = 80°C = 80 + 273 = 353K$$

$$\Delta S = 0.1 \times 10^3 = 100\ J/mol/K$$

Entropy change in the transition of vapour to liquid is −ve.

3. Answer (4)

Solution :According to first law of thermodynamics, $\Delta U = q + w$ for cyclic process, change in internal energy = $= 0 \therefore q = -w$

4. Answer (3)

Solution :

$$A(s)+B(g) \rightleftharpoons C(g)+D(g), \Delta G^o = -350kJ$$

relationship between ΔG^o and equilibrium constant is $\Delta G^o = -2.303\ RT \log K_p$

When $K_n > 1, \Delta G^o = -ve$

5. Answer (1)

Solution :The Conersion of oxygen into ozone is non spontaneous at high temperatures

6. Answer (1)

Solution :Moles of coke $= \frac{1000}{12} = 83.33$

$C + O_2 \rightarrow CO_2;\ \Delta H = 393.5\ kJ$

1 Mole of carbon 393.5 k J

83.33 moles of carbon $\rightarrow$ 83.33×393.5 kJ

$C + H_2O \rightarrow CO + H_2$

1mole 1mole 1mole

$CO + H_2 + O_2 \rightarrow CO_2 + H_2O;\ \Delta H = 285 + 285$

= 570 kJ

$\therefore$ 83.33 Moles of CO and H_2 Produces 83.33×570 kJ

Ratio = 393.5: 570 = 0.69: 1

7. Answer (4)

Solution: $2H_2O \rightarrow 2H_2 + O_2 \quad \Delta_r H = 571.6$

$H_2O \rightarrow H_2 + \frac{1}{2}O_2 \quad \Delta_r H = 285.8\ kJ$

Which is heat of decomposition.

8. Answer (2)

Solution :Conceptual

The value of entropy of solar system is

9. Answer (1)

Solution :Conceptual

10. Answer (4)

Solution :Given that:

Bond energies of H–H = 433 KJ mol^{-1}

Bond energies of Br–Br = 192 KJ mol^{-1}

Bond energies of H–Br = 364 KJ mol^{-1}

H – H + Br – Br -2H – Br

$\Delta H°$ = ∑ bond energy (reactant) – ∑ bond energy (products)

= 433 + 192 – 2 × 364

= + 625 – 728

= – 103 KJ

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 31

411. ಈ ಕೆಳಗಿನ ಯಾವ ಬಂದರು ಕರ್ನಾಟಕದ ಹೆಬ್ಬಾಗಿಲು ಎಂದು ಕರೆಯಲ್ಪಡುತ್ತದೆ?

ಎ) ಭಟ್ಕಳ ಬಂದರು

ಬಿ) ಮಲ್ಪೆ ಬಂದರು

ಸಿ) ನವಮಂಗಳೂರು ಬಂದರು

ಡಿ) ಬೇಲಿಕೇರಿ ಬಂದರು

412. 'ಕಪಿಲಾ' ನದಿಯ ಇನ್ನೊಂದು ಹೆಸರು?

ಎ) ಕಬಿನಿ ಬಿ) ಹಾರಂಗಿ

ಸಿ) ಕಾವೇರಿ ಡಿ) ಹೇಮಾವತಿ

413. ಭೀಮಾ ನದಿಯ ಉಗಮ ಸ್ಥಾನ ಯಾವುದು?

ಎ) ನಂದಿ ದುರ್ಗ ಬಿ) ಅಂಬು ತೀರ್ಥ

ಸಿ) ಭೀಮಾ ಶಂಕರ ಡಿ) ಜಾಂಬೋಟಿ

414. ಕರ್ನಾಟಕ ಸಂಗೀತ ಪಿತಾಮಹ ಎಂದು ಯಾರನ್ನು ಕರೆಯುತ್ತಾರೆ?

ಎ) ಕನಕದಾಸ

ಬಿ) ವಿಜಯದಾಸ

ಸಿ) ಪುರಂದರದಾಸ

ಡಿ) ವಿಠಲದಾಸ

415. ಖೋಟಾ ದಾಖಲಾತಿಗಳನ್ನು ಪತ್ತೆಮಾಡಲು ಬಳಸುವ ಕಿರಣ

ಎ) ಬೀಟಾ ಕಿರಣಗಳು

ಬಿ) ಇನ್‌ಫ್ರಾ-ರೆಡ್ ಕಿರಣಗಳು

ಸಿ) ನೇರಳಾತೀತ ಕಿರಣಗಳು

ಡಿ) ಗಾಮಾ ಕಿರಣಗಳು

416. ವಿಶ್ವದ ಅತೀ ದೊಡ್ಡ ಸಾಗರ ಯಾವುದು?

ಎ) ಪೆಸಿಫಿಕ್ ಸರೋವರ

ಬಿ) ಇಂಡಿಯನ್ ಸರೋವರ

ಸಿ) ಅಟ್ಲಾಂಟಿಕ್ ಸರೋವರ

ಡಿ) ಆರ್ಕ್ಟಿಕ್ ಸರೋವರ

417. ನಕ್ಷತ್ರಗಳ ಬಣ್ಣವು ಕೆಳಗಿನ ಯಾವುದನ್ನು ಅವಲಂಬಿಸಿರುತ್ತದೆ?

ಎ) ಅಂತರ

ಬಿ) ತಾಪಮಾನ

ಸಿ) ವಾತಾವರಣದ ಒತ್ತಡ

ಡಿ) ವಾಯು ಮಾಲಿನ್ಯಕಾರಕಗಳು

418. INTERPOL ಕೇಂದ್ರ ಸ್ಥಾನ ಯಾವುದು?

ಎ) ಲಂಡನ್

ಬಿ) ನ್ಯೂಯಾರ್ಕ್

ಸಿ) ಲಿಯಾನ್

ಡಿ) ಪ್ಯಾರಿಸ್

419. 1. ಶಬ್ದ ತರಂಗಗಳು ಯಾಂತ್ರಿಕ ತರಂಗಗಳು

2. ಶಬ್ದವನ್ನು ಅಳೆಯುವ ಮಾನಕ್ಕೆ ಡೆಸಿಬಲ್ ಎಂದು ಹೆಸರು.

ಎ) 1 ಸರಿ, 2 ತಪ್ಪು

ಬಿ) 2 ಸರಿ, 1 ತಪ್ಪು

ಸಿ) 1 ಮತ್ತು 2 ಸರಿ

ಡಿ) 1 ಮತ್ತು 2 ತಪ್ಪು

420. ಚಾಲುಕ್ಯರ ಕಾಲದ ಗುಹಾದೇವಾಲಯಗಳು ಇಲ್ಲಿವೆ

ಎ) ಬೇಲೂರು

ಬಿ) ಐಹೊಳೆ

ಸಿ) ಬಾದಾಮಿ

ಡಿ) ಪಟ್ಟದಕಲ್ಲು

421) 'ವಿಶ್ವ ಅಧಿಕ ರಕ್ತದೊತ್ತಡ ದಿನ' ವನ್ನು ಯಾವಾಗ ಆಚರಿಸಲಾಗುತ್ತದೆ?

ಎ) 15 ಮೇ

ಬಿ) 17 ಮೇ

ಸಿ) 16 ಮೇ

ಡಿ) ಇವುಗಳಲ್ಲಿ ಯಾವುದೂ ಇಲ್ಲ

422) ಇತ್ತೀಚೆಗೆ ಡಿಸಿಜಿಐ 2-18 ವರ್ಷ ವಯಸ್ಸಿನವರಿಗೆ ಯಾವ ಕೋವಿಡ್ ಲಸಿಕೆ ಪ್ರಯೋಗಕ್ಕೆ ಅನುಮೋದನೆ ನೀಡಿದೆ?

ಎ) ಕೋವ್ಯಾಕ್ಸಿನ್

ಬಿ) ಕೋವಿಶೀಲ್ಡ್

ಸಿ) ಸ್ಪುಟ್ನಿಕ್ ವಿ

ಡಿ) ಇವುಗಳಲ್ಲಿ ಯಾವುದೂ ಇಲ್ಲ

423) ಯಾವ ವರ್ಣಚಿತ್ರಕಾರನ ಇತ್ತೀಚಿನ ವರ್ಣಚಿತ್ರವನ್ನು ನ್ಯೂಯಾರ್ಕ್‌ನಲ್ಲಿ 103.4 ದಶಲಕ್ಷ ಡಾಲರ್‌ಗೆ ಮಾರಾಟ ಮಾಡಲಾಗಿದೆ?

ಎ) ಕ್ಲೌಡ್ ಮೊನೆಟ್

ಬಿ) ಪ್ಯಾಬ್ಲೊ ಪಿಕಾಸೊ

ಸಿ) ರೆಂಬ್ರಾಂಡ್

ಡಿ) ಇವುಗಳಲ್ಲಿ ಯಾವುದೂ ಇಲ್ಲ

424) ಇಂಟರ್ ನ್ಯಾಷನಲ್ ಕೌನ್ಸಿಲ್ ಫಾರ್ ಅಡ್ವರ್ಟೈಸಿಂಗ್ ಸ್ವಯಂ ನಿಯಂತ್ರಣದ ಉಪಾಧ್ಯಕ್ಷರಾಗಿ ನೇಮಕಗೊಂಡವರು ಯಾರು?

ಎ) ರೋಶ್ನಿ ನಾಡರ್

ಬಿ) ರಿದ್ಧಿ ಗರ್ಗ್

ಸಿ) ಮನೀಶಾ ಕಪೂರ್

ಡಿ) ಇವರಲ್ಲಿ ಯಾರೂ ಅಲ್ಲ

425) ಇತ್ತೀಚೆಗೆ ನಿಧನರಾದ 'ಎಂ.ಎಸ್. ನರಸಿಂಹನ್' ಏನಾಗಿ ಪ್ರಸಿದ್ಧರಾಗಿದ್ದರು?

ಎ) ಗಾಯಕ

ಬಿ) ಗಣಿತತಜ್ಞ

ಸಿ) ಪತ್ರಕರ್ತ

ಡಿ) ಇವುಗಳಲ್ಲಿ ಯಾವುದೂ ಇಲ್ಲ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ – 30 ರ ಉತ್ತರ : 396.ಸಿ, 397. ಡಿ, 398. ಡಿ, 399. ಬಿ, 400. ಸಿ, 401. ಬಿ, 402. ಬಿ, 403. ಎ, 404. ಸಿ, 405. ಬಿ, 406. ಎ, 407. ಬಿ, 408. ಡಿ, 409. ಸಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ಕಷ್ಟಪಟ್ಟು ಕೆಲಸ ಮಾಡಿ, ಆದರೆ ನಿಮ್ಮ ಪ್ರೀತಿಪಾತ್ರರು, ಕುಟುಂಬ ಮತ್ತು ಸ್ನೇಹಿತರಿಗಾಗಿ ಸಮಯ ಮಾಡಿಕೊಳ್ಳಿ. ನಿಮ್ಮ ಅಂತಿಮ ದಿನದಂದು ನಿಮ್ಮ ಪವರ್‌ಪಾಯಿಂಟ್ ಪ್ರೆಸೆಂಟೇಷನ್‌ಗಳನ್ನು ಯಾರೂ ನೆನಪಿಸಿಕೊಳ್ಳುವುದಿಲ್ಲ.

–ಚೇತನ್ ಭಗತ್

ಶಾಲೆಗಳು ಬಾಗಿಲು ತೆರೆಯಲಿ ನಿರಂತರ ಕಲಿಕೆ ಅಬಾಧಿತವಾಗಲಿ

ಕೊರೊನಾ ಸೋಂಕನ್ನು ನಿಯಂತ್ರಿಸುವ ಸಲುವಾಗಿ ಮುಚ್ಚಿದ್ದ ಪದವಿ, ಸ್ನಾತಕೋತ್ತರ ಪದವಿ ಹಾಗೂ ಎಂಜಿನಿಯರಿಂಗ್ ಕಾಲೇಜುಗಳು ಮತ್ತೆ ಕಾರ್ಯಾರಂಭ ಮಾಡಿರುವುದು ಅಗತ್ಯವಾಗಿದ್ದ ಕ್ರಮ. ಕೊರೊನಾದ ಆತಂಕ ಇನ್ನೂ ದೂರವಾಗಿಲ್ಲ. ಸಂಭಾವ್ಯ ಮೂರನೇ ಅಲೆಯಲ್ಲಿ ಕೊರೊನಾ ಸೋಂಕು ಮಕ್ಕಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಾಧಿಸಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಈ ಆತಂಕದ ನಡುವೆಯೂ ಶಾಲಾ ಕಾಲೇಜುಗಳು ಆರಂಭವಾಗುವುದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅನಿವಾರ್ಯವಾಗಿದೆ. ಕೊರೊನಾ ಕಾರಣದಿಂದಾಗಿ ಕಳೆದ ಒಂದೂವರೆ ವರ್ಷದಿಂದ ವಿದ್ಯಾರ್ಥಿಗಳು ಮನೆಗಳಲ್ಲಿಯೇ ಉಳಿದಿದ್ದಾರೆ. ಪ್ರಸಕ್ತ ಶೈಕ್ಷಣಿಕ ವರ್ಷದ ಆರಂಭ ಕೂಡ ಸೋಂಕಿನ ಭೀತಿಯಿಂದ ವಿಳಂಬವಾಗಿದೆ. ಸೋಂಕಿನ ಸಂಕಷ್ಟ ಯಾವಾಗ ಬಗೆಹರಿಯುತ್ತದೆಂದು ಹೇಳುವುದೂ ಸಾಧ್ಯವಿಲ್ಲ. ಹಾಗಾಗಿ, ಶಾಲೆಗಳನ್ನು ಮತ್ತಷ್ಟು ಸಮಯ ಮುಚ್ಚುವುದರಿಂದ ಮಕ್ಕಳ ಹಿತಾಸಕ್ತಿ ರಕ್ಷಣೆ ಸಾಧ್ಯವಾಗುವುದಕ್ಕಿಂತಲೂ ಅನನುಕೂಲಗಳೇ ಹೆಚ್ಚು. ಲಾಕ್‌ಡೌನ್ ಸಮಯದಲ್ಲಿ ಬಹಳಷ್ಟು ವಿದ್ಯಾರ್ಥಿಗಳ ಕಲಿಕೆಯ ಸಾಮರ್ಥ್ಯ ಕುಸಿದಿರುವುದನ್ನು ಸಮೀಕ್ಷೆಗಳು ಗುರುತಿಸಿವೆ. ರಾಜ್ಯದ ಶೇ 30ರಷ್ಟು ಮಕ್ಕಳು ಕೊರೊನಾ ಕಾರಣದಿಂದಾಗಿ ಕಲಿಕೆಯಿಂದ ವಂಚಿತರಾಗಿರುವುದನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ (ಡಿಎಸ್‌ಇಆರ್‌ಟಿ) ಸಮೀಕ್ಷೆ ಗುರುತಿಸಿದೆ. ನಿರಂತರ ಕಲಿಕೆಗೆ ಉಂಟಾಗುವ ಅಡಚಣೆ ಮಕ್ಕಳ ಕಲಿಕಾ ಸಾಮರ್ಥ್ಯಕ್ಕೆ ತೊಡಕಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಇಂಥ ಸೂಕ್ಷ್ಮ ಸಂದರ್ಭದಲ್ಲಿ ಇನ್ನಷ್ಟು ಕಾಲ ಶಾಲೆಗಳನ್ನು ಮುಚ್ಚುವುದರಿಂದ ಮಕ್ಕಳ ಕಲಿಕೆಯ ಮೇಲೆ ತೀವ್ರ ದುಷ್ಪರಿಣಾಮ ಆಗುವ ಸಾಧ್ಯತೆಯಿದೆ. ವಿದ್ಯಾರ್ಥಿಗಳ ನಿರಂತರ ಕಲಿಕೆಗೆ ಅನುಕೂಲವಾಗುವಂತೆ ನಡೆಸಲಾಗುತ್ತಿರುವ ಆನ್‌ಲೈನ್ ಶಿಕ್ಷಣ ಕಾರ್ಯಕ್ರಮ ಸ್ವಲ್ಪಮಟ್ಟಿಗೆ ಯಶಸ್ವಿಯಾಗಿದೆ. ಆದರೆ, ಮೊಬೈಲ್ ಫೋನ್‌ಗಳಿಲ್ಲದ, ಸ್ಮಾರ್ಟ್‌ ಫೋನ್ ಇದ್ದರೂ ದುರ್ಬಲ ನೆಟ್‌ವರ್ಕ್ ಕಾರಣದಿಂದಾಗಿ ಆನ್‌ಲೈನ್ ಶಿಕ್ಷಣದಿಂದ ವಂಚಿತರಾಗಿರುವ ಗ್ರಾಮೀಣ ಮಕ್ಕಳ ಸಂಖ್ಯೆ ದೊಡ್ಡದಿದೆ. ದೂರದರ್ಶನದ ಮೂಲಕ ಮಕ್ಕಳಿಗೆ ಪಾಠ ಹೇಳುವ ಪ್ರಯತ್ನವೂ ಅಷ್ಟೇನು ಫಲಕಾರಿಯಾಗಿಲ್ಲ. ಕಲಿಕೆಯನ್ನು ಪರಿಣಾಮಕಾರಿ ಆಗಿಸುವುದು ಹಾಗೂ ಎಲ್ಲ ಮಕ್ಕಳನ್ನೂ ತಲುಪುವುದು ಭೌತಿಕ ತರಗತಿಗಳಿಂದಷ್ಟೇ ಸಾಧ್ಯ. ಈ ಹಿನ್ನೆಲೆಯಲ್ಲಿ ಶಾಲೆಗಳು ಆದಷ್ಟು ಬೇಗ ಆರಂಭವಾಗುವುದು ಅಪೇಕ್ಷಣೀಯ.



ಕಲಿಕೆಯನ್ನು ಪರಿಣಾಮಕಾರಿ ಆಗಿಸುವುದು ಭೌತಿಕ ತರಗತಿಗಳಿಂದಷ್ಟೇ ಸಾಧ್ಯ. ಈ ಹಿನ್ನೆಲೆಯಲ್ಲಿ ಶಾಲೆಗಳು ಆದಷ್ಟು ಬೇಗ ಆರಂಭವಾಗುವುದು ಅಪೇಕ್ಷಣೀಯ

ಶಾಲೆಗಳನ್ನು ಮುಚ್ಚುವುದರ ದುಷ್ಪರಿಣಾಮ ಮಕ್ಕಳ ಕಲಿಕೆಯ ಮೇಲಷ್ಟೇ ಅಲ್ಲ, ಸಮಾಜದ ಮೇಲೂ ಆಗುತ್ತಿದೆ. ಲಾಕ್‌ಡೌನ್ ಸಮಯದಲ್ಲಿ ಬಾಲ್ಯವಿವಾಹಗಳ ಸಂಖ್ಯೆ ಹೆಚ್ಚಾಗಿದೆ. ಬಾಲಕಾರ್ಮಿಕರೂ ಹೆಚ್ಚಾಗಿದ್ದಾರೆ. ಸಂಕಷ್ಟದ ಸಮಯದಲ್ಲಿ ಮದುವೆ ಮಾಡುವ ಮೂಲಕ ಹೆಣ್ಣುಮಕ್ಕಳ ಜವಾಬ್ದಾರಿಯನ್ನು ಹಗುರ ಮಾಡಿಕೊಳ್ಳುವ ಯೋಚನೆ ಕೆಲವು ಪೋಷಕರದು. ಶಾಲೆಗಳಿಲ್ಲದ ಕಾರಣ ಮನೆಯಲ್ಲಿಯೇ ಉಳಿದಿರುವ ಹುಡುಗರನ್ನು ಕೆಲಸಕ್ಕೆ ಹಚ್ಚುವ ಮೂಲಕ ಕುಟುಂಬ ನಿರ್ವಹಣೆಯ ಭಾರವನ್ನು ಕೊಂಚ ಸಹನೀಯವಾಗಿಸಿಕೊಳ್ಳುವ ಪ್ರಯತ್ನ ಮತ್ತೆ ಕೆಲವು ಪಾಲಕರದು. ಇದರಿಂದಾಗಿ, ಶಾಲೆಗೆ ಹೋಗಬೇಕಾದ ಮಕ್ಕಳು ಕೃಷಿ ಚಟುವಟಿಕೆಗಳಲ್ಲಿ ಹಿರಿಯರಿಗೆ ಹೆಗಲು ನೀಡಿದ್ದಾರೆ. 2021–22ರ ಶೈಕ್ಷಣಿಕ ವರ್ಷದ ದಾಖಲಾತಿ ಪ್ರಮಾಣ ಕುಸಿದಿದೆ. ಈ ಕುಸಿತವು ಒಂದನೇ ತರಗತಿಗೆ ದಾಖಲಾಗುವ ಮೂಲಕ ಅಕ್ಷರಾಭ್ಯಾಸ ಶುರು ಮಾಡಬೇಕಾಗಿದ್ದ ಮಕ್ಕಳು ನೇರವಾಗಿ ದುಡಿಮೆಯತ್ತ ನಡೆದಿರುವುದನ್ನು ಸೂಚಿಸುವಂತಿದೆ. ಈ ಸಾಮಾಜಿಕ, ಶೈಕ್ಷಣಿಕ ಸಂಕಷ್ಟಗಳ ಜೊತೆಗೆ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳೂ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿವೆ. ಅಪೌಷ್ಟಿಕತೆಯಿಂದ ಬಳಲುವ ಮಕ್ಕಳ ಸಂಖ್ಯೆ ಹೆಚ್ಚಾಗಿರುವುದರ ಜೊತೆಗೆ, ಅತಿ ತೂಕದ ಕಾರಣದಿಂದಾಗಿ ಮಧುಮೇಹದಂತಹ ಸಮಸ್ಯೆಗಳು ಕೆಲವು ಎಳೆಯರಲ್ಲಿ ಕಾಣಿಸಿಕೊಂಡಿವೆ. ವಿದ್ಯಾರ್ಥಿಗಳಲ್ಲಿ ಮಾನಸಿಕ ಖಿನ್ನತೆ ಹೆಚ್ಚುತ್ತಿರುವುದನ್ನು ಮಾನಸಿಕ ತಜ್ಞರು ಗುರುತಿಸಿದ್ದಾರೆ. ಶಾಲೆ ಮತ್ತು ಆಟದ ಬಯಲಿನಿಂದ ದೂರ ಇರುವುದರಿಂದಾಗಿ, ಮಕ್ಕಳಲ್ಲಿ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳು ಹೆಚ್ಚುತ್ತಿರುವುದನ್ನು ಪಾಲಕರು ಹಾಗೂ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಮನೆಯಲ್ಲಿರುವ ಮಕ್ಕಳಲ್ಲೇ ಆರೋಗ್ಯದ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿರುವಾಗ, ಕೊರೊನಾ ಸೋಂಕಿನಿಂದ ವಿದ್ಯಾರ್ಥಿಗಳನ್ನು ರಕ್ಷಿಸುವುದಕ್ಕಾಗಿ ಶಾಲೆಗಳನ್ನು ಆರಂಭಿಸದೆ ಇರುವುದರಲ್ಲಿ ಅರ್ಥವಿಲ್ಲ.

ಕೊರೊನಾ ಹೆಸರಿನಲ್ಲಿ ಮಕ್ಕಳನ್ನು ಮನೆಗಳಲ್ಲಿ ಇರಿಸಿಕೊಳ್ಳುವುದರಿಂದ ಸಮಸ್ಯೆಗಳು ಹೆಚ್ಚುತ್ತವೆಯೇ ವಿನಾ ಕಡಿಮೆಯಾಗುವುದಿಲ್ಲ ಎನ್ನುವುದು ಕಳೆದ ಒಂದೂವರೆ ವರ್ಷದಲ್ಲಿ ಸಾಬೀತಾಗಿದೆ. ಮಕ್ಕಳಲ್ಲಿ ರೋಗನಿರೋಧಕ ಶಕ್ತಿ ಪ್ರಬಲವಾಗಿರುವುದರಿಂದ ಕೊರೊನಾ ಅವರನ್ನು ಹೆಚ್ಚು ಬಾಧಿಸುವುದಿಲ್ಲ ಎನ್ನುವುದನ್ನು ತಜ್ಞರು ಒತ್ತಿ ಹೇಳಿದ್ದಾರೆ. ಈ ಸಂಗತಿಗಳು ಮಕ್ಕಳನ್ನು ಶಾಲೆಗೆ ಬರಮಾಡಿಕೊಳ್ಳುವ ನಿರ್ಣಯ ಕೈಗೊಳ್ಳಲು ಸರ್ಕಾರಕ್ಕೆ ಒತ್ತಾಸೆ ನೀಡುವಂತಿವೆ. ಪದವಿ ಕಾಲೇಜುಗಳನ್ನು ತೆರೆದಿರುವುದರ ಬೆನ್ನಿಗೇ ಆಗಸ್ಟ್ 2ರಿಂದ ಪ್ರಾಥಮಿಕ ಹಂತದಿಂದಲೇ ಶಾಲೆಗಳನ್ನು ಆರಂಭಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ನೇತೃತ್ವದ ಕಾರ್ಯಪಡೆ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಶಾಲೆಗಳನ್ನು ತೆರೆಯುವ ನಿಟ್ಟಿನಲ್ಲಿ ಒಂದೇ ಮಾದರಿಯ ಪ್ರಮಾಣಿತ ಕಾರ್ಯಾಚರಣೆ ವಿಧಾನ ಅನುಸರಿಸುವಂತೆ ಸಲಹೆ ಮಾಡಿದೆ. ಡಾ. ದೇವಿಪ್ರಸಾದ್ ಶೆಟ್ಟಿ ನೇತೃತ್ವದ ತಜ್ಞರ ಸಮಿತಿ ಕೂಡ, ಕೋವಿಡ್ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಅನುಸರಿಸಿ ನಿರ್ದಿಷ್ಟ ಸಂಖ್ಯೆಯ ವಿದ್ಯಾರ್ಥಿಗಳಿಗೆ ಪಾಳಿಗಳಲ್ಲಿ ಅಥವಾ ದಿನ ಬಿಟ್ಟು ದಿನ ತರಗತಿಗಳನ್ನು ನಡೆಸಬೇಕೆಂದು ಸಲಹೆ ಮಾಡಿದೆ. ಈ ಸಲಹೆ, ಶಿಫಾರಸುಗಳನ್ನು ಗಂಭೀರವಾಗಿ ಪರಿಗಣಿಸಿ ಶಾಲೆಗಳನ್ನು ಶೀಘ್ರದಲ್ಲಿ ಆರಂಭಿಸಲು ಸರ್ಕಾರ ಮುಂದಾಗಬೇಕು.

ದಿನದ ಟ್ವೀಟ್

ವಿಳಂಬ ಧೋರಣೆ ಯಾಕೆ?

ಪೆಗಾಸಸ್ ಗೂಢಚರ್ಯೆ ಪ್ರಕರಣದ ಕುರಿತು ಫ್ರಾನ್ಸ್, ಇಸ್ರೇಲ್, ಅಲ್ಜೀರಿಯಾ ತನಿಖೆಗೆ ಆದೇಶಿಸಿವೆ. ಆದರೆ ಭಾರತ ಈಗಲೂ ನಿರಾಕರಣೆಯ ಮನಃಸ್ಥಿತಿಗೇ ಅಂಟಿಕೊಂಡಿದೆ ಹಾಗೂ ಮೋದಿ ನೇತೃತ್ವದ ಸರ್ಕಾರವು ತನಿಖೆಗೆ ಆದೇಶಿಸಲು ಈಗಲೂ ನಿರಾಕರಿಸುತ್ತಿದೆ. ಕೇಂದ್ರ ಸರ್ಕಾರವೇ ಧೈರ್ಯ ತೋರದ ಕಾರ್ಯಕ್ಕೆ ಮಮತಾ ಬ್ಯಾನರ್ಜಿ ಮುಂದಾಗಿದ್ದಾರೆ. ತನಿಖೆ ಆರಂಭಿಸಲು ಯಾಕಿಷ್ಟು ವಿಳಂಬ ಧೋರಣೆ?

ಸಾಗರಿಕಾ ಘೋಷ್, ಪತ್ರಕರ್ತೆ

ಕಿಡಿನುಡಿ

2008ರಿಂದ ಸತತವಾಗಿ ಮೂರು ಬಾರಿ ಶಾಸಕನಾಗಿ ಕ್ಷೇತ್ರದ ಅಭಿವೃದ್ಧಿಗೆ ಹಗಲಿರುಳೂ ಶ್ರಮಿಸುತ್ತಿದ್ದೇನೆ. ನೂತನ ಸಚಿವ ಸಂಪುಟದಲ್ಲಿ ನನಗೂ ಸಚಿವ ಸ್ಥಾನ ಕೊಡಬೇಕು. ಒಂದು ವೇಳೆ ಕೊಡದಿದ್ದರೆ ವಿಧಾನಸಭೆ ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ.

ಆನಂದ ಮಾಮನಿ, ಸವದತ್ತಿ-ಯಲ್ಲಮ್ಮ ಕ್ಷೇತ್ರದ ಶಾಸಕ

25 ವರ್ಷಗಳ ಹಿಂದೆ

ಭಾನುವಾರ, 28-7-1996

● **ಒಲಿಂಪಿಕ್ಸ್ ಗ್ರಾಮದ ಬಳಿ ಭಾರೀ ಸ್ಫೋಟ**

ಅಟ್ಲಾಂಟಾ, ಜುಲೈ 27 (ಯುಎನ್‌ಐ, ಪಿಟಿಐ)– ಒಲಿಂಪಿಕ್ಸ್ ಶತಮಾನೋತ್ಸವದ ನೆನಪಿಗಾಗಿ ನಿರ್ಮಿಸಲಾಗಿದ್ದ ಮನೋರಂಜನಾ ಪಾರ್ಕ್‌ನಲ್ಲಿ ಭಾರತೀಯ ಕಾಲಮಾನದ ಪ್ರಕಾರ ನಿನ್ನೆ ರಾತ್ರಿ ಸುಮಾರು 11 ಗಂಟೆ ವೇಳೆಗೆ ಶಕ್ತಿಯುತವಾದ ಸ್ಫೋಟ ಸಂಭವಿಸಿದ್ದರಿಂದ ಕನಿಷ್ಠ ಇಬ್ಬರು ಸತ್ತಿದ್ದು, 200 ಮಂದಿ ಗಾಯಗೊಂಡಿದ್ದಾರೆ.

ಒಲಿಂಪಿಕ್ಸ್ ಇತಿಹಾಸದಲ್ಲಿಯೇ ಅಪೂರ್ವ ಎನ್ನಬಹುದಾದ ಬಿಗಿ ಬಂದೋಬಸ್ತಿನಲ್ಲಿ ನಡೆಯುತ್ತಿರುವ ಕ್ರೀಡಾಕೂಟದ ಪ್ರದೇಶದ ಪಕ್ಕದಲ್ಲಿಯೇ ಈ ಸ್ಫೋಟ ಸಂಭವಿಸಿದ್ದರಿಂದ ಇಡೀ ನಗರ ಭಯಗ್ರಸ್ತವಾಗಿದೆ. ಒಲಿಂಪಿಕ್ಸ್ ಕ್ರೀಡೆ ನಿಗದಿತವಾಗಿರುವಂತೆಯೇ ಮುಂದುವರಿಯುವುದು ಎಂದು ಐಒಜಿ ಫ್ರಾಂಕಾಯಿಸ್ ಶರಾರ್ಡ್ ತಿಳಿಸಿದ್ದಾರೆ.

● **ಜಾಫರ್ ಷರೀಫ್ ವಿರುದ್ಧ ಶಿಸ್ತುಕ್ರಮಕ್ಕೆ ಶಿಫಾರಸು**

ಬೆಂಗಳೂರು, ಜುಲೈ 27– ಮಾಜಿ ಪ್ರಧಾನಿ ಹಾಗೂ ಕಾಂಗ್ರೆಸ್ ಅಧ್ಯಕ್ಷ ಪಿ.ವಿ. ನರಸಿಂಹ ರಾವ್ ಅವರ ನಾಯಕತ್ವವನ್ನು ಪ್ರಶ್ನಿಸುತ್ತಿರುವ ಮಾಜಿ ರೈಲ್ವೆ ಸಚಿವ ಸಿ.ಕೆ. ಜಾಫರ್ ಷರೀಫ್ ಅವರ ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು ಎಂದು ಪಕ್ಷದ ಜಂಟಿ ಕಾರ್ಯದರ್ಶಿ ಸುರೀಂದರ್ ಸಿಂಗ್ ಠಾಕೂರ್ ಅವರು ಇಂದು ಇಲ್ಲಿ ತಿಳಿಸಿದರು.

50 ವರ್ಷಗಳ ಹಿಂದೆ

ಬುಧವಾರ, 28-7-1971

● **ರಾಜ್ಯದಲ್ಲಿ ಅಭಾವ ಸ್ಥಿತಿ: ಪರಿಹಾರ ಕ್ರಮಗಳಿಗೆ ಅಧಿಕಾರಿಗಳಿಗೆ ಆದೇಶ**

ಕಲ್ಬುರ್ಗಿ, ಜುಲೈ 27– ಮಳೆ ಅಭಾವದಿಂದಾಗಿ ಬೀದರ್, ಕಲ್ಬುರ್ಗಿ, ಕೋಲಾರ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ ಮತ್ತು ರಾಯಚೂರು ಹಾಗೂ ಬಳ್ಳಾರಿ ಭಾಗಗಳಲ್ಲಿ ಅಭಾವ ಪರಿಸ್ಥಿತಿ ತಲೆದೋರಿರುವುದು ವರದಿಯಾಗಿರುವುದಾಗಿ ರಾಜ್ಯಪಾಲ ಶ್ರೀ ಧರ್ಮವೀರ ಅವರು ಇಂದು ಇಲ್ಲಿ ಪತ್ರಕರ್ತರಿಗೆ ತಿಳಿಸಿದರು.

ದೀರ್ಘಾವಧಿ ಹಾಗೂ ಅಲ್ಪಾವಧಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಅವರು ತಿಳಿಸಿದರು. ಜೋಳ ಮುಖ್ಯ ಆಹಾರ ಆಗಿರುವ ಜನರ ಅಗತ್ಯಗಳನ್ನು ಪೂರೈಸಲು ಮಧ್ಯಪ್ರದೇಶ, ರಾಜಸ್ಥಾನಗಳಿಂದ ಜೋಳವನ್ನು ತರಿಸಿಕೊಳ್ಳಲು ಪ್ರಯತ್ನಿಸಲಾಗುವುದೆಂದೂ ತಿಳಿಸಿದರು.

ರಾಜಕೀಯದಲ್ಲಿ ದಿನೇದಿನೇ ಅಪ್ರಸ್ತುತವಾಗುತ್ತಿರುವ ಮತದಾರ

ಇದೆಂಥಾ ಪ್ರಜಾಪ್ರಭುತ್ವ ಸ್ವಾಮಿ?!

ಅನುಸಂಧಾನ

ರವೀಂದ್ರ ಭಟ್ಟ

ಮೊದಲು ಈ ಮೂರು ವಿದ್ಯಮಾನಗಳನ್ನು ಗಮನಿಸೋಣ. ಮೊದಲನೆಯದು, ‘ಹೈಕಮಾಂಡ್ ಸೂಚನೆ ಬಂದ ತಕ್ಷಣ ರಾಜೀನಾಮೆ ನೀಡುತ್ತೇನೆ’ ಎಂದು ಹೇಳುತ್ತಿದ್ದ ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಕ್ಕೆ ಇಳಿದಿದ್ದಾರೆ. ಹೈಕಮಾಂಡ್ ಅನ್ನು ಹೊಗಳುತ್ತಲೇ ತಮಗೆ ಆದ ಅನ್ಯಾಯಗಳನ್ನೂ ಅವರು ಹೇಳಿಕೊಂಡಿದ್ದಾರೆ. ಅಸಮಾಧಾನವನ್ನೂ ಹೊರಕ್ಕೆ ಹಾಕಿದ್ದಾರೆ. ಬಹಿರಂಗದ ಹೊಗಳಿಕೆ ಅಂತರಂಗದ ಗೊಣಗಾಟ. ಅವರು ಪ್ರಜಾಪ್ರಭುತ್ವದ ರೀತಿಯಲ್ಲಿ ಮುಖ್ಯಮಂತ್ರಿ ಗಾದಿಗೆ ಏರಿರಲಿಲ್ಲ. ಈಗ ಪ್ರಜಾಪ್ರಭುತ್ವದ ರೀತಿಯಲ್ಲಿ ಅಧಿಕಾರದಿಂದ ಇಳಿಯಲೂ ಇಲ್ಲ. ‘ಹೈಕಮಾಂಡ್ ಸೂಚಿಸಿದವರೇ ಮುಂದಿನ ಮುಖ್ಯಮಂತ್ರಿಯಾಗುತ್ತಾರೆ’ ಎಂದು ರಾಜ್ಯ ಬಿಜೆಪಿ ನಾಯಕರು ಹೇಳುತ್ತಿದ್ದರು. ಅದು ನಿಜವಾಗಿದೆ.

ಎರಡನೆಯದು, ಆಡಳಿತ ಬಿಜೆಪಿ ಪಕ್ಷದ್ದು ಈ ಕತೆಯಾದರೆ ಪ್ರಮುಖ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಪಕ್ಷದ ಕತೆ ಇದಕ್ಕಿಂತ ಭಿನ್ನವಾಗಿಯೇನೂ ಇಲ್ಲ. ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದು ಒಂದಿಷ್ಟು ಮಂದಿ, ಇಲ್ಲ ಡಿ.ಕೆ.ಶಿವಕುಮಾರ್ ಎಂದು ಇನ್ನೊಂದಿಷ್ಟು ಮಂದಿ, ಜಿ.ಪರಮೇಶ್ವರ ಎಂದು ಮತ್ತೊಂದಿಷ್ಟು ಮಂದಿ ಜೈಕಾರ ಹಾಕುತ್ತಿದ್ದಾರೆ. ಇನ್ನೊಂದಿಷ್ಟು ಮಂದಿ, ಸಂದಿಯಲ್ಲಿ ತಮಗೂ ಅವಕಾಶ ಸಿಕ್ಕೀತು ಎಂದು ಕಾಯುತ್ತಿದ್ದಾರೆ. ಇದರ ನಡುವೆ ‘ನಮ್ಮದು ರಾಷ್ಟ್ರೀಯ ಪಕ್ಷ. ಯಾರು ಮುಂದಿನ ಮುಖ್ಯಮಂತ್ರಿಯಾಗಬೇಕು ಎನ್ನುವುದನ್ನು ಹೈಕಮಾಂಡ್ ನಿರ್ಧರಿಸುತ್ತದೆ’ ಎಂದು ಜಾಣತನದಿಂದ ಜಾರಿಕೊಳ್ಳುತ್ತಿದ್ದಾರೆ.

ಮೂರನೆಯದ್ದು ಮತ್ತು ಅತ್ಯಂತ ಮಹತ್ವದ್ದು, ‘ರಾಜ್ಯದ ಮಠಾಧೀಶರು ಚರ್ಚಿಸಿ ನಿರ್ಧಾರಕ್ಕೆ ಬಂದಿದ್ದೇವೆ. ಯಡಿಯೂರಪ್ಪ ಅವರ ಕಣ್ಣೀರನ್ನು ಸವಾಲಾಗಿ ಸ್ವೀಕರಿಸಿದ್ದೇವೆ. ಅದು ಯಡಿಯೂರಪ್ಪ ಕಣ್ಣೀರಲ್ಲ. ಇಡೀ ಕರುನಾಡಿನ ಕಣ್ಣೀರು. ಮುಂದಿನ ದಿನಗಳಲ್ಲಿ ನಾವು ಬಿಜೆಪಿಗೆ ಕಣ್ಣೀರು ಹಾಕಿಸುತ್ತೇವೆ’ ಎಂದು ಸ್ವಾಮೀಜಿ ಒಬ್ಬರು ಹೇಳುತ್ತಾರೆ. ಜೊತೆಗೆ ಯಡಿಯೂರಪ್ಪ ಅವರ ಪರವಾಗಿ ಮಠಾಧೀಶರು ಶಕ್ತಿ ಪ್ರದರ್ಶನವನ್ನೂ ಮಾಡುತ್ತಾರೆ. ಸಂಪುಟದಲ್ಲಿ ಯಾರಿಗೆ ಸಚಿವ ಸ್ಥಾನ ನೀಡಬೇಕು ಎನ್ನುವುದನ್ನೂ ಮಠಾಧೀಶರು ಹೇಳುತ್ತಾರೆ. ಮುಖ್ಯಮಂತ್ರಿಗೆ ಬೆದರಿಕೆಯನ್ನೂ ಹಾಕುತ್ತಾರೆ. ಮಠಾಧೀಶರೊಬ್ಬರನ್ನೇ ಯಾಕೆ ಮುಖ್ಯಮಂತ್ರಿ ಮಾಡಬಾರದು ಎಂದು ಕೇಳುವ ಸ್ವಾಮೀಜಿಗಳೂ ಇದ್ದಾರೆ.

ಇದೆಲ್ಲ ಏನನ್ನು ಸೂಚಿಸುತ್ತದೆ? ಸ್ಪಷ್ಟವಾಗಿ ಹೇಳುವುದಾದರೆ, ರಾಜ್ಯದಲ್ಲಿ ಪ್ರಜಾಪ್ರಭುತ್ವ ಸತ್ತು ಹೋಗಿದೆ. ಈಗ ಉಳಿದಿರುವುದು ಪ್ರಜಾಪ್ರಭುತ್ವದ ಕಳೇಬರ ಮಾತ್ರ. ಆ ಕಳೇಬರದ ಮೇಲೆಯೇ ರಾಜಕಾರಣಿಗಳ ದರ್ಬಾರು ನಡೆಯುತ್ತಿದೆ. ರಾಜಕೀಯದ ಯಾವುದೇ ಪ್ರಕ್ರಿಯೆಯಲ್ಲಿ ಜನರ ಮಾತಿಗೆ ಕಿಮ್ಮತ್ತು ಇಲ್ಲದಂತಾಗಿದೆ. ಮತದಾರರನ್ನು ಗಣನೆಗೆ ತೆಗೆದುಕೊಳ್ಳುತ್ತೇವೆ ಎಂದು ಯಾರು ಕೂಡ ಹೇಳುತ್ತಿಲ್ಲ. ಇಡೀ ರಾಜಕೀಯದಲ್ಲಿ ಮತದಾರರು ಅಪ್ರಸ್ತುತರಾಗಿಬಿಟ್ಟಿದ್ದಾರೆ. ಮಾತು ಮಾತಿಗೂ ದೆಹಲಿಗೆ ಹೋಗುತ್ತೇವೆ, ದೆಹಲಿಗೆ ಹೋಗುತ್ತೇವೆ, ಹೈಕಮಾಂಡ್ ಹೇಳಿದಂತೆ ಕೇಳುತ್ತೇವೆ ಎನ್ನುತ್ತಾರೆ. ಇದೆಂಥಾ ಪ್ರಜಾಪ್ರಭುತ್ವ ಸ್ವಾಮಿ?

ನಿಜ, ನಮ್ಮ ಜಾತಿಯ ವ್ಯಕ್ತಿಯೊಬ್ಬ ಮುಖ್ಯಮಂತ್ರಿಯಾದರೆ ನಮಗೆ ಹೆಮ್ಮೆ ಎನಿಸುವುದು ಸಹಜ ಮಠಾಧೀಶರೂ ಸಂಭ್ರಮ ಪಡಬಹುದು. ಅದರಲ್ಲಿ ತಪ್ಪಿಲ್ಲ. ಆದರೆ ಅದೇ ವ್ಯಕ್ತಿ ಜೈಲಿಗೆ ಹೋದರೆ ನಮಗೆ ನಾಚಿಕೆಯೂ ಆಗಬೇಕಲ್ಲ. ನಾಚಿಕೆಯಾಗುವುದಿಲ್ಲ ಎಂದರೆ ನಾವು ಎಲ್ಲ ಸೂಕ್ಷ್ಮತೆಯನ್ನು ಕಳೆದುಕೊಂಡಿದ್ದೇವೆ ಎಂದೇ ಅರ್ಥ. ಜನನಾಯಕನೊಬ್ಬ ತಪ್ಪು ಮಾಡಿ ಜೈಲಿಗೆ ಹೋದಾಗ ನಾಚಿಕೆಯಾಗುವುದು ಬಿಡಿ, ಜೈಲಿಗೇ ಹೋಗಿ ಧೈರ್ಯ ತುಂಬುವ ಸ್ಥಿತಿ ಮಠಾಧೀಶರಿಗೆ ಬರಬಾರದು. ಹಾಗಾದರೆ ಅದು ಮಠಮಾನ್ಯಗಳ ದುರಂತವೂ ಹೌದು, ರಾಜಕಾರಣದ ದುರಂತವೂ ಹೌದು.

ಈಗ ಸದ್ಯದ ಕರ್ನಾಟಕದ ರಾಜಕೀಯದಲ್ಲಿ ಆಗಿರುವುದೂ ಅದೇ. ಯಾರಿಗೂ ಯಾವುದಕ್ಕೂ ನಾಚಿಕೆಯಾಗುತ್ತಿಲ್ಲ. ಎಲ್ಲರೂ ಬೆತ್ತಲಾಗಿದ್ದಾರೆ. ಇದನ್ನೆಲ್ಲಾ ನೋಡಿ ಈಗ ನಿಜವಾಗಿ ನಾಚಿಕೆಯಾಗಬೇಕಾಗಿದ್ದು ಮತದಾರರಿಗೆ. ಇಂತಹ ನಾಯಕರನ್ನು ನಾವು ಗೆಲ್ಲಿಸಿದ್ದೇವಲ್ಲ ಎಂದು ಅವರು ಕೈಕೈ ಹಿಸುಕಿಕೊಳ್ಳಬೇಕು ಅಷ್ಟೆ. ಬೇರೆ ಏನನ್ನೂ ಮಾಡಲು ಸಾಧ್ಯವಾಗದ ಅಸಹಾಯಕತೆಯಲ್ಲಿ ಅವರಿದ್ದಾರೆ. ಇದಕ್ಕೆ ಔಷಧಿಯನ್ನೂ ಅವರೇ ಕಂಡುಹಿಡಿಯಬೇಕು. ಈ ರೋಗಕ್ಕೆ ವ್ಯಾಕ್ಸಿನ್ ಸಿದ್ಧಪಡಿಸುವುದು ಅಷ್ಟು ಸುಲಭದ ಮಾತಲ್ಲ.

ಯಡಿಯೂರಪ್ಪ ಈ ಬಾರಿ ಹೇಗೆ ಮುಖ್ಯಮಂತ್ರಿಯಾದರು ಎನ್ನುವುದನ್ನು ಒಮ್ಮೆ ಆಲೋಚಿಸಿ. 2018ರ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ಬಹುಮತ ಇಲ್ಲದಿದ್ದಾಗ ರಾಜಕೀಯ ಎದುರಾಳಿಗಳು ಸೇರಿಕೊಂಡು ಒಂದು ಚೌಚೌ ಸರ್ಕಾರ ಮಾಡಿದರು. ಅಲ್ಲಿ ನಿರ್ದಿಷ್ಟ ಕಾರ್ಯಸೂಚಿಯೂ ಇರಲಿಲ್ಲ, ರಾಜಕೀಯ ಪ್ರೌಢತೆಯೂ ಇರಲಿಲ್ಲ, ಸ್ಪಷ್ಟತೆಯೂ ಇರಲಿಲ್ಲ. ಹುಟ್ಟುವಾಗಲೇ ಅತಂತ್ರವನ್ನು ಕಟ್ಟಿಕೊಂಡ ಸರ್ಕಾರ ಆಗಿತ್ತು. ನಂತರ ಯಡಿಯೂರಪ್ಪ ‘ಆಪರೇಷನ್ ಕಮಲ’ ಮಾಡಿ ಮುಖ್ಯಮಂತ್ರಿಯಾದರು. ಆಗಲೂ ಸ್ಥಿರತೆಯ ಬಗ್ಗೆ ಅನುಮಾನಗಳಿದ್ದವು. ಅದು ಈಗ ನಿಜವಾಗಿದೆ.

2018ರ ಚುನಾವಣೆ ಫಲಿತಾಂಶದ ಪ್ರಕಾರ, ಯಾರಿಗೂ ಮುಖ್ಯಮಂತ್ರಿಯಾಗುವ ಅರ್ಹತೆಯನ್ನು ಮತದಾರರು ಕೊಟ್ಟಿರಲಿಲ್ಲ. ಮತದಾರರಿಂದ ತಿರಸ್ಕೃತರಾದವರೇ ಮುಖ್ಯಮಂತ್ರಿ ಗಾದಿಯ ಮೇಲೆ ಕುಳಿತರು. ನಾಲ್ಕು ಬಾರಿ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾರೆ. ಆ ಮಟ್ಟಿಗೆ ಅದೊಂದು ದಾಖಲೆ. ಕರ್ನಾಟಕದಲ್ಲಿ ಮತ್ತ್ಯಾರೂ ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿಲ್ಲ. ಆದರೆ ಒಂದು ಬಾರಿಯೂ ಸಂಪೂರ್ಣ ಬಹುಮತದಿಂದ ಅವರು ಮುಖ್ಯಮಂತ್ರಿಯಾಗಲಿಲ್ಲ ಎನ್ನುವುದೂ ಸತ್ಯ. ಒಂದು ಬಾರಿಯೂ ಪೂರ್ಣ ಪ್ರಮಾಣದ ಅವಧಿಯನ್ನು ಮುಗಿಸಲಿಲ್ಲ ಎನ್ನುವುದೂ ಸತ್ಯ. ನಾಲ್ಕು ಬಾರಿ ಮುಖ್ಯಮಂತ್ರಿಯಾಗಿದ್ದು ಹೇಗೆ ಸಾಧನೆಯೋ ಹಾಗೆಯೇ ಬಹುಮತ ಇಲ್ಲದೆ ಮುಖ್ಯಮಂತ್ರಿಯಾಗಿದ್ದೂ ಒಂದು ದಾಖಲೆ. ಇದೇ ಮಾತು ಕುಮಾರಸ್ವಾಮಿ ಅವರ ವಿಷಯದಲ್ಲಿಯೂ ನಿಜ.

ಈಗ ಮತ್ತೊಬ್ಬರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಆದರೆ, ಅವರಿಗೆ ಹೈಕಮಾಂಡ್‌ನ ಮುಖ್ಯಮಂತ್ರಿ ಎಂಬ ಹಣೆಪಟ್ಟಿ ಇರಲಿದೆ. ಅವರು ಕೂಡ ಮಾತು ಮಾತಿಗೆ ‘ದೆಹಲಿಗೆ ಹೋಗುತ್ತೇನೆ, ಹೈಕಮಾಂಡ್ ಹೇಳಿದಂತೆ ಕೇಳುತ್ತೇನೆ’ ಎನ್ನುವವರೇ ಆಗಿರುತ್ತಾರೆ. ಜನರಿಂದ ಆಯ್ಕೆಯಾದ ಮುಖ್ಯಮಂತ್ರಿ ಬಾರದಿದ್ದರೂ ಜನರಿಗೆ ಅನುಕೂಲ ಮಾಡಿಕೊಡುವ ಮುಖ್ಯಮಂತ್ರಿ ಬರುತ್ತಾನೋ ಎಂದು ಆಲೋಚಿಸಿದರೆ, ಅಂತಹ ವ್ಯಕ್ತಿಯೊಬ್ಬ ಬಂದೇಬರುತ್ತಾನೆ ಎಂಬ ವಿಶ್ವಾಸವೂ ಜನರಿಗೆ ಇಲ್ಲ.

ರಾಜಕಾರಣಿಗಳ ಬಗ್ಗೆಯೇ ಜನರಿಗೆ ಭ್ರಮನಿರಸನವಾಗಿದೆ. ಭರವಸೆಯ ನಾಯಕನೊಬ್ಬ ಈಗ ಹುಟ್ಟಿ ಬರಬೇಕಿದೆ. ಅದಕ್ಕೆ ಅಖಾಡ ಸಿದ್ಧವಾಗಿದೆ. ಆದರೆ ಆಶಾಕಿರಣ ಗೋಚರಿಸುತ್ತಿಲ್ಲ. ನೆಲ ಹದವಾಗಿದೆ. ಬೀಜ ಬಿತ್ತುವವರಿಲ್ಲ.

ಕರ್ನಾಟಕದಲ್ಲಿ ಬಿಜೆಪಿ ಅಧಿಕಾರದ ಬಾಗಿಲಿಗೆ ಬಂದಾಗಲೆಲ್ಲಾ ಮುಖ್ಯಮಂತ್ರಿ ಯಾರು ಎನ್ನುವ ಬಗ್ಗೆ ಅನಿಶ್ಚಯ ಇರಲಿಲ್ಲ. ಸಹಜವಾಗಿಯೇ ಯಡಿಯೂರಪ್ಪ ಅವರು ಆಯ್ಕೆಯಾಗುತ್ತಿದ್ದರು. ಆದರೆ ಈಗ ಅವರ ಪರ್ವ ಮುಗಿದಿದೆ. ಅಲ್ಲಿ ಮತ್ತೊಬ್ಬ ಅಂತಹ ನಾಯಕ ಸದ್ಯಕ್ಕೆ ಕಾಣುತ್ತಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಗಳು ಬೇಕಾದಷ್ಟು ಮಂದಿ ಇದ್ದಾರೆ. ನಾಯಕರ ಭಾರದಿಂದಲೇ ಆ ಪಕ್ಷ ನಲುಗುತ್ತಿದೆ. ಜಾತ್ಯತೀತ ಜನತಾದಳದಲ್ಲಿ ಮಾತ್ರ ಈ ಬಗ್ಗೆ ಗೊಂದಲವಿಲ್ಲ.

ಜಾತಿಯನ್ನೇ ನಂಬಿಕೊಂಡು ರಾಜಕಾರಣ ಮಾಡಿದರೆ ಉಳಿಗಾಲವಿಲ್ಲ ಎನ್ನುವುದು ಪದೇ ಪದೇ ಸಾಬೀತಾಗುತ್ತಿದ್ದರೂ ನಮ್ಮ ರಾಜಕಾರಣಿಗಳು ಅದನ್ನು ಬಿಡಲು ಯತ್ನಿಸುತ್ತಿಲ್ಲ. ನಮಗೆ ಈಗ ಬೇಕಿರುವುದು ಬಿಜೆಪಿ ನಾಯಕನೋ ಕಾಂಗ್ರೆಸ್ ನಾಯಕನೋ ಜೆಡಿಎಸ್ ನಾಯಕನೋ ಅಲ್ಲ. ನಮಗೆ ಬೇಕಿರುವುದು ಜನನಾಯಕ. ಪಕ್ಷ ಯಾವುದಾದರೂ ಇರಲಿ. ಸರ್ವ ಜನಾಂಗದ ನಾಯಕನೊಬ್ಬ ಹುಟ್ಟಿ ಬರಲಿ. ಜನರ ನಡುವೆಯಿಂದಲೇ ಅಂತಹವನೊಬ್ಬ ಜನ್ಮ ತಾಳಲಿ.

ಕನ್ನಡದ ಖ್ಯಾತ ಕವಿ ಪ್ರೊ. ಚಂದ್ರಶೇಖರ ಪಾಟೀಲ ಅವರು ಒಮ್ಮೆ ಬರೆದಿದ್ದರು. ‘ರಾಜನರ್ತಕಿಯರಿಗೆ ರಾಜ ಮುಖ್ಯನೇ ಹೊರತು ವ್ಯಕ್ತಿಯಲ್ಲ’ ಎಂದು. ಈ ಮಾತನ್ನು ಅರ್ಥ ಮಾಡಿಕೊಳ್ಳುವ ರಾಜಕಾರಣಿಗಳನ್ನು ಎಲ್ಲಿ ಎಂದು ಹುಡುಕುವುದು?

ಚುರುಮುರಿ



ಕುರ್ಚಿ ಕಗ್ಗ!

• ಲಿಂಗರಾಜು ಡಿ.ಎಸ್.

‘ಅಲ್ಲಾ ಸಾ, ಮೋದಿ ಕೊನೆಗೂ ರಾಜಾವುಲಿ ಕೈಲಿ ರಾಜೀನಾಮೆ ಕೊಡಿಸೇಬುಡ್ತಲ್ಲ. ಕರ್ನಾಟಕದೇಲಿ ಮುಂದ್ಲಾರು ಕಟ್ಟಕೆ ಈಗ ಹೊಸ ಕುಳ ಬಂದ್ರೈತೆ’ ಅಂದೆ.

‘ಹೈಕಮಾಂಡ್ ಹೇಳಿದ್ರೆ ನಾನು ಮುಖ್ಯಮಂತ್ರಿ ಹೊಣೆ ಹೊರ್ತಿದ್ದೆ’ ತುರೇಮಣೆ ಘೋಷಣೆ ಮಾಡಿದರು. ‘ಅದ್ಯಾಕೆ ಹಂಗೆ ನುಲೀತಿದ್ದರಿ. ನೀವ್ಯಾವ ದೊಣೆನಾಯಕ ಅಂತ ನಿಮ್ಮುನ್ನ ಮುಖ್ಯಮಂತ್ರಿ ಮಾಡ್ಯಾರು ಸಾ’ ತುರೇಮಣೆ ಕಾಲೆಳೆದೆ.

‘ನೋಡಿರ್ಲಾ, ಸಿಎಂ ಪಟ್ಟೇಲಿ ಕಾಣಿಸಿಕೊಂಡಿದ್ದ ಕೆಲವರಿಗಿಂತ ನಾನೇನೂ ಕಮ್ಮಿ ಇಲ್ಲ. ನನಗಿನ್ನೂ 20 ವರ್ಷ ದುಡಿಯೋ ತಾಕತ್ತದೆ’ ಅಂದ ತುರೇಮಣೆ ಮಾತಿಗೆ ಯಾರೂ ಕ್ಯಾರೇ ಅನ್ನಲಿಲ್ಲ.

‘ರಾಜಾವುಲಿ ಮಾತಾಡಿಸಿಕ್ಯ ಬರಮು ಬನ್ನಿ ಸಾ’ ಅಂತಂದು ಅವುರ ಮನೆ ತಕ್ಕೋದ್ರೆ ಬಾಗಿಲಿಗೆ ದೊಡ್ಡ ಬೀಗ ಜಡಿದಿದ್ದರು. ಒಳಗೆ ಯಾರೋ ನರಳೋ ಸದ್ದು ಕೇಳ್ತಿತ್ತು. ರಾಜಾವುಲಿಗೆ ಕಾವೇರಿರಬೇಕು ಅಂತ ಗುಮಾನೀಲಿ ಮನೆ ಒಳಕ್ಕೆ ಇಣುಕಿ ನೋಡಿದರೆ ಸಿಎಂ ಕುರ್ಚಿ ಕಡದು- ಬಳದಿಗೆ ಉಂಟಾಡಿಕ್ಯಂಡು ಮುರುದೋಗಿ ನರಳ್ತಿತ್ತು.

‘ನೋಡಿರ್ಲಾ, ನಾನೂವೆ ಎಷ್ಟು ಜನದ ಜೊತೆಗೆ ಕೂಡಿಕೆ ಮಾಡಿಕ್ಯಳನ. ಒಬ್ಬರ ಜೊತೆಗೂ ನೆಟ್ಟಗೆ ಐದೊರ್ಸ ಒಗೆತನ ಮಾಡಕ್ಕಾಗಿಲ್ಲ. ಕೋವಿಡ್ಡು ಬಿಕ್ಕಟ್ಟಲ್ಲಿ ಏದುಸಿರು ಬುಡ್ತಿದ್ದೀನಿ’ ಅಂತು ಕುರ್ಚಿ ನಮ್ಮ ನೋಡಿದೇಟಿಗೆ.

‘ಇಲ್ಲಿ ಯಾವುದೂ ಊರ್ಜಿತವಲ್ಲ ಕನಪ್ಪಾ, ಒತ್ಲಿಸಿ ಬೆನ್ನಿಗೆ ಚೂರಿ ಹಾಕದೇ ರಾಜಕೀಯ. ಜೀವನವೇ ಅಗ್ನಿಪರೀಕ್ಷೆ. ರಿಜಲ್ಟು ಈಗ ಬಂದದೆ’ ಅಂತ ಒಗ್ರಣೆ ಹಾಕಿತು ಯಂಟಪ್ಪಣ್ಣ.

‘ಕುರ್ಚಿಯಣ್ಣ, ಈಗ ರಾಜಾವುಲಿ ಮಾಜಿಯಾದ ಮ್ಯಾಲೆ ಯಂಗೆ ಟೈಂ ಕಳಿತದೆ?’ ಚಂದ್ರು ಕೇಳಿದ.

‘ಅಯ್ ಬುಡಿ, ಡೆಲ್ಲಿಯೋರು ಅವರವರೆ ರಾಜಿಕಬೂಲು ಮಾಡಿಕ್ಯಂಡ್ರೇನಂತೆ, ನಾನು ಸಕ್ರಿಯವಾಗಿರ್ತೀನಿ ಅಂತ ರಾಜಾವುಲಿ ಯೇಳಿಲ್ವಾ. ರಾಜಾವುಲಿ ಬುಟ್ಟು ವಸಾ ಸಿಎಂ ಬದುಕು ಮಾಡಕಾದದೇ’ ಕುರ್ಚಿ ಕಗ್ಗ ಕೇಳಿ ನಾವು ದಂಗಾಗಿದ್ದೋ!

ಸಂಗತ

ಮನೆಪಾಠಶಾಲೆ: ಮುಸುಕಿನ ಗುದ್ದಾಟ?

ಕೊರೊನಾ ಕಾಲಘಟ್ಟದಲ್ಲಿ ಸದಾಕಾಲ ಕಣ್ಣೆದುರೇ ಇರುವ ಮಕ್ಕಳಿಗಾಗಿ ಪೋಷಕರು ಬದಲಾಗಬೇಕಾದ ಸಂದರ್ಭ ಇದು

• ಸರೋಜಾ ಪ್ರಕಾಶ್

‘ಫ್ರೆಂಡ್ಸ್ ಭೇಟಿ ಆಗ್ಬಾರ್ದು, ಅವರ ಜೊತೆ ಆಟ ಆಡಬಾರದು, ನಿಂಗೆ ಯಾವಾಗಾದ್ರೂ ಇಂಥ ಸ್ಥಿತಿ ಬಂದಿತ್ತ ಅಮ್ಮಾ... ಎಂದು ಅಳುಧ್ವನಿಯಲ್ಲಿ ಅಮ್ಮನನ್ನು ಕೇಳುತ್ತಾನೆ ಹರ್ಷ. ‘ಮಗನ ಇಂಥ ಪ್ರಶ್ನೆಗಳಿಗೆ ನಾ ಹೇಗೆ ಉತ್ತರಿಸಲಿ...’ ಎಂದು ಹತಾಶಳಾದ ತಾಯಿ ಆಪ್ತಸಲಹೆಗಾರರನ್ನು ಕೇಳುತ್ತಿದ್ದಾಳೆ.

‘ಈ ರೀತಿ ಸ್ಕ್ರೀನ್‌ಟೈಮ್ ಆದರೆ ಮಕ್ಕಳ ಕಣ್ಣು ಎಷ್ಟು ವರ್ಷ ಸರಿ ಇದ್ದೀತು!’ ಆಗಲೇ ಕನ್ನಡಕ ಬಂದ ಮಗುವಿನ ತಾಯಿಯ ಅಳಲು. ಕೋವಿಡ್- 19 ಸಾಂಕ್ರಾಮಿಕದಿಂದಾಗಿ ಇಂದು ಪಾಲಕರು, ಪೋಷಕರ ಪಾತ್ರವೇ ಬದಲಾಗಿ ಹೋಗಿದೆ. ‘ಮನೆಯೇ ಮೊದಲ ಪಾಠಶಾಲೆ’ ಎಂಬ ಕವಿವಾಣಿ ಬದಲಾಗಿ ‘ಮನೆಯೇ ಪಾಠಶಾಲೆ’ ಆಗಿಬಿಟ್ಟಿದೆ. ಈ ಮೊದಲು ಏಳೆಂಟು ತಾಸು ಮಗು ಮನೆಯಿಂದ ಹೊರಗಡೆ ಇದ್ದರೂ, ಶಾಲೆಗೆ ಹೋಗಿಬರುವ ಧಾವಂತ, ಹೋಂವರ್ಕ್, ಪ್ರಾಜೆಕ್ಟ್‌ಗಳ ತಲೆಬಿಸಿಗಳೆಲ್ಲ ಇದ್ದರೂ ಶಾಲೆಯಲ್ಲಿ ಇರುವಷ್ಟು ಹೊತ್ತು ಸುರಕ್ಷಿತ ವಾತಾವರಣದಲ್ಲಿದೆ, ಮಗುವಿನ ಸರ್ವತೋಮುಖ ಅಭಿವೃದ್ಧಿ ಆಗುತ್ತಿದೆ ಎಂಬ ಸಮಾಧಾನದಲ್ಲಿ ಇರುತ್ತಿದ್ದ ತಂದೆತಾಯಂದಿರಿಗೆ ಕೊರೊನಾ ದೊಡ್ಡ ಜವಾಬ್ದಾರಿಯನ್ನೇ ಹೆಗಲ ಮೇಲೇರಿಸಿದೆ.

ಶಿಕ್ಷಕರು ಆನ್‌ಲೈನ್ ಪಾಠವನ್ನೇನೋ ಮಾಡಿಬಿಡುತ್ತಾರೆ. ಆದರೆ ಮನೆಯಲ್ಲಿ ಸರಿಯಾದ ಟೇಬಲ್, ಕುರ್ಚಿ ವ್ಯವಸ್ಥೆ ಬೇಕು, ನೆಟ್‌ವರ್ಕ್, ಡೇಟಾ ಸರಿಯಾಗಿ ಇದೆಯೋ ಇಲ್ಲವೋ ಪರೀಕ್ಷೆ ಮಾಡಿ ಮಗುವನ್ನು ಕಂಪ್ಯೂಟರ್ ಅಥವಾ ಮೊಬೈಲ್ ಮುಂದೆ ಸಮಯಕ್ಕೆ ಸರಿಯಾಗಿ ಕೂರಿಸಿ, ಸರಿಯಾಗಿ ಪಾಠ ಕೇಳಿಸಿಕೊಳ್ಳುತ್ತಿದೆಯೋ ಇಲ್ಲವೋ ಎಂದು ಗಮನಿಸುವುದನ್ನು ತನ್ನ ಇತರ ನಿತ್ಯ ಕೆಲಸಗಳ ಜೊತೆಗೆ ಅಭ್ಯಾಸ ಮಾಡಿಕೊಳ್ಳುವ ಅನಿವಾರ್ಯ ಸಂದರ್ಭ ಪೋಷಕರಿಗೆ ಅದರಲ್ಲೂ ತಾಯಂದಿರಿಗೆ ಬಂದೆರಗಿದೆ.

ದಿನದ 15- 18 ಗಂಟೆಗಳ ಕಾಲ ಮಗು ಕಣ್ಣೆದುರಿಗೇ ಇರುತ್ತದೆ ಅಂದಾಗ ತಮ್ಮ ನಡೆನುಡಿ, ಅಭ್ಯಾಸ ಕ್ರಮಗಳಲ್ಲೂ ಎಚ್ಚರಿಕೆ ವಹಿಸುವ ಸಮಯವೂ ಇದು. ಹಾಗೆಂದು ಮೊದಮೊದಲು ಸಿಡುಕು, ಬೈಗಳು, ಮುಸುಕಿನಲ್ಲಿ ಗುದ್ದಾಟ ಒಂದಿಷ್ಟು ದಿನ ನಡೆದರೂ ಮಕ್ಕಳು ಮತ್ತು ಹೆತ್ತವರ ನಡುವೆ ಹೊಂದಾಣಿಕೆ ನಡೆದು, ಮನೆಪಾಠಶಾಲೆ ಎಂಬ ಯಂತ್ರದ ನಿರ್ವಹಣೆ ನಡೆದಿದೆ. ಅಮ್ಮಂದಿರಿಗೆ ತಮ್ಮ ನೆಚ್ಚಿನ ಸಾಮಾಜಿಕ ಜಾಲತಾಣ, ಟಿ.ವಿ ಧಾರಾವಾಹಿ, ಫೋನು ಇವೆಲ್ಲವುಗಳಿಗೆ ಸ್ವಲ್ಪ ಕಡಿವಾಣ ಹಾಕಿ, ಮಕ್ಕಳಿಗೆ ಇಷ್ಟದ ಅಡುಗೆ, ಅವರ ಆಟೋಟ, ವಾಕಿಂಗ್, ಹಾಡು, ಚಿತ್ರಕಲೆಯಂಥ ಹವ್ಯಾಸಗಳಿಗೆ ಜೊತೆಗೂಡುವ ಅವಕಾಶವೂ ಇದಾಗಿದೆ.

ಆಪ್ತಸಲಹೆಗಾರರಾಗಿರುವ ಪತಿಯೊಂದಿಗೆ ಕುತೂಹಲಕ್ಕಾಗಿ ಹಲವಾರು ಪೋಷಕರು ಮತ್ತು ಮಕ್ಕಳನ್ನು ಪ್ರಶ್ನಾವಳಿಗಳ ಮೂಲಕ ಸಂಪರ್ಕಿಸಿದಾಗ, ಮಿಶ್ರ ಪ್ರತಿಕ್ರಿಯೆಗಳು ಬಂದವು. ಈ ಮೊದಲೇ ಸಂಗೀತ, ನೃತ್ಯದಂಥ ಹವ್ಯಾಸಗಳನ್ನು ಮೈಗೂಡಿಸಿಕೊಂಡಿದ್ದ ಮಕ್ಕಳ ಅಮ್ಮಂದಿರಿಗೆ ಅವರ ಪಾಠಗಳಿಗೆ, ಬಂದ ಆನ್‌ಲೈನ್ ಸ್ಪರ್ಧೆಗಳಿಗೆ ತಯಾರಿ ಮಾಡಿಸುವ ಕೆಲಸದ ಹೊರತಾಗಿ ಕೊರೊನಾ ಕಾಲ ಅಂಥ ತ್ರಾಸದಾಯಕವಾಗಿಲ್ಲ. ಅಂಥ ಮಕ್ಕಳ ಚುರುಕುತನವನ್ನು ಅಡುಗೆ ಮನೆಯಲ್ಲೂ ಕೈತೋಟದಲ್ಲೂ ಬಳಸಿಕೊಳ್ಳುವ ಉಪಾಯವನ್ನೂ ಅಮ್ಮಂದಿರು ಕಂಡುಕೊಂಡಿದ್ದಾರೆ. ಅದಕ್ಕೇ ಖುಷಿ ‘ನಾನು ರೊಟ್ಟಿಯನ್ನು ವೃತ್ತಾಕಾರವಾಗಷ್ಟೇ ಅಲ್ಲ, ಗೋಳವಾಗಿಯೂ (ಉಬ್ಬಿಸಿದಾಗ) ಮಾಡಬಲ್ಲೆ...’ ಎಂದು ಖುಷಿಯಿಂದ ಹೇಳುತ್ತಾಳೆ.

ಒಬ್ಬ ಅಮ್ಮ ಕನ್ನಡದ ಕತೆಗಳನ್ನು, ಚೆಂದದ ಪದ್ಯಗಳನ್ನು ಚೊಕ್ಕವಾಗಿ ಮಗನೊಟ್ಟಿಗೆ ತಾನೂ ಸೇರಿ ಹೇಳಿ, ಹಾಡಿ ಆಪ್ತೇಷ್ಟರಲ್ಲಿ ಜನಪ್ರಿಯತೆ ಗಳಿಸಿದ್ದಾಳೆ. ಇನ್ನೊಬ್ಬಾಕೆ, ಮಗನಲ್ಲಿರುವ ಕತೆ ಬರೆಯುವ ಹವ್ಯಾಸಕ್ಕೆ ವಾರಕ್ಕೆ ಒಂದು ದಿನ ಸಮಯ ಮೀಸಲಿಟ್ಟು, ಮಗ ಬರೆದು, ಗಟ್ಟಿಯಾಗಿ ಓದುವಂತೆ ಮಾಡಿ ಆತನ ಆತ್ಮವಿಶ್ವಾಸ ಹೆಚ್ಚುವಂತೆ ಮಾಡುತ್ತಿದ್ದಾಳೆ. ತಮ್ಮೊಡನೆ ಮಕ್ಕಳನ್ನು ನಿತ್ಯದ ಯೋಗಾಭ್ಯಾಸಕ್ಕೆ ಸೇರಿಸಿಕೊಂಡ ಪೋಷಕರು ಕೆಲವರಾದರೆ, ಪಾಠ, ಹೋಂವರ್ಕ್ ಮುಗಿದ ನಂತರ ಮಕ್ಕಳೊಡನೆ ಕೇರಂ, ಚೆಸ್ ಆಡುವವರು ಕೆಲವರು.

ಆದರೆ ಉದ್ಯೋಗಸ್ಥ ತಾಯಂದಿರಿಗೆ ಇಷ್ಟೆಲ್ಲ ವ್ಯವಧಾನ ಇಲ್ಲ. ಮನೆಯಲ್ಲಿರುವ ಮಕ್ಕಳು ಏನು ಮಾಡಿಕೊಂಡರೋ ಏನೋ ಎಂಬ ಆತಂಕ ಮನದಲ್ಲಿ. ‘ನನ್ನ ಮಗನಿಗೆ ಬೇರೇನೂ ತೊಂದರೆ ಇಲ್ಲ, ಆದರೆ ಇತರರೊಡನೆ ಕೂಡಿ ಸಾಮಾಜಿಕವಾಗಿ ಬೆಳೆಯುವ ಅವಕಾಶ ಇಲ್ಲವಲ್ಲ’ ಎಂಬ ಕೊರಗು ಇನ್ನೊಬ್ಬರದ್ದು.

ಕೋವಿಡ್ ಮೂರನೇ ಅಲೆ ಮಕ್ಕಳನ್ನು ಬಾಧಿಸಲಿದೆ ಎಂಬ ಹೇಳಿಕೆಯೇ ಹಾಸ್ಯಾಸ್ಪದ ಎನ್ನುತ್ತಿದ್ದಾರೆ ಒಬ್ಬ ಪೋಷಕಿ! ಮಕ್ಕಳಲ್ಲಿ ರೋಗ ಎದುರಿಸುವ ಶಕ್ತಿ ಅಧಿಕವಾಗಿರುತ್ತದೆ, ಅವಶ್ಯ ಕ್ರಮಗಳೊಂದಿಗೆ ಶಾಲೆಯ ಬಾಗಿಲು ತೆರೆಯಲಿ ಎಂಬುದು ಹೆತ್ತವರ ಆಶಯ.

ಇನ್ನು ಮಕ್ಕಳ ಉತ್ತರಗಳೂ ಮನತಟ್ಟುವಂತಿದ್ದವು. ಕೊರೊನಾ ವೈರಸ್ ಪ್ರಯೋಗಾಲಯದಲ್ಲಿ ಹುಟ್ಟಿದ್ದೋ ಅಥವಾ ಚೀನಾದ ಕಾಡಿನಲ್ಲೋ ಎಂಬ ಕುತೂಹಲ ಹರ್ಷನಿಗೆ. ವೈರಸ್ ಭೀತಿ ಕಳೆದ ನಂತರದ ದಿನಗಳು ಹೇಗಿರಬಹುದು ಎಂಬ ಕುತೂಹಲ ಶ್ರೀಯಾಳಿಗೆ. ಮೂರನೇ ಅಲೆ ಬಂದರೆ ಸುರಕ್ಷಿತ ಕ್ರಮಗಳನ್ನು ಖಂಡಿತ ಪಾಲಿಸುತ್ತೇವೆ, ಶಾಲೆ ಆರಂಭವಾಗಲಿ ಎಂದೇ ಹೆಚ್ಚಿನ ಮಕ್ಕಳ ಒಕ್ಕೊರಲು. ಒಬ್ಬ ಬಾಲಕಿ ವ್ಯಕ್ತಪಡಿಸಿದ ಅಭಿಪ್ರಾಯ ಏನು ಗೊತ್ತೆ? ಶಾಲೆಯ ಸ್ನೇಹಿತರನ್ನಷ್ಟೇ ಅಲ್ಲ, ನಾವೆಲ್ಲ ಒಟ್ಟಾಗಿ ಸಾಲಿನಲ್ಲಿ ನಿಂತು ‘ಜನಗಣಮನ...’ ಹಾಡುವುದನ್ನೂ ಮಿಸ್ ಮಾಡಿಕೊಳ್ತಾ ಇದ್ದೀವಿ!

ವಾಚಕರ ವಾಣಿ

ಮುಖ್ಯಮಂತ್ರಿ ಬದಲಾವಣೆ ಎಷ್ಟು ಸರಿ?

ರಾಜ್ಯದಲ್ಲಿ ಕೋವಿಡ್ ಮೊದಲ ಮತ್ತು ಎರಡನೇ ಅಲೆಯಿಂದ ಅಪಾರ ಪ್ರಮಾಣದಲ್ಲಿ ಸಾವು-ನೋವು ಸಂಭವಿಸಿವೆ. ಲಾಕ್‌ಡೌನ್ ಪರಿಣಾಮವಾಗಿ ಲಕ್ಷಾಂತರ ಜನ ನಿರುದ್ಯೋಗಿಗಳಾಗಿದ್ದಾರೆ. ಬಹುತೇಕರು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಅತಿವೃಷ್ಟಿಯಿಂದ ಬದುಕು ಅತಂತ್ರವಾಗಿದೆ. ಇಂಥ ಸಂದರ್ಭದಲ್ಲಿ ಆಡಳಿತಾರೂಢ ಬಿಜೆಪಿ ವರಿಷ್ಠರು, ರಾಜ್ಯದಲ್ಲಿ ಮುಖ್ಯಮಂತ್ರಿಯನ್ನು ಬದಲಿಸಿರುವುದು ಸರಿಯಲ್ಲ.

ರಾಜ್ಯವನ್ನು ಸರಿದಾರಿಯಲ್ಲಿ ಮುನ್ನಡೆಸುವ ಹೊಣೆಗಾರಿಕೆ ಮುಖ್ಯಮಂತ್ರಿಯದ್ದಾಗಿರುತ್ತದೆ. ಭಾರತವು ಒಕ್ಕೂಟ ಗಣತಂತ್ರವಾಗಿದ್ದು, ರಾಜ್ಯಗಳು ಕೇಂದ್ರದ ಅಡಿಯಾಳಲ್ಲ ಎಂಬುದನ್ನು ಸಂವಿಧಾನದಲ್ಲಿಯೇ ಉಲ್ಲೇಖಿಸಲಾಗಿದೆ. ಜನರಿಂದ ಚುನಾಯಿತರಾಗಿರುವ, ಶಾಸಕಾಂಗವು ಶಾಸನಬದ್ಧವಾಗಿ ಆಯ್ಕೆ ಮಾಡಿರುವ ಮುಖ್ಯಮಂತ್ರಿಯನ್ನು ಸಂವಿಧಾನಾತ್ಮಕವಾಗಿ ತೆಗೆದುಹಾಕುವ ಹಕ್ಕು ಆಯಾ ಪಕ್ಷದ ಶಾಸಕರಿಗಿರುತ್ತದೆ. ಆದರೆ ಹೈಕಮಾಂಡ್ ಗದಾಪ್ರಹಾರ ಮಾಡಿರುವುದು ಸಂವಿಧಾನದ ಆಶಯಕ್ಕೆ ವ್ಯತಿರಿಕ್ತವಾದುದು. ಇದು ರಾಷ್ಟ್ರೀಯ ಪಕ್ಷಕ್ಕೆ ಶೋಭೆ ತರುವುದಿಲ್ಲ

ರುದ್ರೇಶ್ ಅದರಂಗಿ, ಬೆಂಗಳೂರು

ಸಭ್ಯತೆಯ ಎಲ್ಲೆ ಮೀರದಿರಲಿ

ಸ್ತ್ರೀಯರ ವಸ್ತ್ರಸಂಹಿತೆ ಬಗ್ಗೆ ಗಣಪತಿ ಶಿರಳಗಿ ಚೆನ್ನಾಗಿ ಬರೆದಿದ್ದಾರೆ (ವಾ.ವಾ., ಜುಲೈ 24). ತಮ್ಮ ಉಡುಗೆ ತೊಡುಗೆಗಳ ವಿಷಯದಲ್ಲಿ ಸ್ತ್ರೀಯರ ಸ್ವಾತಂತ್ರ್ಯದ ಬಗ್ಗೆ ಬಹುಶಃ ಯಾರದೂ ತಕರಾರು ಇರಲಾರದು. ಆದರೆ ಅದು ಸಭ್ಯತೆಯ ಎಲ್ಲೆ ಮೀರಬಾರದು ಎನ್ನುವುದೇ ಎಲ್ಲರ ಆಶಯ. ಇಂದು ಟಿ.ವಿ., ಸಿನಿಮಾಗಳಲ್ಲಿ ಸ್ತ್ರೀಯರನ್ನು ಅರೆಬರೆ ಬೆತ್ತಲೆಯಾಗಿ ತೋರಿಸುತ್ತಿರುವುದು ನೋಡುಗರಿಗೆ ಮುಜುಗರ ಉಂಟು ಮಾಡುತ್ತಿದೆ. ಮೈತುಂಬಾ ಬಟ್ಟೆ ಧರಿಸಿಕೊಳ್ಳುವುದರಿಂದ ಮಹಿಳೆಯರಿಗೆ ಆಗುವ ನಷ್ಟವಾದರೂ ಏನು? ಅವರು ವಸ್ತ್ರಸಂಹಿತೆಯನ್ನು ಸ್ವಪ್ರೇರಣೆಯಿಂದ ರೂಢಿಸಿಕೊಳ್ಳುವುದು ಒಳ್ಳೆಯದು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಅನಗತ್ಯ ಟ್ರೋಲ್, ನಾಚಿಕೆಗೇಡಿನ ನಡೆ

‘ಸಾರ್, ಕೊರೊನಾ ಬಂದ್ರೆ ಡೋಲೊ 650 ಮಾತ್ರೆ, ಬಿಸಿ ರಾಗಿ ಮುದ್ದೆ... ಅಯ್ಯೋ ಸಾರ್, ಅದು ಹೇಳಿಬುಟ್ಟು ಬರುತ್ತಾ...’ ಕಳೆದ ಒಂದು ತಿಂಗಳಿನಿಂದ ಈ ಸಾಲುಗಳು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಸುದ್ದಿ ಮಾಡುತ್ತಿವೆ, ಅದೂ ವ್ಯಂಗ್ಯದ ಧಾಟಿಯಲ್ಲಿ. ಎಚ್.ಡಿ.ಕೋಟೆ ಸೊಬಗಿನ ಗ್ರಾಮೀಣ ಆಡುಭಾಷೆಯಲ್ಲಿ ಇದ್ದದ್ದು ಇದ್ದಂತೆ ನೇರವಾಗಿ ಹೇಳಿ, ಸುಶಿಕ್ಷಿತರೇ ನಾಚುವ ರೀತಿಯಲ್ಲಿ ಆಡಳಿತಾರೂಢ ಸರ್ಕಾರವನ್ನು ಖಾಸಗಿ ವಾಹಿನಿಯೊಂದರಲ್ಲಿ ಪ್ರಶ್ನಿಸಿದ ಯುವತಿಯೊಬ್ಬರ ಮಾತುಗಳು ಹೀಗೆ ವಿವಿಧ ಸ್ವರೂಪಗಳಲ್ಲಿ ಟ್ರೋಲ್ ಆಗಿರುವುದು ನಾಚಿಕೆಗೇಡು.

ಸಮಸ್ತ ಆಡಳಿತ ವರ್ಗವನ್ನು ಪ್ರಶ್ನೆ ಮಾಡುವ ಮೂಲಕ ಈ ಯುವತಿ ಅಸಂಖ್ಯಾತ ಜನರ ಬವಣೆ, ಸಂಕಷ್ಟಗಳ ಪ್ರತಿನಿಧಿಯಂತೆ ಕಂಡುಬಂದರು. ಹೀಗೆ ದಿಟ್ಟವಾಗಿ ಪ್ರಶ್ನಿಸುವಂತಹ ಸತ್ಪ್ರಜೆಗಳ ಸಂಖ್ಯೆ ಹೆಚ್ಚಾದಾಗಲೇ ಸರ್ಕಾರಗಳು ಎಚ್ಚೆತ್ತುಕೊಂಡು ಮೈಯೆಲ್ಲಾ ಕಣ್ಣಾಗಿ ಆಡಳಿತ ನಡೆಸುವುದು. ಆದರೆ ಈ ಬಗ್ಗೆ ಕನಿಷ್ಠ ಜ್ಞಾನವೂ ಇಲ್ಲದ ಯುವಸಮೂಹ ಅವರ ಮಾತಿನ ಸಾರಾಂಶದ ತುಣುಕನ್ನು ವಾಕರಿಕೆ ಬರುವ ಮಟ್ಟಕ್ಕೆ ಚಿತ್ರ-ವಿಚಿತ್ರ ಭಂಗಿಯಲ್ಲಿ ಆಡಿಕೊಳ್ಳುತ್ತಿರುವುದು ವಿಪರ್ಯಾಸ. ಯುವಸಮೂಹ ವೈಚಾರಿಕ ಚಿಂತನೆಗಳನ್ನು ಮೊದಲು ರೂಢಿಸಿಕೊಳ್ಳಬೇಕಿದೆ. ಸಾಧ್ಯವಾದರೆ ಈ ಯುವತಿಗೆ ಹಾಗೂ ಅವರ ವಠಾರಕ್ಕೆ ಕೈಲಾದಷ್ಟು ಆರ್ಥಿಕ ಸಹಾಯ ನೀಡಲು, ಸರ್ಕಾರದ ಮಟ್ಟದಲ್ಲಿ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲು ಮುಂದಾಗಬೇಕಿದೆ.

ಅನಿಲ್ ಕುಮಾರ್, ನಂಜನಗೂಡು

ಹುಚ್ಚು ಅಭಿಮಾನ

ಯಡಿಯೂರಪ್ಪ ಅವರ
ರಾಜೀನಾಮೆಯಿಂದ
ಮನನೊಂದು
ಅಭಿಮಾನಿ ಆತ್ಮಹತ್ಯೆ...
ಎಷ್ಟೇ ಪ್ರೀತಿ, ಅಭಿಮಾನವಿರಲಿ
ಪ್ರಾಣತ್ಯಾಗ ಮಾಡಿ
ತೋರಿಸಬೇಡಿ ನಿಯತ್ತು,
ಕುಟುಂಬದವರಿಗೆ
ನೀವೆಂದಿಗೂ ಸಂಪತ್ತು
ಅವರಿಗಾಗಿಯಾದರೂ ಬದುಕಿ
ಬಾಳಿ, ಅದೇ ಶ್ರೇಯಸ್ಸು.

ಚೆಲುವರಾಜು ಕೆ.
ಧನಗೆರೆ, ಕೊಳ್ಳೇಗಾಲ

ಮನವ ಕಾಡಿದ ಅಭಿನಯ ಶಾರದೆ

ನಟಿ ಜಯಂತಿಯವರು ಅಭಿನಯ ಶಾರದೆಯೂ ಹೌದು, ರೂಪಸಿಯೂ ಹೌದು. ಅವರ ಸರಿಸುಮಾರು 70– 80 ಚಿತ್ರಗಳನ್ನು ನಾನು ನೋಡಿರಬಹುದು. 80ರ ದಶಕದಲ್ಲಿ ಜಯಂತಿ ಅವರು ಬೆಂಗಳೂರಿನ ನವರಂಗ್ ಬಳಿಯ ಕಾರ್ಡ್ ರೋಡ್‌ನಲ್ಲಿ ವಾಸವಿದ್ದರು. ಅದೇ ಏರಿಯಾದಲ್ಲಿ ಇದ್ದ ನಾನು, ಅವರ ಮನೆ ಮುಂದೆ ಓಡಾಡುತ್ತಿದ್ದೆನಾದರೂ ಒಮ್ಮೆಯೂ ಅವರು ಕಾಣಸಿಗಲಿಲ್ಲ. ರೇಸ್ ಕೋರ್ಸ್ ರಸ್ತೆಯಲ್ಲಿನ ಫಿಲಂ ಚೇಂಬರ್ ಕಚೇರಿಯಲ್ಲಿ ಒಮ್ಮೆ ಕಂಡರೂ ಮಾತನಾಡಲಾಗಲಿಲ್ಲ. ಅವರ ಬಗ್ಗೆ ಬಹಳಷ್ಟು ತಿಳಿದಿದ್ದೆ. ಗೌರವ, ಅಭಿಮಾನ, ಪ್ರೀತಿ ಇರಿಸಿಕೊಂಡಿದ್ದೆ. ಬಳಿಕ ಬೆಂಗಳೂರು ಬಿಟ್ಟು ಮೈಸೂರು ಸೇರಿದ ನಂತರ ಜಯಂತಿಯವರನ್ನು ಮರೆತಿದ್ದೆ.

ಈಗ್ಗೆ ಐದಾರು ತಿಂಗಳ ಹಿಂದೆ ಇದ್ದಕ್ಕಿದ್ದಂತೆ ಜಯಂತಿಯವರು ಮತ್ತೆ ನನ್ನ ಮನದಾಳಕ್ಕೆ ಬಂದು ನಿಂತುಬಿಟ್ಟರು! ಅವರ ಬಗ್ಗೆ ಯೋಚಿಸುತ್ತ ಹೋದಂತೆ ಭಾವುಕನಾಗಿಬಿಟ್ಟೆ. ಸೆಲೆಬ್ರಿಟಿಯಾದರೂ ಹಮ್ಮು, ಬಿಮ್ಮು ಇಲ್ಲದ ಸರಳ ಸುಂದರ ವ್ಯಕ್ತಿತ್ವದ ಮಹಿಳೆ. ಯಾರನ್ನೂ ನೋಯಿಸದ, ಯಾರನ್ನೂ ತಪ್ಪಾಗಿ ಅರ್ಥೈಸಿಕೊಳ್ಳದ ಅಥವಾ ಎಲ್ಲರನ್ನೂ ನಂಬುವಂತಹ ಮುಗ್ಧತೆ. ಇದೇ ಕಾರಣಕ್ಕೆ ಬದುಕಿನಲ್ಲಿ ನೊಂದು, ನಲುಗಿಹೋದವರು.

ಬೆಂಗಳೂರಿನಲ್ಲಿ ಇದ್ದಾಗ ಜಯಂತಿಯವರನ್ನು ಭೇಟಿ ಮಾಡಿ ಆಪ್ತವಾಗಿ ಮಾತನಾಡಲಾಗಲಿಲ್ಲ. ಈಗಲಾದರೂ ಒಮ್ಮೆ ಅವರೊಡನೆ ಮತನಾಡಬೇಕು ಎಂದು ನಿರ್ಧಾರ ಮಾಡಿದೆ. ಆದರೆ ಬೆಂಗಳೂರಿಗೆ ಹೋಗಲು ಕೊರೊನಾ ಬಿಡುವು ಕೊಡಲಿಲ್ಲ. ಅವರ ನೆನಪು ತೀವ್ರವಾಗಿ ಆಗುತ್ತಿತ್ತು. ಒಂದು ಕರೆಯನ್ನಾದರೂ ಮಾಡೋಣವೆಂದು ಬನಶಂಕರಿಯ ಅವರ ನಿವಾಸಕ್ಕೆ ಕರೆ ಮಾಡಿದೆ. ಯಾರೂ ಸ್ವೀಕರಿಸಲಿಲ್ಲ. ಇದೆಲ್ಲಾ ನಡೆದು ಒಂದು ವಾರ ಆಗಿರಬಹುದಷ್ಟೆ. ಮೊನ್ನೆ ದಿಢೀರೆಂದು ಮಾಧ್ಯಮಗಳಲ್ಲಿ ಜಯಂತಿ ಅವರ ಮರಣದ ಸುದ್ದಿ ಬಿತ್ತರವಾದಾಗ ಹೃದಯ ಭಾರವಾಗಿ ಕಣ್ಣುಗಳು ತುಂಬಿ ಬಂದವು.

ಎಂ.ಕೆ.ವಾಸುದೇವರಾಜು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಯಾರ 'ಸಹಕಾರ'ದಿಂದ ಯಾರ 'ಸಮೃದ್ಧಿ'?

● ಶಿವಸುಂದರ್

'ಸಹಕಾರದಿಂದ ಸಮೃದ್ಧಿ' ಎಂಬ ಘೋಷ ವಾಕ್ಯದೊಂದಿಗೆ ಒಕ್ಕೂಟ ಸರ್ಕಾರವು ಹೊಸ ಸಹಕಾರ ಸಚಿವಾಲಯಕ್ಕೆ ಜನ್ಮ ಕೊಟ್ಟು ಎರಡು ವಾರಗಳೇ ಕಳೆದವು. ಆದರೂ ಅದರ ಸುತ್ತ ಎದ್ದಿರುವ ಸಂದೇಹ ಹಾಗೂ ಆತಂಕಗಳು ಬಗೆಹರಿದಿಲ್ಲ.

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಈ ಕ್ರಮವನ್ನು ಅನಿವಾರ್ಯವಾಗಿ ಸಮರ್ಥಿಸಿಕೊಳ್ಳಲೇ ಬೇಕಿರುವ ಬಿಜೆಪಿ ನೇತಾರರು ನಂಬಬಹುದಾದ ಯಾವ ತುರ್ತು ಕಾರಣಗಳನ್ನೂ ಮುಂದಿಡುತ್ತಿಲ್ಲ. ಅವರು ಒಂದೋ ಸಹಕಾರಿ ಕ್ಷೇತ್ರದ ಮಹತ್ವಗಳ ಬಗ್ಗೆ ಸಾರ್ವಕಾಲಿಕ ಸತ್ಯಗಳನ್ನು ಹೇಳುತ್ತಾರೆ ಅಥವಾ ಹಾಲಿ ಸಹಕಾರಿ ಕ್ಷೇತ್ರದಲ್ಲಿರುವ ಸಮಸ್ಯೆಗಳನ್ನು ಪಟ್ಟಿ ಮಾಡುತ್ತಾರೆ. ವಾಸ್ತವವಾಗಿ, ರಾಜ್ಯಗಳ ಪಟ್ಟಿಯಲ್ಲಿರುವ ಸಹಕಾರಿ ಕ್ಷೇತ್ರದ ಬಗ್ಗೆ ಇಂಥಾ ಪ್ರಮುಖ ನಿರ್ಧಾರವನ್ನು ತೆಗೆದುಕೊಳ್ಳುವಾಗ ಮೋದಿಯವರ ಸರ್ಕಾರ ಇತರ ಪಕ್ಷಗಳ ಜೊತೆಗಾಗಲೀ ರಾಜ್ಯ ಸರ್ಕಾರಗಳ ಜೊತೆಗಾಗಲೀ ಯಾವುದೇ ಸಮಾಲೋಚನೆಯನ್ನೂ ಮಾಡಿರಲಿಲ್ಲ.

'ಸಹಕಾರಿ ಒಕ್ಕೂಟ ತತ್ವ'ವನ್ನು ಅನುಸರಿಸುವುದಾಗಿ ಬಿಜೆಪಿ ಪ್ರಾರಂಭದಲ್ಲಿ ಭರವಸೆ ನೀಡಿತ್ತು. ಆದರೆ, ನೋಟು ನಿಷೇಧ, ಜಿಎಸ್‌ಟಿಯಲ್ಲಿ ರಾಜ್ಯಗಳ ಪಾಲು ಹಾಗೂ ಪರಿಹಾರದಲ್ಲಿ ನಿರಂತರ ವಂಚನೆ, ಸಂವಿಧಾನದ 370ನೇ ವಿಧಿ ಅಡಿಯಲ್ಲಿನ ವಿಶೇಷ ಸ್ಥಾನಮಾನ ರದ್ದತಿ, ರಾಜ್ಯದ ಪಟ್ಟಿಯಲ್ಲಿರುವ ಕೃಷಿ ಕ್ಷೇತ್ರದ ಬಗ್ಗೆ ಸಂಸತ್ತಿನ ರೀತಿ ರಿವಾಜುಗಳನ್ನು ಉಲ್ಲಂಘಿಸಿ ಮೂರು ಕೃಷಿ ನೀತಿಗಳನ್ನು ಜಾರಿಗೊಳಿಸಿದ್ದು... ಇತ್ಯಾದಿ ಕ್ರಮಗಳು ಸರ್ಕಾರದ ದಮನಕಾರಿ ಒಕ್ಕೂಟ ನೀತಿಯನ್ನು ಸಾಬೀತುಪಡಿಸಿವೆ.

ಇವೆಲ್ಲವೂ, ಹೊಸ 'ಸಹಕಾರಿ' ಸಚಿವಾಲಯದ ಹಿಂದೆ ಇರುವುದು 'ಸಹಕಾರಿ' ಉದ್ದೇಶವೇ ಎಂಬ ಪ್ರಶ್ನೆಯನ್ನು ಸಹಜವಾಗಿ ಹುಟ್ಟು ಹಾಕಿದೆ. ಹಾಗೆ ನೋಡಿದರೆ, ಈ ಬಗ್ಗೆ ಸರ್ಕಾರ ಸಮಾಲೋಚನೆ ಮಾಡಿದ್ದು ಆರ್‌ಎಸ್‌ಎಸ್‌ನ ಅಂಗಸಂಸ್ಥೆಯಾದ ಸಹಕಾರ ಭಾರತಿಯ ಜೊತೆಗೆ ಮಾತ್ರ.

ಆ ಸಮಾಲೋಚನೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಸಹಕಾರ ಭಾರತಿಯ ಮುಖ್ಯಸ್ಥರೂ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನ ನಾಮ ನಿರ್ದೇಶಿತ ಸದಸ್ಯರೂ ಆಗಿರುವ ಸತೀಶ್ ಮರಾಠೆಯವರ ಪ್ರಕಾರ ಈ ಹೊಸ ಇಲಾಖೆಯ ಸೃಷ್ಟಿ ಮತ್ತು ಉದ್ದೇಶಗಳೆಲ್ಲ ಸಹಕಾರ ಭಾರತಿಯ ಸಲಹೆಯಂತೇ ರೂಪಿತವಾಗಿವೆ. ಅವುಗಳಲ್ಲಿ ಪ್ರಮುಖವಾದದ್ದು 'ಇಡೀ ದೇಶದ ಎಲ್ಲಾ ಸಹಕಾರಿಗಳನ್ನು ಒಂದೇ ರೀತಿಯ ನಿಯಂತ್ರಣಕ್ಕೆ ತರುವಂತಹ ಕೇಂದ್ರೀಯ ಕಾಯ್ದೆ. ಮತ್ತೊಂದು 'ಈ ಸಹಕಾರಿಗಳಿಗೂ ಸುಲಭವಾಗಿ ವ್ಯವಹಾರ ನಡೆಸಲು ಅನುಕೂಲವಾಗುವಂತೆ ಕಾಯ್ದೆಗಳ ಉದಾರೀಕರಣ'. ಇವೆರಡೂ ಈ ಹೊಸ ಇಲಾಖೆಯ ಪ್ರಮುಖ ಕೆಲಸ ಆಗಿರಲಿದೆ ಎಂದು ಈ ಇಲಾಖೆಯ ಪ್ರಥಮ ಸಚಿವರಾಗಿರುವ ಅಮಿತ್ ಶಾ ಅವರು ಕೂಡಾ ಘೋಷಿಸಿದ್ದಾರೆ.

ಆದರೆ, ಅಮಿತ್ ಶಾ ಅವರು ತಮ್ಮ ಈ 'ಸಹಕಾರ ಹಸ್ತ ಚಾಚುವ' ಮುಂಚೆ ಸುಪ್ರೀಂ ಕೋರ್ಟು ಇದೇ 20ರಂದು ಬಹುಮತದ ತೀರ್ಮಾನದ ಮೂಲಕ ಸಂವಿಧಾನದ 97ನೇ ತಿದ್ದುಪಡಿಯನ್ನು ಭಾಗಶಃ ರದ್ದು ಮಾಡಿಬಿಟ್ಟಿತು. ಈ ಒಕ್ಕೂಟ ವಿರೋಧಿ ತಿದ್ದುಪಡಿಯನ್ನು 2011ರಲ್ಲಿ ಜಾರಿ ಮಾಡಿದ್ದು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ! ಅದರ ತ್ವರಿತ ಮುಂದುವರಿಕೆಯೇ ಶಾ ಅವರ ಹೊಸ ಸಚಿವಾಲಯ!

ಈ ತಿದ್ದುಪಡಿಯು ಸಹಕಾರಿಗಳ ನಿರ್ವಹಣೆಯಲ್ಲೂ ಒಕ್ಕೂಟ ಸರ್ಕಾರ ಮಧ್ಯಪ್ರವೇಶ ಮಾಡಲು ಅವಕಾಶ ಮಾಡಿಕೊಡುತ್ತಿತ್ತು. ರಾಜ್ಯಗಳ ಪಟ್ಟಿಯಲ್ಲಿರುವ ಇಂಥಾ ವಿಷಯಗಳಿಗೆ ಸಾಂವಿಧಾನಿಕ ತಿದ್ದುಪಡಿ ತರಬೇಕೆಂದರೆ ಸಂಸತ್ತಿನ ಎರಡೂ ಸದನಗಳಲ್ಲಿ ಮೂರನೇ ಎರಡರಷ್ಟು ಬಹುಮತ ಹಾಗೂ ಒಟ್ಟಾರೆ ದೇಶದ ಅರ್ಧ ಭಾಗದಷ್ಟು ಶಾಸನ ಸಭೆಗಳಲ್ಲಿ ಮೂರನೇ ಎರಡರಷ್ಟು ಬಹುಮತವನ್ನು ಪಡೆದು ತಿದ್ದುಪಡಿ ಮಾಡಬೇಕಾಗುತ್ತದೆ. ಕಾಂಗ್ರೆಸ್ ಸರ್ಕಾರ ಸಂಸತ್ತಿನಲ್ಲಿ ಬಹುಮತವನ್ನು ಪಡೆದುಕೊಂಡಿದ್ದರೂ ರಾಜ್ಯ ಶಾಸನ ಸಭೆಗಳ ಸಮ್ಮತಿಯನ್ನೇ ಪಡೆದುಕೊಂಡಿರಲಿಲ್ಲ.

ಈ ಕಾಯ್ದೆಯನ್ನು ಸುಪ್ರೀಂ ಕೋರ್ಟು ಭಾಗಶಃ ರದ್ದುಗೊಳಿಸಿದೆ. ಆದರೆ ಅದೇ ಸಮಯದಲ್ಲಿ ಭಾರತದ ನಾಗರಿಕರು ಸಹಕಾರಿಯನ್ನು ರಚಿಸಿಕೊಳ್ಳುವುದು ಮೂಲಭೂತ ಹಕ್ಕೆಂಬುದನ್ನೂ ಬಹುರಾಜ್ಯಗಳಲ್ಲಿ ವ್ಯವಹರಿಸುವ ಸಹಕಾರಿಗಳ ಮೇಲೆ ಒಕ್ಕೂಟ ಸರ್ಕಾರದ ಅಧಿಕಾರವನ್ನೂ ಸುಪ್ರೀಂ ಕೋರ್ಟು ಮಾನ್ಯ ಮಾಡಿರುವುದು ಮತ್ತೊಂದು ವಿಷಯ.

ಹೀಗಾಗಿ ಕೇಂದ್ರ ಸರ್ಕಾರವು ಅತ್ಯಂತ ತುರ್ತಾಗಿ ಹಾಗೂ ಹಲವು ದೂರಗಾಮಿ ಉದ್ದೇಶಗಳನ್ನು ಇಟ್ಟುಕೊಂಡು ಸೃಷ್ಟಿಸಿದ ಹೊಸ ಸಹಕಾರಿ ಸಚಿವಾಲಯಕ್ಕೆ ಪ್ರಾರಂಭದಲ್ಲೇ ದೊಡ್ಡ ತೊಡಕು ಎದುರಾಗಿದೆ. ಇದನ್ನು ಬಗೆಹರಿಸಿಕೊಳ್ಳಬೇಕೆಂದರೆ ಸಾಂವಿಧಾನಿಕ ಪ್ರಕ್ರಿಯೆಯನ್ನು ಹೊಸದಾಗಿ ಪ್ರಾರಂಭಿಸಬೇಕಾಗುತ್ತದೆ. ಉತ್ತರಪ್ರದೇಶ, ಪಂಜಾಬ್ ಹಾಗೂ ಇತರ ರಾಜ್ಯಗಳ ವಿಧಾನಸಭೆ ಚುನಾವಣೆಗಳಿಗೆ ಮುಂಚೆಯಂತೂ ಅದು ಆಗುವ ಸಂಭವ ಕಡಿಮೆ. ಆದರೂ ಬಿಜೆಪಿಗೆ ಈಗಿರುವ ಅಧಿಕಾರ ಬಲವನ್ನು ನೋಡಿದರೆ ಇದೊಂದು ನಿವಾರಿಸಿಕೊಳ್ಳಬಹುದಾದ ಅಡಚಣೆಯೇ ಆಗಿದೆ.

ಸಹಕಾರಿ ಕ್ಷೇತ್ರದಲ್ಲಿ 'ಭಾರತ ಸರ್ಕಾರ' ಮತ್ತು 'ಸಹಕಾರ ಭಾರತಿ' ತರಬೇಕೆಂದಿರುವ ಬದಲಾವಣೆಗಳು ಮತ್ತದರ ಫಲಾನುಭವಿಗಳು ಯಾರು ಎಂದು ಅರ್ಥಮಾಡಿಕೊಳ್ಳುವುದಂತೂ ತುರ್ತಾಗಿದೆ.

ಈಗಾಗಲೇ ಸಾಕಷ್ಟು ಚರ್ಚೆಯಾಗಿರುವಂತೆ ಸಹಕಾರಿ ಕ್ಷೇತ್ರವು ಗ್ರಾಮೀಣ ಅರ್ಥಿಕತೆಯಲ್ಲಿ ಅತ್ಯಂತ ಪ್ರಭಾವಿ ವ್ಯವಸ್ಥೆಯಾಗಿದ್ದು ರೈತರ ಬದುಕನ್ನು ಹಾಗೂ ಗ್ರಾಮೀಣ ರಾಜಕೀಯವನ್ನು ನಿಯಂತ್ರಿಸುತ್ತದೆ. ಅಷ್ಟು ಮಾತ್ರವಲ್ಲ. ಗ್ರಾಮೀಣ ಪ್ರದೇಶದ ಪ್ರಭಾವಿ ಸಮುದಾಯಗಳ ಪ್ರಬಲ ವರ್ಗಗಳಿಗೆ ಮುಂದಿನ ರಾಜಕೀಯಕ್ಕೆ ಚಿಮ್ಮು ಹಲಗೆಯಾಗಿಯೂ ಕೆಲಸ ಮಾಡುತ್ತದೆ. ಸಹಕಾರ ಕ್ಷೇತ್ರ ಪ್ರಬಲವಾಗಿರುವ ಮಹಾರಾಷ್ಟ್ರ, ಕೇರಳ, ಕರ್ನಾಟಕ, ಗುಜರಾತ್ ಇನ್ನಿತರ ರಾಜ್ಯಗಳಲ್ಲಿ ಸಹಕಾರಿ ಕ್ಷೇತ್ರದ ಮೇಲೆ ಹಿಡಿತ ಸಾಧಿಸುವವರು ರಾಜ್ಯದ ರಾಜಕಾರಣದ ಮೇಲೆ ಹಿಡಿತ ಸಾಧಿಸುತ್ತಾ ಬಂದಿದ್ದಾರೆ. ಸಹಕಾರಿ ಕ್ಷೇತ್ರವು ದುರ್ಬಲ ಸಮುದಾಯಗಳಿಗೆ ಕೆಲವು ಆರ್ಥಿಕ ಅನುಕೂಲಗಳನ್ನು ಮಾಡಿಕೊಟ್ಟಿದ್ದರೂ ಗ್ರಾಮೀಣ ಪ್ರದೇಶದ ಸಾಂಪ್ರದಾಯಿಕ ಸಾಮಾಜಿಕ-ಆರ್ಥಿಕ ಅಧಿಕಾರ ರಚನೆಯನ್ನು ಮತ್ತಷ್ಟು ಗಟ್ಟಿಗೊಳಿಸಿದೆ. ಎಲ್ಲಾ ರಾಜಕೀಯ ಪಕ್ಷಗಳಿಗೂ ಈ ಸಾಮಾಜಿಕ ಸ್ತರಗಳೇ ಸಾಮಾಜಿಕ ನೆಲೆಗಳೂ ಆಗಿವೆ.

ಕೇಂದ್ರದ ಹೊಸ ಸಚಿವಾಲಯವು 'ನಿಜಕ್ಕೂ ಜನರ ಸಹಕಾರಿ ಚಳವಳಿಯ ಕ್ಷೇತ್ರವನ್ನಾಗಿ ಮಾಡುವ' ಉದ್ದೇಶವನ್ನು ಘೋಷಿಸಿದ್ದರೂ ಅದರ ಮೂಲ ಉದ್ದೇಶ ಈಗಿರುವ ಗ್ರಾಮೀಣ ಸಮೀಕರಣವನ್ನು ಮತ್ತಷ್ಟು ಗಟ್ಟಿಗೊಳಿಸಿ ತನ್ನೆಡೆಗೆ ಒಲಿಸಿಕೊಳ್ಳುವುದೇ ವಿನಾ ಅದನ್ನು ಬದಲಿಸುವುದೇನಲ್ಲ.

ಹೊಸ ಸಚಿವಾಲಯವು ಹೊಸ ತಿದ್ದುಪಡಿಗಳೊಂದಿಗೆ ಕಾರ್ಯಾಚರಣೆ ಪ್ರಾರಂಭಿಸಿದರೆ ಈ ಸಹಕಾರಿಗಳ ಹಣದ ಹರಿವು ಹಾಗೂ ಆಡಳಿತಗಳ ಮೇಲೆ ಕೇಂದ್ರೀಯವಾಗಿ ನಿಯಂತ್ರಣ ಸಾಧಿಸಬಹುದು. ಅಥವಾ ಪೂರಕ ರಾಜಕೀಯ ಸಂದರ್ಭವೇ ಇದ್ದರೆ ಪ್ರೋತ್ಸಾಹಿಸಬಹುದು. ಅರ್ಥಾತ್ ಸಾಮ, ದಂಡ ನೀತಿಗಳ ಮೂಲಕ ತನ್ನೆಡೆಗೆ ಒಲಿಸಿಕೊಳ್ಳಬಹುದು. ಇದು ತತ್‌ಕ್ಷಣದ ರಾಜಕೀಯ ಪ್ರಯೋಜನ.

> ಹೊಸ ಸಚಿವಾಲಯವು ಹೊಸ ತಿದ್ದುಪಡಿಗಳೊಂದಿಗೆ ಕಾರ್ಯಾಚರಣೆ ಪ್ರಾರಂಭಿಸಿದರೆ ಈ ಸಹಕಾರಿಗಳ ಹಣದ ಹರಿವು ಹಾಗೂ ಆಡಳಿತಗಳ ಮೇಲೆ ಕೇಂದ್ರೀಯವಾಗಿ ನಿಯಂತ್ರಣ ಸಾಧಿಸಬಹುದು. ಅಥವಾ ಪೂರಕ ರಾಜಕೀಯ ಸಂದರ್ಭವೇ ಇದ್ದರೆ ಪ್ರೋತ್ಸಾಹಿಸಬಹುದು. ಅರ್ಥಾತ್ ಸಾಮ, ದಂಡ ನೀತಿಗಳ ಮೂಲಕ ತನ್ನೆಡೆಗೆ ಒಲಿಸಿಕೊಳ್ಳಬಹುದು. ಇದು ತತ್‌ಕ್ಷಣದ ರಾಜಕೀಯ ಪ್ರಯೋಜನ

ಸಹಕಾರಿ ಕ್ಷೇತ್ರವನ್ನು ದೊಡ್ಡ ಕಾರ್ಪೊರೇಟ್ ಆರ್ಥಿಕತೆಗೆ ಪೂರಕವಾಗಿ (ಪ್ರತಿಸ್ಪರ್ಧಿಯಾಗಿ ಅಲ್ಲ) ಹಂತಹಂತವಾಗಿ ಅಭಿವೃದ್ಧಿಪಡಿಸುವ ಉದ್ದೇಶವನ್ನು ಈ ಹೊಸ ಸಚಿವಾಲಯ ಹೊಂದಿದೆ. ಸಹಕಾರಿಗಳಿಗೆ 'ಸುಲಭವಾಗಿ ವ್ಯವಹಾರ ನಡೆಸಲು ಪೂರಕವಾದ ಔದ್ಯಮಿಕ ಚೌಕಟ್ಟನ್ನು ಒದಗಿಸುವುದು' ಎಂಬ ಘೋಷಣೆಯಲ್ಲಿ ಅದು ಸ್ಪಷ್ಟವಾಗುತ್ತದೆ. ಇಂದು ಸಹಕಾರಿ ಕ್ಷೇತ್ರದಲ್ಲಿರುವ ಅಂದಾಜು ₹14 ಲಕ್ಷ ಕೋಟಿ ಆರ್ಥಿಕ ಬಲ ಹಾಗೂ ಅಂದಾಜು 27 ಕೋಟಿ ಗ್ರಾಹಕ/ಸದಸ್ಯ/ಉತ್ಪಾದಕರ ಸಾಮಾಜಿಕ ಬಲವನ್ನು ಬಳಸಿಕೊಂಡು ಸಹಕಾರಿ ಕ್ಷೇತ್ರವನ್ನು ಬಹು ಕ್ಷೇತ್ರೀಯ ಉದ್ಯಮವನ್ನಾಗಿ ಬೆಳೆಸುವುದಾಗಿ ಸಹಕಾರ ಭಾರತಿಯ ಮರಾಠೆಯವರು ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಭಾರತದ ಕೃಷಿಯ ಉತ್ಪಾದನೆ ಹಾಗೂ ಮಾರುಕಟ್ಟೆಗಳಲ್ಲಿ ದೊಡ್ಡದಾಗಿ ಪ್ರವೇಶ ಮಾಡಲಿರುವ ಕಾರ್ಪೊರೇಟ್ ಕಂಪನಿಗಳಿಗೆ ಪೂರಕವಾಗಿ ಕೃಷಿ ಸಹಕಾರಿಗಳನ್ನು ಬಳಸಿಕೊಳ್ಳುವ ಮೂಲಕ ಈ ಪ್ರಕ್ರಿಯೆ ಪ್ರಾರಂಭವಾಗಲಿದೆ. ಕೇಂದ್ರದ ಹೊಸ ಗುತ್ತಿಗೆ ಕೃಷಿ, ಎಪಿಎಂಸಿ ಬೈಪಾಸ್ ಹಾಗೂ ಅಗತ್ಯ ವಸ್ತು ಕಾಯ್ದೆ ನೀತಿಗಳಲ್ಲಿ ಈಗಾಗಲೇ ಕೃಷಿ ಸಹಕಾರಿಗಳನ್ನು ರೈತ ಹಾಗೂ ಕಾರ್ಪೊರೇಟ್ ದೊಡ್ಡ ಬಂಡವಾಳಿಗರ ನಡುವಿನ ದಲ್ಲಾಳಿಗಳ ಹಾಗೆ ಬಳಸಿಕೊಳ್ಳುವ ಪ್ರಸ್ತಾಪವಿದೆ.

ಇದಲ್ಲದೆ ಸಹಕಾರಿ ಕ್ಷೇತ್ರವನ್ನು ವಿಮೆ, ವಿದ್ಯುತ್ ವಿತರಣೆ, ಇನ್ನಿತರ ಕ್ಷೇತ್ರಗಳಿಗೂ ವಿಸ್ತರಿಸುವ ಮಹದಾಶಯ ಈ ಹೊಸ ಸಚಿವಾಲಯಕ್ಕಿದೆ. ಅದಕ್ಕಾಗಿ ಬೇಕಿರುವ ಬಂಡವಾಳವನ್ನು ಮಾರುಕಟ್ಟೆಯಿಂದ ಸಂಗ್ರಹಿಸಲು ಷೇರು ಮಾರುಕಟ್ಟೆ ಪ್ರವೇಶಿಸಲು ಬೇಕಿರುವ ತಿದ್ದುಪಡಿಗಳೇ 'ಈಸ್ ಆಫ್ ಡೂಯಿಂಗ್ ಬಿಸಿನೆಸ್‌ನ ತಾತ್ಪರ್ಯ'. ಅಲ್ಲಿಗೆ ಯಶಸ್ವಿ ಸಹಕಾರಿಗಳನ್ನು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ಖರೀದಿಸುವ ಕಾರ್ಪೊರೇಟ್ ಬಂಡವಾಳಿಗರೇ ಅಸಲಿ ಮಾಲೀಕರೂ ಆಗಲಿದ್ದಾರೆ. ತಾತ್ಪರ್ಯವಿಷ್ಟೆ. ಸಹಕಾರಿ ಕ್ಷೇತ್ರದ ಕಾರ್ಪೊರೇಟೀಕರಣ.

ಇದು ಇಂದಿನ ಬಂಡವಾಳಶಾಹಿ ಜಾಗತೀಕರಣದ ಕಾಲಘಟ್ಟದಲ್ಲಿ ಜಗತ್ತಿನೆಲ್ಲೆಡೆ ನಡೆಯುತ್ತಿರುವ ಪ್ರಕ್ರಿಯೆ. ಬಲವಾದ ಸಹಕಾರಿ ರಚನೆಗಳುಳ್ಳ ಅಮುಲ್‌ನಂತಹ ಯಶಸ್ವಿ ಸಹಕಾರಿಗಳು ಸಹ ಜಗತ್ತಿನೆಲ್ಲೆಡೆ ಕಾರ್ಪೊರೇಟ್ ಬಂಡವಾಳಶಾಹಿ ವಲಯ ಸೃಷ್ಟಿಸಿದ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿವೆ. ಇಂಥ ಸಹಕಾರಿಗಳ ಮಾರುಕಟ್ಟೆ ಯಶಸ್ಸು ಸಹ ಬಂಡವಾಳಶಾಹಿ ಉಪಭೋಗಿತನದ ನಿರಂತರ ಬೆಳವಣಿಗೆಯ ಮೇಲೆ ಅವಲಂಬಿತವಾಗಿರುತ್ತದೆ. ಹೀಗಾಗಿ ಸಹಕಾರಿಗಳು, ಕಾರ್ಪೊರೇಟ್ ಆರ್ಥಿಕತೆಗೆ ಪೂರಕವಾದ ಮತ್ತೊಂದು ವಿಭಾಗವಾಗುತ್ತವೆ.

ಹಾಗೆ ನೋಡಿದರೆ ಸಹಕಾರಿ ಕ್ಶೇತ್ರವನ್ನು ಬಂಡವಾಳವಾದ ಹಾಗೂ ಸಮಾಜವಾದಗಳ, ಖಾಸಗಿ ಮತ್ತು ಸರ್ಕಾರಿ ಉದ್ಯಮಗಳ ವ್ಯವಸ್ಥೆಯಿಂದ ಹೊರತಾದ ಮೂರನೇ ಜನವಲಯವೆಂದು ಬಣ್ಣಿಸಲಾಗುತ್ತಿತ್ತು. ಆದರೆ, ಒಟ್ಟಾರೆಯಾಗಿ ಕಾರ್ಪೊರೇಟ್ ಬಂಡವಾಳಶಾಹಿ ವ್ಯವಸ್ಥೆಯೇ ಆರ್ಥಿಕತೆ ಮತ್ತು ರಾಜಕೀಯವನ್ನು ಆವರಿಸಿಕೊಂಡಿರುವಾಗ ಸಹಕಾರಿ ಕ್ಷೇತ್ರವೊಂದು ಮಾತ್ರ ಜನ ಆರ್ಥಿಕತೆಯ ದ್ವೀಪವಾಗುಳಿಯಲಾರದು.

ಒಂದೋ ಕೊಪ್ಪದ ಸಹಕಾರಿ ಸಾರಿಗೆಯ ರೀತಿ ಬಂಡವಾಳದ ರಕ್ತಹೀನತೆಯಿಂದ ನಿಧಾನವಾಗಿ ಸಾಯುವಂತೆ ಸರ್ಕಾರವೇ ನೋಡಿಕೊಳ್ಳುತ್ತದೆ. ಇಲ್ಲವೇ ಈ ಸಹಕಾರಿಗಳೇ ನಿಧಾನವಾಗಿ ಕಾರ್ಪೊರೇಟ್ ಆರ್ಥಿಕತೆಯ ಉತ್ಪಾದನೆ ಅಥವಾ ಮಾರುಕಟ್ಟೆ ವಲಯಗಳ ಅಗತ್ಯಗಳನ್ನು ಪೂರೈಸುವ ಮಿರರ್ ಇಮೇಜುಗಳಾಗಿ ಬದಲಾಗುತ್ತವೆ. ಒಂದು ಬಲವಾದ ಸಮಾಜಮುಖಿ ರಾಜಕೀಯ-ಅರ್ಥಿಕ ಸನ್ನಿವೇಶದಲ್ಲಿ ಮಾತ್ರ ಸಹಕಾರಿಗಳು ಜನರಿಗೆ ಸೇವೆ ಸಲ್ಲಿಸುತ್ತವೆ. ಇಲ್ಲದಿದ್ದಲ್ಲಿ ಕಾರ್ಪೊರೇಟುಗಳ ಮಧ್ಯವರ್ತಿಗಳಾಗುತ್ತವೆ. ನಮ್ಮಲ್ಲಿ ಸಹಕಾರಿ ಕ್ಷೇತ್ರಗಳ ಕಾರ್ಪೊರೇಟೀಕರಣ ಘೋಷಿತವಾಗಿದೆ ಹಾಗೂ ತ್ವರಿತವಾಗಿ ನಡೆಯುತ್ತಿದೆ. ಅಷ್ಟೆ ವ್ಯತ್ಯಾಸ.

ಲೇಖಕ: ಸಾಮಾಜಿಕ ಕಾರ್ಯಕರ್ತ

ರಾಜಕೀಯ ತೀರ್ಮಾನ, ಸಾಂವಿಧಾನಿಕ ಅಲ್ಲ

ಸಹಕಾರ ಸಚಿವಾಲಯ ಸೃಷ್ಟಿಸುತ್ತಿರುವುದು ಕೇಂದ್ರ ಸರ್ಕಾರದ ರಾಜಕೀಯ ತೀರ್ಮಾನವೇ ಹೊರತು ಸಾಂವಿಧಾನಿಕ ಅಲ್ಲ. ಯಾಕೆಂದರೆ, 'ಸಹಕಾರ' ಎನ್ನುವಂಥದ್ದು ರಾಜ್ಯದ ಪಟ್ಟಿಯಲ್ಲಿರುವ ವಿಷಯ. ಒಂದೊಮ್ಮೆ ಈ ವಿಷಯ ರಾಜ್ಯ–ಕೇಂದ್ರದ ಸಹವರ್ತಿ ಪಟ್ಟಿಯಲ್ಲಿರುತ್ತಿದ್ದರೆ ಕೇಂದ್ರಕ್ಕೂ ಅಧಿಕಾರ ಬರುತ್ತಿತ್ತು. ಆದರೆ, ಇದೀಗ ಪ್ರತ್ಯೇಕ ಸಚಿವಾಲಯ ಆರಂಭಿಸುವ ಮೂಲಕ ಈ ವಲಯದಲ್ಲಿ ರಾಜ್ಯಗಳಿಗಿರುವ ಅಧಿಕಾರದ ಮೇಲೆ ಪರೋಕ್ಷವಾಗಿ ನಿಯಂತ್ರಣ ಸಾಧಿಸಲು ಕೇಂದ್ರ ಸರ್ಕಾರ ಹೊರಟಿದೆ.

'ಸಹಕಾರ ಕ್ಷೇತ್ರ ರಾಜ್ಯ ವಲಯದಲ್ಲಿ ಬರುವುದರಿಂದ ಕೇಂದ್ರ ಸರ್ಕಾರವು ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿ ಕಾನೂನು ರೂಪಿಸುವಂತಿಲ್ಲ' ಎಂದು ಸುಪ್ರೀಂ ಕೋರ್ಟ್, ಸಂವಿಧಾನದ 97ನೇ ತಿದ್ದುಪಡಿಯನ್ನು ಇತ್ತೀಚೆಗೆ ರದ್ದುಪಡಿಸಿದೆ. ಶೇ 51ರಷ್ಟು ರಾಜ್ಯಗಳು ಈ ತಿದ್ದುಪಡಿಯನ್ನು ಒಪ್ಪಿಕೊಂಡಿರಲಿಲ್ಲ. ಈ ತಿದ್ದುಪಡಿ ಮೂಲಕ, ಸಹಕಾರ ಕ್ಷೇತ್ರಗಳಲ್ಲಿನ ರಾಜ್ಯಗಳ ಅಧಿಕಾರವನ್ನು ಕಿತ್ತುಕೊಳ್ಳಲು ಕೇಂದ್ರಕ್ಕೆ ಅಧಿಕಾರ ಇಲ್ಲ ಎಂದೂ ನ್ಯಾಯಾಲಯ ಸ್ಪಷ್ಟವಾಗಿ ಹೇಳಿದೆ. ಕೇಂದ್ರದಲ್ಲಿ ಕೃಷಿ ಸಚಿವಾಲಯದ ಅಡಿಯಲ್ಲಿ ಸಣ್ಣ ವಿಭಾಗವಾಗಿದ್ದ, ಜಂಟಿ ಕಾರ್ಯದರ್ಶಿಯೊಬ್ಬರು ನಿಬಂಧಕರಾಗಿದ್ದ ಸಹಕಾರ ಘಟಕವನ್ನು ಈಗ ಕೇಂದ್ರ ಸರ್ಕಾರ ಪ್ರತ್ಯೇಕ ಸಚಿವಾಲಯವಾಗಿ ಮಾಡುತ್ತಿದೆ. ರಾಜಕೀಯವಾಗಿ ಈ ತೀರ್ಮಾನ ಕೈಗೊಂಡಿರುವುದರಿಂದ, ಕೇಂದ್ರ ಸರ್ಕಾರ ಬೆಂಬಲಿತ ಪಕ್ಷಗಳು ಇದನ್ನು ಬೆಂಬಲಿಸುತ್ತಿವೆ. ವಿರೋಧ ಪಕ್ಷವಾದ ಕಾಂಗ್ರೆಸ್ ಸಹಜವಾಗಿ ವಿರೋಧ ವ್ಯಕ್ತಪಡಿಸುತ್ತಿದೆ. ಈ ಹಿಂದೆ, 1991ರಲ್ಲಿಯೇ ಕೇಂದ್ರ ಸರ್ಕಾರ ಮಾದರಿ ಸಹಕಾರ ಕಾಯ್ದೆಯನ್ನು ರೂಪಿಸಿತ್ತು. ಅದನ್ನು ಒಂಬತ್ತು ರಾಜ್ಯಗಳು ಮಾತ್ರ ಒಪ್ಪಿಕೊಂಡಿದ್ದವು. ಈಗ ಸಂಘ ಪರಿವಾರ ಸಂಘಟನೆಯ ಸಹಕಾರ ಭಾರತಿಯ ಪ್ರಚೋದನೆಯಿಂದ ರಾಷ್ಟ್ರೀಯ ಮಟ್ಟದಲ್ಲಿ ಸಹಕಾರ ಇಲಾಖೆ ರಚನೆಯಾಗುತ್ತಿದೆ. ಸಹಕಾರ ವಲಯವನ್ನು ನೇರವಾಗಿ ಹಿಡಿತಕ್ಕೆ ತೆಗೆದುಕೊಳ್ಳಲು ಅವಕಾಶ ಇಲ್ಲದೇ ಇರುವುದರಿಂದ, ಈ ಮೂಲಕ ಪರೋಕ್ಷವಾಗಿ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಕೇಂದ್ರ ಪ್ರಯತ್ನಿಸುತ್ತಿದೆ.

ಸಿ.ಎನ್. ಪರಶಿವಮೂರ್ತಿ, ಸಹಕಾರ ಸಂಘಗಳ ಹೆಚ್ಚುವರಿ ನಿಬಂಧಕ (ನಿವೃತ್ತ)

ಉದ್ದೇಶ, ಚಟುವಟಿಕೆ ಇನ್ನೂ ಸ್ಪಷ್ಟ ಆಗಿಲ್ಲ



ಸಹಕಾರ ಇಲಾಖೆ, ಸಹಕಾರ ಸಂಸ್ಥೆಗಳು ರಾಜ್ಯದ ಪಟ್ಟಿಯಲ್ಲಿ ಇರುವಂಥದ್ದು. ಇದೀಗ, ಕೇಂದ್ರ ಸರ್ಕಾರ ಕಾಯ್ದೆ ತಂದು ಸಹಕಾರ ಇಲಾಖೆಯನ್ನು ರಚನೆ ಮಾಡಿ, ಅದಕ್ಕೆ ಸಚಿವರನ್ನೂ ನೇಮಿಸಿದೆ. ಆದರೆ, ಇಲಾಖೆ ರಚಿಸಿರುವ ಉದ್ದೇಶ, ಅದರ ಚಟುವಟಿಕೆ ಏನು ಎನ್ನುವುದನ್ನು ಸ್ಪಷ್ಟಪಡಿಸಿಲ್ಲ. ಸಹಕಾರ ಸಂಘಗಳು, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಭಾಗದ ಸಹಕಾರ ಸಂಘಗಳು, ಕೃಷಿಗೆ ಸಾಲ ನೀಡುವ ಪತ್ತಿನ ಸಹಕಾರ ಸಂಘಗಳನ್ನು ಬಲಪಡಿಸಲು ಈ ಕಾಯ್ದೆ, ಇಲಾಖೆಯ ಮೂಲಕ ಪ್ರಯತ್ನವಾದರೆ ಅನುಕೂಲ. ಆರ್ಥಿಕ ನೆರವು ನೀಡಿದರೆ ರೈತರಿಗೆ ಸಹಾಯವಾಗಲಿದೆ. ಎಷ್ಟೇ ಬ್ಯಾಂಕುಗಳು ಬಂದರೂ ಇನ್ನೂ ಕೊನೆಯ ಸ್ಥಾನದಲ್ಲಿರುವ ರೈತರನ್ನು ತಲುಪಲು ಸಾಧ್ಯವಾಗಿಲ್ಲ. ಹೀಗಾಗಿ, ಈ ಮೂಲಕ ಆ ಉದ್ದೇಶ ಈಡೇರಿದರೆ ಕೇಂದ್ರದ ಪ್ರಯತ್ನ ಸಾರ್ಥಕ ಆಗಬಹುದು. ಅದಕ್ಕೆ ನಾವು ಆರು ತಿಂಗಳು, ಒಂದು ವರ್ಷ ಕಾದು ನೋಡಬೇಕು.

ಇನ್ನೊಂದು ವಿಷಯವೆಂದರೆ, 2011ರ ಡಿಸೆಂಬರ್‌ನಲ್ಲಿ ಸಂವಿಧಾನದ 97ನೇ ತಿದ್ದಿಪಡಿ ಮೂಲಕ ಸಹಕಾರ ಸಂಘಗಳಿಗೆ ಕಾಯಕಲ್ಪ ನೀಡುವ ಪ್ರಯತ್ನವನ್ನು ಅಂದಿನ ಕೇಂದ್ರ ಸರಕಾರ ಮಾಡಿತ್ತು. ಎಲ್ಲ ರಾಜ್ಯಗಳು ಅದನ್ನು ಪಾಲಿಸಬೇಕು ಮತ್ತು ರಾಜ್ಯದ ಕಾಯ್ದೆಗಳಲ್ಲಿ ಬದಲಾವಣೆ ತರಬೇಕು ಎಂದೂ ಹೇಳಿತ್ತು. ಆದರೆ, ಕೆಲವು ರಾಜ್ಯಗಳು ಅದನ್ನು ಒಪ್ಪಿದರೆ, ಕೇರಳವೂ ಸೇರಿದಂತೆ ಕೆಲವು ರಾಜ್ಯಗಳು ಒಪ್ಪಿರಲಿಲ್ಲ. ರಾಜ್ಯಕ್ಕೆ ಸಂಬಂಧಿಸಿದ ವಿಚಾರದಲ್ಲಿ ಕೇಂದ್ರ ಯಾಕೆ ಮಧ್ಯಪ್ರವೇಶಿಸಬೇಕೆಂಬ ಕಾರಣಕ್ಕೆ ಇತ್ತೀಚೆಗೆ ಸುಪ್ರೀಂ ಕೋರ್ಟ್ ಈ ಕಾಯ್ದೆಯನ್ನು ವಜಾ ಮಾಡಿದೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಕೇಂದ್ರ ಆರಂಭಿಸಿರುವ ಸಹಕಾರ ಸಚಿವಾಲಯದ ಉದ್ದೇಶ ಊರ್ಜಿತವೇ ಎನ್ನುವುದನ್ನೂ ನೋಡಬೇಕು.

ರಮಣ ರೆಡ್ಡಿ ಜಿ. ಎಸ್., ಮಾಜಿ ಆಡಳಿತ ವ್ಯವಸ್ಥಾಪಕರು, ರಾಜ್ಯ ಅಪೆಕ್ಸ್ ಬ್ಯಾಂಕ್

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

ದೈನಿಕ್ ಭಾಸ್ಕರ್ ಪತ್ರಿಕೆಯ ಕಚೇರಿ ಹಾಗೂ ಇತರ ಸ್ಥಳಗಳಲ್ಲಿ ಜುಲೈ 22ರಂದು ಆದಾಯ ತೆರಿಗೆ ಇಲಾಖೆ ಶೋಧ ನಡೆಸಿತ್ತು. ತೆರಿಗೆ ವಂಚನೆ ಆರೋಪದ ಮೇಲೆ ಸಿಬ್ಬಂದಿಯನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. ಇದಾದ ಕೆಲ ದಿನಗಳಲ್ಲಿ ದೈನಿಕ್ ಭಾಸ್ಕರ್ ಪತ್ರಿಕೆಯದ್ದು ಎನ್ನಲಾದ ಹೋರ್ಡಿಂಗ್ ವೈರಲ್ ಆಗಿದೆ. 'ಯಾವ ಮಹಾಂತನೂ ಅಲ್ಲ, ಸಂತನೂ ಇಲ್ಲ' ಎಂಬುದಾಗಿ ಅದರಲ್ಲಿ ಉಲ್ಲೇಖವಾಗಿದೆ.

ಹೋರ್ಡಿಂಗ್ ಇರುವ ಜಾಗ ಹಾಗೂ ಅದರ ಸತ್ಯಾಸತ್ಯತೆಯನ್ನು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ಪರಿಶೀಲಿಸಿದೆ. ದೈನಿಕ್ ಭಾಸ್ಕರ್ ಪತ್ರಿಕೆ ಇಂತಹ ಹೋರ್ಡಿಂಗ್ ಹಾಕಿಸಿಲ್ಲ. ರಿವರ್ಸ್ ಇಮೇಜ್ ಮೂಲಕ ಪರಿಶೀಲಿಸಿದಾಗ, ಆರ್‌ಎಸ್‌ಎಸ್, ಬಿಜೆಪಿ ಬೆಂಬಲಿಗ ಎಂದು ಹೇಳಿಕೊಂಡ ದೀಪಕ್ ಮದನ್ ಎಂಬುವರು 2020ರಲ್ಲಿ ಹಾಕಿಸಿದ್ದ ಹೋರ್ಡಿಂಗ್ ಅನ್ನು ತಿರುಚಲಾಗಿದೆ. 'ದೇಶಕ್ಕೆ ಮೋದಿ, ದೆಹಲಿಗೆ ಕೇಜ್ರಿವಾಲ್' ಎಂಬ ಬರಹ ಮೂಲ ಚಿತ್ರದಲ್ಲಿದೆ. ಇದನ್ನು ನ್ಯೂಸ್ ನೇಷನ್ ವರದಿ ಮಾಡಿತ್ತು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಅಮೃತವಾಗುವ ಕ್ಷಣದ ಸೌಂದರ್ಯ

ತಿಂಗಳಾರರ ದುಡಿತ ಚೆಂಗುಲಾಬಿಯ ಬೆಳೆತ |
ಕಂಗೊಳಿಪುದದರ ಸಿರಿಯರೆಗಳಿಗೆಯಲರೊಳ್ ||
ಪೊಂಗುವಾನಂದವದನನುಭವಿಸಿದವನ್ ಅಜನ |
ಹಂಗಿಪನೆ ಕೃಪಣತೆಗೆ ? – ಮಂಕುತಿಮ್ಮ ||443||

ಪದ-ಅರ್ಥ: ತಿಂಗಳಾರರ = ಆರು ತಿಂಗಳುಗಳ, ಬೆಳೆತ = ಬೆಳವಣಿಗೆ, ಕಂಗೊಳಿಪುದದರ = ಕಂಗೊಳಿಪುದು + ಅದರ, ಸಿರಿಯರೆಗಳಿಗೆಯಲರೊಳ್ = ಸಿರಿಯ + ಅರೆಗಳಿಗೆಯ + ಅಲರೊಳ್(ಅಲರ್ = ಹೂವು) = ಹೂವಿನಲ್ಲಿ. ಪೊಂಗುವಾನಂದವದನನುಭವಿಸಿದವನ್ = ಪೊಂಗುವ (ಹೊಂದುವ, ಪಡೆಯುವ) + ಆನಂದವ + ಅದನು + ಅನುಭವಿಸಿದವನ್, ಅಜನ = ಬ್ರಹ್ಮನ, ಹಂಗಿಪನೆ = ಹಂಗಿಸುವನೆ, ಕೃಪಣತೆಗೆ = ಜಿಪುಣತನಕ್ಕೆ

ವಾಚ್ಯಾರ್ಥ: ಆರು ತಿಂಗಳುಗಳ ದುಡಿತದಿಂದ ಸುಂದರವಾದ ಗುಲಾಬಿ ಬೆಳೆಯುತ್ತದೆ. ಹೂವಿನ ಸೌಂದರ್ಯ ಅರೆಗಳಿಗೆ ಮಾತ್ರ ಕಂಗೊಳಿಸಿದರೂ, ಆಗ ಪಡೆಯುವ ಆನಂದವನ್ನು ಅನುಭವಿಸಿದವನು, ಬ್ರಹ್ಮನನ್ನು ಜಿಪುಣ ಎಂದು ಟೀಕಿಸುತ್ತಾನೆಯೇ?

ವಿವರಣೆ: ಚಾರ್ಲ್ಸ್ ಬ್ರಾನ್ಸನ್ ಎಂಬ ಮಹಾ ಉದ್ಯಮಿ, ನಟ ಒಂದು ಕನಸು ಕಂಡ. ಆಕಾಶಯಾನವನ್ನು ಒಂದು ಪ್ರವಾಸವನ್ನಾಗಿ ಮಾಡಬೇಕು. ಜನ ಭೂಮಿಯ ಗುರುತ್ವಾಕರ್ಷಣೆಯನ್ನು ದಾಟಿ ಹೋಗಿ ನಿರ್ವಾತದಲ್ಲಿ ತೇಲಾಡಿ, ಪೃಥ್ವಿಯ ವಕ್ರತೆಯನ್ನು ಕಂಡುಬರಬೇಕೆಂಬುದು ಅವನ ಅಪೇಕ್ಷೆ. ಅದಕ್ಕಾಗಿ ಏನೆಲ್ಲ ಪ್ರಯತ್ನಗಳು! ಸಾವಿರಾರು ಕೋಟಿ ಹಣ ತೊಡಗಿಸಿ, ಗಗನನೌಕೆಯ ತಯಾರಿ, ಅದನ್ನು ಗಗನಕ್ಕೇರಿಸುವ, ಮತ್ತೆ ಕೆಳಗಿಳಿಸುವ ಎಲ್ಲ ಸುರಕ್ಷಾ ವಿಧಾನಗಳ ಸಿದ್ಧತೆಗಳು ವರ್ಷಗಳ ಕಾಲ ನಡೆದವು. ಕೊನೆಗೆ ಆ ಕ್ಷಣ ಬಂದಿತು. ಬ್ರಾನ್ಸನ್‌ನ ಜೊತೆಗೆ ಮತ್ತೆ ಐದುಮಂದಿ ಆ ಆಕಾಶನೌಕೆಯಲ್ಲಿ ಕುಳಿತು, ನಭಕ್ಕೇರಿ, ನಿರ್ವಾತವನ್ನನುಭವಿಸಿ, ಪೃಥ್ವಿಯ ಗೋಲವನ್ನು ಕಂಡು, ಮರಳಿ ಧರೆಗೆ ಬಂದರು. ಇದು ಆದದ್ದು ಎರಡೇ ತಾಸಿನಲ್ಲಿ! ಈ ಎರಡು ತಾಸಿನ ಅನುಭವಕ್ಕೆ ಅದೆಷ್ಟು ವರ್ಷಗಳ ತಯಾರಿ! ಅದೆಷ್ಟು ಹಣದ ಖರ್ಚು! ಹಾಗಾದರೆ ಈ ಪ್ರಯತ್ನ ವ್ಯರ್ಥ ಎನ್ನೋಣವೆ? ಇಲ್ಲ. ಆ ಎರಡು ತಾಸಿನ ಅನುಭವ ಮಾತ್ರ ಅನ್ಯಾದೃಶವಾದದ್ದು, ವರ್ಣನಾತೀತವಾದದ್ದು. ಅದು ಆ ವ್ಯಕ್ತಿಗಳು ಬದುಕಿರುವವರೆಗೂ ಉಳಿಯುವಂಥದ್ದು. ಬೆಳಿಗ್ಗೆಯಿಂದ ಅಡುಗೆಮನೆಯಲ್ಲಿ ಒದ್ದಾಡಿ, ಒಲೆಯ ಬಿಸಿಯಲ್ಲಿ ಕೈಸುಟ್ಟುಕೊಂಡು ಪರಿಶ್ರಮಪಟ್ಟು ತಾಯಿ ತಯಾರಿಸಿದ ಹಲವಾರು ಪದಾರ್ಥಗಳು ಹತ್ತೇ ನಿಮಿಷದ ಊಟದಲ್ಲಿ ಮುಗಿದು ಹೋಗುತ್ತವಲ್ಲ! ಅದು ವ್ಯರ್ಥವೇ? ಇಲ್ಲ. ಊಟ ಮಾಡುವಾಗ ತನ್ನವವರ ಮುಖದಲ್ಲಿ ಹೊಳೆದ ತೃಪ್ತಿಯ ಮಿಂಚು, ಆ ನಾಲ್ಕು ತಾಸಿನ ಪ್ರಯತ್ನಕ್ಕೆ ಸಂದ ಪ್ರತಿಫಲ. ಹೀಗೆ ಕ್ಷಣಕಾಲದ ತೃಪ್ತಿಗೆ ದೀರ್ಘಕಾಲದ ಪರಿಶ್ರಮದ ಅಗತ್ಯ. ಒಬ್ಬ ತರುಣ ಅಥವಾ ತರುಣಿ ಹದಿನೈದು ವರ್ಷ ಸತತ ಪ್ರಯತ್ನ ಮಾಡಿ, ದೇಹವನ್ನು ಬಾಗಿಸಿ, ದುಡಿಸಿ, ಹದಮಾಡಿ, ಆಹಾರವನ್ನು ಅದಕ್ಕೆ ಹೊಂದಿಸಿ ಒಂದೇ ಲಕ್ಷ್ಯದಿಂದ ಸಾಧನೆ ಮಾಡಿದಾಗ ಒಲಿಂಪಿಕ್ ಬಂಗಾರದ ಪದಕ ಕೊರಳಿಗೆ ಬಿದ್ದೀತು. ಆ ಪದಕ ಹಾಕಿಸಿಕೊಂಡದ್ದು ಎಷ್ಟು ಕ್ಷಣ? ಆದರೆ ಆ ಕ್ಷಣ ಪಟ್ಟ ಪರಿಶ್ರಮವನ್ನು ಸಾರ್ಥಕ ಮಾಡುತ್ತದೆ ಮತ್ತು ಆ ಕ್ಷಣವನ್ನು ಅಮೃತವಾಗಿಸುತ್ತದೆ. ಕಗ್ಗದ ಮಾತು ಅದೇ. ತೋಟದಲ್ಲಿ ಮಾಲಿ ಆರು ತಿಂಗಳು ಸತತವಾಗಿ ದುಡಿಯುತ್ತಾನೆ. ಮಣ್ಣು ಹದಮಾಡಿ, ಗೊಬ್ಬರ ಹಾಕಿ, ಗುಲಾಬಿಯ ಕಂಟಿಯನ್ನು ನೆಟ್ಟು ಪೋಷಿಸುತ್ತಾನೆ. ಆಗೊಂದು ಮುಗುಳು ಮೂಡಿ, ಅರಳಿ ಸುಂದರವಾದ ಹೂವಾಗುತ್ತದೆ. ಅದರ ಆಯುಸ್ಸು ಎಷ್ಟು? ಕೇವಲ ಕೆಲವು ಗಳಿಗೆಗಳು. ಆದರೆ ಅದರ ಕ್ಷಣಕಾಲದ ಬದುಕು ನೀಡುವ ಆನಂದವೆಂಥದ್ದು? ಹೂವಿನ ಸೌಂದರ್ಯವನ್ನು ಕಂಡು ಆನಂದಿಸುವ ಮನುಷ್ಯ, ಆ ಸುಂದರತೆಯನ್ನು ಸೃಷ್ಟಿಸಿದ ಬ್ರಹ್ಮನನ್ನು ಜಿಪುಣ ಎನ್ನುವುದು ಸಾಧ್ಯವೇ? ದೀರ್ಘಕಾಲದ ಪರಿಶ್ರಮಕ್ಕೆ ಕ್ಷಣಕಾಲದ ಸೌಂದರ್ಯ, ಅದರಿಂದ ಅನಂತಕಾಲದ ಆನಂದ. ❖

ದಿನ ಭವಿಷ್ಯ

ಬುಧವಾರ ಜುಲೈ 28, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪುಷ್ಯ ಪಂಚಮೀ ಗಂ. 55-35 (ರಾ. 4-25) ಬುಧವಾರ ನಿತ್ಯ ನಕ್ಷತ್ರ ಪೂರ್ವಾಭಾದ್ರ ಗಂ. 17-42 (ಹ. 1-16) ಅತಿಗಂಡ ನಾಮ ಯೋಗ ಗಂ. 43-27 ಕೌಲವ ಕರಣ ಗಂ. 25-18 ವಿಷ ಗಂ. 42-47 ಅಮೃತ ಶೇಷ ಗಂ. 1-18 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-07 ಸೂರ್ಯಾಸ್ತ: 6-45 ಅದೃಷ್ಟ ಸಂಖ್ಯೆ 5

ಮೇಷ: ಚಿನ್ನ, ತಾಮ್ರ ಮುಂತಾದ ಲೋಹಗಳ ಉದ್ಯಮಿಗಳಿಗೆ ಹೆಚ್ಚಿನ ಪ್ರಗತಿ. ಕಲಾವಿದರಿಗೆ ಕನಸು ನನಸಾಗುವ ದಿನವಾಗಲಿದೆ. ವಿದೇಶ ಪ್ರಯಾಣಕ್ಕೆ ಯೋಜನೆ ನಿರ್ಮಾಣ ಮಾಡಲಿದ್ದೀರಿ.

ವೃಷಭ: ಪ್ರಸ್ತುತ ನಿರ್ವಹಿಸುತ್ತಿರುವ ಕೆಲಸ ಉದ್ಯೋಗದಲ್ಲಿ ಹೆಚ್ಚಿನ ಪ್ರಗತಿಯನ್ನು ಕಾಣುವಿರಿ. ನಿಮ್ಮ ವ್ಯವಹಾರಕ್ಷೇತ್ರವನ್ನು ವಿಸ್ತರಿಸಲು ಸ್ನೇಹಿತರ ಸಹಾಯ. ಷೇರುಪೇಟೆಯಲ್ಲಿ ಹೂಡಿಕೆ ಮಾಡಿದಲ್ಲಿ ಉತ್ತಮ ಲಾಭದ ಸಾಧ್ಯತೆ.

ಮಿಥುನ: ರೇಷ್ಮೆ ನೇಕಾರರಿಗೆ ಉತ್ತಮ ಅವಕಾಶಗಳು ಲಭ್ಯ. ಸರಕಾರಿ ಕೆಲಸಗಳಿಗೆ ಹಣ ಖರ್ಚಾದರೂ ಕಾರ್ಯಾನುಕೂಲ ವಾಗಲಿದೆ. ಭೂ ವ್ಯವಹಾರ ನಡೆಸುತ್ತಿರುವವರಿಗೆ ಯಶಸ್ಸು. ಮಹಿಳೆಯರಿಗೆ ಇಷ್ಟಾರ್ಥ ಸಿದ್ಧಿಯಾಗಲಿದೆ.

ಕರ್ಕಾಟಕ: ವ್ಯಾಪಾರಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲ. ಆತ್ಮವಿಶ್ವಾಸದಿಂದ ಸಮಸ್ಯೆಗಳಿಗೆ ಮುಕ್ತಿಯನ್ನು ಕಂಡುಕೊಳ್ಳಲಿದ್ದೀರಿ. ಆರೋಗ್ಯದಲ್ಲಿ ಸುಧಾರಣೆ. ಮಾನಸಿಕ ಶಾಂತಿ ನಿಮ್ಮದಾಗಲಿದೆ.

ಸಿಂಹ: ವಿಶ್ವಾಸದಿಂದ ಸಮಸ್ಯೆಗಳನ್ನು ಎದುರಿಸಿ ಯಶಸ್ಸು ನಿಮ್ಮದಾಗಲಿದೆ. ಕುಟುಂಬದಲ್ಲಿ ಹೊಂದಾಣಿಕೆಯ ಕೊರತೆ. ಸಮಾಧಾನದಿಂದಾಗಿ ಸಾಮರಸ್ಯ ಕಂಡುಕೊಳ್ಳಬಹುದು. ಹೊಸ ವ್ಯವಹಾರ ಪ್ರಾರಂಭದ ಚಿಂತನೆ.

ಕನ್ಯಾ: ಧನಾದಾಯದ ಹೊಸ ಯೋಜನೆಗಳಿಗೆ ಹುಡುಕಾಟದಲ್ಲಿ ಯಶಸ್ಸನ್ನು ಕಾಣುವಿರಿ. ಆರ್ಥಿಕ ಉನ್ನತಿಯಿಂದ ಹೊಸ ಕಾರ್ಯಗಳಲ್ಲಿ ಮುನ್ನಡೆ. ಮನಸ್ಸಿಗೆ ನೆಮ್ಮದಿ ನೀಡುವ ವಾರ್ತೆಯೊಂದನ್ನು ಕೇಳಲಿದ್ದೀರಿ.

ತುಲಾ: ನಿರುದ್ಯೋಗಿಗಳಿಗೆ ಖಾಸಗಿ ಕಂಪೆನಿಗಳಲ್ಲಿ ಅವಕಾಶ ದೊರಕುವ ಸಾಧ್ಯತೆ. ಕೋರ್ಟ್ ಕಚೇರಿ ಕೆಲಸ ಕಾರ್ಯಗಳಲ್ಲಿ ಯಶಸ್ಸು ನಿಮ್ಮದಾಗಲಿದೆ. ಮನೆ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡುವ ಸಾಧ್ಯತೆ.

ವೃಶ್ಚಿಕ: ವ್ಯಾಪಾರ ವಿಸ್ತರಣೆಗೆ ಸಕಾಲವಾಗಿರುವುದು. ಆರ್ಥಿಕ ಪ್ರಗತಿಯಿಂದ ಮನೆಯಲ್ಲಿ ಸಂತಸದ ವಾತಾವರಣ. ಸಹೋದರರಿಂದ ಧನ ಸಹಾಯ ನಿರೀಕ್ಷಿಸಬಹುದು. ಉದ್ಯೋಗಿಗಳಿಗೆ ಬದಲಾವಣೆಯ ಸಾಧ್ಯತೆ ಕಂಡುಬರುತ್ತಿದೆ.

ಧನು: ಸಮಯವರಿತು ಕಾರ್ಯ ಸಾಧನೆ ಮಾಡಲು ನಿಶ್ಚಯಿಸುವಿರಿ. ಮದುವೆ ಸಿದ್ಧತೆಗಳಿಗಾಗಿ ಪ್ರಯಾಣ ಮಾಡಬೇಕಾದೀತು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ. ಹಿರಿಯರ ಆರೋಗ್ಯದ ಬಗ್ಗೆ ಕಳವಳ ಏರ್ಪಡುವ ಸಾಧ್ಯತೆ.

ಮಕರ: ನೌಕರರಿಗೆ ಪರಿಶ್ರಮಕ್ಕೆ ತಕ್ಕ ಪ್ರತಿಫಲ. ವಾಹನ ಖರೀದಿ ಮಾಡುವ ಸಾಧ್ಯತೆ ಸ್ಪಷ್ಟ ಗೋಚರವಾಗುತ್ತಿದೆ. ಅವಿವಾಹಿತರಿಗೆ ಉತ್ತಮ ಸಂಗಾತಿ ಪ್ರಾಪ್ತವಾಗುವ ಸಾಧ್ಯತೆ.

ಕುಂಭ: ವಿದ್ಯಾರ್ಥಿಗಳಿಗೆ ಕ್ರೀಡಾಪಟುಗಳಿಗೆ ಯಶಸ್ಸಿನ ಕಿರೀಟ ಲಭ್ಯವಾಗುವ ಸಾಧ್ಯತೆ. ರಾಜಕೀಯದಲ್ಲಿರುವವರಿಗೆ ಸೂಕ್ತ ಸ್ಥಾನಮಾನ ದೊರಕಲಿದೆ. ಸಂತಾನ ಪ್ರಾಪ್ತವಾಗುವ ಸೂಚನೆಗಳು ಕಂಡುಬರುವವು.

ಮೀನ: ವೈದ್ಯಕೀಯ ರಂಗದಲ್ಲಿರುವವರಿಗೆ ಯಶಸ್ಸಿನೊಂದಿಗೆ ಹೆಚ್ಚಿನ ಲಾಭವೂ ಪ್ರಾಪ್ತವಾಗುವುದು. ನೌಕರವರ್ಗದವರಿಗೆ ಮುಂಬಡ್ತಿ ಅಥವಾ ಸ್ಥಾನ ಬದಲಾವಣೆಯಾಗುವ ಸಾಧ್ಯತೆ. ಗುತ್ತಿಗೆದಾರರಿಗೆ ಹೆಚ್ಚಿನ ಲಾಭ ದೊರಕಲಿದೆ.

ನಿಮ್ಮ ಜನ್ಮದಿನ 28-ಜುಲೈ ಇಂದು ಅತ್ಯಂತ ಶುಭದಾಯಕವಾಗಿದ್ದು, ಬರಬೇಕಾದ ಬಾಕಿ ಹಣ ಸಕಾಲದಲ್ಲಿ ದೊರೆತು ದೊಡ್ಡ ಪ್ರಮಾಣದ ವ್ಯವಹಾರಕ್ಕೆ ಅನುಕೂಲವಾಗುವುದು. ಪ್ರಯಾಣ ಅನುಕೂಲಕರವೆನಿಸಲಿದೆ. ಮನೆ, ನಿರ್ಮಾಣ ಗುತ್ತಿಗೆದಾರರಿಗೆ ಹೆಚ್ಚಿನ ಆದಾಯ ಹಾಗೂ ನೂತನ ಗುತ್ತಿಗೆಗಳು ದೊರೆತು ವ್ಯವಹಾರದ ವಿಸ್ತರಣೆಯ ಸಾಧ್ಯತೆ.

ಪದಬಂಧ 4671

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪ್ರತಿ ದಿನವೂ ಕ್ಲುಪ್ತ ಕಾಲದಲ್ಲಿ ನಡೆಯ ಬೇಕಾದ ಕರ್ಮ (3)
6.ದಾರಿಯಲ್ಲೇ ಹೊತ್ತುಕೊಂಡ ಹೊಣೆಗಾರಿಕೆ (5)
7.ದ್ರವ ಒಸರುವ ಜಿಹ್ವೆ (3)
10.ಕೂಗಾಡಿ ಗಂಟಲು ಒಣಗಿಸಿಕೊಳ್ಳುವುದು (5)
15.ಪತಿಗೆ ಬಂದಿರುವ ಪೀಕಲಾಟ! (3)
16.ಈತ ದಾರಿ ತೋರುವವನು (5)
17.ಕವಿ ಬರೆದ ಪದ್ಯ (3)

ಮೇಲಿಂದ ಕೆಳಕ್ಕೆ
1.ಒಡವೆ ಇಲ್ಲದೆ (4)
2.ಕದದ ಹತ್ತಿರ ನಡೆದ ಕಾಳಗ (3)
3.ಮಜವಾಗಿ ಕಾಣುತ್ತಿರುವ ಹಂತ (3)
4.ವಿಶ್ವಾಸವನ್ನು ಈ ರೀತಿ ತೋರಿಸಿ! (3)
5.ಹಾದಿಯಲ್ಲಿ ಹೋಗುವವನು (4)
8.ಕಂಠಪಾಠ ಮಾಡಿ ಹೇಳುವುದು (3)
9.ಗಣಪತಿಯ ವಾಹನ (3)
11.ಮಾನವನ್ನು ಹೊಂದಿದ ಒಡೆಯ (4)
12.ಈತ ಬುದ್ಧಿ ಇಲ್ಲದವನು (4)
13.ಜರಡಿ ಇಲ್ಲಿದೆ (3)
14.ಕಣದ ಹತ್ತಿರವಿರುವ ಬಳೆ (3)
15.ಹಣ್ಣಿನೊಡನಿರಿಸಿದ ಗುರಾಣಿ (3)



4670ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮರ್ತ್ಯ 3.ಜ್ಞಾನಿ 5.ಹಯ್ಯಂಗವೀನ 6.ಗಡವ 7.ಜಳಕ 8.ದಳ್ಳಾಳಿತನ 9.ವಿಧಾನ 10.ನಾಸ್ತಿಕ 13.ಪಾರಿತೋಷಕ 14.ನೆಪ 15. ಮಚ್ಚು

ಮೇಲಿಂದ ಕೆಳಕ್ಕೆ: 1.ಮಲರೋಗ 2.ಜಾಗರ 4.ನಿರರ್ಥಕ 5.ಹಯವದನ 7.ಜನನಾಯಕ 9.ವಿಜ್ಞಾಪನೆ 11.ಕಲಗಚ್ಚು 12.ಸಂತೋಷ

ಸುಡೊಕು 5057

	4			2		7		3
6		9	5		7			
	3			8		6		
	7			9			3	
	9	3	6					4
4				5		8		
7			8		9			
	5						8	
	8			4		9		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5056 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀ|| ಎಲ್.ಟಿ.ಕಾರ್ಲೆ
(ಮಾಜಿ-ಎಂ.ಎಲ್.ಸಿ)

ನಿಮ್ಮ ಆದರ್ಶ ಜೀವನ ನಮಗೆ
ಎಂದೆಂದೂ ಮಾರ್ಗದರ್ಶಕ, ನಿಮ್ಮ ನೆನಪು
ನಮಗೆ ಸದಾ ಹಸಿರು ಮತ್ತು ಸ್ಫೂರ್ತಿದಾಯಕ.

ಸದಾ ಸ್ಮರಿಸುವ
ಕುಟುಂಬ ವರ್ಗದವರು

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಬಿ.ವಿ.ಪಿಳ್ಳಮ್ಮ (80)ವರ್ಷ
ನಂ.207, ಕುಂಬಾರಪೇಟೆ, ಬೆಂಗಳೂರು.
ಇವರು ದಿನಾಂಕ : 27.07.2021 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಇವರ ಅಂತ್ಯಕ್ರಿಯೆಯನ್ನು ದಿನಾಂಕ: 28.07.2021 ರಂದು ಮಧ್ಯಾಹ್ನ 12:00 ಗಂಟೆಗೆ ಚಾಮರಾಜಪೇಟೆ T R Mill ಚಿತಾಗಾರದಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು
ಗಿರೀಶ್ ಮತ್ತು ಹೆಣ್ಣು ಮಕ್ಕಳು,
ಅಳಿಯಂದಿರು ಮತ್ತು ಮೊಮ್ಮಕ್ಕಳು.
ಫೋನ್: 9945990099 / 9900123459

ಚಿರಸ್ಮರಣೆ

ಶ್ರೀಮತಿ. ಶಾಂತಮ್ಮ
ಇವರು ನಮ್ಮನ್ನಗಲಿ ಇಂದಿಗೆ 28 ವರ್ಷವಾಯಿತು.
ಪತಿ - ಬಿ.ರಾಮಕೃಷ್ಣ ರೆಡ್ಡಿ
Suptd (Retd) State Intelligence.
ಸಹೋದರರು, ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.
ವಿಳಾಸ:ನೊಸೆನೂರು ಗ್ರಾಮ. ಜಿಗಣಿ ಹೋಬಳಿ ಆನೇಕಲ್ ತಾಲ್ಲೂಕು. Mob.98451 26442.

LOOKING FOR JOB OPPORTUNITY
Refer Classifieds on Wednesday

ಷೇರುಪೇಟೆ ವಹಿವಾಟು 273



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,824
ಇಂದಿನ ಅಂತ್ಯ	15,746
▼	78
ದಿನದ ಕನಿಷ್ಠ	15,701

ವಿನಿಮಯ ದರ

$ ಡಾಲರ್	74.47
£ ಪೌಂಡ್	102.59
€ ಯೂರೊ	87.73
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹500

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1480 (1480)
ಸೋಯಾ (ರಿಫೈನ್ಡ್)	₹1410 (1410)
ಸೂರ್ಯಕಾಂತಿ (ರಿಫೈನ್ಡ್)	₹1480(1480)
ಪಾಮೋಲಿನ್	₹1260 (1250)

ಕರ್ನಾಟಕ ಬ್ಯಾಂಕ್‌ಗೆ ₹ 106 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ಣಾಟಕ ಬ್ಯಾಂಕ್ ಪ್ರಸಕ್ತ ವರ್ಷದ ಮೊದಲ ತ್ರೈಮಾಸಿಕದ ಅಂತ್ಯಕ್ಕೆ ₹ 106.08 ಕೋಟಿ ನಿವ್ವಳ ಲಾಭವನ್ನು ಘೋಷಿಸಿದೆ.

ಮಾರ್ಚ್ 31ಕ್ಕೆ ಕೊನೆಗೊಂಡ ಈ ಹಿಂದಿನ ತ್ರೈಮಾಸಿಕದ ಅಂತ್ಯಕ್ಕೆ ₹ 31.36 ಕೋಟಿ ಲಾಭ ದಾಖಲಿಸಿತ್ತು. ಪ್ರಸಕ್ತ ವರ್ಷದ ಮೊದಲ ತ್ರೈಮಾಸಿಕ-ದಲ್ಲಿ ಬ್ಯಾಂಕ್ ಶೇ 238.26 ಬೆಳವಣಿಗೆ ಸಾಧಿಸಿದಂತಾಗಿದೆ.

ಬ್ಯಾಂಕಿನ ಪ್ರಧಾನ ಕಚೇರಿಯಲ್ಲಿ ವೆಬೆಕ್ಸ್ ಮೂಲಕ ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ಮೊದಲ ತ್ರೈಮಾಸಿಕದ ಹಣಕಾಸು ವರದಿಯನ್ನು ಅಂಗೀಕರಿಸಲಾಯಿತು.

ನಿರ್ವಹಣಾ ಲಾಭವು ₹ 414.22 ಕೋಟಿ ತಲುಪಿದ್ದು, ಶೇ 7.96ರ ವೃದ್ಧಿ ದಾಖಲಿಸಿದೆ. ನಿವ್ವಳ ಬಡ್ಡಿ ಆದಾಯವು ₹ 574.79 ಕೋಟಿಯಾಗಿದ್ದು, ಶೇ 25.19ರಷ್ಟು ಪ್ರಗತಿ ಸಾಧಿಸಿದೆ. ಬ್ಯಾಂಕಿನ ಒಟ್ಟು ವ್ಯವಹಾರವು ₹1.28 ಲಕ್ಷ ಕೋಟಿಗೆ ತಲುಪಿದ್ದು, ಠೇವಣಿಗಳ ಮೊತ್ತವು ₹76,214.78 ಕೋಟಿಯಾಗಿದೆ. ₹ 51,791.21 ಕೋಟಿ ಮುಂಗಡ ನೀಡಲಾಗಿದೆ.

‘ಮುಂಬರುವ ತ್ರೈಮಾಸಿಕದಲ್ಲಿ ಬ್ಯಾಂಕಿನ ಮೂಲ ವ್ಯವಹಾರಗಳು ಮತ್ತಷ್ಟು ಗಟ್ಟಿಗೊಳ್ಳಲಿವೆ’ ಎಂದು ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ, ಸಿಇಒ ಮಹಾಬಲೇಶ್ವರ ಎಂ.ಎಸ್. ತಿಳಿಸಿದ್ದಾರೆ.

ಕೋವಿಡ್ ಸಾಂಕ್ರಾಮಿಕದ ಎರಡನೆಯ ಅಲೆ ಪರಿಣಾಮ

ಜಿಡಿಪಿ: ಅಂದಾಜು ತಗ್ಗಿಸಿದ ಐಎಂಎಫ್

ವಾಷಿಂಗ್ಟನ್ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆ ದರವು ಶೇಕಡ 9.5ರಷ್ಟು ಇರಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಅಂದಾಜಿಸಿದೆ. ಕೋವಿಡ್‌ನ ಎರಡನೆಯ ಅಲೆ ಅಪ್ಪಳಿಸುವುದಕ್ಕೂ ಮೊದಲು ಐಎಂಎಫ್, ಭಾರತದ ಜಿಡಿಪಿ ಈ ವರ್ಷದಲ್ಲಿ ಶೇ 12.5ರಷ್ಟು ಬೆಳವಣಿಗೆ ಸಾಧಿಸಬಹುದು ಎಂದು ಅಂದಾಜು ಮಾಡಿತ್ತು.

2022-23ರಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 8.5ರಷ್ಟು ಇರಬಹುದು ಎಂದು ಐಎಂಎಫ್ ಅಂದಾಜಿಸಿದೆ. ‘ಮಾರ್ಚ್‌ನಿಂದ ಮೇ ತಿಂಗಳವರೆಗೆ ಇದ್ದ ಎರಡನೆಯ ಅಲೆಯ ತೀವ್ರತೆಯ ಕಾರಣದಿಂದಾಗಿ ಭಾರತದ ಜಿಡಿಪಿ ಬೆಳವಣಿಗೆ ಅಂದಾಜನ್ನು ಇಳಿಕೆ ಮಾಡಲಾಗಿದೆ’ ಎಂದು ಸಂಸ್ಥೆಯು ವಿಶ್ವ ಆರ್ಥಿಕ ಮುನ್ನೋಟ ವರದಿಯಲ್ಲಿ ಹೇಳಿದೆ.

ಜಾಗತಿಕ ಮಟ್ಟದ ಹಲವು ಸಂಸ್ಥೆಗಳು ಭಾರತದ ಜಿಡಿಪಿ ಬೆಳವಣಿಗೆ ದರವನ್ನು ತಗ್ಗಿಸಿವೆ. ಈ ಸಂಸ್ಥೆಗಳ ಸಾಲಿಗೆ ಈಗ ಐಎಂಎಫ್ ಕೂಡ ಸೇರಿಕೊಂಡಿದೆ.

ಹಿಂದಿನ ತಿಂಗಳಿನಲ್ಲಿ, ಎಸ್‌ಆ್ಯಂಡ್‌ಪಿ ಕೂಡ ಭಾರತದ ಜಿಡಿಪಿ ಬೆಳವಣಿಗೆ ದರ ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 9.5ರಷ್ಟು ಇರಲಿದೆ ಎಂದು ಅಂದಾಜು ಮಾಡಿತ್ತು.

ವಿಶ್ವ ಬ್ಯಾಂಕ್ ಅಂದಾಜಿನ ಪ್ರಕಾರ ದೇಶವು ಈ ಹಣಕಾಸು ವರ್ಷದಲ್ಲಿ ಶೇ 8.3ರಷ್ಟು ಬೆಳವಣಿಗೆ ಕಾಣಲಿದೆ. ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನ (ಎಡಿಬಿ) ಅಂದಾಜಿನ ಪ್ರಕಾರ ಆರ್ಥಿಕ ಬೆಳವಣಿಗೆ ದರವು ಶೇ 10ರಷ್ಟು ಇರಲಿದೆ. ಈ ಮೊದಲು ಎಡಿಬಿ, ಬೆಳವಣಿಗೆ ದರವು ಶೇ 11ರಷ್ಟು ಇರಲಿದೆ ಎಂದು ಹೇಳಿತ್ತು. ಅಮೆರಿಕದ ರೇಟಿಂಗ್ಸ್ ಸಂಸ್ಥೆಯಾಗಿರುವ ಮೂಡಿಸ್, ಜಿಡಿಪಿ ಬೆಳವಣಿಗೆ ಶೇ 9.3ರಷ್ಟು ಇರಲಿದೆ ಎಂದು ಅಂದಾಜು ಮಾಡಿದೆ.

ಕೆನರಾ ಬ್ಯಾಂಕ್ ಲಾಭ ಮೂರುಪಟ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್‌ನ ನಿವ್ವಳ ಲಾಭವು ಹಿಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ ಈ ಬಾರಿ ಮೂರುಪಟ್ಟು ಹೆಚ್ಚಾಗಿದೆ.

ಬ್ಯಾಂಕ್‌ನ ನಿವ್ವಳ ಲಾಭವು ಹಿಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 406 ಕೋಟಿ ಆಗಿತ್ತು. ಇದು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 1,177 ಕೋಟಿಗೆ ಏರಿಕೆ ಕಂಡಿದೆ. ಒಟ್ಟಾರೆ ವರಮಾನವು ₹ 20,685 ಕೋಟಿಯಿಂದ ₹ 21,210 ಕೋಟಿಗೆ ಏರಿಕೆ ಕಂಡಿದೆ.

ವರ್ಚುವಲ್ ಸುದ್ದಿಗೋಷ್ಠಿ ನಡೆಸಿದ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಎಲ್.ವಿ. ಪ್ರಭಾಕರ್, ‘ಬ್ಯಾಂಕ್‌ನ ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು ಶೇಕಡ 8.84ರಿಂದ ಶೇ 8.50ಕ್ಕೆ ಇಳಿಕೆ ಕಂಡಿದೆ. ನಿವ್ವಳ ಎನ್‌ಪಿಎ ಶೇ 3.95ರಿಂದ ಶೇ 3.46ಕ್ಕೆ ಇಳಿಕೆಯಾಗಿದೆ’ ಎಂದು ಮಾಹಿತಿ ನೀಡಿದರು.

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ರಾಮೇಗೌಡ, ಮಂಡ್ಯ

- **ಪ್ರಶ್ನೆ: ನಾನು ರೈತ. ವಯಸ್ಸು 77 ವರ್ಷ. ಮೂವರು ಗಂಡು, ಇಬ್ಬರು ಹೆಣ್ಣು ಮಕ್ಕಳು. ಎಲ್ಲರಿಗೂ ಮದುವೆಯಾಗಿದೆ. ನಮಗೆ ಉತ್ತಮ ನೀರಾವರಿಯ 4 ಎಕರೆ 7 ಗುಂಟೆ ಜಮೀನಿದೆ. ನನ್ನ ಮೂವರು ಮಕ್ಕಳು ಬೆಂಗಳೂರಿನಲ್ಲಿ ನೆಲೆಸಿರುತ್ತಾರೆ. ನನ್ನ ಇಳಿಯವಸ್ಸಿನಲ್ಲಿ ವ್ಯವಸಾಯ ಮಾಡುವುದು ಕಷ್ಟ. ಈ ಜಮೀನು ಮಾರಾಟ ಮಾಡಿದರೆ ಸುಮಾರು ಎರಡು ಕೋಟಿ ರೂಪಾಯಿ ಸಿಗಬಹುದು. ನಮ್ಮದು ಪಿತ್ರಾರ್ಜಿತ ಆಸ್ತಿ. ಮಾರಾಟ ಮಾಡಿದರೆ ಹೆಣ್ಣು ಮಕ್ಕಳಿಗೂ ಒಂದು ಅಂಶ ಕೊಡಬೇಕಾಗುತ್ತದೆ ಎನ್ನುತ್ತಾರೆ. ಕೆಲವರು, ‘ಕೃಷಿ ಜಮೀನು ಮಾರಾಟದಿಂದ ತೆರಿಗೆ ಬರುವುದಿಲ್ಲ’ ಎನ್ನುತ್ತಾರೆ. ತೆರಿಗೆ ಬರುವುದಾದರೆ ತೆರಿಗೆ ಹೇಗೆ ಉಳಿಸಬಹುದು? ಎಲ್ಲಿ ಹಣ ತೊಡಗಿಸಬಹುದು? ಹಣ ಹೂಡಲು ಎಷ್ಟು ಸಮಯದ ಅವಕಾಶ ದೊರೆಯುತ್ತದೆ?**

ಉತ್ತರ: ನಿಮ್ಮ ಜಮೀನು ಮಂಡ್ಯಕ್ಕೆ ಸಮೀಪದಲ್ಲಿ ಇರುವುದರಿಂದ ಕೃಷಿ ಜಮೀನಾದರೂ ಬಂಡವಾಳವೃದ್ಧಿ ತೆರಿಗೆ ಬರುತ್ತದೆ. ನಿಮ್ಮದು ಪಿತ್ರಾರ್ಜಿತ ಆಸ್ತಿಯಾದ್ದರಿಂದ ನಿಮಗೂ ನಿಮ್ಮ ಐದು ಜನ ಮಕ್ಕಳಿಗೂ ಜಮೀನಿನಲ್ಲಿ ಸಮಾನ ಹಕ್ಕು ಇರುತ್ತದೆ. ಜಮೀನು ಮಾರಾಟ ಮಾಡಿ ಬರುವ ಹಣವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ), ಗ್ರಾಮೀಣ ವಿದ್ಯುದೀಕರಣ (ಆರ್‌ಇಸಿ) ಬಾಂಡ್‌ಗಳಲ್ಲಿ ಅವರವರ ಹೆಸರಿನಲ್ಲಿ ಇರಿಸಿದರೆ ಬಂಡವಾಳ ವೃದ್ಧಿ ತೆರಿಗೆಯಿಂದ ಸಂಪೂರ್ಣ ವಿನಾಯಿತಿ ಪಡೆಯಬಹುದು. ಜಮೀನು ಮಾರಾಟ ಮಾಡಿದ ತಾರೀಕಿನಿಂದ ಆರು ತಿಂಗಳ ಒಳಗಾಗಿ ಅಥವಾ ರಿಟರ್ನ್ಸ್ ತುಂಬುವ ತಾರೀಕು ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯೊಳಗೆ ಸರ್ಕಾರಿ ಬಾಂಡ್‌ನಲ್ಲಿ ತೊಡಗಿಸಿದರೆ ಮಾತ್ರ ತೆರಿಗೆ ಉಳಿಸಬಹುದು. ಸಾಧ್ಯವಾದರೆ ಜಮೀನು ಉಳಿಸಿಕೊಳ್ಳಿ ಅಥವಾ ನಿಮ್ಮ ಮಕ್ಕಳಲ್ಲಿ ಯಾರಾದರೂ ಕೊಂಡು ಇತರರಿಗೆ ಹಣ ವಿತರಿಸಲಿ. ಭೂಮಿ ನಿಮ್ಮ ಕುಟುಂಬದಲ್ಲೇ ಉಳಿಯಲಿ ಎನ್ನುವುದು ನನ್ನ ಅಭಿಮತ.

ಮಹಂತೇಶ ರಾಚಪ್ಪ ಬೆಲ್ಲದ, ಬಾಗಲಕೋಟೆ

- **ಪ್ರಶ್ನೆ: ನನ್ನ ವಯಸ್ಸು 67 ವರ್ಷ. ನನ್ನ ಹೆಂಡತಿ ವಯಸ್ಸು 62 ವರ್ಷ. ನಮ್ಮದು ಕಿರಾಣಿ ವ್ಯಾಪಾರ. ನಮಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ ಓರ್ವ ಮಗ. ಎಲ್ಲರಿಗೂ ಮದುವೆಯಾಗಿದೆ. ಮಗ ನಮ್ಮೊಡನೆ ಕಿರಾಣಿ ಅಂಗಡಿಯಲ್ಲಿ ದುಡಿಯುತ್ತಾನೆ. ನಮಗೆ ಸ್ವಂತ ಮನೆ ಇದೆ ಹಾಗೂ ಎರಡು ಮನೆಗಳಿಂದ ತಿಂಗಳಿಗೆ ₹ 20 ಸಾವಿರ ಬಾಡಿಗೆ ಬರುತ್ತದೆ. ಎಲ್ಲವೂ ಸ್ವಯಾರ್ಜಿತ. ವ್ಯಾಪಾರದಿಂದ ತಿಂಗಳಿಗೆ ಖರ್ಚು ಹೋಗಿ ₹ 25 ಸಾವಿರದಿಂದ ₹ 30 ಸಾವಿರ ಉಳಿಯುತ್ತದೆ. ತೆರಿಗೆ ಹಾಗೂ ಹಣ ಉಳಿಸಲು ಮಾರ್ಗದರ್ಶನ ಮಾಡಿ.**

ಉತ್ತರ: ವ್ಯಾಪಾರ ಹಾಗೂ ಬಾಡಿಗೆಯಿಂದ ಬರುವ ವರಮಾನಕ್ಕೆ ಆದಾಯ ತೆರಿಗೆ ಇರುತ್ತದೆ. ಬಾಡಿಗೆಯಲ್ಲಿ ಸೆಕ್ಷನ್ 24(ಎ) ಆಧಾರದ ಮೇಲೆ ಶೇ 30ರಷ್ಟು ಕಳೆದು ತೆರಿಗೆ ಸಲ್ಲಿಸಬಹುದು. ನಿಮಗೊಂದು ಸಲಹೆ. ನೀವು, ನಿಮ್ಮ ಮಗ ಸೇರಿ ಪಾರ್ಟ್ನರ್‌ಶಿಪ್ ಫರ್ಮ್ ಮಾಡಿಕೊಳ್ಳಿ. ಇದರಿಂದ ನೀವಿಬ್ಬರೂ ತೆರಿಗೆಗೆ ಒಳಗಾಗದಿರಬಹುದು. ಈ ಕುರಿತು ನಿಮ್ಮ ಸಮೀಪದ ತೆರಿಗೆ ಸಲಹೆಗಾರರು ಅಥವಾ ಲೆಕ್ಕಪರಿಶೋಧಕರ ಬಳಿ ವಿಚಾರಿಸಿ. ನೀವು ಉಳಿಸಬಹುದಾದ ಹಣದಲ್ಲಿ ಕನಿಷ್ಠ ತಲಾ ₹ 5 ಸಾವಿರವನ್ನು ನೀವು, ನಿಮ್ಮ ಹೆಂಡತಿ ಹಾಗೂ ಮಗ 10 ವರ್ಷಗಳ ಆರ್.ಡಿ. ಮಾಡಿರಿ. 10 ವರ್ಷ ಮುಗಿಯುತ್ತಲೇ ತಲಾ ₹ 8 ಲಕ್ಷ ಪಡೆಯುವಿರಿ. ನಿಮ್ಮ ಸ್ಥಿರ ಆಸ್ತಿ ವಿಚಾರದಲ್ಲಿ ವಕೀಲರನ್ನು ವಿಚಾರಿಸಿ ನೀವು ಇಚ್ಛಿಸುವಂತೆ ಮಕ್ಕಳಿಗೆ ಉಯಿಲು ಬರೆದಿಡಿ.

ರಮೇಶ್ ಕುಲಕರ್ಣಿ, ಧಾರವಾಡ

- **ಪ್ರಶ್ನೆ: ನಾನು ಹಿರಿಯ ನಾಗರಿಕ. ವಯಸ್ಸು 72 ವರ್ಷ. ನಾನು ಪಿಂಚಣಿದಾರನಲ್ಲ. ನನಗೆ ವಾರ್ಷಿಕ ₹ 2,42,532 ಬ್ಯಾಂಕ್ ಠೇವಣಿಯಿಂದ ಬಡ್ಡಿ ಬರುತ್ತದೆ. ಬಡ್ಡಿ ವರಮಾನ ಹೊರತುಪಡಿಸಿ ಬೇರೆ ಆದಾಯ ಇಲ್ಲ. ನಾನು ನಮ್ಮ ಬ್ಯಾಂಕ್‌ಗೆ 15ಎಚ್ ಸಲ್ಲಿಸಲು ಹೋದಾಗ, ಅವರು ಸ್ವೀಕರಿಸಲು ಸಾಧ್ಯವಿಲ್ಲ ಎಂದರು. ಈಗಾಗಲೇ ಟಿಡಿಎಸ್ ಕೂಡಾ ಮಾಡಿರುತ್ತಾರೆ. ಇದು ಸರಿಯೆ? ಕಾನೂನು ಏನು ಹೇಳುತ್ತದೆ?**

ಉತ್ತರ: 15ಜಿ ಹಾಗೂ 15ಎಚ್ ಫಾರಂಗಳ ಉದ್ದೇಶವೇ ಬ್ಯಾಂಕ್‌ನವರು ಠೇವಣಿ ವರಮಾನದ ಮೇಲೆ ಶೇ 10ರಷ್ಟು ಟಿಡಿಎಸ್ ಮಾಡಬಾರದು ಎಂಬುದು. ಆದರೆ ಠೇವಣಿದಾರರಿಗೆ ತುಂಬಾ ಆದಾಯವಿದ್ದು ತೆರಿಗೆಗೆ ಒಳಗಾದಲ್ಲಿ ತೆರಿಗೆ ಮುರಿಯದಂತೆ 15ಎಚ್-15ಜಿ ಕೊಡಲು ಅವಕಾಶವಿಲ್ಲ. ನಿಮ್ಮ ಆದಾಯವು ₹ 3 ಲಕ್ಷದೊಳಗೆ ಇರುವುದರಿಂದ ತೆರಿಗೆ ಕೊಡುವ ಮತ್ತು ರಿಟರ್ನ್ಸ್ ತುಂಬುವ ಅಗತ್ಯವೂ ಇಲ್ಲ. ಬ್ಯಾಂಕ್‌ನವರು ಟಿಡಿಎಸ್ ಮಾಡುವ ಅಗತ್ಯವೂ ಇರಲಿಲ್ಲ. ಆದರೆ, ಬ್ಯಾಂಕ್‌ನವರು ಟಿಡಿಎಸ್ ಮಾಡಿದ ಕಾರಣ, ಆ ಹಣವನ್ನು ಮರಳಿ ಪಡೆಯಬೇಕಾದರೆ ನೀವು ರಿಟರ್ನ್ಸ್ ತುಂಬಬೇಕು. ₹ 3 ಲಕ್ಷ ಬಡ್ಡಿ ವರಮಾನ ಬರುವ ತನಕವೂ ರಿಟರ್ನ್ಸ್ ಸಲ್ಲಿಸುವ ಅಗತ್ಯ ಇಲ್ಲ. ಹಿರಿಯ ನಾಗರಿಕರಾದ್ದರಿಂದ ಸೆಕ್ಷನ್ 80ಟಿಟಿಬಿ ಆಧಾರದ ಮೇಲೆ ಬಡ್ಡಿ ವರಮಾನದಲ್ಲಿ ಕೂಡಾ ₹ 50 ಸಾವಿರ ವಿನಾಯಿತಿ ಇದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	385
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-43000
ಹಳತು	42500-52000
ಪುತ್ತೂರು	
ಕೋಕ	9500-25000
ಹೊಸತು	31000-44000
ಯಲ್ಲಾಪುರ	
ಬಿಳಿಗೋಟು	26099-33299
ಕೋಕ	20099-31899
ಚಾಲಿ	35569-39609
ಕೆಂಪುಗೋಟು	22051-30369
ರಾಶಿ	38899-41299
ತಟ್ಟಿಬೆಟ್ಟೆ	31089-37099
ಶಿರಸಿ	
ಬೆಟ್ಟೆ	26611-39021
ಬಿಳಿಗೋಟು	23299-36166
ಚಾಲಿ	37441-41011
ರಾಶಿ	26199-41799
ಯಲ್ಲಾಪುರ	
ಬಿಳಿಗೋಟು	28899-34199
ಕೋಕ	24899-31299
ಚಾಲಿ	34899-41111
ಕೆಂಪುಗೋಟು	29269-32516
ರಾಶಿ	39650-44799
ತಟ್ಟಿಬೆಟ್ಟೆ	34019-38869
ಶಿವಮೊಗ್ಗ (ಎಪಿಎಂಸಿ)	
ಬೆಟ್ಟೆ	30726-31939
ರಾಶಿ	36099-42119
ಸರಕು	48000-74210
ಸಾಗರ	
ಬಿಳಿಗೋಟು	30726-31939
ಕೋಕ	33919-33919
ಚಾಲಿ	36299-37829
ಕೆಂಪುಗೋಟು	33309-35299
ರಾಶಿ	37569-41859
ಸಿಪ್ಪೆಗೋಟು	18309-21800
ರಾಮನಗರ ರೇಷ್ಮೆ	
ಮಿಶ್ರತಳಿ	249-441
ದ್ವಿತಳಿ	231-518

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14450	13300	13100	207.90ಸೆಂಟ್ಸ್
ಎಸಿ	5940	5000	5300	
ಆರ್‌ಪಿ	6575	6200	6200	
ಆರ್‌ಸಿ	3485	3500	3575	1964 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

27-7-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9150-9200
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1490)
ಒಂದು ವಾರದ ಡೆಲಿವರಿ	1485 (1485)
ಸೋಯಾ ಕಚ್ಚಾ	1380 (1370)
ಪಾಮ್ ವಾರದ ಡೆಲಿವರಿ	1258 (1245)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1390)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,450 (47,650)
ಬೆಳ್ಳಿ ಕೆ.ಜಿ 66,950 (67,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಅಂತರ ಕಾಯ್ದುಕೊಳ್ಳಿ

ಬೆಳಗಾವಿಯಿಂದ ದೆಹಲಿಗೆ ನೇರ ವಿಮಾನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿಯಿಂದ ದೆಹಲಿಗೆ ನೇರ ವಿಮಾನ ಸೌಲಭ್ಯವು ಆಗಸ್ಟ್ 13ರಿಂದ ಶುರುವಾಗಲಿದೆ. ಸ್ಪೈಸ್ ಜೆಟ್ ಕಂಪನಿಯು ಬೆಳಗಾವಿ-ದೆಹಲಿ-ಲೇಹ್‌ಗೆ ವಿಮಾನಯಾನ ಸೇವೆ ಒದಗಿಸಲಿದೆ.

149 ಆಸನಗಳ ವಿಮಾನವು ಆರಂಭದಲ್ಲಿ ಪ್ರತಿ ಸೋಮವಾರ ಮತ್ತು ಶುಕ್ರವಾರ ಕಾರ್ಯಾಚರಿಸಲಿದೆ. ಸಂಜೆ 5.05ಕ್ಕೆ ಸಾಂಬ್ರಾದಿಂದ ದೆಹಲಿಗೆ ತೆರಳುತ್ತದೆ.

‘ದೆಹಲಿ-ಬೆಳಗಾವಿ ನಡುವೆ ವಿಮಾನಯಾನ ಪ್ರಾರಂಭ ಆಗಬೇಕು ಎನ್ನುವುದು ಇಲ್ಲಿನ ಜನರ ಬಯಕೆಯಾಗಿತ್ತು. ಅದರಂತೆ, ರೈಲ್ವೆ ಖಾತೆ ರಾಜ್ಯ ಸಚಿವರಾಗಿದ್ದ ಸುರೇಶ ಅಂಗಡಿ ಅವರು ಹಿಂದೆ ವಿಮಾನಯಾನ ಸಚಿವರಾಗಿದ್ದ ಹರದೀಪ್‌ಸಿಂಗ್ ಪುರಿ ಅವರನ್ನು ಒತ್ತಾಯಿಸಿದ್ದರು. ಈಗ ಸಾಂಬ್ರಾ ನಿಲ್ದಾಣವು ದೇಶದ 12 ನಗರಗಳೊಂದಿಗೆ ನೇರ ವಿಮಾನ ಸಂಪರ್ಕ ಹೊಂದಿದಂತಾಗಿದೆ’ ಎಂದು ಸಂಸದೆ ಮಂಗಲಾ ಸುರೇಶ ಅಂಗಡಿ ಹೇಳಿದ್ದಾರೆ.

ಆಹಾರ ಸಂಸ್ಕರಣಾ ವಲಯ: ಎಫ್‌ಡಿಐ ಶೇ 57ರಷ್ಟು ಇಳಿಕೆ

ನವದೆಹಲಿ (ಪಿಟಿಐ): ದೇಶದ ಆಹಾರ ಸಂಸ್ಕರಣಾ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯು (ಎಫ್‌ಡಿಐ) 2019-20ಕ್ಕೆ ಹೋಲಿಸಿದರೆ 2020-21ರಲ್ಲಿ ಶೇ 57ರಷ್ಟು ಕಡಿಮೆ ಆಗಿದ್ದು, ₹ 2,926 ಕೋಟಿಗಳಷ್ಟಾಗಿದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ತಿಳಿಸಿದೆ.

2019-20ರಲ್ಲಿ ಈ ವಲಯದಲ್ಲಿ ಎಫ್‌ಡಿಐ ₹ 6,694 ಕೋಟಿ ಆಗಿತ್ತು. ಆಹಾರ ಸಂಸ್ಕರಣಾ ಉದ್ಯಮಗಳ ರಾಜ್ಯ ಸಚಿವ ಪ್ರಹ್ಲಾದ್ ಸಿಂಗ್ ಪಟೇಲ್ ಅವರು ಈ ಕುರಿತು ಲೋಕಸಭೆಗೆ ಮಾಹಿತಿ ನೀಡಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

100%ಬಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) ಬೆಂಗಳೂರಿನ Private Limitedಕಂಪನಿಗಳಲ್ಲಿ ಕೆಲಸಮಾಡಲು7th,SSLC,PUC, Degree,Diploma, ITI,BE(Pass/fail) ಆದಂತಹವರು 1684ಯುವಕರು ಪರ್ಮನೆಂಟ್ ಹುದ್ದೆಗಳಿಗೆ ತಕ್ಷಣ ಬೇಕಾಗಿದ್ದಾರೆ(ವಿದ್ಯಾರ್ಹತೆಯಿಲ್ಲದವರೂ) ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 13,615-24,815/- ಸಂಪರ್ಕಿಸಿ:9900917474, 9900476464

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

WORK FROM Home MNC jobs 18-30 yrs IIPUC or above Anudip Foundation 6292248583 7605058338

ವಿಡಿಯೋಕಾನ್, TVS, ಟಯೋಟ, ಬ್ರಿಟಾನಿಯಾ ಕಂಪನಿಗಳಿಗೆ SSLC, PUC, ITI ನವರು ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ ಸಂಬಳ: 16,600-56,000/- ವಸತಿಯೂಟವಿದೆ. 9611715755

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು ನೇರನೇಮಕಾತಿ 16,800-56,000/- ವಸತಿಯೂಟವಿದೆ. 7204853296, 7204396011

ತಕ್ಷಣ ಬೇಕಾಗಿದ್ದಾರೆ MNCಕಂಪನಿಗಳಿಗೆ SSLC,PUC,ITI Diplomaದವರು ಕೆಲಸಕ್ಕೆ ಬೇಕಾಗಿದ್ದಾರೆ ಉಚಿತ ವಸತಿಯೂಟದೊಂದಿಗೆ ಸಂಬಳ: 15,800 to 45000/- .8904170684, 8884435270

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800- 45000/-. 9980295449, 9902839010

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಹೊಸದಾಗಿ ತೆರೆಯಲ್ಪಡುತ್ತಿರುವ Pvt. Ltd. ಕಂಪನಿಗೆ ಆಫೀಸ್ ಕೆಲಸಕ್ಕಾಗಿ ಯುವತಿಯರು ಬೇಕಾಗಿದ್ದಾರೆ. ಊಟ-ವಸತಿ ಉಚಿತ ಆಕರ್ಷಕ ಸಂಬಳ: 15,000-30,000 (ಯಾವುದೇ ಮಾರ್ಕೆಟಿಂಗ್ ಇಲ್ಲ) ಯಾವುದೇ ಹಣ ಕಟ್ಟುವಂತಿಲ್ಲ (T&C apply) 9110447437

ಬಂದ ದಿನವೇ ಕೆಲಸ (ಮಾರ್ಕೇಟಿಂಗ್‌ಅಲ್ಲ) MNC ಕಂಪನಿಗಳಿಗೆ Primary,SSLC, PUC, ITI, any Degree Pass/Fail. ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI/ PFನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ.15,000 86,000. 7259685221, 7760116548

ಮನೆಯಿಂದಲೆ ಕುಳಿತು ಡಾಟಾ ಎಂಟ್ರಿ ಫಾರಂಫಿಲ್ಲಿಂಗ್ ಬರವಣಿಗೆ Offline. Weekly ಪೇಮೆಂಟ್ಸ್ 3000- 5000. ಸಂಪರ್ಕಿಸಿ: 7624918246, 7259848246.

Marketing & Sales

WANTED EXPERIENCED Sales Managers for Cement, Contact: 9916449766/ 9986696546, acecemex@gmail.com

ರೆಂಟಲ್ ಪ್ರಾಪರ್ಟೀಸ್

Accommodation Available

Paying Guest

PG FOR Ladies ಸ್ತ್ರೀಯರು ಕಡಿಮೆ ವೆಚ್ಚದಲ್ಲಿ ಶಾಂತಿಯಿಂದ ಜೀವಿಸಲು ಅನುಕೂಲಕರವಾದ ಸ್ಥಳ. ಸೇರಲು ಬಯಸುವವರು ಸಂಪರ್ಕಿಸಿ: 8147217487

ವ್ಯಾಪಾರ

Business to Business

Finance

ಸಾಲ ಸೌಲಭ್ಯ. ಕೃಷಿ ಸಾಲ ವ್ಯವಹಾರ ಸಾಲ ವೈಯಕ್ತಿಕ ಸಾಲ ಸ್ಥಿರಾಸ್ತಿ ಸಾಲ ವಿದ್ಯಾ ಸಾಲ ಮಾರ್ಟ್ ಗೇಜ್ ಸಾಲ ವಾರ್ಷಿಕ ಬಡ್ಡಿ ದರ 4% ಸಬ್ಸಿಡಿ 10 ರಿಂದ 30%. ಸಂಪರ್ಕಿಸಿರಿ 9767335494, 7057624634

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಸ್ತ್ರೀವಶೀಕರಣ, ಪುರುಷವಶೀಕರಣ ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

HEALTH SPECIAL

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ

ಲೈಂಗಿಕ ರೋಗಗಳು · ಉದ್ರೇಕದ ಸಮಸ್ಯೆ · ಲೈಂಗಿಕ ನಿರಾಸಕ್ತಿ · ನಿದ್ರಾ ಸ್ಖಲನ · ಶೀಘ್ರ ಸ್ಖಲನ · ಲಿಂಗ ಚಿಕ್ಕದಾಗುವುದು · ನರ ದೌರ್ಬಲ್ಯ · ಅವಧಿಗೆ ಮೊದಲೇ ಸ್ಖಲನ · ಆತಂಕ, ದೌರ್ಬಲ್ಯ · ಕಡಿಮೆ ವೀರ್ಯಾಣು · ಮುಷ್ಠಿ ಮೈಥುನದ ಅಡ್ಡಪರಿಣಾಮ
100% NO SIDE EFFECTS
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

★ಅಂಬಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

★ಉಚಿತ ಭವಿಷ್ಯ★ ಖಚಿತ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ ಇರಲಿ ಸ್ತ್ರೀವಶೀಕರಣ, ಪುರುಷವಶೀಕರಣ ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿದ್ದರು 100% ಶಾಶ್ವತ ಪರಿಹಾರ.ಮಂತ್ರಾಲಯ. ಪಂಡಿತ್.ಸಾಗರ್ ಶರ್ಮ.8217374106

★||ಸಿಗಂದೂರು ಚೌಡೇಶ್ವರಿ||★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★ಶ್ರೀಸಾಯಿಗುರು ಜ್ಯೋತಿಷ್ಯ★ ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಸಂತಾನಭಾಗ್ಯ, ಇನ್ಯಾವುದೇ ಎಲ್ಲಿಯೂ ಪರಿಹಾರ ಕಾಣದ ಎಷ್ಟೇಕಠಿಣವಾದ ಗುಪ್ತಸಮಸ್ಯೆಗಳಿಗೆ100% ಪರಿಹಾರ. 7829724990

ನಿಮ್ಮ ನಿಗೂಢ ಹಾಗೂ ಕಠಿಣ ಸಮಸ್ಯೆಗಳಿಗೆ ಕೇವಲ 1 ಗಂಟೆಯಲ್ಲಿ ಪರಿಹಾರ ಇದು ಚಮತ್ಕಾರ ಅಲ್ಲ. ಸಿದ್ಧಿಸಾಧಕರ ಸಾಧನೆ: 9148244231

ವೈಯಕ್ತಿಕ

Change of Name

ಸಿದ್ಧಾರ್ಥ್ ಅತ್ತಾಪುರ್ ಯಗಾನಗಿಯಾದ ನಾನು ನನ್ನ ಹೆಸರನ್ನು ಸಿದ್ಧಾರ್ಥ್ ಯಗಾನಗಿ ಎಂದು ತಾ. 26 ಜುಲೈ 2021 ರಂದು ನೋಟರಿ ಶ್ರೀ ಎಲ್ ಗೋಪಾಲಕೃಷ್ಣ, ಬೆಂಗಳೂರು ಇವರ ಮುಂದೆ ಪ್ರಮಾಣ ಮಾಡುವುದರ ಮೂಲಕ ಬದಲಾಯಿಸಿ ಕೊಂಡಿದ್ದೇನೆ.

ಪ್ರವಾಸ

Travel

7-8-2021 ಸಿಗಂದೂರು 7-8-2021 ಆತ್ಮಲಿಂಗದರ್ಶನ. 13-8-2021 ಹೊನ್ನಾವರ, ಜೋಗ್ ಫಾಲ್ಸ್, ಯಾಣ. 13-8-2021 ಚಿಕ್ಕಮಗಳೂರು, ಶೃಂಗೇರಿ, ಹೊರನಾಡು ಅನುಗ್ರಹಯಾತ್ರ: 9880079351

ವಾಹನ

Four Wheelers Selling

Others

ಟಾಟಾ Intra V30 ದೊಡ್ಡ ಗಾಡಿಯ ಲೋಡ್ ಅಧಿಕ ಆದಾಯ
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳು

4.99%* ಬಡ್ಡಿದರ 48 ತಿಂಗಳು ಅಥವಾ 5.99%* ಬಡ್ಡಿದರ 60 ತಿಂಗಳು
ಕೊಡುಗೆಗಳು ₹25 000/-* ದವರೆಗೆ ಎಕ್ಸ್‌ಚೇಂಜ್ ₹15 000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore/Mysore 95389 35533
Bangalore 7259784441
Tumkur/Davanagere/ Chitradurga 98950 23373
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 96209 55858
Bagalkot/Bijapur/Gulbarga/ Bidar - 73899 44057
Hubli/Belgaum- 91088 64572
* ಷರತ್ತುಗಳು ಅನ್ವಯಿಸುತ್ತದೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ರಾಜ್ ಕುಂದ್ರಾಗೆ 14 ದಿನ ನ್ಯಾಯಾಂಗ ಬಂಧನ

ಮುಂಬೈ: ಅಶ್ಲೀಲ ಚಿತ್ರಗಳ ನಿರ್ಮಾಣ ಮತ್ತು ಕೆಲವು ಆ್ಯಪ್‌ಗಳ ಮೂಲಕ ಅವುಗಳನ್ನು ಬಿತ್ತರಿಸಿದ ಆರೋಪ ಪ್ರಕರಣದಲ್ಲಿ ಉದ್ಯಮಿ ರಾಜ್ ಕುಂದ್ರಾನನ್ನು 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಈ ಪ್ರಕರಣದಲ್ಲಿ ರಾಜ್ ಕುಂದ್ರಾ ಸೇರಿದಂತೆ ಪೊಲೀಸ್ ವಶದಲ್ಲಿರುವ ಎಲ್ಲಾ 10 ಆರೋಪಿಗಳಿಗೂ 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮುಂಬೈ ಅಪರಾಧ ವಿಭಾಗದ ಪೊಲೀಸರು ಕುಂದ್ರಾ ಅವರನ್ನು ಜುಲೈ 19ರಂದು ಬಂಧಿಸಿದ್ದರು. ನ್ಯಾಯಾಲಯವು ಆರೋಪಿಗಳನ್ನು ಜುಲೈ 27ರಂದು ಪೊಲೀಸ್ ವಶಕ್ಕೆ ನೀಡಿತ್ತು.

ಈ ಪ್ರಕರಣದಲ್ಲಿ ಕುಂದ್ರಾ ಅವರೇ ಪ್ರಮುಖ ಆರೋಪಿಯಾಗಿದ್ದು ಅದಕ್ಕೆ ಪೂರಕವಾಗಿ ಸಾಕಷ್ಟು ಪುರಾವೆಗಳಿವೆ ಎಂದು ಮುಂಬೈ ಪೊಲೀಸರು ಪ್ರತಿಪಾದಿಸಿದ್ದಾರೆ.

ರಾಜ್ ಕುಂದ್ರಾ

‘ಅಶ್ಲೀಲ ಚಿತ್ರಗಳ ತಯಾರಿ ಮತ್ತು ಅವುಗಳನ್ನು ಕೆಲವು ಆ್ಯಪ್‌ಗಳ ಮೂಲಕ ಬಿತ್ತರಿಸುತ್ತಿರುವ ಬಗ್ಗೆ 2021ರ ಫೆಬ್ರುವರಿಯಲ್ಲಿ ಮುಂಬೈನ ಅಪರಾಧ ಪೊಲೀಸ್ ವಿಭಾಗದಲ್ಲಿ ಪ್ರಕರಣ ದಾಖಲಾಗಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೂ 10 ಜನರನ್ನು ಬಂಧಿಸಲಾಗಿದೆ.

ದೌರ್ಜನ್ಯಕ್ಕೆ ಒಳಗಾದ ಮಹಿಳೆ ನೆರವಿಗೆ ಸಹಾಯವಾಣಿ

ನವದೆಹಲಿ (ಪಿಟಿಐ): ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ನೆರವು ಒದಗಿಸುವ ಸಲುವಾಗಿ ದಿನ 24 ಗಂಟೆ ಕಾರ್ಯನಿರ್ವಹಿಸುವ ಸಹಾಯವಾಣಿಗೆ ಕೇಂದ್ರ ಸರ್ಕಾರ ಮಂಗಳವಾರ ಚಾಲನೆ ನೀಡಿದೆ.

ರಾಷ್ಟ್ರೀಯ ಮಹಿಳಾ ಆಯೋಗ ಸ್ಥಾಪಿಸಿರುವ ಈ ಸಹಾಯವಾಣಿಗೆ (ಸಹಾಯವಾಣಿ ಸಂಖ್ಯೆ 7827170170) ಕೇಂದ್ರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘ಸಂಕಷ್ಟದಲ್ಲಿರುವ ಮಹಿಳೆಯರ ನೆರವಿಗೆ ಸರ್ಕಾರ ಹಾಗೂ ಆಯೋಗ ಸದಾ ಸಿದ್ಧ ಎಂಬ ಸಂದೇಶವನ್ನು ಈ ಸಹಾಯವಾಣಿ ರವಾನಿಸಿದೆ’ ಎಂದು ಹೇಳಿದರು.

‘ಕೋವಿಶೀಲ್ಡ್: ಶೇ 93ರಷ್ಟು ರಕ್ಷಣೆ’

ನವದೆಹಲಿ (ಪಿಟಿಐ): ಕೋವಿಶೀಲ್ಡ್ ಲಸಿಕೆ ಕೋವಿಡ್–19 ವಿರುದ್ಧ ಶೇ 93ರಷ್ಟು ರಕ್ಷಣೆ ನೀಡುವುದು ಎಂದು ಸಶಸ್ತ್ರ ಪಡೆಗಳ ವೈದ್ಯಕೀಯ ಕಾಲೇಜು (ಎಎಫ್‌ಎಂಸಿ) ನಡೆಸಿರುವ ಅಧ್ಯಯನದಿಂದ ತಿಳಿದು ಬಂದಿದೆ.

ಈ ಲಸಿಕೆಯಿಂದ ಕೋವಿಡ್ ಮರಣ ಪ್ರಮಾಣದಲ್ಲಿ ಶೇ 98ರಷ್ಟು ಇಳಿಕೆ ಕಂಡುಬಂದಿದೆ ಎಂದು ನೀತಿ ಆಯೋಗದ ಸದಸ್ಯ (ಆರೋಗ್ಯ) ಡಾ.ವಿ.ಕೆ.ಪಾಲ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ‘ಕೋವಿಡ್ ಪಿಡುಗಿನ 2ನೇ ಅಲೆ ಸಂದರ್ಭದಲ್ಲಿ ಎಎಫ್‌ಎಂಸಿ ಈ ಅಧ್ಯಯನ ಕೈಗೊಂಡಿತ್ತು.

ಕರ್ನಾಟಕ ಸರ್ಕಾರ

ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ

ನ್ಯೂ ಸಯ್ಯಾಜಿರಾವ್ ರಸ್ತೆ, ವಿಶ್ವೇಶ್ವರಯ್ಯ ವೃತ್ತ, ಮೈಸೂರು–570001

ದೂ.ಸಂ: 0821–2443701, 0821–2442205, ಫ್ಯಾಸಂ: 0821–2443701

E-mail ID:gamcmysore@gmail.com

ಸಂಖ್ಯೆ:ಸಆಆ:ಆಡಳಿತ:2021–22 ದಿನಾಂಕ:20.07.2021

ಇ–ಟೆಂಡರ್ ಪ್ರಕಟಣೆ– ಇ–ಪ್ರಕ್ಯೂರ್‌ಮೆಂಟ್ ಮುಖಾಂತರ

ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಮೈಸೂರು, ಇಲ್ಲಿಗೆ ಸ್ವಚ್ಛತಾ, ಭದ್ರತಾ ಹಾಗೂ ಆಯಾ ಮತ್ತು ಅಟೆಂಡರ್ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರನ್ವಯ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ನೊಂದಾಯಿತ ಅರ್ಹ ಟೆಂಡರ್ ದಾರರಿಂದ ಟೆಂಡರ್ ಕರೆಯಲಾಗಿದೆ. ಟೆಂಡರ್ ವಿವರಗಳನ್ನು ವೆಬ್ ಸೈಟ್ http.www.eproc.karnataka.gov.in ಇದರಲ್ಲಿ ನೋಡುವುದು. ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿ: 21.08.2021 ರಂದು ಸಂಜೆ 5.00 ಗಂಟೆ ಆಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಪ್ರಾಚಾರ್ಯರು, ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಮೈಸೂರು, ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಪ್ರಾಚಾರ್ಯರು/ಅಧ್ಯಕ್ಷರು, ಟೆಂಡರ್ ಸಮಿತಿ

DIPR/DDMYS/MCA/338/2021-22

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಇಂಜಿನೀಯರರವರ ಕಚೇರಿ, ಕನೀನಿನಿ, ಜಿಆರ್‌ಬಿಸಿಸಿ ವಿಭಾಗ ನಂ.4 ಚಿಕ್ಕೋಡಿ ಫೋನ ನಂ:08338–272485 ಫ್ಯಾಕ್ಸ ನಂ: 08338–275186 ಇ–ಮೇಲ್ ಐಡಿ:ee_knnlgrbc4ckd@rediffmail.com

ಟೆಂಡರ ಅವಧಿ ವಿಸ್ತರಣೆ ಅಧಿಸೂಚನೆ

(ಇ–ಪ್ರೊಕ್ಯೂರಮೆಂಟ ಮೂಲಕ ಮಾತ್ರ)

ಟೆಂಡರ ಅವಧಿ ವಿಸ್ತರಣೆ ಅಧಿಸೂಚನೆ ಪತ್ರ ಸಂ: ಕನೀನಿನಿ/ಜಿಆರ್‌ಬಿಸಿಸಿ ವಿ–4/ಅಡವಿಸಿದ್ದೇಶ್ವರ & ಶಂಕರಲಿಂಗ ಏ.ನೀ.ಯೋ/ಅ.ವಿ/2021–22/715 ದಿನಾಂಕ: 26–07–2021.

ಉಲ್ಲೇಖ:ಈ ಕಚೇರಿಯ ಅಲ್ಪಾವಧಿ ಟೆಂಡರ ಅಧಿಸೂಚನೆ ಸಂ: ಕನೀನಿನಿ/ಜಿಆರ್‌ಬಿಸಿಸಿ ವಿ–4/ಟೆಂಡರ/2021–22/03 ದಿನಾಂಕ:17–07–2021.

ಮೇಲಿನ ಉಲ್ಲೇಖದಲ್ಲಿ ದಿನಾಂಕ 17–07–2021 ರಂದು ಅಲ್ಪಾವಧಿ ಟೆಂಡರ ಅಧಿಸೂಚನೆ ಹೊರಡಿಸಲಾಗಿತ್ತು. ತಾಂತ್ರಿಕ ಕಾರಣಾಂತರಗಳಿಂದ ಟೆಂಡರ ಪ್ರಕ್ರಿಯೆ ವೇಳಾಪಟ್ಟಿಯನ್ನು ಈ ಕೆಳಗಿನಂತೆ ತಿದ್ದುಪಡಿ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಇಂಡೆಂಟ ನಂ. 31455 ಗಾಗಿ ಅವಧಿ ವಿಸ್ತರಣೆ:

ಸಂ.:d:ಪರಿಷ್ಕೃತ ವೇಳಾಪಟ್ಟಿ :ಭರ್ತಿ ಮಾಡಿದ ಟೆಂಡರಗಳನ್ನು ಇ–ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ & ಸಮಯ , ದಿನಾಂಕ & ಸಮಯ:ದಿನಾಂಕ 02–08–2021 ರ 16.00 ಘಂಟೆಯ ವರೆಗೆ. ಸಂ.:e:ಪರಿಷ್ಕೃತ ವೇಳಾಪಟ್ಟಿ :ತಾಂತ್ರಿಕ ಬಿಡ್‌ನ್ನು (ಲಕೋಟೆ–1) ತೆರೆಯುವ ದಿನಾಂಕ & ಸಮಯ:ದಿನಾಂಕ 03–08–2021 ರ 16.30 ಘಂಟೆಯ ನಂತರ, ಸಂ.:f:ಪರಿಷ್ಕೃತ ವೇಳಾಪಟ್ಟಿ: ತಾಂತ್ರಿಕ ಬಿಡ್‌ನಲ್ಲಿ (ಲಕೋಟೆ–1) ಪೂರ್ವಾಹತೆ ಹೊಂದಿದ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು (ಲಕೋಟೆ–2) ತೆರೆಯುವ ದಿನಾಂಕ & ಸಮಯ:ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ.

ಹೆಚ್ಚುವರಿ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಚೇರಿಯ ದೂರವಾಣಿ ಸಂಖ್ಯೆ 08338–272485 ನಿಂದ ಕಚೇರಿ ಸಮಯದಲ್ಲಿ ಪಡೆಯಬಹುದು ಮತ್ತು ಇ–ಪ್ರೊಕ್ಯೂರಮೆಂಟ ಪೋರ್ಟಿನಲ್ಲಿ (https://www.eproc.karnataka.gov.in) ನೋಡಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರು, ಕನೀನಿನಿ, ಘಟಪ್ರಭಾ ದಂಡೆ ಕಾಲುವೆ ವಿಭಾಗ–4, ಚಿಕ್ಕೋಡಿ

DIPR/BGM/RO-NO-512/MCA/2021-22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಯೋಜನಾ ವಿಭಾಗ, ಯಲಹಂಕ ವಲಯ, ಬೆಂಗಳೂರು-560 092.

ಸಂಖ್ಯೆ:ಬೃಬೆಂಮಪಾ/ಯಲಹಂಕ/ಕಾಅ(ಯೋಜನಾ)/ಟೆಂಡರ್/05/2021-22 ದಿನಾಂಕ: 26-07-2021

ಟೆಂಡರ್ ಸೂಚನೆ ಅಹ್ವಾನ (ಎನ್‌ಐಟಿ) ಅಲ್ಪಾವಧಿ ಟೆಂಡರ್

(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕಾರ್ಯಪಾಲಕ ಅಭಿಯಂತರರು, (ಯೋಜನಾ ವಿಭಾಗ) ಯಲಹಂಕ ವಲಯ ಬಿ.ಬಿ.ಎಂ.ಪಿ ರವರು ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತರಾದ ಅರ್ಹ ತಯಾರಕರು / ಸರಬರಾಜುದಾರರಿಂದ ಕೆಳಗೆ ನಮೂದಿಸಿರುವ ಸರಕುಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಯೋಜನೆಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ)	ಇಎಂಡಿ
1.	ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ ಸೊಳ್ಳೆಗಳ ನಿಯಂತ್ರಣ ಸೇವೆಗಳಿಗಾಗಿ ಮಾನವ ಸಂಪನ್ಮೂಲ, ಆಟೋ ಮತ್ತು ಉಪಕರಣಗಳನ್ನು ಒದಗಿಸುವುದು.	152.63	ರೂ.2.30 ಲಕ್ಷಗಳು
2.	ಯಲಹಂಕ ವಿಧಾನಸಭಾ ಕ್ಷೇತ್ರದಲ್ಲಿ ಸೊಳ್ಳೆಗಳ ನಿಯಂತ್ರಣ ಸೇವೆಗಳಿಗಾಗಿ ಮಾನವ ಸಂಪನ್ಮೂಲ, ಆಟೋ ಮತ್ತು ಉಪಕರಣಗಳನ್ನು ಒದಗಿಸುವುದು.	80.36	ರೂ.1.61 ಲಕ್ಷಗಳು
3.	ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರಿ ಕಚೇರಿಗಳಿಗೆ ಭದ್ರತೆ ಮತ್ತು ಹೌಸ್‌ಕೀಪಿಂಗ್ ಸೇವೆಗಳನ್ನು ಒದಗಿಸುವುದು.	47.57	ರೂ. 96,000/-
4.	ಯಲಹಂಕ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರಿ ಕಚೇರಿಗಳಿಗೆ ಭದ್ರತೆ ಮತ್ತು ಹೌಸ್‌ಕೀಪಿಂಗ್ ಸೇವೆಗಳನ್ನು ಒದಗಿಸುವುದು.	40.18	ರೂ. 81,000/-

ಟೆಂಡರ್‌ನ ಕಾರ್ಯಸೂಚಿ: 1. ವಿಚಾರಣೆಗಾಗಿ ಕೊನೆಯ ದಿನಾಂಕ ಮತ್ತು ಸಮಯ (ಆನ್‌ಲೈನ್ ಮೂಲಕ ಮಾತ್ರ): 09–08–2021ರ ಮಧ್ಯಾಹ್ನ 2:00 ಗಂಟೆಯವರೆಗೆ. 2) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 11–08–2021ರ ಸಂಜೆ 4:00 ಗಂಟೆಗೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 12–08–2021ರ ಸಂಜೆ 4:30 ಗಂಟೆಗೆ. ಸಾಧ್ಯವಾದಲ್ಲಿ ಮುಂದಿನ ಕೆಲಸದ ದಿನದಂದು. 5) ಆರ್ಥಿಕ ಬಿಡ್ ತೆರೆಯುವ : ದಿನಾಂಕ 16–08–2021ರ ಸಂಜೆ 4:00 ಗಂಟೆಗೆ (ಸಾಧ್ಯವಾದಲ್ಲಿ). ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ಯಲಹಂಕ ವಲಯ, ಬೃಬೆಂಮಪಾ.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ:ಕಾನಿಇಂ/ಲೋ.ಇ/ವಿ.ಜೆ.ಪಿ/ಪಿ.ಬಿ/8443/2021–22/1091

ದಿನಾಂಕ:26.07.2021

ಅಲ್ಪಾವಧಿ ಟೆಂಡರ್ ತಿದ್ದುಪಡಿ ಹಾಗೂ ಅವಧಿ ವಿಸ್ತರಣೆ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್)

ಉಲ್ಲೇಖ:– 1) ಈ ಕಛೇರಿ ಪ್ರಕಟಣೆ ಐ.ಎಸ್.ಟಿ. ನಂ. ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/8443/2021–22/330 ದಿನಾಂಕ:29–05–2021.

2) ಅವಧಿ ವಿಸ್ತರಣೆ ಸಂಖ್ಯೆ: 1012 ದಿನಾಂಕ: 21.07.2021

ಮೇಲಿನ ಉಲ್ಲೇಖ (1) & (2) ರಲ್ಲಿ ಪ್ರಕಟಿಸಲಾದ ಕಾಮಗಾರಿಯ ಟೆಂಡರ ಪ್ರಕಟಣೆಯನ್ನು ತಾಂತ್ರಿಕ ಕಾರಣಗಳಿಂದ ಮುಂದೂಡಿ ಹಾಗೂ ಈ ಕೆಳಗಿನಂತೆ ತಿದ್ದುಪಡಿ ಮಾಡಿ ಅವಧಿ ವಿಸ್ತರಿಸಲಾಗಿದೆ.

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯುಮೆಂಟ್ ಕೆ.ಡಬ್ಲ್ಯೂ–4 ರಲ್ಲಿ ಲೆಕ್ಕ ಶೀರ್ಷಿಕೆ 8443–ಠೇವಣಿ ವಂತಿಕೆ ಅಡಿಯಲ್ಲಿ ವಿಜಯಪುರ ನಗರದ ಎ.ಟಿ.ಆರ್–72–600 ಎರ್‌ಕ್ರಾಫ್ಟ ಹಗಲು ವ್ಹಿ.ಎಫ್.ಆರ್ ಕಾರ್ಯಾಚರಣೆಯ ವಿಮಾಣ ನಿಲ್ದಾಣ ನಿರ್ಮಾಣ. (ಹಂತ–2) (ಇಂಡೆಂಟ ನಂ. **137623**) **ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಅಂದಾಜು ಮೊತ್ತ ರೂ. 6912.00 ಲಕ್ಷಗಳು**. ಸದರಿ ಕಾಮಗಾರಿಯ ಟೆಂಡರ ಅವಧಿ 11 ತಿಂಗಳು ಮಳೆಗಾಲ ಸಹಿತ. & ಸರ್ಕಾರದ ಆದೇಶದನ್ವಯ ಮುಂಗಡ ಠೇವಣಿ ಮೊತ್ತಕ್ಕೆ ವಿನಾಯಿತಿ ನೀಡಲಾಗಿದೆ. (Contractor Should enclose EMD Declation in Declaration in priscribed format vide GO No. FD/675/Expenditure/12/2020 Bangalore Dated-11/12/2020). ಸದರ ಕಾಮಾಗಾರಿಗಳ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. ಗುತ್ತಿಗೆದಾರರ ಪೂರ್ವ ಭಾವಿ ಸಭೆ **ದಿನಾಂಕ:12.08.2021** ರ ಮುಂಜಾನೆ 11.00 ಗಂಟೆಗೆ, ಟೆಂಡರಗಳನ್ನು ಸ್ವೀಕರಿಸುವ **ದಿನಾಂಕ:21.08.2021** ರ ಸಂಜೆ 4.30 ಗಂಟೆಯವರೆಗೆ, ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ **ದಿನಾಂಕ: 23.08.2021** ರ ಸಂಜೆ 11.00 ಘಂಟೆಯ ನಂತರ ಮತ್ತು ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ **ದಿನಾಂಕ: 25.08.2021** ರ ಮುಂಜಾನೆ 11.00 ಘಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/181/ಎಂಸಿಎ/2021–22

Government of Karnataka

KARNATAKA GOVERNMENT SECRETARIAT

M.S. Building, Bengaluru.

NO: RD 55 GRC 2020 **Dated: 06-07-2021**

NOTIFICATION

Whereas, upon considering the report of the Investigating Agencies, after due investigation of the complaint of depositors, it has come to notice of the Government that **M/s I Monetary Advisory (IMA)** and its group entities are involved in fraudulent transactions by clandestinely and illegally collecting deposits or money from the general public and thereafter have failed to return the same either after maturity or on demand made by the depositors or complainants with promised interest and other assured benefits and thereby have failed to render the services promised to them.

And whereas, it has further come to the notice of the Government that M/s I Monetary Advisory (IMA) and its group entities and people associating with them have been paying periodic returns to the depositors on their principal deposit amounts from and out of the deposits or money so collected, from the depositors or complainants and not from out of any income or profit generated from a bonafide business activity, thereby deviating from the intended purposes of accepting the deposits or money.

And whereas, the Government has reason to believe that such actions of M/s I Monetary Advisory (IMA) and its group entities and people associating with them are acting in and detrimental to the interest of the depositors or complainants whose intention was to defraud the innocent depositors, and it has become necessary to protect the interest of the depositors of M/s I Monetary Advisory (IMA) and its group entities.

And whereas, now the Government after considering the report of the Special Officer and Competent Authority IMA., and satisfying itself about the urgent need to protect the interest of the depositors and in exercise of the powers conferred by sub-section (2) of Section 3 of the Karnataka Protection of interest of Depositors in Financial Establishment Act, 2004 (Karnataka Act 30 of 2005) hereby orders to attach the excess amounts i.e. amounts over and above the principal deposit amount, which have been paid to the depositors in the form of periodic returns on the deposits and principal returns of the deposit amounts by ordering for attachment of such amounts in respect of the top 100 such excess amounts in the first stage. Hence the following order:

“ORDER”

Now therefore, in exercise of the powers conferred by sub Section 2 of section (3) of the Karnataka Protection of interest of Depositors in Financial Establishment Act, 2004 (Karnataka Act 30 of 2005), the Government under the circumstances stated above having satisfied that in order to protect the interest of depositors Government of Karnataka hereby orders to attach the amounts believed to be paid out of the depositors funds, as specified in the Annexure-1 to this order.

Note: All the aforesaid amounts, from the date of publication of this order in the Official Gazette, shall be forthwith recoverable and vest with the Competent Authority, who has been appointed by the Government, subject to the orders from the Special Court.

By Order and in the name of the Governor of Karnataka
Sd/-
(Mallikarjuna Ramachandrappa)
Under Secretary to Government
Revenue Department (Special Cell)

Attachment of Monies from the depositors which were paid out of other depositors funds and which are in excess of their deposit amounts- top 100 Depositors of IMA

Annexure-1

Sl. No.	Client ID	Account ID	Client Name	Parent / Guardian Name	Deposit Amt as per IMA Data	Excess Amount to be attached u/s 3(2)	Total Amount paid already to Depositors
1	IMACL1094	1107	STAR DRUGS AND RESEARCH LABS	KHALAK ABDUL	46000000	71783264.52	11778324.5
2	IMACL0001	576	SYED KHALID IBADULLA	SYED MOULANA	24945881	25155824.96	50101705.96
3	IMACL1095	1108	K ABDUL MATHEEN	SHUKOOR ABDUL KALAK	32500000	24689012.08	57189012.08
4	IMACL29928	34470	MOHAMMED MUJEEB SIKANDER	MEERAN SAHEB SIKANDER	100000000	21038500	121038500
5	IMACL1443	1469	MOHAMMED MANAN PASHA	MOHAMMED HABIBULLA	11000000	17147255.14	28147255.14
6	IMACL0621	527	MUMTAZ PASHA	NONE	9000000	15762466.67	24762466.67
7	IMACL23337	27211	ASMATHUNISA	SYED IBRAHIM	23304699	13461622.76	36766321.76
8	IMACL36129	42415	MOHAMED SHAHEEDULLA	BASHA MOHAMED SAIFULLA	15000000	10375500	25375500
9	IMACL0172	544	MAHBOOB PASHA NA	MOHAMMED AJAZ	5000000	10118850	15118850
10	IMACL24222	27639	SYED MUDEER AGA	SYED AHAMED AGA	27500000	10109250	37609250
11	IMACL5468	5685	SHAHANAZ BEGUM	ABDUL MATHEEN	14500000	9243900	23743900
12	IMACL2997	3090	WASEEM UNNISSA	MOHAMMED MUSTHAQ	5000000	8846500	13846500
13	IMACL3033	3128	MOHAMMED RIZWAN PASHA	MOHAMMED MUSHTAQ	5000000	8846500	13846500
14	IMACL9646	10172	AABIDABEGUM R	MOHAMMED ALEEMUDDIN	20500000	8477990	28977990
15	IMACL3590	3708	KHADAR BASHA M K	MOHAMMED KHASIM	18000000	7984300	25984300
16	IMACL5823	6058	MD IMRAN AHMED	MOHAMMED MUSTHTAQ AHMED	5000000	7463500	12463500
17	IMACL0076	539	SHABBIR AHAMED	MOHAMMED HUSSAIN	6200000	7390320.75	13590320.75
18	IMACL24161	27558	ROOHI NAUSHAD	ZAHEER AHMED	14100000	7279706.69	21379706.69
19	IMACL1298	1321	LATIFA HAFEEZ	K ABDUL HAFEEZ	5100000	7127939.7	12227939.7
20	IMACL0039	27	MOHAMMED AKRAMULLA	ZAKRIA BASHA	4880000	6748348	11628348
21	IMACL5824	6059	UMME SALMA	MOHAMMED MUSHTAQ	4500000	6717150	11217150
22	IMACL25062	28625	BALAGA SEETHA MAHA LAXMI	GOWRIPATHI RAO RONANKI	22000000	6354915	28354915
23	IMACL1404	1429	ANJUM AFZA FEROZ	DASTAGIR HUSSAINI SYED	5000000	6200799.43	11200799.43
24	IMACL0444	556	NISAR AZIZ BEIG	GHULAM MOHAMMAD BEIG	5800000	6039324.17	11839324.17
25	IMACL7030	7356	VASEEM (RIFA FATHIMA)	NAYEEM AHMED	13550000	5903240	19453240
26	IMACL5063	5259	IQBAL PASHA	JAFFER SHARIFF	9000000	5885990	14885990
27	IMACL6382	6662	JAREER HASSAN FAKARDE	MOHAMMED JAMEEL FAKARDE	6200000	5583550	11783550
28	IMACL0056	40	ASIFA BEGUM	RAHAMATH ULLA KHAN	5400000	5237252	10637252
29	IMACL0394	335	PYAREJAN SYED RAFEEQ ALAM	HUSSAIN PYARE JAN	3950000	5209574.94	9159574.94
30	IMACL0223	581	SUFIYA SULTANA	SIBGHATULLA SHARIFF	4000000	5197850	9197850
31	IMACL4024	4162	K ABDULSALAM	S A KHALAK	22500000	4976358.77	27476358.77
32	IMACL7949	8359	SYED INAAMULLAH	SYED ABDULLAH	8500000	4966945.48	13466945.48
33	IMACL2222	2276	RAHMAN ABDUL JALEEL	ABDUL RAHMAN	4500000	4966142.86	9466142.86
34	IMACL8781	9254	SHABEER AHMED	ABDUL HAMEED	7800000	4899980	12699980
35	IMACL25653	29345	NEELUFER KHURAISHI	MEERABDULHAKEEM KHURAISHI	16000000	4862904.9	20862904.9
36	IMACL1043	1053	ASIF PARVEZ SHAIKH	PARVEZ ESNA SHAIKH	5850000	4832731.88	10682731.88
37	IMACL0982	988	SHAHEEN FATHIMA	IQBAL KHAN	8850000	4753157.65	13603157.65
38	IMACL0930	932	IQBAL KHAN	AZEEM KHAN	5000000	4736555.37	9736555.37
39	IMACL1706	1744	FARHATH NAYEEM	NAYEEM MOHAMMED	4100000	4715308.25	8815308.25
40	IMACL2793	2879	SHAISTA IMRAN KILLEDAR	SHER PATHAN	5500000	4687200	10187200
41	IMACL3673	3794	HASHIR KHAN	IQBAL KHAN	4786525	4670411.46	9456936.46
42	IMACL0076	57	SHABBIR AHAMED	MOHAMMED HUSSAIN	2700000	4621406.67	7321406.67
43	IMACL0688	690	MOHAMMED YUSAFF	SUBHAN SAB	4600000	4598952.79	9198952.79
44	IMACL0018	11	MOHAMMED MANSOOR KHAN	S.H. ABID ALI KHAN	1700000	4508143.6	6208143.6
45	IMACL28554	32836	TAJUNISA	MEHABOOB SHARIFF	6500000	4457250	10957250
46	IMACL0481	412	WASEEM IMRAN	RAHAMAN SHARIFF	3300000	4376525.97	7676525.97
47	IMACL1799	1839	MUNEER KHAN	SAAD JI KHAN	5000000	4327219.35	9327219.35
48	IMACL5596	5820	HUKUNDAMCHAMED ASIFALIJAN	HUKUNDAPEER MOHAMEDK HASIM	3000000	4320100	7320100
49	IMACL0554	563	MOHAMMED HIDAYATHULLA	MOHAMMED SHAFIULLA	6300000	4292304.34	10592304.34
50	IMACL4293	4444	MOHAMMED FARHAN SAIT	MUNEER AHMED SAIT	6300000	4237870	10537870
51	IMACL28556	32838	AMJAD PASHA	ANSAR PASHA	6100000	4212850	10312850
52	IMACL0980	986	SHAIK OMAR	ABDUL SAMATH	10000000	4203400	14203400
53	IMACL0524	450	MOHAMMED MASUOOD IRFAN	ABDUL GAFOOR	2900000	4129688.72	7029688.72
54	IMACL1667	1702	VASEEM	NAYEEM AHMED	18450000	4082363.55	22532363.55
55	IMACL0667	10460	SYED ASGAR AHMED	SYED MOHIUDDIN	5200000	4017602.83	9217602.83
56	IMACL0210	529	KANEES FATHIMA A	AZEEZ BASHA	5000000	4008491.08	9008491.08
57	IMACL2527	2591	RUKSANA ANJUM ALVI S	SYED SHAKEEL ALVI	2500000	3996645.94	6496645.94
58	IMACL45638	53010	MOHAMED ADIL	AHMAD HUSSAIN	6000000	3994010.16	9994010.16
59	IMACL2440	2498	MOHAMMED HASHAM	MOHAMMED HABEEB	6000000	3966259.57	9966259.57
60	IMACL0105	540	JABIR SALEEM	ABDUL KAREEM GAFOOR	2500000	3940994.29	6440994.29
61	IMACL2564	2629	MOHAMMED WAJIUDDIN FARAZ	MOHAMMED SAMIUDDIN	5000000	3932005	8932005
62	IMACL2902	2992	ABDUS SUBHAN	MOHAMMED IRFAN SHABANDRI	2900000	3901270	6801270
63	IMACL8957	9435	SYED IDRIS	SYED ABBAS	5000000	3773250	8773250
64	IMACL2651	2721	SYED ILYAS PASHA	SYED AMEERUDDIN	3550000	3763856.31	7313856.31
65	IMACL2367	2423	ASIF AHMED SK	SK KHALEEL AHMED	3500000	3740268.39	7240268.39
66	IMACL0180	547	NOOR ZAHERA	HYDER MUSADIQ HUSSAIN	5000000	3733500	8733500
67	IMACL3244	3351	M A TANVEER SHAREEF	MOHAMMED AMEER SHAREEF	6000000	3722120	9722120
68	IMACL39633	50611	SYED ABDUL BARI	SYED ABDUL KHADER	14000000	3685155.44	17685155.44
69	IMACL5429	5645	S YED ZAHIR	SYED SANAULLA	4500000	3632800	8132800
70	IMACL0109	83	ABDUL HAFEEZ	MOHAMMED HUSSAIN	3500000	3588383.33	7088383.33
71	IMACL2399	2456	GULNAZ FATHIMA	MUMTAZ PASHA	3300000	3553531.55	6853531.55
72	IMACL4286	4437	BIBI AYEESHA SHIRUR	ALLABAKSH	4800000	3455370.85	8255370.85
73	IMACL0973	978	MAHAMOODUL HASSAN	MOHAMMED YAHEYA	4900000	3441322.36	8341322.36
74	IMACL3054	3150	FARAAZ ASLAM	K ASLAM	5000000	3434100	8434100
75	IMACL0983	989	SHAEEZA SAMREEN	IQBAL KHAN	3050000	3406057.44	6456057.44
76	IMACL0110	84	MOHAMMED KAMRAN HAFEEZ	ABDUL HAFEEZ	3500000	3397650	6897650
77	IMACL1286	1309	NOOR JAHAN	AHMED SHARIFF	6500000	3372896.67	9872896.67
78	IMACL0485	559	RESHMA BEGAUM	MOHAMAD KHAIRUDDIN	3500000	3343234.51	6843234.51
79	IMACL3572	3690	SYED ISHTIAQ AHMED	AKBAR SYED	5733986	3311933.29	9045919.29
80	IMACL0028	535	A KALEEM	ABDUL AZEEM	3000000	3291650	6291650
81	IMACL0482	413	MAHAMMAD AKBAR BEEDI	HUSSAIN SAB B	4100000	3264390.56	7364390.56
82	IMACL0272	227	AMTUR RAFI	GULAM MOHAMMED MEKHRI	3000000	3210000	6210000
83	IMACL1210	1232	SYED R ZARFIENE	SYED ABDUL HABIB	4650000	3165791.29	7815791.29
84	IMACL0619	572	MAKKI STEELS	MD IMRAN AHMED	17400000	3144600	20544600
85	IMACL0273	228	ZULFIQUAR AHMED NAZEER AHMED	NAZEER AHMED	1650000	3124393.23	4774393.23
86	IMACL22160	25200	MOHAMED RAFEEK P M	MOHAMED	5000000	3107030	8107030
87	IMACL0256	211	MOHAMED ZAFRULLA	MOHAMMED GHOUSE	2600000	3088358.81	5688358.81
88	IMACL2528	2592	SYED SHAKEEL ALVI	LATE SYED ISMAIL ALVI	3000000	3076772.87	6076772.87
89	IMACL1004	12557	MOHD AKBAR	MOHD UMAR	9190000	3059383.31	12249383.31
90	IMACL3611	3730	ARSHIYA ROUNAK JAN	ROUNAK JAN	2300000	3058960	5358960
91	IMACL1426	1452	MUKRAM SHARIEFF	MOHAMMED GHOUSE SHARIEFF	4050000	3039593.27	7089593.27
92	IMACL0735	727	S AKBAR ALI	SHAUL HAMEED	2050000	2958476.47	5008476.47
93	IMACL0014	8	MOHAMMEDSHAJAHAN	None	3250000	2921928.68	6171928.68
94	IMACL0410	553	SADATH ALI	ALI JAMALUDDIN SHOUKATH	3200000	2911122.74	6111122.74
95	IMACL11305	11979	BARKATHULLAH	MOHAMMED SHAFIULLA	6000000	2898660	8898660
96	IMACL8023	8435	PYAROO VAZEERPASHA	PYAROOSAB	2600000	2892660	5492660
97	IMACL4065	4204	MOHAMMED ANZAR	ABDUL WAJID	3000000	2892250	5892250
98	IMACL14658	16203	REHMAN ABDUL MUJEEB	HIYAT ABDUL REHMAN	10500000	2882650	13382650
99	IMACL1031	1041	MOHAMMED NAOMON MAHMOOD	MAHMOODUL HASSAN	2300000	2869066.67	5169066.67
100	IMACL1420	1446	MUSTHAK S	ABDUL SALAM	3500000	2836890	6336890
				TOTAL	858941091.00	622623305.33	1375559456.31

NO. RD 55 GRC 2020

Sd/-
(Mallikarjuna Ramachandrappa)
Under Secretary to Government
Revenue Department (Special Cell)

DIPR/DDU/R.O.No.807/2021-22

ಮೋಡಿ ಮಾಡಿದ ಸಿಂಗ್ ಜೋಡಿ

ಗೋಲು ಗಳಿಸಿದ ರೂಪಿಂದರ್ ಪಾಲ್, ಸಿಮ್ರನ್‌ಜೀತ್; ಶ್ರೀಜೇಶ್ ಚುರುಕಿನ ಗೋಲ್‌ಕೀಪಿಂಗ್

ಟೋಕಿಯೊ (ಪಿಟಿಐ): ಭಾರತ ಹಾಕಿ ತಂಡ ಮಂಗಳವಾರ ಮತ್ತೆ ಜಯದ ಲಯಕ್ಕೆ ಮರಳಿತು. ಹೋದ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು ಭಾರಿ ಅಂತರದ ಸೋಲಿನಿಂದ ಕಂಗೆಟ್ಟಿದ ಭಾರತ ಪುರುಷರ ತಂಡವು ಸ್ಪೇನ್ ವಿರುದ್ಧ 3–0ಯಿಂದ ಜಯ ಗಳಿಸಿತು.

ಡ್ರ್ಯಾಗ್ ಫ್ಲಿಕ್ಕರ್ ರೂಪಿಂದರ್ ಪಾಲ್ ಸಿಂಗ್ ಅವರ ಎರಡು ಗೋಲುಗಳು ಮತ್ತು ಸಿಮ್ರನ್‌ಜೀತ್ ಸಿಂಗ್ ಗಳಿಸಿದ ಒಂದು ಗೋಲು ತಂಡ ಮೇಲುಗೈ ಸಾಧಿಸಲು ಕಾರಣವಾಯಿತು. ಇದರೊಂದಿಗೆ ಮನ್‌ಪ್ರೀತ್ ಸಿಂಗ್ ಬಳಗದ ಕ್ವಾರ್ಟರ್ ಫೈನಲ್ ಫೈನಲ್ ಕನಸಿಗೆ ರೆಕ್ಕೆ ಪುಕ್ಕ ಬಂದಂತಾಗಿದೆ.

ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಭಾರತ, ಒಂಬತ್ತನೇ ಸ್ಥಾನದಲ್ಲಿರುವ ಸ್ಪೇನ್‌ಗೆ ಒಯಿ ಹಾಕಿ ಕ್ರೀಡಾಂಗಣದಲ್ಲಿ 14ನೇ ನಿಮಿಷದಲ್ಲೇ ಆಘಾತ ನೀಡಿತು. ಸಿಮ್ರನ್‌ಜೀತ್ ಸಿಂಗ್ ತಂದುಕೊಟ್ಟ ಗೋಲು ತಂಡದ ಮುನ್ನಡೆಗೆ ಕಾರಣವಾಯಿತು. ರೂಪಿಂದರ್ ಪಾಲ್ ಸಿಂಗ್ 15 ಮತ್ತು 51ನೇ ನಿಮಿಷಗಳಲ್ಲಿ ಚೆಂಡನ್ನು ಗುರಿ ಮುಟ್ಟಿಸಿ ಎದುರಾಳಿಗಳ ಆಸೆಗೆ ತಣ್ಣೀರು ಹಾಕಿದರು. ಮೊದಲ ಪಂದ್ಯದಲ್ಲಿ ಅರ್ಜೆಂಟೀನಾ ಜೊತೆ 1–1ರ ಡ್ರಾ ಸಾಧಿಸಿದ್ದ ಸ್ಪೇನ್ ನಂತರ ನ್ಯೂಜಿಲೆಂಡ್‌ಗೆ 3–4ರಲ್ಲಿ ಮಣಿದಿತ್ತು.

ಆರಂಭದಲ್ಲಿ ಉಭಯ ತಂಡದವರು ಜಿದ್ದಾಜಿದ್ದಿಯ ಹೋರಾಟ ನಡೆಸಿದರು. ಗೋಲು ಗಳಿಸುವ ಅವಕಾಶಗಳನ್ನು ಸೃಷ್ಟಿಸಲು ವಿಫಲವಾದರೂ ಭಾರತ ಮೊದಲ 10 ನಿಮಿಷಗಳಲ್ಲಿ ಪಂದ್ಯದ ಮೇಲೆ ಬಿಗಿ ಹಿಡಿತ ಸಾಧಿಸುವಲ್ಲಿ ಯಶಸ್ವಿಯಾಯಿತು. ಒಂಬತ್ತನೇ ನಿಮಿಷದಲ್ಲಿ ಮನ್‌ಪ್ರೀತ್ ಸಿಂಗ್ ಅವರ ಪಾಸ್‌ನಲ್ಲಿ ಸಿಮ್ರನ್‌ಜೀತ್ ಸಿಂಗ್ ಗೋಲುಪೆಟ್ಟಿಗೆಯತ್ತ ಚೆಂಡನ್ನು ಹೊಡೆದಿದ್ದರು. ಆದರೆ ಅದು ಹೊರಗೆ ಚಿಮ್ಮಿತು. 12ನೇ ನಿಮಿಷದಲ್ಲಿ ಸ್ಪೇನ್‌ಗೆ ಪೆನಾಲ್ಟಿ ಕಾರ್ನರ್ ಲಭಿಸಿತು.

ಮೊದಲ ಕ್ವಾರ್ಟರ್‌ನ ಮುಕ್ತಾಯಕ್ಕೆ ನಿಮಿಷಗಳು ಬಾಕಿ ಇರುವಾಗ ಭಾರತ ಪ್ರಬಲ ಆಕ್ರಮಣಕ್ಕೆ ಮುಂದಾಯಿತು. ಅಮಿತ್ ರೋಹಿದಾಸ್ ನೀಡಿದ ಪಾಸ್‌ನಲ್ಲಿ ಸಿಮ್ರನ್‌ಜೀತ್ ಸಿಂಗ್ ಸುಲಭ ಗೋಲು ಗಳಿಸಿದರು. ಕೊನೆಯ ನಿಮಿಷದಲ್ಲಿ ತಂಡಕ್ಕೆ ಸತತ ಮೂರು ಪೆನಾಲ್ಟಿ ಕಾರ್ನರ್ ಸಿಕ್ಕಿತು. ಕೊನೆಯ ಅವಕಾಶದಲ್ಲಿ ರೂಪಿಂದರ್ ಪಾಲ್ ಸಿಂಗ್ ಯಶಸ್ವಿಯಾದರು.

ಮೂರನೇ ಕ್ವಾರ್ಟರ್‌ನಲ್ಲಿ ಸ್ಪೇನ್ ಆಕ್ರಮಣವನ್ನು ಹೆಚ್ಚಿಸಿತು. ಆದರೆ ಯಶಸ್ಸು ಕಾಣಲಿಲ್ಲ.

ಕೊನೆಯ ಕ್ವಾರ್ಟರ್‌ನಲ್ಲಿ ಭಾರತಕ್ಕೆ ಪಂದ್ಯದ ನಾಲ್ಕನೇ ಪೆನಾಲ್ಟಿ ಕಾರ್ನರ್ ಅವಕಾಶ ಲಭಿಸಿತು. ನೆಲಮಟ್ಟದಲ್ಲಿ ಚೆಂಡನ್ನು ಫ್ಲಿಕ್ ಮಾಡಿದ ರೂಪಿಂದರ್ ಪಾಲ್ ಎದುರಾಳಿ ಗೋಲ್‌ಕೀಪರ್‌ಗೆ ಚಳ್ಳೆಹಣ್ಣು ತಿನ್ನಿಸಿದರು.

ಸ್ಪೇನ್‌ನ ಲಾರೆನ್ಸ್ ಪಿಯೆರಾ ಅವರಿಂದ ಭಾರತದ ಸಿಮ್ರನ್‌ಜೀತ್ ಸಿಂಗ್ ಚೆಂಡು ಕಸಿದುಕೊಳ್ಳಲು ಪ್ರಯತ್ನಿಸಿದರು –ರಾಯಿಟರ್ಸ್ ಚಿತ್ರ

ಸ್ಕೋರು

ಭಾರತ **3**
ಸ್ಪೇನ್ **0**

ರೂಪಿಂದರ್ ಪಾಲ್ ಸಿಂಗ್ ರಾಯಿಟರ್ಸ್ ಚಿತ್ರ

ತಂಡದಲ್ಲಿ ಬಹಳ ಸುಧಾರಣೆ ಆಗಬೇಕಿದೆ. ಪೆನಾಲ್ಟಿ ಕಾರ್ನರ್‌ಗಳನ್ನು ಬಿಟ್ಟುಕೊಡುತ್ತಿರುವುದು ಸದ್ಯ ತಂಡಕ್ಕೆ ತಲೆನೋವಾಗಿ ಕಾಡಿದೆ. ಅದಕ್ಕೆ ಪರಿಹಾರ ಕಂಡುಕೊಳ್ಳಬೇಕಾಗಿದೆ.
ಗ್ರಹಾಂ ರೀಡ್ ಭಾರತ ತಂಡದ ಕೋಚ್



ಸ್ಪೇನ್ ವಿರುದ್ಧ ಚೇತರಿಸಿಕೊಳ್ಳಲು ಸಾಧ್ಯವಾಗಿದೆ. ಹಿಂದಿನ ಸೋಲನ್ನು ಮರೆತು ಜಯದ ಹಾದಿಯಲ್ಲಿ ಸಾಗಲು ಸಾಧ್ಯವಾದ್ದರಿಂದ ತಂಡದ ಆತ್ಮವಿಶ್ವಾಸ ಹೆಚ್ಚಿದೆ.
ಶ್ರೀಜೇಶ್ ಭಾರತ ತಂಡದ ಗೋಲ್‌ಕೀಪರ್

ಗೋಲು ಗಳಿಸಿದವರು
ಸಿಮ್ರನ್‌ಜೀತ್ ಸಿಂಗ್ (14ನೇ ನಿಮಿಷ),
ರೂಪಿಂದರ್ ಪಾಲ್ ಸಿಂಗ್ (15, 51ನೇ ನಿ)

ಎ ಗುಂಪಿನ ಇತರ ಪಂದ್ಯಗಳು

ತಂಡಗಳು	ಫಲಿತಾಂಶ	ಅಂತರ
ಆಸ್ಟ್ರೇಲಿಯಾ–ಅರ್ಜೆಂಟೀನಾ	ಆಸ್ಟ್ರೇಲಿಯಾಗೆ ಜಯ	5-2
ಜಪಾನ್–ನ್ಯೂಜಿಲೆಂಡ್	ಪಂದ್ಯ ಡ್ರಾ	2-2

ಚಿನ್ನವಾಗುವುದೇ ಮೀರಾ ಬೆಳ್ಳಿ?

ಟೋಕಿಯೊ: ವೇಟ್‌ಲಿಫ್ಟಿಂಗ್‌ನಲ್ಲಿ ಭಾರತದ ಮೀರಾಬಾಯಿ ಗೆದ್ದಿರುವ ಬೆಳ್ಳಿಪದಕ ಚಿನ್ನವಾಗಿ ಪರಿವರ್ತಿತವಾಗಲಿದೆಯೇ?

ಮೀರಾಬಾಯಿ

ಮಹಿಳೆಯರ 49 ಕೆ.ಜಿ. ವಿಭಾಗದಲ್ಲಿ ಮೀರಾ 202 ಕೆಜಿ ತೂಕ ಎತ್ತಿ ಎರಡನೇ ಸ್ಥಾನಪಡೆದಿದ್ದರು. ಮೊದಲ ಸ್ಥಾನ ಗಳಿಸಿದ್ದ ಚೀನಾದ ಜಿಹುಯಿ ಹೊ ಅವರನ್ನು ಉದ್ದೀಪನ ಮದ್ದು ಪರೀಕ್ಷೆಗೊಳಪಡಿಸಲು ವಾಡಾ (ವಿಶ್ವ ಉದ್ದೀಪನ ಮದ್ದು ತಡೆ ಘಟಕ) ನಿರ್ಧರಿಸಿದೆ. ಆದ್ದರಿಂದ ಜಿಹುಯಿ ಅವರನ್ನು ಟೋಕಿಯೊದಲ್ಲಿಯೇ ಇರುವಂತೆ ಸೂಚಿಸಲಾಗಿದೆ ಎಂದು ಎಎನ್‌ಐ ಸುದ್ದಿಸಂಸ್ಥೆಯು ವರದಿ ಮಾಡಿದೆ. ಒಂದೊಮ್ಮೆ ಚೀನಾ ವೇಟ್‌ಲಿಫ್ಟರ್ ಉದ್ದೀಪನ ಮದ್ದು ಸೇವನೆ ಮಾಡಿದ್ದು ಸಾಬೀತಾದರೆ, ಅಮಾನತುಗೊಳ್ಳುವರು. ಆಗ ಮೀರಾಗೆ ಚಿನ್ನದ ಪದಕ ನೀಡಲಾಗುವುದು. ಸದ್ಯ ಮೂರು, ನಾಲ್ಕನೇ ಸ್ಥಾನದಲ್ಲಿರುವವರು ಬೆಳ್ಳಿ ಮತ್ತು ಕಂಚು ಪಡೆಯುವರು ಎಂದು ಹೇಳಲಾಗುತ್ತಿದೆ.

ಮೆಚ್ಚುಗೆ: ಮೀರಾಬಾಯಿ ಅವರು ವೇಟ್‌ಲಿಫ್ಟಿಂಗ್ ಮಾಡುವ ಮಾದರಿಯನ್ನು ಅನುಕರಿಸಿದ್ದ ಪುಟ್ಟ ಬಾಲಕಿಯೊಬ್ಬಳ ವಿಡಿಯೊ ವೈರಲ್ ಆಗಿದೆ. ಈ ವಿಡಿಯೊ ತುಣುಕು ನೋಡಿದ ಮೀರಾಬಾಯಿ ಕೂಡ ಸಂತಸ ವ್ಯಕ್ತಪಡಿಸಿದರು.

ಮಾ ಲಾಂಗ್‌ಗೆ ಮಣಿದ ಶರತ್

ಟೋಕಿಯೊ (ಪಿಟಿಐ): ಭಾರತದ ಅನುಭವಿ ಟೇಬಲ್ ಟೆನಿಸ್ ಪಟು ಅಚಂತ ಶರತ್ ಕಮಲ್ ಅವರ ಒಲಿಂಪಿಕ್ಸ್ ಅಭಿಯಾನ ಮಂಗಳವಾರ ಕೊನೆಗೊಂಡಿದೆ. ಪುರುಷರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನ ಹಣಾಹಣಿಯಲ್ಲಿ ಅವರು ರಿಯೊ ಒಲಿಂಪಿಕ್ಸ್ ಚಾಂಪಿಯನ್ ಮಾ ಲಾಂಗ್ ಎದುರು ಎಡವಿದರು. ಇದರೊಂದಿಗೆ ಕ್ರೀಡಾಕೂಟದ ಟೇಬಲ್ ಟೆನಿಸ್ ವಿಭಾಗದಲ್ಲಿ ಭಾರತದ ಸವಾಲೂ ಅಂತ್ಯವಾಯಿತು.

ವಿಶ್ವ ಚಾಂಪಿಯನ್ ಲಾಂಗ್11-7, 8-11, 13-11, 11-4,11-4ರಿಂದ ಗೆಲುವು ಸಾಧಿಸಿದರೂ 39 ವರ್ಷದ ಶರತ್ ಒಡ್ಡಿದ ಪೈಪೋಟಿ ಗಮನ ಸೆಳೆಯಿತು. 46 ನಿಮಿಷಗಳಲ್ಲಿ ಈ ಪಂದ್ಯ ಕೊನೆಗೊಂಡಿತು.

ಮೊದಲ ಗೇಮ್ ಕೈಚೆಲ್ಲಿದ ಶರತ್, ಎರಡನೇ ಗೇಮ್‌ನ ಆರಂಭದಲ್ಲಿ 7–3ರಿಂದ ಮುನ್ನಡೆ ಗಳಿಸಿದರು. ಸೊಗಸಾದ ಫೋರ್‌ಹ್ಯಾಂಡ್ ಹೊಡೆತಗಳು ಹಾಗೂ ಲಾಂಗ್ ಅವರು ಎಸಗಿದ ಪ್ರಮಾದಗಳು ಈ ಮುನ್ನಡೆಗೆ ನೆರವಾದವು. ಆದರೆ ಸತತ ಐದು ಪಾಯಿಂಟ್ಸ್ ಕಲೆಹಾಕಿದ ಚೀನಾ ಆಟಗಾರ ಹಿನ್ನಡೆಯನ್ನು ತಗ್ಗಿಸಿದರೂ ಗೇಮ್ ಶರತ್ ಪಾಲಾಗುವುದನ್ನು ತಪ್ಪಿಸಲಾಗಲಿಲ್ಲ.

ಮೂರನೇ ಗೇಮ್‌ನ ಆರಂಭದಲ್ಲಿ ಭಾರತದ ಆಟಗಾರನಿಗೆ 4–2ರ ಮುನ್ನಡೆ ದೊರೆಯಿತು. ತಿರುಗೇಟು ನೀಡಿದ ಲಾಂಗ್, ಗೇಮ್‌ಅನ್ನು 8–8ರ ಸಮಬಲಕ್ಕೆ ತಂದರು. ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಗೇಮ್ ಗೆದ್ದುಕೊಂಡ ಲಾಂಗ್ 2–1ರ ಮುನ್ನಡೆ ಗಳಿಸಿದರು.

ನಾಲ್ಕು ಮತ್ತು ಐದನೇ ಗೇಮ್‌ಗಳಲ್ಲಿ ಲಾಂಗ್ ಸಂಪೂರ್ಣ ಪಾರಮ್ಯ ಮೆರೆದರು. ಪಂದ್ಯ ಗೆದ್ದು ಸಂಭ್ರಮಿಸಿದರು. ಭಾರತದ ಮಣಿಕಾ ಬಾತ್ರಾ, ಸುತೀರ್ಥಾ ಮುಖರ್ಜಿ ಮತ್ತು ಜಿ.ಸತ್ಯನ್ ಅವರು ಸಿಂಗಲ್ಸ್ ವಿಭಾಗದ ಸ್ಪರ್ಧೆಗಳಿಂದ ಹೊರಬಿದ್ದಿದ್ದಾರೆ.

ಇದೊಂದು ಕಠಿಣ ಪಂದ್ಯವಾಗಿತ್ತು. ಒಲಿಂಪಿಕ್ಸ್‌ನಲ್ಲಿ ಎದುರಾಳಿ ಯಾರೇ ಆಗಿದ್ದರೂ ಪಂದ್ಯ ಸವಾಲಿನಿಂದಲೇ ಕೂಡಿರುತ್ತದೆ.
ಮಾ ಲಾಂಗ್, ಚೀನಾ ಆಟಗಾರ

ನಾನು ಆಡಿದ ಮೂರು ಅತ್ಯುತ್ತಮ ಪಂದ್ಯಗಳು ಇವು. ಲಾಂಗ್ ಎದುರು ಆಡಿದ್ದು ಶ್ರೇಷ್ಠ ಪಂದ್ಯ. ಇದು ನನಗೆ ಸಾರ್ವಕಾಲಿಕ ಅತ್ಯುತ್ತಮ ಕ್ರೀಡಾಕೂಟ.
ಅಚಂತ ಶರತ್ ಕಮಲ್, ಭಾರತದ ಆಟಗಾರ

ಉಭಯ ಆಟಗಾರರು ಗೆದ್ದ ಗೇಮ್‌ಗಳು

ಮಾ ಲಾಂಗ್ **4**
ಅಚಂತ ಶರತ್ ಕಮಲ್ **1**

ಅಚಂತ ಶರತ್ ಕಮಲ್– ರಾಯಿಟರ್ಸ್ ಚಿತ್ರ

ಚೀನಾದ ಮಾ ಲಾಂಗ್– ರಾಯಿಟರ್ಸ್ ಚಿತ್ರ

ಟುನೀಷಿಯಾದಲ್ಲಿ ಉದಯಿಸಿದ ಹೊಸ ಪ್ರತಿಭೆ

ಈಜುಕೊಳದ ಯುವರಾಜ

ಅಹಮ್ಮದ್ ಹಫ್ನೋಯಿ ಸಂಭ್ರಮ –ಎಎಫ್‌ಪಿ ಚಿತ್ರ

ಅಹಮ್ಮದ್ ಹಫ್ನೋಯಿ
• ಜನನ ಡಿಸೆಂಬರ್ 4, 2002 • ಜನಿಸಿದ ಊರು ಗಾಫ್ಸ, ಮೆಟ್ಲಾಯಿ
• ಪಾಲ್ಗೊಂಡ ಸ್ಪರ್ಧೆ 400 ಮೀ ಫ್ರೀಸ್ಟೈಲ್ • ಚಿನ್ನ ಗೆದ್ದ ಕಾಲ 3:43.36

ಸಾಧನೆಗಳು

- 2018ರ ವಿಶ್ವ ಚಾಂಪಿಯನ್‌ಷಿಪ್ 4x200 ಮೀ.ನಲ್ಲಿ ಬೆಳ್ಳಿ ಪದಕ
- 2018ರ ವಿಶ್ವ ಚಾಂಪಿಯನ್‌ಷಿಪ್ 800 ಮೀ.ನಲ್ಲಿ ಕಂಚಿನ ಪದಕ
- 2018ರ ವಿಶ್ವ ಚಾಂಪಿಯನ್‌ಷಿಪ್ 1500 ಮೀ.ನಲ್ಲಿ ಕಂಚಿನ ಪದಕ
- 2018ರ ವಿಶ್ವ ಚಾಂಪಿಯನ್‌ಷಿಪ್ 4x100 ಮೀ.ನಲ್ಲಿ ಕಂಚಿನ ಪದಕ
- 2018ರ ಯೂತ್ ಒಲಿಂಪಿಕ್ಸ್ 800 ಮೀ.ನಲ್ಲಿ 7ನೇ ಸ್ಥಾನ
- 2018ರ ಯೂತ್ ಒಲಿಂಪಿಕ್ಸ್ 400 ಮೀ.ನಲ್ಲಿ 8ನೇ ಸ್ಥಾನ
- 2019ರ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ 800 ಮೀ.ನಲ್ಲಿ 4ನೇ ಸ್ಥಾನ
- 2019ರ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ 1500 ಮೀ.ನಲ್ಲಿ 6ನೇ ಸ್ಥಾನ

‘ದೇಶದ ಧ್ವಜ ಎತ್ತರೆತ್ತರಕ್ಕೆ ಏರುತ್ತಿರುವುದನ್ನು ಕಂಡಾಗ ಹೃದಯ ತುಂಬಿ ಬಂತು. ಅದರ ಬೆನ್ನಲ್ಲೇ ರಾಷ್ಟ್ರಗೀತೆ ಮೊಳಗಿದಾಗ ಕಣ್ಣುಗಳು ಮಂಜಾದವು. ಚಿನ್ನದ ಪದಕ ಕೊರಳನ್ನು ಅಲಂಕರಿಸುತ್ತಿದ್ದಂತೆ ಆನಂದಬಾಷ್ಪ ಹರಿಯಿತು. ನಾನಾಗ ತುಂಬ ಭಾವುಕನಾಗಿದ್ದೆ...’

18ರ ಹರಯದ ಅಹಮ್ಮದ್ ಹಫ್ನೋಯಿ ಟೋಕಿಯೊದಲ್ಲಿ ಒಲಿಂಪಿಕ್ಸ್ ಪದಕ ಪ್ರದಾನ ಸಮಾರಂಭದ ವೇದಿಕೆಯಿಂದ ಇಳಿದ ಕೂಡಲೇ ಆಡಿದ ಮಾತುಗಳಲ್ಲಿ ಹೃದಯಾಂತರಾಳದ ಭಾವನೆ ಇತ್ತು; ಅಭಿಮಾನ ತುಂಬಿತ್ತು.

ಟುನೀಷಿಯಾದ 18ರ ಹರಯದ ಅಹಮ್ಮದ್ ಜುಲೈ 25ರಂದು ಒಲಿಂಪಿಕ್ಸ್ ಈಜು ಸ್ಪರ್ಧೆಯ 400 ಮೀಟರ್ಸ್ ಫ್ರೀಸ್ಟೈಲ್ ವಿಭಾಗದಲ್ಲಿ ಚಾಂಪಿಯನ್ ಆಗಿ ‘ಈಜುಕೊಳದ ದೊಡ್ಡಣ್ಣ’ರನ್ನೇ ದಂಗುಬಡಿಸಿದ್ದರು. ಅವರು ಚಿನ್ನದ ಪದಕಕ್ಕೆ ಮುತ್ತಿಡುವ ಮೊದಲೇ ಟುನೀಷಿಯಾದಲ್ಲಿ ಸಂಭ್ರಮದ ಅಲೆ ಎದ್ದಿತ್ತು. ಯಾಕೆಂದರೆ ಅಂದು, ಆ ದೇಶದ ಗಣರಾಜ್ಯೋತ್ಸವ ಆಗಿತ್ತು. ಪ್ರಭುತ್ವವನ್ನು ಮೀರಿ ನಿಂತು 1957ರಲ್ಲಿ ‘ಸ್ವತಂತ್ರ’ವಾದ ದಿನವಾಗಿತ್ತು.

ಅತ್ತ ತನ್ನ ದೇಶದ ಜನರು ಖುಷಿಯಿಂದ ಇದ್ದಾಗ ಇತ್ತ ಈಜುಕೊಳಕ್ಕೆ ಧುಮುಕಿದ ಅಹಮ್ಮದ್ ಹಫ್ನೋಯಿ 400 ಮೀಟರ್ಸ್ ಅಂತರ ಕ್ರಮಿಸಿ ಎದ್ದಾಗ ಚಿನ್ನದ ಹೊಳಪು ಮೂಡಿತ್ತು.

ಅರ್ಹತಾ ಸುತ್ತಿನಲ್ಲಿ ಕೊನೆಯವರಾಗಿ ಫೈನಲ್ ಪ್ರವೇಶಿಸಿದ್ದ ಅಹಮ್ಮದ್ ಪದಕದ ಸುತ್ತಿನಲ್ಲಿ ಮೊದಲಿಗರಾಗಿ ಮೇಲೆದ್ದಿದ್ದರು.

ಆ ಮೂಲಕ ಅಮೆರಿಕ ಮತ್ತು ಆಸ್ಟ್ರೇಲಿಯಾದ ಈಜುಪಟುಗಳನ್ನು ಅಚ್ಚರಿಗೊಳಿಸಿದ್ದರು. ಅಂದು ಸ್ಪರ್ಧೆಗಿದ್ದ ಒಟ್ಟು 12 ಪದಕಗಳಲ್ಲಿ ಆರು ಅಮೆರಿಕ ಪಾಲಾಗಿದ್ದರೆ ಮೂರು ಆಸ್ಟ್ರೇಲಿಯಾದವರ ಕೊರಳು ಸೇರಿದ್ದವು.

400 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಆಸ್ಟ್ರೇಲಿಯಾದ ಜ್ಯಾಕ್ ಮೆಕ್‌ಲಾಫ್ಲಿನ್ ಅವರನ್ನು ಹಿಂದಿಕ್ಕಿ ಅಹಮ್ಮದ್ 3 ನಿಮಿಷ 43.36 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ್ದರು.

ವಿಂಬಲ್ಡನ್ ಟೂರ್ನಿಯ ಮಹಿಳಾ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿ ಗಮನ ಸೆಳೆದಿದ್ದ ಒನ್ಸ್ ಜಬೆವುರ್ ಅವರ ಸಾಧನೆಗೆ ಪುಳಕಗೊಂಡಿದ್ದ ಟುನೀಷಿಯಾದ ಕ್ರೀಡಾಕ್ಷೇತ್ರದಲ್ಲಿ ಮತ್ತಷ್ಟು ಭರವಸೆ ಮೂಡಿಸಿತ್ತು, ಅಹಮ್ಮದ್ ಅವರ ಸಾಧನೆ.

ಕೊರೊನಾದಿಂದಾಗಿ ಟುನೀಷಿಯಾದಲ್ಲಿ ಈಗ ಆತಂಕ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲಿನ ಸಾರ್ವಜನಿಕ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲು ಪರದಾಟ ನಡೆಯುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲು ಬಂದಿರುವ ಅವರು ಸವಾಲುಗಳನ್ನು ಮೆಟ್ಟಿನಿಂತೇ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ.

(ಮಾಹಿತಿ: ಎಎಫ್‌ಪಿ)

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಜಪಾನ್	10	3	5	18
ಅಮೆರಿಕ	9	8	8	25
ಚೀನಾ	9	5	7	21
ರಷ್ಯಾ*	7	7	4	18
ಬ್ರಿಟನ್	4	5	4	13
ಭಾರತ (39ನೇ ಸ್ಥಾನ)	0	1	0	1

* ರಷ್ಯಾದ ಕ್ರೀಡಾಪಟುಗಳು ಒಲಿಂಪಿಕ್ ಸಮಿತಿಯ ಹೆಸರಿನಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಪದಕ ಗೆದ್ದರೆ ‘ಲವ್ಲಿ’ ನಗದು

ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಹಾಗೂ ಪ್ಯಾರಾಲಿಂಪಿಕ್ಸ್‌ಗಳಲ್ಲಿ ಪದಕಗಳನ್ನು ಗೆಲ್ಲುವ ತನ್ನ ವಿದ್ಯಾರ್ಥಿಗಳಿಗೆ ಜಲಂಧರ್ ಮೂಲದ ಲವ್ಲಿ ಪ್ರೊಫೆಷನಲ್ ವಿಶ್ವವಿದ್ಯಾಲಯವು (ಎಲ್‌ಪಿಯು) ನಗದು ಬಹುಮಾನ ನೀಡುವುದಾಗಿ ಘೋಷಿಸಿದೆ.

ಈ ವಿಶ್ವವಿದ್ಯಾಲಯದಲ್ಲಿ ಓದಿದ 11 ಮಂದಿ ವಿದ್ಯಾರ್ಥಿಗಳು ಟೋಕಿಯೊ ಒಲಿಂಪಿಕ್ ಮತ್ತು ಪ್ಯಾರಾಲಿಂಪಿಕ್ ಕೂಟಗಳಿಗೆ ಆಯ್ಕೆಯಾಗಿದ್ದಾರೆ. ಚಿನ್ನ ಗೆದ್ದರೆ ₹ 50 ಲಕ್ಷ, ಬೆಳ್ಳಿ ಪದಕಕ್ಕೆ ₹ 25 ಲಕ್ಷ ಮತ್ತು ಕಂಚು ಗೆದ್ದರೆ ₹ 10 ಲಕ್ಷ ನೀಡುವುದಾಗಿ ವಿಶ್ವವಿದ್ಯಾಲಯ ತಿಳಿಸಿದೆ. ಕುಸ್ತಿಪಟು ಬಜರಂಗ್ ಪೂನಿಯಾ, ಜಾವೆಲಿನ್ ಥ್ರೊ ಪಟು ನೀರಜ್ ಚೋಪ್ರಾ, ಪ್ಯಾರಾ ಹೈಜಂಪ್ ಪಟು ನಿಶದ್ ಕುಮಾರ್ ಮತ್ತು ಹಾಕಿ ತಂಡದ ನಾಯಕ ಮನ್‌ಪ್ರೀತ್ ಸಿಂಗ್ ಸೇರಿದಂತೆ ಏಳು ಮಂದಿ ಆಟಗಾರರು ಈ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದ ಅಥ್ಲೀಟ್‌ಗಳಲ್ಲಿ ಸೇರಿದ್ದಾರೆ.

ಅಮ್ಮನ ಬಳಿ ಮಗುವಾದ ಮೀರಾ

ಇಂಫಾಲ (ಪಿಟಿಐ): ತವರಿಗೆ ಮರಳಿದ ಮೀರಾಬಾಯಿ ಚಾನು ಹೆತ್ತ ತಾಯಿಯ ಬಳಿ ಮಗುವಾದರು. ಇಲ್ಲಿನ ವಿಮಾನ ನಿಲ್ದಾಣದಲ್ಲಿ ಅಮ್ಮ ಒಂಗ್ಬಿ ತೊಂಬಿ ಲೀಮಾ ಮತ್ತು ತಂದೆ ಕೃತಿ ಮೇತಿ ಅವರನ್ನು ಭೇಟಿಯಾದಾಗ ಮೀರಾ ಆನಂದಬಾಷ್ಪ ಸುರಿಸಿದರು. ವಿಮಾನ ನಿಲ್ದಾಣದಲ್ಲಿ ಅವರಿಗೆ ಅದ್ದೂರಿ ಸ್ವಾಗತ ಕೋರಲಾಯಿತು. ಮುಖ್ಯಮಂತ್ರಿ ಬಿರೇನ್ ಸಿಂಗ್ ಸನ್ಮಾನಿಸಿದರು.

ಸ್ಪರ್ಧಾ ಸಮಯ

ಸಮಯ	ಸ್ಪರ್ಧೆ
ಆರ್ಚರಿ	
ಬೆಳಿಗ್ಗೆ 7.30	ಪುರುಷರ ವೈಯಕ್ತಿಕ ವಿಭಾಗದ ಎಲಿಮಿನೇಷನ್ಸ್ (ತರುಣದೀಪ್ ರಾಯ್)
ಮಧ್ಯಾಹ್ನ 12.30	ಪುರುಷರ ವೈಯಕ್ತಿಕ ವಿಭಾಗದ ಎಲಿಮಿನೇಷನ್ಸ್ (ಪ್ರವೀಣ್ ಜಾಧವ್)
ಮಧ್ಯಾಹ್ನ 2.14	ಮಹಿಳೆಯರ ವೈಯಕ್ತಿಕ ವಿಭಾಗದ ಎಲಿಮಿನೇಷನ್ಸ್ (ದೀಪಿಕಾ ಕುಮಾರಿ)
ಬ್ಯಾಡ್ಮಿಂಟನ್	
ಬೆಳಿಗ್ಗೆ 7.30	ಮಹಿಳಾ ಸಿಂಗಲ್ಸ್ ಗುಂಪು ಹಂತ (ಪಿ.ವಿ.ಸಿಂಧು)
ಮಧ್ಯಾಹ್ನ 2.30	ಪುರುಷರ ಸಿಂಗಲ್ಸ್ ಗುಂಪು ಹಂತ (ಬಿ.ಸಾಯಿ ಪ್ರಣೀತ್)
ಬಾಕ್ಸಿಂಗ್	
ಮಧ್ಯಾಹ್ನ 2.33	ಮಹಿಳೆಯರ ಮಿಡ್ಲ್‌ವೇಟ್ ಪ್ರೀಕ್ವಾರ್ಟರ್‌ಫೈನಲ್ (ಪೂಜಾ ರಾಣಿ)
ರೋಯಿಂಗ್	
ಬೆಳಿಗ್ಗೆ 8 ಗಂಟೆ	ಪುರುಷರ ಲೈಟ್‌ವೇಟ್ ಡಬಲ್ ಸ್ಕಲ್ಸ್ ಸೆಮಿಫೈನಲ್ (ಅರವಿಂದ್ ಸಿಂಗ್, ಅರ್ಜುನ್ ಲಾಲ್ ಜಾಟ್)
ಸೇಲಿಂಗ್	
ಬೆಳಿಗ್ಗೆ 8.35	ಪುರುಷರ ಸ್ಕಿಫ್ 49ಇಆರ್ ರೇಸ್ 4 (ಗಣಪತಿ ಚೆಂಗಪ್ಪ, ವರುಣ್ ಥಕ್ಕರ್)
ಈಜು	
ಬೆಳಿಗ್ಗೆ 7.11	ಮಹಿಳೆಯರ 200 ಮೀ. ಫ್ರೀಸ್ಟೈಲ್ ಫೈನಲ್
ಬೆಳಿಗ್ಗೆ 7.19	ಪುರುಷರ 200 ಮೀ. ಫ್ರೀಸ್ಟೈಲ್ ಫೈನಲ್
ಬೆಳಿಗ್ಗೆ 8.15	ಮಹಿಳೆಯರ 200 ಮೀ. ವೈಯಕ್ತಿಕ ಮೆಡ್ಲೆ ಫೈನಲ್
ಬೆಳಿಗ್ಗೆ 8.24	ಮಹಿಳೆಯರ 1500 ಮೀ. ಫ್ರೀಸ್ಟೈಲ್ ಫೈನಲ್
ಬೆಳಿಗ್ಗೆ 8.56	ಪುರುಷರ 4X200 ಮೀ. ಫ್ರೀಸ್ಟೈಲ್ ರಿಲೇ ಫೈನಲ್
ಹಾಕಿ (ಮಹಿಳಾ ತಂಡ)	
ಬೆಳಿಗ್ಗೆ 6.30	ಭಾರತ–ಗ್ರೇಟ್ ಬ್ರಿಟನ್
ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್	
ಮಧ್ಯಾಹ್ನ 3.45	ಪುರುಷರ ಆಲ್–ಅರೌಂಡ್ ಫೈನಲ್

(ಆವರಣದಲ್ಲಿ ಭಾರತದ ಸ್ಪರ್ಧಿಗಳು)

ಭಾರತೀಯ ಕಾಲಮಾನ · ಲೈವ್ ಸೋನಿ ನೆಟ್‌ವರ್ಕ್

ಚಿರಾಗ್–ಸಾತ್ವಿಕ್‌ಗೆ ಕೈಕೊಟ್ಟ ಗೇಮ್ ‘ಲೆಕ್ಕ’

ಚಿರಾಗ್ ಶೆಟ್ಟಿ

ಸಾತ್ವಿಕ್

ಟೋಕಿಯೊ (ಪಿಟಿಐ): ಬ್ಯಾಡ್ಮಿಂಟನ್‌ನಲ್ಲಿ ಭಾರತದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿ ರಾಜ್ ರಂಕಿರೆಡ್ಡಿ ಅವರ ನಾಕ್‌ಔಟ್ ಹಂತ ತಲುಪುವ ಕನಸು ಮಂಗಳವಾರ ಕಮರಿಹೋಯಿತು.

ಪುರುಷರ ಡಬಲ್ಸ್ ವಿಭಾಗದ ‘ಎ’ ಗುಂಪಿನ ಹಣಾಹಣಿಯಲ್ಲಿ ಭರ್ಜರಿ ಸ್ಮ್ಯಾಷ್‌ಗಳ ಮೂಲಕ ಮಿಂಚಿದ ಬ್ರಿಟನ್‌ನ ಬೆನ್ ಲೇನ್ ಮತ್ತು ಸೀನ್ ವೆಂಡಿ ಅವರಿಗೆ ನಾಜೂಕಿನ ಆಟದ ಮೂಲಕ ತಿರುಗೇಟು ನೀಡಿದ ಭಾರತದ ಜೋಡಿ 21-17, 21-19ರಲ್ಲಿ ಜಯ ಗಳಿಸಿದರು.

ಆದರೆ ಗುಂಪಿನಲ್ಲಿ ಮೂರನೇ ಸ್ಥಾನ ಗಳಿಸಿದ್ದರಿಂದ ಅವರಿಗೆ ಮುಂದಿನ ಮುಂದಿನ ಹಂತಕ್ಕೆ ಸಾಗಲು ಆಗಲಿಲ್ಲ. ಇಂಡೊನೇಷ್ಯಾದ ಮಾರ್ಗಸ್ ಗಿಡಿಯಾನ್ ಮತ್ತು ಕೆವಿನ್ ಸಂಜಯ ಸುಕಮುಲ್ಜೊ ಗುಂಪಿನಲ್ಲಿ ಅಗ್ರ ಸ್ಥಾನ ಗಳಿಸಿದರೆ ಚೀನಾ ಥೈಪೆಯ ಯಾಂಗ್ ಲೀ ಹಾಗೂ ಚಿನ್ ಲಿನ್ ವಾಂಗ್ ಎರಡನೇ ಸ್ಥಾನ ಗಳಿಸಿದರು.

ಮೂರು ತಂಡಗಳು ಕೂಡ ಎರಡು ಪಂದ್ಯ ಗಳನ್ನು ಗೆದ್ದುಕೊಂಡು ಪಾಯಿಂಟ್‌ಗಳನ್ನು ಸಮವಾಗಿ ಹಂಚಿಕೊಂಡಿದ್ದವು.

ಹೀಗಾಗಿ ಹೆಚ್ಚು ಗೇಮ್‌ಗಳನ್ನು ಗೆದ್ದ ತಂಡಗಳಿಗೆ ನಾಕೌಟ್‌ಗೆ ಬಡ್ತಿ ನೀಡಲು ನಿರ್ಧರಿಸಲಾಯಿತು. ಸೋಮವಾರದ ಪಂದ್ಯದಲ್ಲಿ ನೇರ ಗೇಮ್‌ಗಳಿಂದ ಇಂಡೊನೇಷ್ಯಾಗೆ ಮಣಿದದ್ದು ಭಾರತದ ಜೋಡಿಯ ಹಾದಿಗೆ ಅಡ್ಡಿಯಾಯಿತು.

ಸಿಂಧುಗೆ ಇಂದು ಚ್ಯುಂಗ್ ಸವಾಲು

ಇಸ್ರೇಲ್ ಆಟಗಾರ್ತಿ ಪೊಲಿಕರ್ಪೋವ ಸೆನಿನಾ ವಿರುದ್ಧ ಮೊದಲ ಸುತ್ತಿನ ಪಂದ್ಯದಲ್ಲಿ ಸುಲಭ ಜಯ ಸಾಧಿಸಿರುವ ಪಿ.ವಿ.ಸಿಂಧು ಬುಧವಾರದ ಪಂದ್ಯದಲ್ಲಿ ಹಾಂಗ್‌ಕಾಂಗ್‌ನ ಚ್ಯುಂಗ್ ನಾನ್ ಇ ಅವರ ಸವಾಲನ್ನು ಎದುರಿಸುವರು.

‘ಜೆ’ ಗುಂಪಿನ ಮೊದಲ ಪಂದ್ಯದಲ್ಲಿ ಸಿಂಧು 21–7, 21–10ರಲ್ಲಿ ಜಯ ಗಳಿಸಿದ್ದರು. ಚ್ಯುಂಗ್ ನಾನ್ ಮೊದಲ ಪಂದ್ಯದಲ್ಲಿ ಪೊಲಿಕರ್ಪೋವ ಎದುರು 21–12,15–21, 21–16ರಲ್ಲಿ ಗೆದ್ದಿದ್ದರು.

ಭಾರತದ ಶೂಟರ್‌ಗಳಿಗೆ ತಪ್ಪಿದ ಗುರಿ

ಟೋಕಿಯೊ (ಪಿಟಿಐ): ಭಾರತದ ಶೂಟರ್‌ಗಳು ನಿಖರ ಗುರಿ ಇಡುವಲ್ಲಿ ಮತ್ತೊಮ್ಮೆ ವಿಫಲರಾದರು. ಕ್ರೀಡಾ ಕೂಟದ ಮಿಶ್ರ ತಂಡ ವಿಭಾಗಗಳಲ್ಲಿ ಫೈನಲ್ ತಲುಪಲು ಅವರಿಗೆ ಸಾಧ್ಯವಾಗಲಿಲ್ಲ.

ಪದಕದ ಭರವಸೆ ಮೂಡಿಸಿದ್ದ ಸೌರಭ್ ಚೌಧರಿ ಹಾಗೂ ಮನು ಭಾಕರ್ ಅವರು, ಮಂಗಳವಾರ ಅಸಾಕ ಶೂಟಿಂಗ್ ರೇಂಜ್ ನಲ್ಲಿ ನಡೆದ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಅರ್ಹತಾ ಸುತ್ತಿನಲ್ಲೇ ಕೈಚೆಲ್ಲಿದರು. ಇದೇ ವಿಭಾಗದಲ್ಲಿ ಸ್ಪರ್ಧೆಯಲ್ಲಿದ್ದ ಅಭಿಷೇಕ್ ವರ್ಮಾ ಹಾಗೂ ಯಶಸ್ವಿನಿ ಸಿಂಗ್ ದೇಸ್ವಾಲ್ ಜೋಡಿ ಕೂಡ ನಿರಾಸೆ ಅನುಭವಿಸಿತು.

ಮೊದಲ ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಗಳಿಸಿದ್ದ ಸೌರಭ್ ಮತ್ತು ಮನು, ಎರಡನೇ ಅರ್ಹತಾ ಸುತ್ತನ್ನು ಏಳನೇ ಸ್ಥಾನದೊಂದಿಗೆ ಕೊನೆಗೊಳಿಸಿದರು. ಅಭಿಷೇಕ್ ಹಾಗೂ ಯಶಸ್ವಿನಿ ಮೊದಲ ಅರ್ಹತಾ ಸುತ್ತಿನಲ್ಲೇ 17ನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಳ್ಳಬೇಕಾಯಿತು.

10 ಮೀ. ಏರ್ ರೈಫಲ್ ವಿಭಾಗ ದಲ್ಲಿಯೂ ಭಾರತದ ಸ್ಪರ್ಧಿಗಳಿಗೆ ನಿರಾಸೆ ಕಾದಿತ್ತು. ಇಳವೆನ್ನಿಲಾ ವಾಳರಿವನ್ ಮತ್ತು ದಿವ್ಯಾಂಶ್ ಸಿಂಗ್ ಪನ್ವರ್ ಜೋಡಿಯು ಮೊದಲ ಹಂತದ ಅರ್ಹತಾ ಸುತ್ತಿನಲ್ಲಿ 12ನೇ ಸ್ಥಾನ ಗಳಿಸಿದರೆ, ಅಂಜುಮ್ ಮೌದ್ಗಿಲ್ ಹಾಗೂ ದೀಪಕ್ ಕುಮಾರ್ ಅವರು 18ನೇ ಸ್ಥಾನದೊಂದಿಗೆ ಸ್ಪರ್ಧೆ ಕೊನೆಗೊಳಿಸಿದರು.

ನಿರಾಸೆಯಲ್ಲಿ ಮನು ಭಾಕರ್– ಪಿಟಿಐ ಚಿತ್ರ

ಚಿನ್ನ ಬಾಚಿಕೊಂಡ ಚೀನಾ

10 ಮೀ. ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಚಿನ್ನ ಗೆದ್ದ ಚೀನಾದ ಜಿಯಾಂಗ್ ರ್ಯಾನ್‌ಕ್ಸಿನ್ ಮತ್ತು ಪಾಂಗ್ ವೇ – ರಾಯಿಟರ್ಸ್ ಚಿತ್ರ

10 ಮೀ. ಏರ್ ರೈಫಲ್ ಮತ್ತು ಪಿಸ್ತೂಲ್ ಮಿಶ್ರ ತಂಡ ವಿಭಾಗಗಳ ಎರಡೂ ಚಿನ್ನದ ಪದಕಗಳನ್ನು ಚೀನಾ ತನ್ನದಾಗಿಸಿಕೊಂಡಿತು.

10 ಮೀ. ಏರ್ ರೈಫಲ್‌ನಲ್ಲಿ ಚೀನಾದ ಯಾಂಗ್ ಕಿಯಾನ್–ಯಾಂಗ್ ಹೋರನ್ ಜೋಡಿಯು 17–13ರಿಂದ ಅಮೆರಿಕದ ಮೇರಿ ಟಕ್ಕರ್– ಲೂಕಾಸ್ ಕೊಜೆನಿಸ್ಕಿ ಜೋಡಿಯನ್ನು ಪರಾಭವಗೊಳಿಸಿತು. ಈ ವಿಭಾಗದ ಕಂಚು ರಷ್ಯಾದ ಯೂಲಿಯಾ ಕರಿಮೊವಾ–ಸೆರ್ಜೆ ಕಮೆನ್‌ಸ್ಕಿಯ್ ಪಾಲಾಯಿತು.

ಚೀನಾದ ಜಿಯಾಂಗ್ ರ್ಯಾನ್‌ಕ್ಸಿನ್–ಪಾಂಗ್ ವೇ ಜೋಡಿಯು 16–14ರಿಂದ ರಷ್ಯಾದ ವಿಟಾಲಿನಾ ಬ್ಯಾಟ್ಸ್‌ರಸ್ಕಿನಾ–ಆರ್ಟೆಮ್ ಚೆರ್ನೊಸೊವ್ ಅವರನ್ನು ಮಣಿಸಿ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನಕ್ಕೆ ಮುತ್ತಿಟ್ಟಿತು. ಉಕ್ರೇನ್ ತಂಡದ ಒಲೆನಾ ಕೋಸ್ಟಯಿಚ್ ಮತ್ತು ಒಲೆಹ್ ಒಮೆಲ್ಚುಕ್ ಅವರಿಗೆ ಒಲಿಯಿತು.

ಬ್ರಿಟನ್‌ನ ಟಾಮ್ ಡೀನ್ –ಎಎಫ್‌ಪಿ ಚಿತ್ರ

ಈಜುಕೊಳದಲ್ಲಿ ಅಮೆರಿಕದ ಪ್ರಾಬಲ್ಯಕ್ಕೆ ಪೆಟ್ಟುಕೊಟ್ಟ ಬ್ರಿಟನ್ ಈಜುಗಾರ

ಕೋವಿಡ್ ಜಯಿಸಿದ್ದ ಡೀನ್‌ಗೆ ಚಿನ್ನ

ಟೋಕಿಯೊ (ಎಪಿ): ಬ್ರಿಟನ್‌ನ ಟಾಮ್ ಡೀನ್ ಟೋಕಿಯೊಗೆ ಬರುವ ಮುನ್ನ ಎರಡು ಬಾರಿ ಕೋವಿಡ್‌ನಿಂದ ಬಳಲಿದ್ದರು. ಆ ಕಹಿ ನೆನಪುಗಳನ್ನು ಹಿಂದಿಕ್ಕಿದ ಅವರು, ಮಂಗಳವಾರ ಪುರುಷರ 200 ಮೀಟರ್ ಫ್ರೀಸ್ಟೈಲ್ ಈಜಿನಲ್ಲಿ ಚಿನ್ನದ ಪದಕ ಗೆದ್ದರು.

ಅವರದೇ ದೇಶದ ಡಂಕನ್ ಸ್ಕಾಟ್ ಬೆಳ್ಳಿ ಪದಕ ಜಯಿಸಿದರು. ಇದರೊಂದಿಗೆ ಒಲಿಂಪಿಕ್ಸ್ ಈಜು ಸ್ಪರ್ಧೆಯೊಂದರಲ್ಲಿ ಮೊದಲ ಎರಡೂ ಸ್ಥಾನಗಳನ್ನು ಬ್ರಿಟನ್ ಜಯಿಸಿದ ದಾಖಲೆ ನಿರ್ಮಾಣವಾಯಿತು.

'ನನ್ನ ಜೀವಮಾನದ ಅತ್ಯಂತ ಶ್ರೇಷ್ಠ ಸಾಧನೆಯಾಗಿದೆ' ಎಂದು ಡೀನ್ ಹೇಳಿದರು. ಟಾಮ್ ಒಂದು ನಿಮಿಷ, 44.22ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಹೋದ ಜನವರಿಯಲ್ಲಿ ಈ ರೀತಿ ಈಜುವುದು ಟಾಮ್ ಅವರಿಂದ ಸಾಧ್ಯವಿರಲಿಲ್ಲ. ಏಕೆಂದರೆ, ಆಗ ಎರಡನೇ ಬಾರಿ ಕೋವಿಡ್ ಆಗಿತ್ತು. ಹೃದಯ, ಶ್ವಾಸಕೋಶಗಳ ತೊಂದರೆ ಹೆಚ್ಚಿತ್ತು. ಸತತ ಕೆಮ್ಮು ಮತ್ತು ಎದೆನೋವು ಕಾಡಿತ್ತು. ಅದರಿಂದಾಗಿ ತಮ್ಮ ಮನೆಯಲ್ಲಿ ಪ್ರತ್ಯೇಕವಾಸದಲ್ಲಿದ್ದು ಚಿಕಿತ್ಸೆ ಪಡೆದಿದ್ದರು.

ಏಪ್ರಿಲ್‌ನಲ್ಲಿ ಇದ್ದ ಟ್ರಯಲ್ಸ್‌ಗೆ ಅಭ್ಯಾಸ ಮಾಡುವುದು ಕಠಿಣವಾಗಿತ್ತು.

'ಆಗ ನನಗೆ ಒಲಿಂಪಿಕ್ ಚಿನ್ನ ಹಲವಾರು ಮೈಲು ದೂರದಲ್ಲಿದ್ದಂತೆ ಕಂಡಿತ್ತು. ಆದರೆ ಈಗ ಕನಸು ನನಸಾಗಿದೆ' ಎಂದು ಟಾಮ್ ಹೇಳುತ್ತಾರೆ.

'ಕಾಯಿಲೆ ಜೀವಕ್ಕೆ ಮಾರಕವಾಗುವಷ್ಟಿರಲಿಲ್ಲ. ಆದರೂ ನಮ್ಮ ಟ್ರೇನಿಂಗ್‌ನಲ್ಲಿ ಕಾರ್ಡಿಯೊ ವಾಸ್ಕುಲರ್ ಭಾಗದ ಮೇಲೆ ಹೆಚ್ಚು ಒತ್ತಡ ಬೀಳುತ್ತದೆ. ಶ್ವಾಸಕೋಶದ ಕಾರ್ಯವೂ ಮುಖ್ಯ. ಹೆಚ್ಚು ಶ್ರಮದಿಂದ ಶ್ವಾಸಕೋಶಕ್ಕೆ ಹಾನಿಯಾಗುವ ಸಂಭವ ಇರುತ್ತದೆ. ಆದರೂ ಆ ಮೂರು ತಿಂಗಳಲ್ಲಿ ಪಟ್ಟ ಶ್ರಮ ಅಸಾಧಾರಣವಾದದ್ದು' ಎಂದರು.

ಒಂದು ಹಂತದಲ್ಲಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವುದೇ ಅವರಿಗೆ ಕಷ್ಟವಾಗಿತ್ತು.

'ಅವರ ಭುಜದ ಶಕ್ತಿ ಅಗಾಧವಾದದ್ದು. ಸ್ಟ್ರೈಡ್, ಸ್ಟ್ರೋಕ್‌ಗಳು ಆಕರ್ಷಕವಾಗಿದ್ದವು. ಟಾಮ್ ಸಾಧನೆ ಅನುಕರಣೀಯ' ಎಂದು ಬೆಳ್ಳಿ ವಿಜೇತ ಸ್ಕಾಟ್ ಹೇಳಿದರು. ಈ ವಿಭಾಗದಲ್ಲಿ ಬ್ರೆಜಿಲ್‌ನ ಶಿಫ್ಲರ್ ಮೂರನೇ ಸ್ಥಾನ ಪಡೆದರು.

ಮಹಿಳೆಯರ 100 ಮೀಟರ್ಸ್ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಚಿನ್ನದ ಪದಕ ಮುಡಿಗೇರಿಸಿಕೊಂಡ ಅಮೆರಿಕದ ಲಿಡಿಯಾ ಜಾಕೋಬಿ ವಿಜಯ ವೇದಿಕೆಯಲ್ಲಿ ಸಂಭ್ರಮಿಸಿದ ಬಗೆ–ರಾಯಿಟರ್ಸ್ ಚಿತ್ರ

17ರ ಬಾಲೆ ಲಿಡಿಯಾ ಜಾಕೋಬಿಗೆ ಚಿನ್ನದ ಸಂಭ್ರಮ

17 ವರ್ಷದ ಲಿಡಿಯಾ ಜಾಕೋಬಿ ಮಂಗಳವಾರ ಈಜುಕೊಳದಲ್ಲಿ ಮಿಂಚಿನ ಸಂಚಲನ ಮೂಡಿಸಿದರು. ಮಹಿಳೆಯರ 100 ಮೀಟರ್ಸ್ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಚಿನ್ನದ ಪದಕ ಮುಡಿಗೇರಿಸಿಕೊಂಡರು.

ಅಮೆರಿಕದ ಲಿಡಿಯಾ ಒಂದು ನಿಮಿಷ, 4.95 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ದಕ್ಷಿಣ ಆಫ್ರಿಕಾದ ತಜಾನಾ ಶಾನ್ ಮೇಕರ್ ಒಂದು ನಿಮಿಷ 5.22 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಬೆಳ್ಳಿ ಪದಕ ಕೊರಳಿಗೇರಿಸಿಕೊಂಡರು. ಅಮೆರಿಕದ ಎಲ್. ಕಿಂಗ್ ಮೂರನೇ ಸ್ಥಾನ ಗಳಿಸಿದರು.

ರಷ್ಯಾ ಜಯಭೇರಿ: ಪುರುಷರ 100 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ರಷ್ಯಾದ ಇವಾಗ್ನಿ ರೈಲಾವ್ (51.98ಸೆ) ಮತ್ತು ಅವರ ತಂಡದವರೇ ಆದ ಕ್ಲೈಮೆಂಟ್ ಕೊಲೆಸ್ನಿಕೊವ್ (52ಸೆ) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಜಯಿಸಿದರು.

ಅಮೆರಿಕದ ರಿಯಾನ್ ಮರ್ಫಿ (52.19ಸೆ) ಕಂಚಿನ ಪದಕ ಪಡೆದರು.

1992ರ ಒಲಿಂಪಿಕ್ಸ್‌ನಲ್ಲಿ ಅಮೆರಿಕದ ಈಜುಪಟುಗಳು ಬ್ಯಾಕ್‌ಸ್ಟ್ರೋಕ್‌ನಲ್ಲಿ ಸೋಲನುಭವಿಸಿದ್ದರು. ಅದರ ನಂತರ ಅವರದ್ದೇ ಪಾರಮ್ಯವಿತ್ತು. ಕಳೆದ ಆರು ಒಲಿಂಪಿಕ್ಸ್‌ಗಳಲ್ಲಿ 12 ಚಿನ್ನದ ಪದಕಗಳನ್ನು ಗೆದ್ದಿದ್ದರು. ರಿಯೊ ಒಲಿಂಪಿಕ್ಸ್‌ನಲ್ಲಿ ಮರ್ಫಿ 100 ಮೀ ಮತ್ತು 200 ಮೀ ಬ್ಯಾಕ್ ಸ್ಟ್ರೋಕ್‌ನಲ್ಲಿ ಚಿನ್ನ ಗೆದ್ದಿದ್ದರು.

ಆದರೆ ಈ ಬಾರಿ ರಷ್ಯಾ ಈಜುಗಾರರು ಆಘಾತ ನೀಡಿದರು.

ಬಾಕ್ಸಿಂಗ್: ಎಂಟರ ಘಟ್ಟಕ್ಕೆ ಲಗ್ಗೆಯಿಟ್ಟ ಭಾರತದ ಮಹಿಳಾ ಬಾಕ್ಸರ್

'ಕನಸು' ಅರಳಿಸಿದ ಲವ್ಲಿನಾ

ಟೋಕಿಯೊ (ಪಿಟಿಐ): ಭಾರತದ ಬಾಕ್ಸರ್ ಲವ್ಲಿನಾ ಬೋರ್ಗೊಹೈನ್ ತಮ್ಮ ಚೊಚ್ಚಲ ಒಲಿಂಪಿಕ್ಸ್‌ನಲ್ಲಿಯೇ ಎಂಟರ ಘಟ್ಟಕ್ಕೆ ಲಗ್ಗೆ ಇಟ್ಟಿದ್ದಾರೆ.

ಮಂಗಳವಾರ ಬೆಳಿಗ್ಗೆ ನಡೆದ ಮಹಿಳೆಯರ 69 ಕೆ.ಜಿ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಅವರು 3–2ರಿಂದ ಜರ್ಮನಿಯ ಅನುಭವಿ ಬಾಕ್ಸರ್ ನಡೈನ್ ಅಪೆಜ್ ಅವರನ್ನು ಮಣಿಸಿದರು.

ತಮಗಿಂತ 12 ವರ್ಷ ದೊಡ್ಡವರಾದ ಅಪೆಜ್ ಒಡ್ಡಿದ ಕಠಿಣ ಪೈಪೋಟಿಯನ್ನು ಮೀರಿ ನಿಲ್ಲುವಲ್ಲಿ ಲವ್ಲಿನಾ ಯಶಸ್ವಿಯಾದರು. ರೋಚಕವಾಗಿದ್ದ ಪಂದ್ಯದ ಮೂರು ಸುತ್ತುಗಳಲ್ಲಿ ಸ್ಪ್ಲಿಟ್ ಪಾಯಿಂಟ್ಸ್ ಪಡೆದ ಲವ್ಲಿನಾ ಜಯಗಳಿಸಿದರು.

23 ವರ್ಷದ ಲವ್ಲಿನಾ ಅಸ್ಸಾಂ ರಾಜ್ಯದವರು. 32ರ ಸುತ್ತಿನಲ್ಲಿ ಅವರಿಗೆ ಬೈ ಸಿಕ್ಕಿತ್ತು.

ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ಮತ್ತು ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಒಂದು ಬಾರಿ ಕಂಚಿನ ಪದಕ ಗಳಿಸಿದ್ದಾರೆ.

ಜುಲೈ 30ರಂದು ನಡೆಯಲಿರುವ ಕ್ವಾರ್ಟರ್‌ಫೈನಲ್‌ನಲ್ಲಿ ಲವ್ಲಿನಾ, ತೈಪೆಯ ನೀನ್–ಚಿನ್ ಚೆನ್ ವಿರುದ್ಧ ಸೆಣಸುವರು. ಚೆನ್ ನಾಲ್ಕನೇ ಶ್ರೇಯಾಂಕ ಹೊಂದಿದ್ದಾರೆ. ಮಾಜಿ ವಿಶ್ವ ಚಾಂಪಿಯನ್ ಕೂಡ ಆಗಿದ್ದಾರೆ. 2018ರ ವಿಶ್ವ ಚಾಂಪಿಯನ್ ಷಿಪ್ ಸೆಮಿಫೈನಲ್‌ನಲ್ಲಿ ಲವ್ಲಿನಾ ಅವರು ಚೆನ್ ಎದುರು ಸೋತಿದ್ದರು. ಚೆನ್ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಇಟಲಿಯ ಏಂಜೆಲಾ ಕ್ಯಾರಿನಿ ಎದುರು ಗೆದ್ದರು.

ಆದರೆ ತಮ್ಮ ಕೌಶಲದಲ್ಲಿ ಬಹಳಷ್ಟು ಸುಧಾರಣೆ ಮಾಡಿಕೊಂಡಿರುವ ಲವ್ಲಿನಾ ಕ್ವಾರ್ಟರ್‌ಫೈನಲ್‌ನಲ್ಲಿ ಜಯಿಸಿದರೆ, ಭಾರತಕ್ಕೆ ಕನಿಷ್ಠ ಪಕ್ಷ ಕಂಚಿನ ಪದಕ ಲಭಿಸುವುದು ಖಚಿತವಾಗಲಿದೆ.

ಬುಧವಾರ ನಡೆಯಲಿರುವ 75 ಕೆ.ಜಿ ವಿಭಾಗದ ಬಾಕ್ಸಿಂಗ್‌ನಲ್ಲಿ ಏಷ್ಯನ್ ಚಾಂಪಿಯನ್ ಪೂಜಾ ರಾಣಿ ಅವರು ಅಲ್ಜೀರಿಯಾದ ಇಶಾರ್ಕ್ ಶೇಬ್ ವಿರುದ್ಧ ಸೆಣಸಲಿದ್ದಾರೆ. 30 ವರ್ಷದ ಪೂಜಾ ಕೆಲವು ತಿಂಗಳುಗಳ ಹಿಂದೆ ಗಂಭೀರವಾಗಿ ಗಾಯಗೊಂಡಿದ್ದರು ಮತ್ತು ಆರ್ಥಿಕ ಸಂಕಷ್ಟವನ್ನೂ ಎದುರಿಸಿದ್ದರು. ಆದರೆ, ಎಲ್ಲ ಸವಾಲುಗಳನ್ನೂ ಮೀರಿ ನಿಂತು ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿದರು.

ಭಾರತದ ಲವ್ಲಿನಾ ಬೋರ್ಗೊಹೈನ್ (ಬಲ) ಎದುರಾಳಿ ಜರ್ಮನಿಯ ನಡೈನ್ ಆಪೆಜ್ (ಕೆಂಪು ಶಿರಸ್ತ್ರಾಣ)ಅವರಿಗೆ ಪಂಚ್ ಮಾಡಿದ ರೀತಿ –ಎಎಫ್‌ಪಿ ಚಿತ್ರ

ಸೋತು ಹೊರಬಿದ್ದ ಒಸಾಕ

ಟೋಕಿಯೊ (ಪಿಟಿಐ): ತವರು ನೆಲದಲ್ಲಿ ಚಿನ್ನದ ಪದಕ ಗೆದ್ದು ಚೊಚ್ಚಲ ಒಲಿಂಪಿಕ್ಸ್ ಅನ್ನು ಸ್ಮರಣೀಯಗೊಳಿಸಿ-ಕೊಳ್ಳುವ ಕನಸು ಕಂಡಿದ್ದ ಜಪಾನ್‌ನ ಟೆನಿಸ್ ತಾರೆ ನವೊಮಿ ಒಸಾಕಗೆ ಮಂಗಳವಾರ ಆಘಾತ ಎದುರಾಗಿದೆ.

ಮಹಿಳೆಯರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನ ಹಣಾಹಣಿಯಲ್ಲಿ ಒಸಾಕ 1–6, 4–6 ನೇರ ಸೆಟ್‌ಗಳಿಂದ ಜೆಕ್ ಗಣರಾಜ್ಯದ ಮಾರ್ಕೆಟಾ ವೊಂಡ್ರೌಸೊವಾ ಎದುರು ಸುಲಭವಾಗಿ ಶರಣಾದರು.

ಗ್ರ್ಯಾನ್‌ಸ್ಲಾಮ್‌ನಲ್ಲಿ ನಾಲ್ಕು ಪ್ರಶಸ್ತಿಗಳ-ನ್ನು ಗೆದ್ದಿದ್ದ ಒಸಾಕ, ಟೋಕಿಯೊ ಕೂಟದ 'ಪೋಸ್ಟರ್ ಗರ್ಲ್' ಎಂದೇ ಬಿಂಬಿತರಾಗಿದ್ದ-ರು. ಸೆರೆನಾ ವಿಲಿಯಮ್ಸ್ ಸೇರಿದಂತೆ ಪ್ರಮುಖ ಆಟಗಾರ್ತಿಯರು ಗೈರಾಗಿದ್ದರಿಂದ ಈ ಬಾರಿಯ ಚಿನ್ನ ಒಸಾಕ ಕೊರಳಿಗೇರುವುದು ನಿಶ್ಚಿತ ಎಂದೇ ಭಾವಿಸಲಾಗಿತ್ತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾ-ನದಲ್ಲಿರುವ ಒಸಾಕ ಮೇಲೆ ನಿರೀಕ್ಷೆಯ ಭಾರ ಹೆಚ್ಚಿತ್ತು. ಹೀಗಾಗಿ ಈ ಯುವ ತಾರೆ ಹೆಚ್ಚು ಒತ್ತಡಕ್ಕೆ ಒಳಗಾದಂತೆ ಕಂಡರು. ಗ್ರೌಂಡ್‌ಸ್ಟ್ರೋಕ್ ಹೊಡೆತಗಳನ್ನು ಬಾರಿಸುವಲ್ಲಿ ಪದೇ ಪದೇ ಎಡವಿದರು.

ಎಡಗೈ ಆಟಗಾರ್ತಿ, ವಿಶ್ವ ರ‍್ಯಾಂಕಿಂಗ್‌ನಲ್ಲಿ 42ನೇ ಸ್ಥಾನದಲ್ಲಿ-ರುವ ಮಾರ್ಕೆಟಾ, ಡ್ರಾಪ್ ಶಾಟ್ ವಿನ್ನರ್‌ಗಳನ್ನು ಸಿಡಿಸಿ ಸಂಭ್ರಮಿಸಿದರು.

ಪ್ರತಿಬಾರಿ ಸೋತಾಗಲೂ ಆಘಾತವಾಗುವುದು ಸಹಜ. ಆದರೆ ಈ ಸೋಲು ಅರಗಿಸಿಕೊಳ್ಳಲಾರದಂತಹದ್ದು. ಇದು ನನ್ನ ಪಾಲಿನ ಚೊಚ್ಚಲ ಒಲಿಂಪಿಕ್ಸ್. ಹೀಗಾಗಿ ಕೊಂಚ ಒತ್ತಡಕ್ಕೊಳಗಾದೆ ಅನಿಸುತ್ತಿದೆ

ನವೊಮಿ ಒಸಾಕ, ಜಪಾನ್ ಆಟಗಾರ್ತಿ

ನವೊಮಿ ಒಸಾಕ ನಿರಾಸೆಯ ಕ್ಷಣ –ರಾಯಿಟರ್ಸ್ ಚಿತ್ರ

ಒಲಿಂಪಿಕ್ಸ್‌ನಲ್ಲಿ ಚೊಚ್ಚಲ ಸ್ಕೇಟ್‌ಬೋರ್ಡ್ ಸ್ಪರ್ಧೆಯಲ್ಲಿ ಮಿಂಚಿದ ಬಾಲಕಿಯರು

ಬಾಲೆಯರ ದಿಟ್ಟ ಸಾಧನೆ

ಜಪಾನ್‌ನ ಮೊಮಿಜಿ ನಿಶಿಯಾ –ರಾಯಿಟರ್ಸ್ ಚಿತ್ರ

ಟೋಕಿಯೊ (ಎಪಿ): ಒಲಿಂಪಿಕ್ಸ್ ವಿಜಯವೇದಿಕೆಯಲ್ಲಿ ಹಿಂದೆಂದೂ ಕಾಣದಂತಹ ಅಪರೂಪದ ದೃಶ್ಯ ಗಮನ ಸೆಳೆಯಿತು. 13 ವರ್ಷದ ಇಬ್ಬರು ಮತ್ತು 16 ವರ್ಷದ ಒಬ್ಬ ಬಾಲಕಿ ಕೊರಳಲ್ಲಿ ಪದಕಗಳನ್ನು ಧರಿಸಿಕೊಂಡು ಸಂತಸದ ನಗೆಯಲ್ಲಿ ತೇಲುತ್ತಿದ್ದರು. ಅವರ ಪುಟ್ಟ ಕಂಗಳದಲ್ಲಿ ಹರ್ಷ ಹೊನಲಾಗಿತ್ತು.

ಇದೇ ಮೊದಲ ಬಾರಿ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಆರಂಭಿಸಲಾಗಿರುವ ಸ್ಕೇಟ್‌ಬೋರ್ಡ್ ಸ್ಪರ್ಧೆಯಲ್ಲಿ ಪದಕ ವಿಜೇತರಾದ ಹುಡುಗಿಯರು ಅವರು. 13 ರ ಬಾಲೆ ಜಪಾನಿನ ಮೊಮಿಜಿ ನಿಶಿಯಾ ಚಿನ್ನದ ಪದಕ, ಬೆಳ್ಳಿ ಜಯಿಸಿದ ಬ್ರೆಜಿಲ್‌ನ ರಯಸಾ ಲೀಲ್ ಕೂಡ ಅದೇ ವಯಸ್ಸಿನ ಹುಡುಗಿ. ಇವರಿಬ್ಬರಿಗಿಂತ ಮೂರು ವರ್ಷ ದೊಡ್ಡವಳಾದ ಫುನಾ ನಕಾಯಾಮಾ ಜಪಾನಿಗೆ ಕಂಚಿನ ಪದಕದ ಕಾಣಿಕೆ ನೀಡಿದರು.

ಬಹುತೇಕ ರಾಷ್ಟ್ರಗಳಲ್ಲಿ ದಿಟ್ಟೆದೆಯ ಯುವಕರ ಸಾಹಸ ಕ್ರೀಡೆಯಾಗಿಯೇ ಬಿಂಬಿಸಲಾಗಿರುವ ಸ್ಕೇಟ್‌ಬೋರ್ಡ್‌ನಲ್ಲಿ ಈ ಬಾಲಕಿಯರು ಅಮೋಘ ಕೌಶಲಗಳನ್ನು ತೋರಿಸಿದರು. ವೇಗ, ಲಾಸ್ಯ ಮತ್ತು ಮೊನಚಾದ ತಿರುವುಗಳು, ಕಿರಿದಾದ ರೇಲಿಂಗ್, ರಸ್ತೆಗಳಲ್ಲಿ ಜಿಗಿಯುತ್ತ, ಪುಟಿಯುತ್ತ ಬೋರ್ಡ್ ರೇಸ್ ಮಾಡಿ ಬೆರಗುಗೊಳಿಸಿದರು. ಹವ್ಯಾಸಕ್ಕಾಗಿ ಆಡಲು ಆರಂಭಿಸಿದ್ದ ಈ ಹುಡುಗಿಯರಿಗ ಒಲಿಂಪಿಕ್ ಪದಕ ವಿಜೇತರ ಪಟ್ಟಿಯಲ್ಲಿ ಸೇರಿದ್ದಾರೆ. ಗೆಲ್ಲದವರೂ ಒಲಿಂಪಿಯನ್‌ಗಳಾಗಿದ್ದಾರೆ.

ಮಹಿಳೆಯರ ವಿಭಾಗದಲ್ಲಿ 20 ಸ್ಪರ್ಧಿಗಳು ಇದ್ದರು.

'ಭವಿಷ್ಯದಲ್ಲಿ ಈ ಕ್ರೀಡೆಗೆ ಇನ್ನೂ ಹೆಚ್ಚು ಜನಪ್ರಿಯತೆ ದೊರೆಯಲಿದೆ. ಇವತ್ತಿನ ಈ ಸ್ಪರ್ಧೆ ನೋಡಿ ಕನಿಷ್ಠ 500 ಹುಡುಗಿಯರಾದರೂ ಸ್ಕೇಟ್‌ಬೋರ್ಡ್ ಆಡಲು ಆರಂಭಿಸುತ್ತಾರೆ. ಇದರಲ್ಲಿ ಅಚ್ಚರಿಯಿಲ್ಲ' ಎಂದು ಅಮೆರಿಕದ ಸ್ಕೇಟರ್ ಮರಿಯಾ ಡುರಾನ್ ಹೇಳಿದರು.

ಮಹಿಳೆಯರ ಸ್ಕೇಟ್‌ಬೋರ್ಡ್ ಸ್ಪರ್ಧೆಯಲ್ಲಿ ಪದಕ ವಿಜೇತರಾದವರು; (ಎಡದಿಂದ) ಬ್ರೆಜಿಲ್‌ನ ರಯಸಾ ಲೀಲ್ (ಬೆಳ್ಳಿ), ಜಪಾನಿನ ಮೊಮಿಜಿ ನಿಶಿಯಾ (ಚಿನ್ನ) ಮತ್ತು ಫುನಾ ನಕಾಯಾಮಾ (ಕಂಚು) –ಎಎಫ್‌ಪಿ ಚಿತ್ರ

ಸಿಮೋನ್ ಬೈಲ್ಸ್ ಅನುಪಸ್ಥಿತಿ: ರಷ್ಯಾ ಪಾರಮ್ಯ

ಸಿಮೋನ್ ಬೈಲ್ಸ್ ರಾಯಿಟರ್ಸ್ ಚಿತ್ರ

ಟೋಕಿಯೊ (ಎಎಫ್‌ಪಿ): ಅಮೆರಿಕದ 'ಸೂಪರ್ ಸ್ಟಾರ್' ಸಿಮೋನ್ ಬೈಲ್ಸ್ ಅವರು ಜಿಮ್ನಾಸ್ಟಿಕ್ಸ್ ತಂಡದಿಂದ ಹೊರಗೆ ಉಳಿಯಲು ನಿರ್ಧರಿಸಿದ್ದಾರೆ. ಅನಾರೋಗ್ಯದ ಕಾರಣ ಅವರು ಈ ನಿರ್ಧಾರ ಕೈಗೊಂಡಿದ್ದಾರೆ.

ಅಮೋಘ ಆರಂಭದೊಂದಿಗೆ ತಂಡಕ್ಕೆ ಪಾಯಿಂಟ್‌ಗಳನ್ನು ಗಳಿಸಿಕೊಟ್ಟಿರುವ ಅವರು ಉಳಿದಿರುವ ಫೈನಲ್ ಸ್ಪರ್ಧೆಗಳಿಗೆ ಲಭ್ಯ ಇರುವುದಿಲ್ಲ. ಅವರ ಬದಲಿಗೆ ಜೋರ್ಡಾನ್ ಚೈಲ್ಸ್ ಅವರನ್ನು ಅಮೆರಿಕ ಕಣಕ್ಕೆ ಇಳಿಸಿದೆ. 24 ವರ್ಷದ ಸಿಮೋನ್ ಒಲಿಂಪಿಕ್ಸ್‌ನಲ್ಲಿ ಆರನೇ ಚಿನ್ನದ ಗುರಿಯೊಂದಿಗೆ ಬಂದಿದ್ದರು.

ಸಿಮೋನ್ ಅನುಪಸ್ಥಿತಿಯಲ್ಲಿ ಫೈನಲ್‌ನಲ್ಲಿ ಸ್ಪರ್ಧಿಸಿದ ಅಮೆರಿಕಕ್ಕೆ ರಷ್ಯಾ ಮಹಿಳೆಯರು ಆಘಾತ ನೀಡಿ ಚಿನ್ನ ಗೆದ್ದುಕೊಂಡರು. ಬ್ರಿಟನ್ ಅಚ್ಚರಿಯ ಫಲಿತಾಂಶದೊಂದಿಗೆ ಕಂಚಿನ ಪದಕ ಗಳಿಸಿತು.

ಆಡಿದ ಒಲಿಂಪಿಕ್ ಸಮಿತಿಯ ಹೆಸರಿನಲ್ಲಿ ಸ್ಪರ್ಧಿಸುತ್ತಿರುವ ರಷ್ಯಾ ತಂಡದವರು ಏಂಜೆಲಿನಾ ಮೆಲ್ನಿಕೋವ ಮುಂದಾಳತ್ವದಲ್ಲಿ ಫೈನಲ್ ಹಂತದಲ್ಲಿ ಸಂಪೂರ್ಣ ಆಧಿಪತ್ಯ ಸ್ಥಾಪಿಸಿದರು.

ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್‌ನ ಬ್ಯಾಲನ್ಸ್ ಬೀಮ್ ವಿಭಾಗದಲ್ಲಿ ರಷ್ಯಾದ ವ್ಲಾಡಿಸ್ಲಾವ ಉರಸೋವ –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸುದ್ದಿ

ಟೆನಿಸ್: ಭಾರತದ ಸವಾಲು ಅಂತ್ಯ

ಟೋಕಿಯೊ (ಪಿಟಿಐ): ಈ ಬಾರಿಯ ಒಲಿಂಪಿಕ್ಸ್‌ನ ಟೆನಿಸ್ ಸ್ಪರ್ಧೆಯಲ್ಲಿ ಭಾರತದ ಸವಾಲು ಅಂತ್ಯಕಂಡಿದೆ.

ಸಾನಿಯಾ ಮಿರ್ಜಾ ಹಾಗೂ ಸುಮಿತ್ ನಗಾಲ್, ಮಿಶ್ರ ಡಬಲ್ಸ್‌ನಲ್ಲಿ ಕಣಕ್ಕಿಳಿಯಬಹುದೆಂಬ ನಿರೀಕ್ಷೆ ಇತ್ತು. ಅದು ಹುಸಿಯಾಯಿತು. ಭಾರತದ ಜೋಡಿ ರ‍್ಯಾಂಕಿಂಗ್‌ನಲ್ಲಿ 153ನೇ ಸ್ಥಾನದಲ್ಲಿದ್ದ ಕಾರಣ ಅವಕಾಶ ಸಿಗಲಿಲ್ಲ.

ಈ ವಿಭಾಗದಲ್ಲಿ ಒಟ್ಟು 16 ಜೋಡಿ ಪದಕಕ್ಕಾಗಿ ಹೋರಾಡಲಿದೆ. ರ‍್ಯಾಂಕಿಂಗ್‌ನಲ್ಲಿ 50 ರಿಂದ 60ರೊಳಗೆ ಸ್ಥಾನ ಹೊಂದಿದ್ದವರು ಅರ್ಹತೆ ಗಳಿಸಿದ್ದಾರೆ.

7 ಜನರಿಗೆ ಕೋವಿಡ್

ಟೋಕಿಯೊ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡವರ ಪೈಕಿ ಹೊಸದಾಗಿ ಏಳು ಮಂದಿಯಲ್ಲಿ ಕೋವಿಡ್ ಕಾಣಿಸಿಕೊಂಡಿದೆ. ಈ ಪೈಕಿ ನಾಲ್ವರು ಕ್ರೀಡಾ ಗ್ರಾಮದಲ್ಲಿ ನೆಲೆಸಿದ್ದರು. ಇದರೊಂದಿಗೆ ಸೋಂಕಿತರ ಒಟ್ಟು ಸಂಖ್ಯೆಯು 155ಕ್ಕೆ ಏರಿದೆ. 'ಕ್ರೀಡಾ ಗ್ರಾಮದಲ್ಲಿ ನೆಲೆಸಿದ್ದವರ ಪೈಕಿ ಇಬ್ಬರು ಅಥ್ಲೀಟ್‌ಗಳಿಗೆ ಸೋಂಕು ತಗುಲಿದೆ' ಎಂದು ಸಂಘಟಕರು ತಿಳಿಸಿದ್ದಾರೆ.

ಸೇಲಿಂಗ್: ವಿಷ್ಣು, ನೇತ್ರಾಗೆ ಹಿನ್ನಡೆ

ಎನೊಶಿಮಾ (ಪಿಟಿಐ): ಸೇಲಿಂಗ್ ಸ್ಪರ್ಧೆಯಲ್ಲಿ ಕಣಕ್ಕಿಳಿದಿದ್ದ ಭಾರತದ ವಿಷ್ಣು ಸರವಣನ್ ಹಾಗೂ ನೇತ್ರಾ ಕುಮನನ್ ಅವರಿಂದ ಮಂಗಳವಾರ ನಿರೀಕ್ಷಿತ ಸಾಮರ್ಥ್ಯ ಮೂಡಿಬರಲಿಲ್ಲ.

ಪುರುಷರ ಲೇಸರ್ ಸ್ಪರ್ಧೆಯಲ್ಲಿ ಸರವಣನ್ ಅವರು ಐದು ಮತ್ತು ಆರನೇ ರೇಸ್‌ಗಳಲ್ಲಿ ಕ್ರಮವಾಗಿ 23 ಮತ್ತು 22ನೇ ಸ್ಥಾನ ಗಳಿಸಿದರು. ಮಹಿಳೆಯರ ಲೇಸರ್ ರೇಡಿಯಲ್ ಸ್ಪರ್ಧೆಯಲ್ಲಿ 32ನೇಯವರಾಗಿ ಐದನೇ ರೇಸ್ ಮುಗಿಸಿದ ನೇತ್ರಾ, ನಂತರದ ರೇಸ್‌ನಲ್ಲಿ 38ನೇ ಸ್ಥಾನ ಪಡೆದರು.

ಆರ್ಚರಿ: ಭಾರತದ 'ತಾರೆ'ಯರಿಗೆ ಕೊನೆಯ ಅವಕಾಶ

ಟೋಕಿಯೊ (ಪಿಟಿಐ): ತಂಡ ವಿಭಾಗದಲ್ಲಿ ಸಾಲು ಸಾಲು ಸೋಲು ಅನುಭವಿಸಿರುವ ಭಾರತದ ಆರ್ಚರಿ ಪಟುಗಳಿಗೆ ಪದಕ ಜಯದ ಕೊನೆಯ ಅವಕಾಶ ಬುಧವಾರ ಲಭಿಸಲಿದೆ.

ಇಲ್ಲಿ ನಡೆಯಲಿರುವ ವೈಯಕ್ತಿಕ ವಿಭಾಗದ ಸ್ಪರ್ಧೆಯಲ್ಲಿ ಭಾರತದ ಆರ್ಚರಿ 'ತಾರೆ'ಯರು ತಮ್ಮ ಸಾಮರ್ಥ್ಯ ಪಣಕ್ಕೊಡ್ಡಲಿದ್ದಾರೆ.

ಮಹಿಳಾ ವಿಭಾಗದಲ್ಲಿ ದೀಪಿಕಾ ಕುಮಾರಿ, ಪುರುಷರ ವಿಭಾಗದಲ್ಲಿ ಅತನು ದಾಸ್, ತರುಣ್‌ದೀಪ್ ರಾಯ್ ಹಾಗೂ ಪ್ರವೀಣ್ ಜಾಧವ್ ಕಣಕ್ಕಿಳಿಯಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬ್ಯಾಸ್ಕೆಟ್‌ಬಾಲ್: ಇಂದಿನಿಂದ 'ಬಿ' ಡಿವಿಷನ್ ಲೀಗ್

ಬೆಂಗಳೂರು: ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯು ರಾಜ್ಯ 'ಬಿ' ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ಅನ್ನು ಬುಧವಾರದಿಂದ ಆಯೋಜಿಸಲಿದೆ.

ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಇದೇ 31ರವರೆಗೆ ಪಂದ್ಯಗಳು ನಡೆಯಲಿವೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭಾಗವಹಿಸುವ ತಂಡಗಳು: ಕೋರಮಂಗಲ ಸ್ಪೋರ್ಟ್ಸ್ ಕ್ಲಬ್, ರೋವರ್ಸ್ ಸ್ಪೋರ್ಟ್ಸ್ ಕ್ಲಬ್ ಧಾರವಾಡ, ಪ್ರೊಟೆಕ್ ಅಸೋಸಿಯೇಷನ್ ಮೈಸೂರು, ಎಂಇಜಿ ಆ್ಯಂಡ್ ಸೆಂಟರ್, ಎಂಎನ್‌ಕೆ ರಾವ್ ಪಾರ್ಕ್ ಬ್ಯಾಸ್ಕೆಟ್‌ಬಾಲ್ ಕ್ಲಬ್, ಕನಕ ಕೋಲಾರ, ಬಾಶ್ ಸ್ಪೋರ್ಟ್ಸ್ ಕ್ಲಬ್ ಮತ್ತು ಕೆಎಸ್‌ಪಿ.

ಆನ್‌ಲೈನ್ ಚೆಸ್: ಚಾರ್ವಿಗೆ ಬೆಳ್ಳಿ

ಚಾರ್ವಿ ಎ.

ಬೆಂಗಳೂರು: ಕರ್ನಾಟಕದ ಚಾರ್ವಿ ಎ. ವಿಶ್ವ ಶಾಲಾ ಆನ್‌ಲೈನ್ ಚೆಸ್ ಟೂರ್ನಿಯಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದಾಳೆ.

ಬೆಂಗಳೂರಿನ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ವಿದ್ಯಾರ್ಥಿನಿಯಾಗಿರುವ ಚಾರ್ವಿ, ಟೂರ್ನಿಯ ಏಳು ವರ್ಷದೊಳಗಿನವರ ವಿಭಾಗದಲ್ಲಿ ಈ ಸಾಧನೆ ಮಾಡಿದ್ದಾಳೆ. ಇದರೊಂದಿಗೆ ವಿಶ್ವ ಶಾಲಾ ಆನ್‌ಲೈನ್ ಟೂರ್ನಿಗೆ ಅರ್ಹತೆ ಗಳಿಸಿದ್ದಾಳೆ. ಇತ್ತೀಚೆಗೆ ಚಾರ್ವಿ ರಾಷ್ಟ್ರೀಯ ಶಾಲಾ ಚೆಸ್ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಳು.

ಭಾರತದ ಆಲ್‌ರೌಂಡರ್‌ಗೆ ಪ್ರತ್ಯೇಕವಾಸ: ಟಿ20 ಪಂದ್ಯ ಒಂದು ದಿನ ಮುಂದಕ್ಕೆ

ಕೃಣಾಲ್ ಪಾಂಡ್ಯಗೆ ಕೋವಿಡ್

ಕೃಣಾಲ್ ಪಾಂಡ್ಯ– ರಾಯಿಟರ್ಸ್ ಚಿತ್ರ

ಮುಖ್ಯಾಂಶಗಳು

- ಮಂಗಳವಾರ (ಜುಲೈ 27) ನಿಗದಿಯಾಗಿದ್ದ ಎರಡನೇ ಪಂದ್ಯ
- 30ರಂದು ಸ್ವದೇಶಕ್ಕೆ ಮರಳಲಿರುವ ಭಾರತ ತಂಡ

ಕೊಲಂಬೊ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಅವರಿಗೆ ಕೋವಿಡ್–19 ದೃಢಪಟ್ಟಿದೆ. ಹೀಗಾಗಿ ಶ್ರೀಲಂಕಾ ಎದುರು ಮಂಗಳವಾರ ನಡೆಯಬೇಕಿದ್ದ ಎರಡನೇ ಟ್ವೆಂಟಿ–20 ಪಂದ್ಯವನ್ನು ಒಂದು ದಿನ ಮುಂದೂಡಲಾಗಿದ್ದು, ಬುಧವಾರ ನಡೆಸಲಾಗುತ್ತಿದೆ.

ಮಂಗಳವಾರ ಬೆಳಿಗ್ಗೆ ಕೃಣಾಲ್ ಅವರಲ್ಲಿ ಸೋಂಕು ಇರುವುದು ಖಚಿತಪಟ್ಟಿದೆ. ಅವರಿಗೆ ಏಳು ದಿನಗಳ ಕಾಲ ಪ್ರತ್ಯೇಕವಾಸ ಇರಲಿದ್ದು, ತಂಡದಿಂದ ಹೊರಗುಳಿದಿದ್ದಾರೆ. ಇದೇ 30ರಂದು ಭಾರತ ತಂಡವು ಸ್ವದೇಶಕ್ಕೆ ಮರಳಲಿದೆ. ಆದರೆ ಶ್ರೀಲಂಕಾದ ಕೋವಿಡ್ ತಡೆ ನಿಯಮಾವಳಿಗಳ ಅನ್ವಯ ಕೃಣಾಲ್ ಅವರು ಪ್ರತ್ಯೇಕವಾಸದ ಅವಧಿ ಪೂರ್ಣಗೊಳಿಸಿ ಭಾರತಕ್ಕೆ ಮರಳಬೇಕಿದೆ.

'ಕೃಣಾಲ್ ಅವರನ್ನು ಕೆಮ್ಮು ಮತ್ತು ಗಂಟಲು ನೋವು ಬಾಧಿಸುತ್ತಿದೆ' ಎಂದು ಬಿಸಿಸಿಐ ಮೂಲಗಳು ಹೇಳಿವೆ.

ಸದ್ಯ ಭಾರತ ತಂಡದ ಎಲ್ಲ ಸದಸ್ಯರಿಗೆ ಅವರು ತಂಗಿರುವ ಹೋಟೇಲ್‌ನಲ್ಲೇ ಪ್ರತ್ಯೇಕವಾಸಕ್ಕೆ ಅವಕಾಶ ಕಲ್ಪಿಸಲಾಗಿದೆ'ಎಂದು ಮೂಲಗಳು ತಿಳಿಸಿವೆ.

'ಮಂಗಳವಾರ ನಿಗದಿಯಾಗಿದ್ದ ಭಾರತ ಮತ್ತು ಶ್ರೀಲಂಕಾ ತಂಡಗಳ ನಡುವಣ ಎರಡನೇ ಟ್ವೆಂಟಿ–20 ಪಂದ್ಯವನ್ನು ಒಂದು ದಿನ ಮುಂದೂಡಲಾಗಿದ್ದು, ಬುಧವಾರ ನಡೆಯಲಿದೆ' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಕಾರ್ಯದರ್ಶಿ ಜಯ್ ಶಾ ಅವರು ಹೇಳಿದ್ದಾರೆ.

'ಪಂದ್ಯಕ್ಕೂ ಮೊದಲು ನಡೆಸಲಾಗುವ ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಯಲ್ಲಿ ಕೃಣಾಲ್ ಅವರಿಗೆ ಕೋವಿಡ್ ಇರುವುದು ಗೊತ್ತಾಗಿದೆ. ತಂಡದ ಎಂಟು ಸದಸ್ಯರನ್ನು ಕೃಣಾಲ್ ಜೊತೆ ಸಂಪರ್ಕ ಹೊಂದಿದ್ದರೆಂದು ವೈದ್ಯಕೀಯ ತಂಡ ಗುರುತಿಸಿತ್ತು. ಆದರೆ ಇವರೆಲ್ಲರ ಕೋವಿಡ್ ಫಲಿತಾಂಶ ನೆಗೆಟಿವ್ ಬಂದಿದೆ' ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಇಲ್ಲಿನ ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ಪಂದ್ಯ ನಿಗದಿಯಾಗಿತ್ತು.

ಉಭಯ ತಂಡಗಳ ನಡುವಣ ಸರಣಿಯ ಮೊದಲ ಟಿ20 ಪಂದ್ಯದಲ್ಲಿ ಭಾರತ ತಂಡವು 38 ರನ್‌ಗಳ ಗೆಲುವು ಸಾಧಿಸಿತ್ತು. ಕಳೆದ ಒಂದು ತಿಂಗಳಿಂದ ಬಯೋ–ಬಬಲ್‌ನಲ್ಲಿರುವ ಕೃಣಾಲ್‌ಗೆ ಕೊರೊನಾ ಸೋಂಕು ತಗುಲಿದ್ದು ಹೇಗೆ ಎಂಬುದು ಚರ್ಚೆಗೆ ಕಾರಣವಾಗಿದೆ.

ಟಿ20 ತಂಡದಲ್ಲಿರುವ ಸೂರ್ಯಕುಮಾರ್ ಯಾದವ್ ಮತ್ತು ಪೃಥ್ವಿ ಶಾ ಇಂಗ್ಲೆಂಡ್‌ನಲ್ಲಿರುವ ಕೊಹ್ಲಿ ಸಾರಥ್ಯದ ಭಾರತ ಟೆಸ್ಟ್ ತಂಡ ಸೇರಿಕೊಳ್ಳುವ ಸಿದ್ಧತೆಯಲ್ಲಿದ್ದಾರೆ. ಆದರೆ, ಈಗಿನ ಬೆಳವಣಿಗೆಯಿಂದಾಗಿ ಅವರ ಪ್ರವಾಸದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ಎಫ್‌ಸಿಬಿಯು: ಸತೀಶ್ ಕೋಚ್

ಬೆಂಗಳೂರು (ಪಿಟಿಐ): ಎಫ್‌ಸಿ ಬೆಂಗಳೂರು ಯುನೈಟೆಡ್ (ಎಫ್‌ಸಿಬಿಯು) ತಂಡವು ಭಾರತ ಫುಟ್‌ಬಾಲ್ ತಂಡದ ಮಾಜಿ ಗೋಲ್‌ಕೀಪರ್ ವಿ.ಪಿ. ಸತೀಶ್ ಕುಮಾರ್ ಅವರನ್ನು ಕೋಚ್ ಆಗಿ ನೇಮಿಸಿಕೊಂಡಿದೆ.

ಮುಂಬರುವ ಐ–ಲೀಗ್ ಅರ್ಹತಾ ಟೂರ್ನಿಗೆ ಸಜ್ಜುಗೊಳ್ಳುತ್ತಿರುವ ತಂಡವು ಸತೀಶ್ ಅವರಿಗೆ ಗೋಲುಕೀಪಿಂಗ್ ತರಬೇತಿಯ ಹೊಣೆ ನೀಡಿದೆ. 37 ವರ್ಷದ ಸತೀಶ್ ಅವರು ಆಟಗಾರ ಹಾಗೂ ಕೋಚ್ ಆಗಿ ಹಲವು ತಂಡಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.

ಬಿಜೆಪಿ ವಿರೋಧಿಸುವ ಪಕ್ಷಗಳು ಒಂದಾಗಬೇಕು: ಮಮತಾ

ಮಮತಾ ಬ್ಯಾನರ್ಜಿ

ನವದೆಹಲಿ: ಬಿಜೆಪಿಯನ್ನು ವಿರೋಧಿಸುವ ಎಲ್ಲ ಪಕ್ಷಗಳು ಒಂದಾಗಬೇಕು ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಂಗಳವಾರ ಇಲ್ಲಿ ಹೇಳಿದರು.

ಕಾಂಗ್ರೆಸ್ ಮುಖಂಡರಾದ ಕಮಲನಾಥ್ ಹಾಗೂ ಆನಂದ ಶರ್ಮಾ ಅವರನ್ನು ಭೇಟಿ ಮಾಡಿದ ನಂತರ, ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭಾ ಚುನಾವಣೆಗೆ ಇನ್ನೂ ಸಾಕಷ್ಟು ಸಮಯ ಇದೆ. ಆದರೆ, ಬಿಜೆಪಿಯನ್ನು ಎದುರಿಸುವ ಸಲುವಾಗಿ ಎಲ್ಲ ವಿರೋಧ ಪಕ್ಷಗಳು ಈಗಿನಿಂದಲೇ ಕಾರ್ಯಪ್ರವೃತ್ತವಾಗಬೇಕು' ಎಂದು ಪ್ರತಿಪಾದಿಸಿದರು.

'ಮೈತ್ರಿಕೂಟದ ನೇತೃತ್ವವನ್ನು ಈ ದೇಶವೇ ವಹಿಸಿಕೊಳ್ಳುವುದು. ನಾನು ವಹಿಸಿಕೊಳ್ಳುವುದಿಲ್ಲ. ನಾವು ಹಿಂಬಾಲಕರಷ್ಟೇ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಆ ಮೂಲಕ ಅವರು, ಬಿಜೆಪಿ ವಿರೋಧಿ ಮೈತ್ರಿಕೂಟದ ನಾಯಕತ್ವದ ವಿಷಯ ವಿಪಕ್ಷಗಳ ನಡುವೆ ಗಲಾಟೆಗೆ ಕಾರಣವಾಗಬಾರದು ಹಾಗೂ ಮೈತ್ರಿಕೂಟ ರಚಿಸುವ ಪ್ರಯತ್ನಕ್ಕೆ ಅಡ್ಡಿಯನ್ನುಂಟು ಮಾಡಬಾರದು ಎಂಬ ಸಂದೇಶ ರವಾನಿಸಿದರು ಎಂದು ವಿಶ್ಲೇಷಿಸಲಾಗುತ್ತಿದೆ.

'ಉತ್ತರ ಪ್ರದೇಶ, ಪಂಜಾಬ್ ಹಾಗೂ ತ್ರಿಪುರ ವಿಧಾನಸಭಾ ಚುನಾವಣೆಗಳೂ ಸಮೀಪಿಸುತ್ತಿವೆ. ಈ ಎಲ್ಲ ಚುನಾವಣೆಗಳಲ್ಲಿ ಬಿಜೆಪಿಯನ್ನು ಸೋಲಿಸುವ ಸಲುವಾಗಿ ಸಮಾನ ಮನಸ್ಕ ರಾಜಕೀಯ ಪಕ್ಷಗಳು ಒಂದಾಗುವುದು ಅಗತ್ಯ' ಎಂದು ಅವರು ಪುನರುಚ್ಚರಿಸಿದರು.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾದ ನಂತರ ಇದೇ ಮೊದಲ ಬಾರಿಗೆ ಅವರು ರಾಷ್ಟ್ರ ರಾಜಧಾನಿಗೆ ಭೇಟಿ ನೀಡಿದ್ದಾರೆ. ಅವರು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನು ಬುಧವಾರ ಭೇಟಿ ಮಾಡಲಿದ್ದಾರೆ.

ಖಾಸಗಿ ಆಸ್ಪತ್ರೆಗಳಿಂದ ರೋಗಿಗಳ ಶೋಷಣೆ: ಕೇಂದ್ರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಖಾಸಗಿ ಆಸ್ಪತ್ರೆಗಳಲ್ಲಿ ರೋಗಿಗಳ ಶೋಷಣೆ ತಡೆಯಲು ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ದೂರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ಸುಪ್ರೀಂ ಕೋರ್ಟ್ ಮಂಗಳವಾರ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕುರಿತ ಸಾಮಾನ್ಯ ಚಿಕಿತ್ಸಾ ಶಿಷ್ಟಾಚಾರ ಸಂಹಿತೆ ಇಲ್ಲ. ಯಾವುದೇ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಲ್ಲೂ ಚಿಕಿತ್ಸಾ ಸಂಹಿತೆ ಶಿಷ್ಟಾಚಾರ ಹೊಂದಿಲ್ಲ ಎಂದು ಸೇವಾಸಂಸ್ಥೆ ಜನ್ ಸ್ವಸ್ಥ್ ಅಭಿಯಾನ್ ಅರ್ಜಿ ಸಲ್ಲಿಸಿತ್ತು. ಈ ಬಗ್ಗೆ ಪ್ರತಿಕ್ರಿಯೆ ದಾಖಲಿಸಲು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠವು ಕೇಂದ್ರ ಸರ್ಕಾರಕ್ಕೆ ಸೂಚಿಸಿತು. 'ಸರ್ಕಾರ ಇದಕ್ಕೆ ಪ್ರತಿಕ್ರಿಯಿಸುತ್ತದೆ ಎಂದು ಆಶಿಸುತ್ತೇವೆ' ಎಂದೂ ಪೀಠ ಅಭಿಪ್ರಾಯಪಟ್ಟಿತು.

ಖಾಸಗಿ ಆಸ್ಪತ್ರೆಗಳು ರೋಗಿಗಳನ್ನು ಶೋಷಿಸುತ್ತಿವೆ. ಏಕರೂಪದ ಶಿಷ್ಟಾಚಾರ ಪಾಲಿಸುತ್ತಿಲ್ಲ. ಇದಕ್ಕೆ ನಿಯಂತ್ರಣ ವ್ಯವಸ್ಥೆ ಇಲ್ಲದ್ದೂ ಇದಕ್ಕೆ ಕಾರಣ. ಕೇಂದ್ರ ಸರ್ಕಾರ ಈ ಬಗ್ಗೆ ರಾಷ್ಟ್ರೀಯ ನೀತಿ ರೂಪಿಸಬೇಕು ಎಂದು ಅರ್ಜಿದಾರರು ವಾದಿಸಿದ್ದರು.

ಶೇ 70ರಷ್ಟು ರೋಗಿಗಳು ಖಾಸಗಿ ಆಸ್ಪತ್ರೆಗಳನ್ನು, ಶೇ 30ರಷ್ಟು ರೋಗಿಗಳು ಸರ್ಕಾರಿ ಆಸ್ಪತ್ರೆಗಳನ್ನು ಆಶ್ರಯಿಸಿದ್ದಾರೆ. ಹೀಗಾಗಿ, ಚಿಕಿತ್ಸಾ ಶಿಷ್ಟಾಚಾರ ಪಾಲನೆಯನ್ನು ಕಡ್ಡಾಯಗೊಳಿಸು ವುದು ಅಗತ್ಯ. ಚಿಕಿತ್ಸೆಗೆ ವಿಧಿಸ ಬೇಕಾದ ದರ ಕುರಿತು ಸ್ಪಷ್ಟತೆ ಇರಬೇಕು ಎಂದು ಅವರು ಪ್ರತಿಪಾದಿಸಿದರು.

ಬೂಕರ್ ಪ್ರಶಸ್ತಿ ಪಟ್ಟಿಯಲ್ಲಿ ಸಂಜೀವ್ ಕಾದಂಬರಿ

ಸಂಜೀವ್ ಸಹೋತಾ

ಲಂಡನ್ (ಪಿಟಿಐ): 2021ನೇ ಸಾಲಿನ ಪ್ರತಿಷ್ಠಿತ 'ಬೂಕರ್ ಪ್ರಶಸ್ತಿ'ಗೆ ಗುರುತಿಸಿರುವ ಕಾದಂಬರಿಗಳ ಪಟ್ಟಿಯಲ್ಲಿ ಭಾರತೀಯ ಮೂಲದ ಬ್ರಿಟಿಷ್ ಲೇಖಕ ಸಂಜೀವ್ ಸಹೋತಾ ಅವರ 'ಚೀನಾ ರೂಂ' ಕಾದಂಬರಿಯೂ ಒಂದಾಗಿದೆ.

2021ರ ಪ್ರಶಸ್ತಿಗೆ 13 ಕಾದಂಬರಿಗಳ ದೀರ್ಘವಾದ ಪಟ್ಟಿಯೊಂದನ್ನು ಮಂಗಳವಾರ ಬಿಡುಗಡೆಗೊಳಿಸಲಾಗಿದೆ. ಈ ಪಟ್ಟಿಯನ್ನು 'ದಿ ಬೂಕರ್ ಡಜನ್' ಎಂದೂ ಕರೆಯಲಾಗುತ್ತದೆ. ಬ್ರಿಟನ್ ಅಥವಾ ಐರ್ಲೆಂಡ್‌ನಲ್ಲಿ ಪ್ರಕಟವಾದ 158 ಕಾದಂಬರಿಗಳ ಪೈಕಿ ತೀರ್ಪುಗಾರರು ಈ 13 ಕಾದಂಬರಿಗಳನ್ನು ಆರಿಸಿದ್ದಾರೆ.

ಈ ಪಟ್ಟಿಯಲ್ಲಿ ನೊಬೆಲ್ ಪ್ರಶಸ್ತಿ ವಿಜೇತ ಕಜುಯೋ ಇಶಿಗುರೊ ಮತ್ತು ಪುಲಿಟ್ಜರ್ ಪ್ರಶಸ್ತಿ ವಿಜೇತ ರಿಚರ್ಡ್ ಪವರ್ಸ್ ಅವರ ಕಾದಂಬರಿಗಳು ಕೂಡ ಸ್ಥಾನ ಪಡೆದಿವೆ.